ಬುಧವಾರ, ಜನವರಿ 21, 2026| ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ದುರ್ಯೋಧನ ವಧೆ

ಭೋಪಾಲದಲ್ಲಿ ಮಂಗಳವಾರ ನಡೆದ 'ಮಹಾಭಾರತ' ಕಾರ್ಯಕ್ರಮದಲ್ಲಿ ಕಲಾವಿದರೊಬ್ಬರು 'ಪುರುಲಿಯಾ ಛವು' ಜಾನಪದ ನೃತ್ಯ ಪ್ರಕಾರದ ಮೂಲಕ 'ದುರ್ಯೋಧನ ವಧೆ' ರೂಪಕ ಪ್ರದರ್ಶಿಸಿದರು



ಅಭಿಷೇಕ್ ತಾಲೀಮು

ಭಾರತ ತಂಡವು ಬುಧವಾರ ನಾಗ್ಪುರದಲ್ಲಿ ನ್ಯೂಜಿಲೆಂಡ್ ವಿರುದ್ಧ ಮೊದಲ ಟಿ20 ಪಂದ್ಯ ಆಡಲಿದೆ. ಆತಿಥೇಯ ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಮಂಗಳವಾರ ತಾಲೀಮು ನಡೆಸಿದರು



ಎಸ್‌ಬಿಐ ಮ್ಯೂಚ್ಯುವಲ್ ಫಂಡ್‌ನಿಂದ, ಹೂಡಿಕೆದಾರರ ಒಂದು ಶಿಕ್ಷಣ ಮತ್ತು ಜಾಗೃತಿ ಉಪಕ್ರಮ

ಹೂಡಿಕೆದಾರರು ನೋಂದಾಯಿತ ಮ್ಯೂಚುವಲ್ ಫಂಡ್‌ಗಳೊಂದಿಗೆ ಮಾತ್ರ ವ್ಯವಹರಿಸಬೇಕು. ಅವರ ವಿವರಗಳನ್ನು ಸೆಬಿ ವೆಬ್‌ಸೈಟ್‌ನಲ್ಲಿ (https://www.sebi.gov.in) ಮಧ್ಯವರ್ತಿಗಳು/ ಮಾರುಕಟ್ಟೆ ಮೂಲ ಸೌಕರ್ಯ ಸಂಸ್ಥೆಗಳ ಅಡಿಯಲ್ಲಿ ಪರಿಶೀಲಿಸಬಹುದು. ವಿಳಾಸ, ಫೋನ್ ನಂಬರ್, ಬ್ಯಾಂಕ್ ವಿವರ ಇತ್ಯಾದಿ ಬದಲಾವಣೆಯ ಪ್ರಕ್ರಿಯೆ ಸೇರಿದಂತೆ ಒಂದು ಬಾರಿ ಕೆವೈಸಿ (Know Your Customer) ಪೂರ್ಣಗೊಳಿಸುವ ಪ್ರಕ್ರಿಯೆಗಾಗಿ ದಯಮಾಡಿ ಮ್ಯೂಚುವಲ್ ಫಂಡ್‌ಗಳ ವೆಬ್‌ಸೈಟ್ ನೋಡಿ. ನೋಂದಾಯಿತ ಮಧ್ಯವರ್ತಿಗಳ ಪ್ರತಿಕ್ರಿಯೆಯಿಂದ ಹೂಡಿಕೆದಾರರು ತೃಪ್ತರಾಗದಿದ್ದರೆ https://scores.sebi.gov.in ಇಲ್ಲಿ ತಮ್ಮ ದೂರುಗಳನ್ನು ಸಲ್ಲಿಸಬಹುದು. ನಿಮ್ಮ ದೂರನ್ನು ಸೆಬಿ (SEBI)ಗೆ ಆನ್‌ಲೈನ್‌ನಲ್ಲಿ ದಾಖಲಿಸಲು ಮತ್ತು ಅದರ ಸ್ಥಿತಿಯನ್ನು ವೀಕ್ಷಿಸಲು SCORES ನಿಮಗೆ ಅನುಕೂಲ ಮಾಡಿಕೊಡುತ್ತವೆ.

ಹೆಚ್ಚಿನ ಮಾಹಿತಿಗಾಗಿ, ನಿಮ್ಮ MFD/RIAರನ್ನು ಸಂಪರ್ಕಿಸಿರಿ | ಭೇಟಿಕೊಡಿ : www.sbimf.com | ನಮ್ಮನ್ನು ಫಾಲೋಮಾಡಿ:

ಮ್ಯೂಚ್ಯುವಲ್ ಫಂಡ್ ಹೂಡಿಕೆಗಳು ಮಾರುಕಟ್ಟೆಯ ಆಪತ್ತಿನ ಅಂಶಗಳಿಗೆ ಒಳಪಟ್ಟಿವೆ, ಸ್ಕೀಮ್ ಸಂಬಂಧಿತ ಎಲ್ಲ ದಸ್ತಾವೇಜುಗಳನ್ನು ಗಮನವಿಟ್ಟು ಓದಿರಿ.

‘ಶಿಷ್ಟಾಚಾರ ಉಲ್ಲಂಘನೆ’ ಜಟಾಪಟಿ ಜೋರು

ತಮ್ಮ ರಾಜ್ಯದ ರಾಜ್ಯಪಾಲರಿಂದ ‘ಶಿಷ್ಟಾಚಾರ ಉಲ್ಲಂಘನೆ’ ಆಗಿದೆ ಎಂದು ತಮಿಳುನಾಡು ಹಾಗೂ ಕೇರಳ ಸರ್ಕಾರಗಳು ಮಂಗಳವಾರ ಆರೋಪಿಸಿವೆ. ಇದರೊಂದಿಗೆ ದಕ್ಷಿಣದ ಈ ಎರಡು ರಾಜ್ಯಗಳ ಸರ್ಕಾರಗಳು ಹಾಗೂ ಅವುಗಳ ರಾಜ್ಯಪಾಲರ ನಡುವೆ, ವರ್ಷದ ಮೊದಲ ಅಧಿವೇಶದಿಂದಲೇ ಜಟಾಪಟ ಆರಂಭಗೊಂಡಂತಾಗಿದೆ. ತಮಿಳುನಾಡು ವಿಧಾನಸಭೆ ಅಧಿವೇಶನದಲ್ಲಿ ರಾಜ್ಯಪಾಲ ಆರ್.ಎನ್.ರವಿ ಅವರು ಸದನ ಉದ್ದೇಶಿಸಿ ಭಾಷಣ ಮಾಡದೇ ಹೊರನಡೆದಿದ್ದಾರೆ. ರಾಜ್ಯಪಾಲ ರವಿ ಅವರ ಈ ನಡೆಯನ್ನು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಖಂಡಿಸಿದ್ದಾರೆ. ಇತ್ತ, ‘ಸದನ ಉದ್ದೇಶಿಸಿ ಮಾತನಾಡುವ ವೇಳೆ, ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ಭಾಷಣದಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಿದ್ದಾರೆ’ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದ್ದಾರೆ

ರಾಜ್ಯಪಾಲ ರವಿ ನಡೆ ವಿರುದ್ಧ ನಿರ್ಣಯ ಅಂಗೀಕಾರ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ/ತಿರುವನಂತಪುರ: ತಮಿಳುನಾಡು ವಿಧಾನಸಭೆ ಅಧಿವೇಶ ನದ ಕಲಾಪ ಆರಂಭವಾಗುತ್ತಿದ್ದಂತೆಯೇ, ‘ಡಿಎಂಕೆ ನೇತೃತ್ವದ ಸರ್ಕಾರ ಸಿದ್ಧಪಡಿಸಿರುವ ಭಾಷಣದಲ್ಲಿ ಹಲವು ‘ದೋಷಗಳಿವೆ’ ಎಂದು ಆರೋಪಿಸಿ ರಾಜ್ಯಪಾಲ ರವಿ ಅವರು ಸದನದಿಂದ ಹೊರನಡೆದಿದ್ದಾರೆ.

ಇದರೊಂದಿಗೆ, 2021ರಲ್ಲಿ ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ರವಿ ಅವರು ವಿಧಾನಸಭೆ ಅಧಿವೇಶನದ ವೇಳೆ ಸದನದಿಂದ ನಾಲ್ಕನೇ ಬಾರಿ ಹೊರ ನಡೆದಂತಾಗಿದೆ.

ರಾಜ್ಯಪಾಲರು ಹೊರನಡೆದ ನಂತರ, ಆಡಳಿತಾರೂಢ ಡಿಎಂಕೆ ಹಾಗೂ ಅದರ ಮಿತ್ರಪಕ್ಷಗಳ ಶಾಸಕರು ಎದ್ದುನಿಂತು ಜೋರಾಗಿ ಕೂಗಾಟ ಆರಂಭಿಸಿದರು. ಇದರಿಂದ ಇಡೀ ಸದನ ಗದ್ದಲದ ಗೂಡಾಯಿತಲ್ಲದೇ, ಯಾರು ಏನು ಮಾತನಾಡುತ್ತಿದ್ದಾರೆ ಎಂಬುದು ಗೊತ್ತಾಗಲಿಲ್ಲ.

ನಂತರ ಮಾತನಾಡಿದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ರಾಜ್ಯಪಾಲರ ನಡೆಯನ್ನು ಖಂಡಿಸಿದರು.

‘ಈ ರೀತಿ ಹೊರನಡೆಯುವುದು ನಿಯಮಗಳು, ಸಂಪ್ರದಾಯ ಮತ್ತು ಶಿಷ್ಟಾಚಾರದ ಉಲ್ಲಂಘನೆಯಾಗಿದೆ. ಆರ್.ಎನ್.ರವಿ ಅವರದು ಹುದ್ದೆಗೆ ತಕ್ಕ ನಡೆಯಲ್ಲ. ಇದು, ಸದನ ಹಾಗೂ ರಾಜ್ಯಪಾಲರ ಹುದ್ದೆಯ ಘನತೆಗೆ ಮಾಡಿರುವ ಅವಮಾನ’ ಎಂದು ಸ್ಟಾಲಿನ್ ಕಿಡಿಕಾರಿದ್ದಾರೆ.

ನಂತರ, ರಾಜ್ಯಪಾಲರ ನಡೆ ಖಂಡಿಸಿ ಸ್ಟಾಲಿನ್ ಅವರು ಮಂಡಿಸಿದ ನಿರ್ಣಯವನ್ನು ಸದನ ಅಂಗೀಕರಿಸಿತು.

‘ಭಾಷಣ ಓದದೇ ಇರುವ ರಾಜ್ಯಪಾಲರ ವರ್ತನೆಯನ್ನು ಸದನ ಒಪ್ಪುವುದಿಲ್ಲ. ಸರ್ಕಾರ ಸಿದ್ಧಪಡಿಸಿರುವ ತಮಿಳು ಭಾಷೆಯಲ್ಲಿರುವ ಭಾಷಣವನ್ನು ಸ್ಪೀಕರ್ ಎಂ. ಅಪ್ಪವು ಓದಿದ್ದು, ಇದು ಮಾತ್ರ ಕಡತಕ್ಕೆ ಹೋಗಲಿದೆ’ ಎಂಬ ಅಂಶಗಳನ್ನು ಈ ನಿರ್ಣಯ ಒಳಗೊಂಡಿದೆ.

ಬಳಿಕ, ಎಲ್ಲ ಶಾಸಕರಿಗೆ ಧನ್ಯವಾದ ಹೇಳಿದ ಸ್ಟಾಲಿನ್, ‘ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಓದುವುದನ್ನು ರಾಜ್ಯಪಾಲರು ಪ್ರತಿ ವರ್ಷ ನಿರಾಕರಿಸುತ್ತಿದ್ದು, ಇದು ಉತ್ತಮ ನಡೆಯಲ್ಲ. ರಾಜ್ಯಪಾಲರು ಈ ರೀತಿ ತೊಂದರೆ ನೀಡುತ್ತಿರುವುದು ತಮಿಳುನಾಡಿಗೆ ಮಾತ್ರ ಸೀಮಿತವಾಗಿಲ್ಲ. ಇತರ ಹಲವು ರಾಜ್ಯಗಳಲ್ಲಿನ ರಾಜ್ಯಪಾಲರು ಕೂಡ ಅಲ್ಲಿನ ಸರ್ಕಾರಗಳಿಗೆ ತೊಂದರೆ ನೀಡುತ್ತಿದ್ದಾರೆ’ ಎಂದರು.

‘ವರ್ಷದ ಮೊದಲ ಅಧಿವೇಶನ ಆರಂಭವಾಗುವಾಗ, ಸರ್ಕಾರ ನೀತಿಗಳನ್ನು ಒಳಗೊಂಡ ಲಿಖಿತ ಭಾಷಣವನ್ನು ರಾಜ್ಯಪಾಲರು ಓದುವುದು ಮೊದಲಿನಿಂದಲೂ ಪಾಲಿಸಿ ಕೊಂಡು ಬರುತ್ತಿರುವ ಸಂಪ್ರದಾಯ. ಆದರೆ, ಇಂತಹ ಶಿಷ್ಟಾಚಾರವನ್ನು ರಾಜ್ಯಪಾಲರು ಪದೇಪದೇ ಉಲ್ಲಂಘನೆ ಮಾಡುತ್ತಿದ್ದರೆ, ಇಂತಹ ನಿಯಮ ಅಥವಾ ಸಂಪ್ರದಾಯ ಯಾಕಿರಬೇಕು ಎಂಬ ಪ್ರಶ್ನೆ ಉದ್ಭವಿಸುವುದು ಸಹಜ’ ಎಂದು ಸ್ಟಾಲಿನ್ ಹೇಳಿದರು.



ತಮಿಳುನಾಡು ವಿಧಾನಸಭೆ ಅಧಿವೇಶನದ ಮೊದಲ ದಿನದ ಕಲಾಪದಲ್ಲಿ ಪಾಲ್ಗೊಳ್ಳಲು ಆಗಮಿಸಿದ ರಾಜ್ಯಪಾಲ ಆರ್.ಎನ್.ರವಿ ಅವರಿಗೆ ಮಂಗಳವಾರ ಗೌರವ ವಂದನೆ ನೀಡಲಾಯಿತು —ಪಿಟಿಐ ಚಿತ್ರ



ಸದನದಲ್ಲಿ ಎಂ.ಕೆ.ಸ್ಟಾಲಿನ್ ಮಾತನಾಡಿದರು —ಪಿಟಿಐ ಚಿತ್ರ

> ವರ್ಷದ ಆರಂಭದಲ್ಲಿ ನಡೆಯುವ ವಿಧಾನಸಭೆ ಅಧಿವೇಶನ ವೇಳೆ ಸದನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುವುದನ್ನು ಕಡ್ಡಾಯಗೊಳಿಸಿರುವ ಅವಕಾಶಗಳನ್ನು ಸಂವಿಧಾನದಿಂದ ತೆಗೆದುಹಾಕಬೇಕು. ಈ ಸಂಬಂಧ ಸಂವಿಧಾನಕ್ಕೆ ತಿದ್ದುಪಡಿ ತರುವುದಕ್ಕಾಗಿ ಡಿಎಂಕೆ ಪಕ್ಷ ಪ್ರಯತ್ನಿಸಲಿದೆ
>
> **ಎಂ.ಕೆ.ಸ್ಟಾಲಿನ್**
> ತಮಿಳುನಾಡು ಮುಖ್ಯಮಂತ್ರಿ

ಸ್ಟಾಲಿನ್ ಹೇಳಿದ್ದು

- ಸಂವಿಧಾನದ 176ನೇ ವಿಧಿ ಪ್ರಕಾರ, ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಭಾಷಣವನ್ನು ರಾಜ್ಯಪಾಲರು ಪೂರ್ತಿಯಾಗಿ ಓದುವುದು ಕಡ್ಡಾಯ
- ಸರ್ಕಾರ ಸಿದ್ಧಪಡಿಸಿರುವ ಭಾಷಣ ಓದುವ ವೇಳೆ, ಭಾಷಣಕ್ಕೆ ಸಂಬಂಧಿಸಿ ರಾಜ್ಯಪಾಲರು ತಮ್ಮ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಲು ಇಲ್ಲವೇ ಭಾಷಣದಲ್ಲಿನ ಕೆಲ ಅಂಶಗಳನ್ನು ತೆಗೆದುಹಾಕಲು ಅವಕಾಶ ಇಲ್ಲ
- ಭಾರಿ ಬಹುಮತ ಪಡೆದು ಅಧಿಕಾರದ ಚುಕ್ಕಾಣಿ ಹಿಡಿದಿರುವ ಸರ್ಕಾರಕ್ಕೆ ರಾಜ್ಯಪಾಲರು ಸಹಕಾರ ನೀಡಬೇಕು
- ರಾಜ್ಯಪಾಲ ರವಿ ಅವರು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಸಾರ್ವಜನಿಕ ವೇದಿಕೆಗಳಲ್ಲಿ ರಾಜಕೀಯ ಭಾಷಣ ಮಾಡುವ ಮೂಲಕ ಸುಳ್ಳು ಹಬ್ಬಿಸುತ್ತಿದ್ದಾರೆ. ಇಂಥದೇ ಪ್ರಯತ್ನವನ್ನು ಸದನದಲ್ಲಿಯೂ ಮಾಡುತ್ತಿದ್ದು, ಇದನ್ನು ಒಪ್ಪಲು ಸಾಧ್ಯ ಇಲ್ಲ.

ಕೇಂದ್ರದ ವಿರುದ್ಧದ ಭಾಗಗಳನ್ನು ಓದಿಲ್ಲ: ಪಿಣರಾಯಿ ಟೀಕೆ

‘ವಿಧಾನಸಭೆ ಅಧಿವೇಶನ ಆರಂಭದಲ್ಲಿ ಸದನ ಉದ್ದೇಶಿಸಿ ಭಾಷಣ ಓದಿರುವ ರಾಜ್ಯಪಾಲ ರಾಜೇಂದ್ರ ಅರ್ಲೇಕರ್, ಕೇಂದ್ರ ಸರ್ಕಾರ ವಿರುದ್ಧದ ಕೆಲ ಭಾಗಗಳನ್ನು ಕೈಬಿಟ್ಟಿದ್ದಾರೆ’ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದರು.

ತಮ್ಮ ಭಾಷಣ ಮುಗಿಸಿದ ಬಳಿಕ ರಾಜ್ಯಪಾಲ ಅರ್ಲೇಕರ್, ಸದನದಿಂದ ನಿರ್ಗಮಿಸಿದ ಬಳಿಕ ಮುಖ್ಯಮಂತ್ರಿ ವಿಜಯನ್ ಮಾತನಾಡಿದರು.

‘ಕೇಂದ್ರ ಸರ್ಕಾರ ವಿರುದ್ಧದ ಕೆಲ ಭಾಗಗಳನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿಲ್ಲ. ಆದರೆ, ಸಂವಿಧಾನದ ಪ್ರಕಾರ, ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿರುವ ಭಾಷಣಕ್ಕೇ ಪ್ರಾಧಾನ್ಯ ಇರಲಿದೆ’ ಎಂದು ಹೇಳಿದರು.

‘ರಾಜ್ಯ ಸಚಿವ ಸಂಪುಟ ಅನುಮೋದಿಸಿರುವ ಸಂಪೂರ್ಣ ಭಾಷಣವನ್ನು ಓದಲಾಗಿದೆ ಎಂಬುದಾಗಿ ಪರಿಗಣಿಸಲಾಗುವುದು’ ಎಂದು ಸ್ಪೀಕರ್ ಎ.ಎನ್ ಶಂಸೀರ್ ಘೋಷಿಸಿದರು.

ಕೈಬಿಟ್ಟ ಭಾಗಗಳಲ್ಲಿ ಏನಿದೆ?: ಕೇಂದ್ರ ಸರ್ಕಾರದ ನಡೆ ಹಾಗೂ ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕುವುದಕ್ಕೆ ವಿಳಂಬ ಮಾಡಿದ್ದರಿಂದ ರಾಜ್ಯ ಸರ್ಕಾರ ಹಣಕಾಸು ಬಿಕ್ಕಟ್ಟು ಎದುರಿಸಬೇಕಾಯಿತು ಎಂಬ ಆರೋಪಗಳಿರುವ ಭಾಗವನ್ನು ರಾಜ್ಯಪಾಲರು ತಮ್ಮ ಭಾಷಣದಿಂದ ಕೈಬಿಟ್ಟದ್ದಾರೆ.

‘ಸಾಮಾಜಿಕ ಹಾಗೂ ಸಾಂಸ್ಥಿಕ ವಿಚಾರವಾಗಿ ಕೇರಳ ಹಲವು ಸಾಧನೆಗಳನ್ನು ಮಾಡಿದೆ. ಅದರೆ, ಕೇಂದ್ರ ಸರ್ಕಾರ ಕೈಗೊಂಡ ಹಲವಾರು ಪ್ರತಿಕೂಲ ಕ್ರಮಗಳಿಂದಾಗಿ ರಾಜ್ಯವು ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುವಂತಾಗಿದೆ. ಕೇಂದ್ರದ ಈ ನಡೆಯು ಸಂವಿಧಾನದಲ್ಲಿ ಹೇಳಿರುವ 'ವಿತ್ತೀಯ ಒಕ್ಕೂಟ ವ್ಯವಸ್ಥೆ'ಯನ್ನು ಬುಡಮೇಲು ಮಾಡುವಂತಿದೆ’ ಎಂಬ ಭಾಗವನ್ನು ಸಹ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಓದಿಲ್ಲ.

‘ರಾಜ್ಯ ವಿಧಾನಸಭೆ ಅಂಗೀಕರಿಸಿದ ಮಸೂದೆಗಳು ದೀರ್ಘಕಾಲದಿಂದ ಅಂಕಿತಕ್ಕಾಗಿ ಬಾಕಿ ಉಳಿದಿವೆ. ಈ ವಿಚಾರಗಳನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಕದ ತಟ್ಟಿತ್ತು. ರಾಜ್ಯದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸಂವಿಧಾನ ಪೀಠಕ್ಕೆ ವರ್ಗಾಯಿಸಿದೆ’ ಎಂಬ ಅಂಶವನ್ನೂ ಅರ್ಲೇಕರ್ ಓದಿಲ್ಲ.

ರಾಜ್ಯವು ಸಾಲ ಪಡೆಯುವ ಮಿತಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ನಿರ್ಬಂಧಗಳನ್ನು ಹೇರಿರುವುದು ಹಾಗೂ ತೆರಿಗೆ ಪಾಲು ಕುರಿತ ಭಾಗಗಳನ್ನು ರಾಜ್ಯಪಾಲರು ಓದಿದ್ದಾರೆ.

‘ಮನರೇಗಾ ಕಾಯ್ದೆಗೆ ತಿದ್ದುಪಡಿ ತಂದು, ಅದನ್ನು ವಿಬಿ–ರಾಮ್–ಜಿ ಎಂದು ಬದಲಾಯಿಸಿರುವುದರಿಂದ ಕೇರಳಕ್ಕೆ ಹಿನ್ನಡೆಯಾಗಿದೆ’ ಎಂಬ ಅಂಶವನ್ನು ಸಹ ಅವರು ಓದಿದ್ದಾರೆ.

> ರಾಜ್ಯದ ಕೆಲ ಜ್ವಲಂತ ಸಮಸ್ಯೆಗಳ ಕುರಿತು ಸರ್ಕಾರದ ಬಳಿ ಉತ್ತರ ಇಲ್ಲ. ಹೀಗಾಗಿ ಜನರ ಗಮನವನ್ನು ಬೇರೆಡೆ ಸೆಳೆಯುವುದಕ್ಕೆ ರಾಜ್ಯಪಾಲ ಮತ್ತು ಸರ್ಕಾರ ನಡುವೆ ಬಿಕ್ಕಟ್ಟು ತಲೆದೋರಿದೆ ಎಂದು ಬಿಂಬಿಸುವ ಪ್ರಯತ್ನಗಳು ನಡೆಯುತ್ತಿವೆ
>
> **ವಿ.ಡಿ.ಸತೀಶನ್**
> ಕೇರಳ ವಿಧಾನಸಭೆ ವಿಪಕ್ಷ ನಾಯಕ



ತಿರುವನಂತಪುರದಲ್ಲಿರುವ ವಿಧಾನಸೌಧದಲ್ಲಿ ನಡೆದ ಬಜೆಟ್ ಅಧಿವೇಶನದ ಮೊದಲ ದಿನದ ಕಲಾಪ ಉದ್ದೇಶಿಸಿ ರಾಜ್ಯಪಾಲ ರಾಜೇಂದ್ರ ಆರ್ಲೇಕರ್ ಮಂಗಳವಾರ ಮಾತನಾಡಿದರು —ಪಿಟಿಐ ಚಿತ್ರ

ವಿವಾದ ಅನಗತ್ಯ: ಕೇರಳ ಲೋಕಭವನ

ತಿರುವನಂತಪುರ: ‘ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ವಿಧಾನಸಭೆ ಅಧಿವೇಶನ ಉದ್ದೇಶಿಸಿ ಮಾಡಿದ ಭಾಷಣಕ್ಕೆ ಸಂಬಂಧಿಸಿ ಉಂಟಾಗಿರುವ ವಿವಾದ ‘ಅನಗತ್ಯ’ ಹಾಗೂ ‘ಆಧಾರರಹಿತ’’ ಎಂದು ಕೇರಳ ಲೋಕಭವನ ಮಂಗಳವಾರ ಹೇಳಿದೆ.

‘ಕೇಂದ್ರ ಸರ್ಕಾರದ ನಡೆಗಳನ್ನು ಟೀಕಿಸಿ ಹಾಗೂ ಅಂಕಿತಕ್ಕೆ ಬಾಕಿ ಉಳಿದಿರುವ ಮಸೂದೆಗಳ ಕುರಿತ ಭಾಗಗಳನ್ನು ರಾಜ್ಯಪಾಲರು ಓದಿಲ್ಲ’ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದ ಬೆನ್ನಲ್ಲೇ, ಲೋಕಭವನ ಈ ಪ್ರತಿಕ್ರಿಯೆ ನೀಡಿದೆ.

‘ಭಾಷಣದಲ್ಲಿ ಕೆಲವು ‘ದಾರಿತಪ್ಪಿಸುವ ಅಂಶ’ಗಳು ಇದ್ದು, ಅವುಗಳನ್ನು ತೆಗೆದು ಹಾಕುವಂತೆ ರಾಜ್ಯಪಾಲರು ಸರ್ಕಾರಕ್ಕೆ ಸೂಚಿಸಿದ್ದರು. ಆದರೆ, ರಾಜ್ಯಪಾಲರಿಗೆ ಸೂಕ್ತ ಎನಿಸಿದಲ್ಲಿ, ತಿದ್ದುಪಡಿಯೊಂದಿಗೆ ಭಾಷಣ ಓದಬಹುದು ಎಂದು ಸರ್ಕಾರ ಪ್ರತಿಕ್ರಿಯಿಸಿತ್ತು’ ಎಂಬುದಾಗಿಯೂ ಲೋಕ ಭವನ ಹೇಳಿದೆ.

‘ರಾಜ್ಯಪಾಲರು ಸೂಚಿಸಿದ ತಿದ್ದುಪಡಿಗಳನ್ನು ಸೇರಿಸಿ, ಭಾಷಣದ ಪ್ರತಿಯನ್ನು ಮತ್ತೊಮ್ಮೆ ಕಳುಹಿಸುವಂತೆಯೂ ಸೂಚಿಸಲಾಗಿತ್ತು. ಆದರೆ, ನಿನ್ನೆ ಮಧ್ಯರಾತ್ರಿ ವೇಳೆಗೆ, ಯಾವುದೇ ಬದಲಾವಣೆ ಇರದ ಭಾಷಣದ ಪ್ರತಿಯನ್ನೇ ಸರ್ಕಾರ ಮರಳಿಸಿತ್ತು’ ಎಂದೂ ತಿಳಿಸಿದೆ.

ಜಿನಚಿತ್ರವಿರುವ ಕಲ್ಲಿನ ಪೀಠ ಪತ್ತೆ

ಗದಗ: ಲಕ್ಕುಂಡಿ ಗ್ರಾಮದಲ್ಲಿನಡೆದಿರುವ ಉತ್ಖನನದಲ್ಲಿ ಮಂಗಳವಾರ ನವ ಶಿಲಾಯುಗದ ಬೂದು ಬಣ್ಣದ ಮಡಿಕೆ, ಜಿನ ಚಿತ್ರವಿರುವ ಕಲ್ಲಿನ ಪೀಠ ಸಿಕ್ಕಿದೆ.

‘ದೊಡ್ಡಗಾತ್ರದ ಒಡೆದ ಮಡಿಕೆಯ ಅರ್ಧ ಭಾಗದ ಜತೆಗೆ ಎರಡು ಮೂರು ಕವಡೆ ಸಿಕ್ಕಿವೆ’ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ. ಉತ್ಖನನ ಕೆಲಸ ಐದೂವರೆ ಅಡಿ ಆಳದವರೆಗೆ ನಡೆದಿದೆ. ಒಟ್ಟು 34 ಮಂದಿ ಕಾರ್ಮಿಕರು ಉತ್ಖನನ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

ಗ್ರಾಮದಲ್ಲಿ ಹಲವು ದೇವಸ್ಥಾನಗಳಿವೆ. ಅವುಗಳನ್ನೇ ಕೆಲವರು ಮನೆಗಳನ್ನಾಗಿ ಮಾಡಿಕೊಂಡಿ ದ್ದಾರೆ. ಚೌಕಿಮಠ ಕುಟುಂಬದವರು ವಾಸಿಸುವ ಮನೆಯಲ್ಲಿ ದೇವಸ್ಥಾನವಿದ್ದು, ಐದು ತಲೆಮಾರಿನಿಂದ ಅಲ್ಲೇ ವಾಸವಿದ್ದಾರೆ.

‘ಮಹಾಂತೇಶ್ವರ ಸ್ವಾಮಿಗೆ ಪೂಜಿಸುತ್ತ ವಾಸವಿದ್ದೇವೆ. ಇದು ಮಹಾಂತೇಶ್ವರ ಸ್ವಾಮಿ ಅಲ್ಲ; ಅರ್ಧ-ನಾರೀಶ್ವರ ಎಂದು ಇತಿಹಾಸಕಾರರು ಹೇಳಿದ್ದಾರೆ. ಜೀರ್ಣೋದ್ಧಾರಕ್ಕಾಗಿ ಮನೆ ಕೊಡಲು ಕೇಳಿದ್ದಾರೆ. ಸರ್ಕಾರ ಬೇರೆ ಕಡೆ ಜಾಗ, ಮನೆ ಕೊಟ್ಟರೆ ಹೋಗಲು ಸಿದ್ಧ’ ಎಂದು ಕುಟುಂಬದ ಮುಖ್ಯಸ್ಥ ಶರಣಯ್ಯ ಚೌಕಿಮಠ ತಿಳಿಸಿದ್ದಾರೆ.

‘ರಾಹುಲ್ ಗಾಂಧಿ ಸೂಕ್ತ ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇದೆ; ಅಧಿಕಾರ, ತಾಳ್ಮೆ ಶಾಶ್ವತವೂ ಅಲ್ಲ’

ಸಿ.ಎಂ ಹುದ್ದೆ ಸುಲಭವಾಗಿ ಸಿಗದು: ಡಿಕೆಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಎಂದು ಜನ ಕರೆಯಲಾದರೂ ಸ್ಥಾನ ಬೇಕು ಎಂದು ಗೋಗರೆದು ಪಂಚಾಯಿತಿ ಅಧ್ಯಕ್ಷರಾದವರೇ ಅಧಿಕಾರ ಬಿಟ್ಟುಕೊಡಲು ನಾನಾ ನೆಪ ಹೇಳುತ್ತಾರೆ. ಇನ್ನು ಮುಖ್ಯಮಂತ್ರಿ ಹುದ್ದೆ ಸುಲಭವಾಗಿ ಸಿಗುತ್ತದೆಯೇ’ ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.



ಡಿ.ಕೆ.ಸುರೇಶ್

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ವ್ಯವಸ್ಥೆಯೂ ಅದೇ ರೀತಿ ಇದೆ. ಚಿಕ್ಕ ವಯಸ್ಸಿನಿಂದಲೂ ಶಿವಕುಮಾರ್ ಅವರು ಇಂತಹ ಬೆಳವಣಿಗೆ ನೋಡಿಕೊಂಡು ಬಂದಿದ್ದಾರೆ’ ಎಂದರು.

‘ಮೈಸೂರಿನಲ್ಲಿ ರಾಹುಲ್ ಗಾಂಧಿ ಅವರನ್ನು ಡಿ.ಕೆ. ಶಿವಕುಮಾರ್ ಭೇಟಿಯಾದ ವೇಳೆ, ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ. ದೇಶದ ಎಲ್ಲಾ ಬೆಳವಣಿಗೆಗಳ ದೃಷ್ಟಿ ಇಟ್ಟುಕೊಂಡು, ಎಲ್ಲರ ವಿಶ್ವಾಸ ಗಳಿಸಿ ತೀರ್ಮಾನ ಮಾಡಬೇಕು ಎಂಬುದು ಅವರ ಆಲೋಚನೆ. ನರೇಗಾ ಕುರಿತು ಚರ್ಚೆಗೆ ಕರೆದಿರುವ ವಿಶೇಷ ಅಧಿವೇಶನದ ಬಳಿಕ ತೀರ್ಮಾನ ಮಾಡುವ ಸಾಧ್ಯತೆ ಇದೆ. ಅಣ್ಣನ ಹಣೆಯಲ್ಲಿ ಬರೆದಿದ್ದರೆ ಅವರಿಗೆ ಸಿಕ್ಕೇ ಸಿಗುತ್ತದೆ’ ಎಂದರು.

‘ರಾಜಕಾರಣದಲ್ಲಿ ಯಾವುದೂ ಶಾಶ್ವತವಲ್ಲ, ಅಧಿಕಾರ ಹಾಗೂ ತಾಳ್ಮೆ ಎರಡೂ ಶಾಶ್ವತವಲ್ಲ. ಅಧಿಕಾರ ಹಂಚಿಕೆ ವಿಚಾರವಾಗಿ ತಾಳ್ಮೆಯಿಂದ ಇರಲು ಪಕ್ಷ ಹೇಳಿದೆ. ಅಣ್ಣ ಪಕ್ಷದ ಶಿಸ್ತಿನ ಸಿಪಾಯಿ. ಎಲ್ಲರನ್ನೂ ಒಟ್ಟಾಗಿ ತೆಗೆದು ಕೊಂಡು ಹೋಗಬೇಕು ಎಂಬ ಗುರಿ ಇಟ್ಟುಕೊಂಡಿದ್ದಾರೆ. ಅಧಿಕಾರ ಸುಲಭವಾಗಿ ಬರುವುದಿಲ್ಲ. ನಮ್ಮ ಗುರಿ 2028ರ ಚುನಾವಣೆ. ಈ ಚುನಾವಣೆಯನ್ನು ಒಗ್ಗಟ್ಟಾಗಿ ಎದುರಿಸಬೇಕು. ಶಾಸಕರು, ಕಾರ್ಯಕರ್ತರ ಹಿತದೃಷ್ಟಿ ಯಿಂದ ತಾಳ್ಮೆ ವಹಿಸಬೇಕಿದೆ’ ಎಂದು ಹೇಳಿದರು.

‘ಹಣೆಬರಹದಲ್ಲಿ ಬರೆದಂತೆ ಆಗುತ್ತದೆ’

ಗದಗ: ‘ಯಾರು ಏನೇ ಅಂದರೂ ಹಣೆಬರಹದಲ್ಲಿ ಏನು ಬರೆದಿದೆಯೋ, ಅದೇ ಆಗುತ್ತದೆ. ನಾನೂ ಅದನ್ನು ನಂಬುತ್ತೇನೆ’ ಎಂದು ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

‘ಅಣ್ಣನ ಹಣೆಬಹರದಲ್ಲಿ ಇತ್ತೆಂದರೆ ಸಿ.ಎಂ ಆಗುತ್ತಾರೆ’ ಎಂಬ ಡಿ.ಕೆ.ಸುರೇಶ್ ಹೇಳಿಕೆಗೆ, ‘ಅವರು ಹೇಳಿದ್ದರಲ್ಲಿ ತಪ್ಪೇನಿಲ್ಲ. ಹಣೆಬರಹದಲ್ಲಿ ಬರೆದಂತೆ ಆಗುತ್ತದೆ’ ಎಂದರು.

‘ಹಣೆಬರಹ ಬರೆಯುವುದು ದೇವರು. ನಾನು 5 ಬಾರಿ ಶಾಸಕ, 3 ಬಾರಿ ಮಂತ್ರಿ ಆಗುವೆ ಅಂತ ಕನಸಿನಲ್ಲೂ ಯೋಚಿಸಿರಲಿಲ್ಲ. ಹಣೆಬರಹದಲ್ಲಿ ಇದ್ದಿದ್ದರಿಂದ ಆಯ್ತು’ ಎಂದು ಹೇಳಿದರು.



ಜಮೀರ್ ಅಹಮದ್ ಖಾನ್

‘ಸಿಎಂ ಬದಲಾವಣೆ: ಹತ್ತೇ ಶಾಸಕರ ಮಾತು’

ಬಾಗಲಕೋಟೆ: ‘ಮುಖ್ಯಮಂತ್ರಿ ಬದಲಾವಣೆ ಕುರಿತು ಮಾಧ್ಯಮಗಳ ಎದುರು ಕೇವಲ ಹತ್ತು ಶಾಸಕರು ಮಾತನಾಡುತ್ತಾರೆ. ಅವರಲ್ಲಿ ಐವರು ಮುಖ್ಯಮಂತ್ರಿ ಪರ ಇದ್ದರೆ, ಇನ್ನೂ ಐವರು ಉಪ ಮುಖ್ಯ ಮಂತ್ರಿ ಪರ ಇದ್ದಾರೆ’ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮೈಕ್ ಸಿಕ್ಕ ತಕ್ಷಣ ಹೇಳಿಕೆ ನೀಡುತ್ತಾರೆ. ಇದರಿಂದ ಗೊಂದಲ ಸೃಷ್ಟಿಯಾಗಿದೆ. ಮುಖ್ಯಮಂತ್ರಿ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟಿದ್ದು. ಅದಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ’ ಎಂದರು.

‘ಗುಜರಾತ್ ರಾಜ್ಯದಲ್ಲಿದ್ದ ವಾಹನಗಳಿಗೆ ಆರ್‌ಟಿಒ ಕಚೇರಿಯಿಂದ ಸ್ಥಳ ಪರಿಶೀಲಿಸದೇ ಫಿಟ್ನೆಸ್ ಪ್ರಮಾಣಪತ್ರ ನೀಡಿರುವ ಆರೋಪಕ್ಕೆ ಸಂಬಂಧಿಸಿದಂತೆ ತಪ್ಪು ಮಾಡಿದ್ದರೆ, ಅಂತಹ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು. ಈ ಸಂಬಂಧ ಗುಜರಾತ್ ಆಯುಕ್ತರಿಗೆ ನಮ್ಮ ಆಯುಕ್ತರು ಪತ್ರ ಬರೆದಿದ್ದಾರೆ. ಬಗ್ಗೆ ತನಿಖೆ ಮಾಡಿ ವರದಿ ಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.



ರಾಮಲಿಂಗಾ ರೆಡ್ಡಿ

‘ನಾಯಕತ್ವ ಬದಲಾವಣೆಯಾದರೆ ಒಂದು ವರ್ಗದ ಮತ ಕಾಂಗ್ರೆಸ್ ಪಕ್ಷಕ್ಕೆ ಬರಲ್ಲ ಎಂದು ಬಿಂಬಿಸುವುದು ಸರಿಯಲ್ಲ. ಎಲ್ಲಾ ವರ್ಗದ ಮತಗಳು ಕಾಂಗ್ರೆಸ್ ಪಕ್ಷಕ್ಕೆ ಬೇಕು. ಜಾತಿ ಮೇಲೆ ನಡೆಯುವ ರಾಜಕಾರಣ ರಾಜ್ಯ ಹಾಗೂ ರಾಷ್ಟ್ರದ ಅಭಿವೃದ್ಧಿಯನ್ನು ಕುಂಠಿತ ಮಾಡಲಿದೆ. ಶಿವಕುಮಾರ್ ಅವರು ಪಕ್ಷಕ್ಕೆ ನಿಷ್ಠರಾಗಿದ್ದಾರೆ. ಕೆಲವರು ವ್ಯಕ್ತಿಗೆ ನಿಷ್ಠರಾಗಿದ್ದಾರೆ. ಅವರು ಅಧಿಕಾರಕ್ಕಾಗಿಯೇ ಇರುತ್ತಾರೆ’ ಎಂದು ಹೇಳಿದರು.



ಕ್ರೆಸ್ಟ್‌ಗೇಟ್ ತಜ್ಞ ಕನ್ನಯ್ಯ ನಾಯ್ಡು ಅವರು ತುಂಗಭದ್ರಾ ಅಣೆಕಟ್ಟೆಗೆ ಭೇಟಿ ನೀಡಿ ಗೇಟ್ ಅಳವಡಿಕೆ ಕಾಮಗಾರಿಗಳ ಪರಿಶೀಲನೆ ನಡೆಸಿದರು. ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ ಜತೆಗಿದ್ದರು —ಪ್ರಜಾವಾಣಿ ಚಿತ್ರ

ಗೇಟ್ ಪರಿಶೀಲಿಸಿದ ಕನ್ನಯ್ಯ ನಾಯ್ಡು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಕ್ರೆಸ್ಟ್‌ಗೇಟ್ ತಜ್ಞ ಎನ್.ಕನ್ನಯ್ಯ ನಾಯ್ಡು ಅವರು ಮಂಗಳವಾರ ತುಂಗಭದ್ರಾ ಅಣೆಕಟ್ಟೆಗೆ ಭೇಟಿ ನೀಡಿ, ಕ್ರೆಸ್ಟ್‌ಗೇಟ್ ಅಳವಡಿಕೆ ಕಾರ್ಯ ಪರಿಶೀಲಿಸಿದರು.

18ನೇ ಕ್ರೆಸ್ಟ್‌ಗೇಟ್ ಅಳವಡಿಕೆ ಆಗಿದ್ದು, ಗೇಟ್ ಎತ್ತುವ ಪ್ರಯೋಗವೂ ಯಶಸ್ವಿಯಾಗಿದೆ. ಗೇಟ್ ಸಂಖ್ಯೆ 4, 21 ಮತ್ತು 27ರಲ್ಲಿ ಕ್ರೆಸ್ಟ್‌ಗೇಟ್ ಅಳವಡಿಕೆ ಕಾರ್ಯ ಅಂತಿಮ ಹಂತದಲ್ಲಿದೆ.

‘ಜನವರಿ ಅಂತ್ಯದೊಳಗೆ ಕನಿಷ್ಠ ನಾಲ್ಕು ಕ್ರೆಸ್ಟ್‌ಗೇಟ್ ಅಳವಡಿಕೆ ಮುಗಿಯಲಿದೆ. ಮುಂದಿನ ತಿಂಗಳಿನಿಂದ ಈ ಕಾಮಗಾರಿಗೆ ಇನ್ನಷ್ಟು ವೇಗ ಸಿಗಲಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಹೋರಾಟಕ್ಕೆ ಸಜ್ಜು

ದಕ್ಷಿಣದ ಸಿ.ಎಂ.ಗಳ ಸಭೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ದಬ್ಬಾಳಿಕೆ ವಿರುದ್ಧ ಹೋರಾಟ ರೂಪಿಸಲು ದಕ್ಷಿಣದ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮೇಳನ ಆಯೋಜಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಮಾಜವಾದಿ ಅಧ್ಯಯನ ಕೇಂದ್ರ, ಸಮಾಜವಾದಿ ಸಂಗಮವು ಮಂಗಳವಾರ ಆಯೋಜಿಸಿದ್ದ ದಕ್ಷಿಣ ಭಾರತ ಸಮಾಜವಾದಿಗಳ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

‘ಆರ್ಥಿಕ ನಿಯಂತ್ರಣ, ರಾಜಕೀಯ ಒತ್ತಡ, ಸಾಂವಿಧಾನಿಕ ಹಕ್ಕುಗಳ ದುರುಪಯೋಗದ ಮೂಲಕ ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತಿದೆ’ ಎಂದು ಟೀಕಿಸಿದರು.

‘ಭಾರತದಲ್ಲಿ ಪ್ರಜಾಪ್ರಭುತ್ವದ ಹಾದಿಯು ಈಗ ಮತ್ತೆ ನಿರಂಕುಶತೆಯ ಕಡೆಗೆ ಹೊರಳುತ್ತಿರುವುದನ್ನು ಗಮನಿಸುತ್ತಿದ್ದೇವೆ. ಜನ ಸೇವೆ ಮಾಡಲು ರಾಜ್ಯಗಳಿಗೆ ಅಧಿಕಾರ ಬೇಕು ಎನ್ನುವುದರ ಬದಲಾಗಿ, ರಾಜ್ಯಗಳ ಅಧಿಕಾರ ಕಸಿದು ಕೇಂದ್ರದ ಏಜೆಂಟರನ್ನಾಗಿ ಮಾಡಿಕೊಳ್ಳುವ ಪ್ರಯತ್ನ ನಡೆದಿದೆ’ ಎಂದು ದೂರಿದರು.

ಕಾಂಗ್ರೆಸ್‌ನಿಂದ ಬಲ: ‘ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಹಣಕಾಸು ಆಯೋಗಕ್ಕೆ ಆರ್ಥಿಕ ನ್ಯಾಯ ನೀಡುವ ಸ್ವತಂತ್ರ ಮಧ್ಯವರ್ತಿ ಸಂಸ್ಥೆಯಂತೆಯೇ ಬಲ ತುಂಬಿದೆ. ಯುಪಿಎ ಸರ್ಕಾರ ಉದ್ಯೋಗ, ಶಿಕ್ಷಣ, ಆಹಾರ, ಮಾಹಿತಿ ಹಕ್ಕು ನೀಡುವ ರೂಪದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಿತ್ತು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಈಗ ಎಲ್ಲ ಆಶಯಗಳನ್ನು ಬುಡಮೇಲು ಮಾಡಿದ್ದು, ನಿಯಂತ್ರಣ ಹಾಗೂ ಪಾಲುದಾರಿಕೆ ಎನ್ನುವುದನ್ನು ದಂಡನೆ ಎನ್ನುವ ಹಂತಕ್ಕೆ ತಂದಿಟ್ಟಿದೆ’ ಎಂದು ಆಪಾದಿಸಿದರು.

‘ಕರ್ನಾಟಕದ ಆಡಳಿತಕ್ಕೆ ಸಮಾಜವಾದದ ಅಡಿಪಾಯವನ್ನು ಹಲವು ನಾಯಕರು ಹಾಕಿಕೊಟ್ಟಿದ್ದಾರೆ. ಅದು ಈಗಲೂ ದಾರಿದೀಪವಾಗಿ ಕೆಲಸ ಮಾಡುತ್ತಿದೆ. ಸಮಸಮಾಜ ನಿರ್ಮಾಣವೇ ಸಮಾಜವಾದದ ಮೂಲ ಆಶಯವಾಗಿದ್ದರೂ ಈಗ ಇದನ್ನು ಪಟ್ಟಭದ್ರ ಹಿತಾಸಕ್ತಿಗಳು ದುರ್ಬಲಗೊಳಿಸುತ್ತಿವೆ. ಏಕಸ್ವಾಮ್ಯವನ್ನು ತಪ್ಪಿಸುವುದೇ ಸಮಾಜವಾದದ ಗುರಿ ಆಗಬೇಕು’ ಎಂದು ಹೇಳಿದರು.

ಅನುದಾನ ಬಿಡುಗಡೆ ಮಾಡಿ: ‘ಕೇಂದ್ರದ ತೆರಿಗೆ ಪಾಲಿನಲ್ಲಿ ಕನಿಷ್ಠ ಶೇ 50ರಷ್ಟನ್ನಾದರೂ ರಾಜ್ಯಗಳಿಗೆ ಮೀಸಲಿಡಬೇಕು. ಇದಕ್ಕೆ 1971ರ ಜನಗಣತಿ ಮಾನದಂಡವಾಗಬೇಕು. ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯಲ್ಲಿ ದಕ್ಷಿಣ ರಾಜ್ಯಗಳ ಹಿತವನ್ನು ಕಾಪಾಡಬೇಕು. ಅಂತರರಾಜ್ಯ ಮಂಡಳಿ ಯನ್ನು ಪುನರ್ ರಚಿಸಬೇಕು. ಹಣಕಾಸು ಆಯೋಗದ ಅನುದಾನಗಳನ್ನು ವಿಳಂಬ ಮಾಡದೇ ಬಿಡುಗಡೆ ಮಾಡಬೇಕು’ ಎಂದು ಆಗ್ರಹಿಸಿದರು.

ರಾಜ್ಯಸಭೆಯ ಮಾಜಿ ಸದಸ್ಯ ಎಲ್.ಹನುಮಂತಯ್ಯ, ಕೇರಳದ ಮಾಜಿ ಹಣಕಾಸು ಸಚಿವ ಐಸಾಕ್ ಥಾಮಸ್, ತೆಲಂಗಾಣ ಶಾಸಕ ಯಾದವ ರೆಡ್ಡಿ, ಲೋಕಸಭೆಯ ಮಾಜಿ ಸದಸ್ಯ ಥಂಪನ್ ಥಾಮಸ್. ಗೀತಾ ರಾಮಕಿಶನ್ ಉಪಸ್ಥಿತರಿದ್ದರು.



ಸಮಾಜವಾದಿ ಸಮ್ಮೇಳನದಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾ. ಸುದರ್ಶನ್ ರೆಡ್ಡಿ ಹಾಗೂ ಸಿದ್ದರಾಮಯ್ಯ ಸಮಾಲೋಚನೆಯಲ್ಲಿ ತೊಡಗಿದ್ದರು. ಶಾಸಕ ಬಿ.ಆರ್.ಪಾಟೀಲ, ಕೇರಳದ ಮಾಜಿ ಸಂಸದ ಥಂಪನ್ ಥಾಮಸ್ ಮತ್ತು ಕೇರಳದ ಮಾಜಿ ಹಣಕಾಸು ಸಚಿವ ಐಸಾಕ್ ಥಾಮಸ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

> **ದಕ್ಷಿಣ ರಾಜ್ಯಗಳಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ, ಒಕ್ಕೂಟ ವ್ಯವಸ್ಥೆ ಮೇಲಿನ ಗದಾಪ್ರಹಾರದ ವಿರುದ್ಧ ಸಮಾಜವಾದಿಗಳ ಸಮ್ಮೇಳನ ಧ್ವನಿ ಎತ್ತಿದೆ**
>
> **ಬಿ.ಆರ್.ಪಾಟೀಲ,** ಉಪಾಧ್ಯಕ್ಷ, ಕರ್ನಾಟಕ ರಾಜ್ಯ ನೀತಿ ಹಾಗೂ ಯೋಜನಾ ಆಯೋಗ

‘ಸಾಂವಿಧಾನಿಕ ಬಿಕ್ಕಟ್ಟು ಬಗೆಹರಿಸಿ’

‘ಚುನಾಯಿತ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ರಾಜಭವನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಒಕ್ಕೂಟ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಸಾಂವಿಧಾನಿಕ ಬಿಕ್ಕಟ್ಟು ಬಗೆಹರಿಸಬೇಕಿದೆ’ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಸಲಹೆ ನೀಡಿದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ನರೇಗಾ ಯೋಜನೆಯಲ್ಲಿ ಗಾಂಧಿ ಹೆಸರು ಬದಲಿಸಿ ರಾಮನ ಹೆಸರಿಡುವ ಪ್ರಯತ್ನ, ಅನುದಾನ ಕಡಿತ, ತೆರಿಗೆ ಹಂಚಿಕೆಯಲ್ಲಿನ ಅಸಮಾನತೆ ರಾಜ್ಯಗಳನ್ನೇ ಶಕ್ತಿಹೀನವಾಗಿಸುತ್ತಿದೆ. ರಾಜ್ಯ ಸರ್ಕಾರಗಳು ಕೇಂದ್ರದ ಏಜೆಂಟರಲ್ಲ ಎನ್ನುವುದನ್ನು ತೋರಿಸಬೇಕಿದೆ’ ಎಂದು ಹೇಳಿದರು.

ಕೇಂದ್ರದ ವಿರುದ್ಧ ಸಿ.ಎಂ ಕಿಡಿ

‘ಪ್ರತಿ ವರ್ಷ ಕೇಂದ್ರ ಸರ್ಕಾರಕ್ಕೆ ₹5 ಲಕ್ಷ ಕೋಟಿಯನ್ನು ತೆರಿಗೆ ಹಾಗೂ ವಿವಿಧ ರೂಪದಲ್ಲಿ ನೀಡುತ್ತಿದ್ದೇವೆ. ದೇಶದ ಜನಸಂಖ್ಯೆಯ ಶೇ 5ರಷ್ಟಿದ್ದರೂ ಜಿಡಿಪಿಗೆ ನಮ್ಮ ಕೊಡುಗೆ ಶೇ 8.4ರಷ್ಟಿದೆ. ಅಲ್ಲದೇ ಜಿಎಸ್‌ಟಿಗೆ ಅತಿ ಹೆಚ್ಚು ಕೊಡುಗೆ ನೀಡುತ್ತಿದ್ದೇವೆ. ದೆಹಲಿಯಿಂದ ಕರ್ನಾಟಕಕ್ಕೆ ಬರೀ 13 ಪೈಸೆ ಮಾತ್ರ ಹಿಂದಿರುಗಿ ಬರುತ್ತಿದೆ.ಒಕ್ಕೂಟ ವ್ಯವಸ್ಥೆ ಎಂದರೆ ಇದೇನಾ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಯುಪಿಎ ಸರ್ಕಾರವು ಕರ್ನಾಟಕದ ಕೊಡುಗೆ ಗುರುತಿಸಿ 14ನೇ ಹಣಕಾಸು ಆಯೋಗದಡಿ ಶೇ 4.74ರಷ್ಟು ಪಾಲು ಮೀಸಲಿಟ್ಟಿತ್ತು. ಬಿಜೆಪಿ ಸರ್ಕಾರವು 15ನೇ ಹಣಕಾಸು ಆಯೋಗದಡಿ ಇದನ್ನು ಶೇ 3.64ಕ್ಕೆ ಇಳಿಸಿದ್ದು, ಇದರಿಂದ ₹1.25 ಲಕ್ಷ ಕೋಟಿ ದರೋಡೆ ಮಾಡಿದಂತಾಗಿದೆ ಎಂದು ದೂರಿದರು.

ಅಪಘಾತ: ಐವರು ಸ್ಥಳದಲ್ಲೇ ಸಾವು

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ಸಿಂಧನೂರು– ಸಿರುಗುಪ್ಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಕನ್ನಾರಿ ಕ್ರಾಸ್ ಬಳಿ ಬೊಲೆರೊ ವಾಹನಗಳು ಮುಖಾಮುಖಿಯಾಗಿ ಐವರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಸಿಂಧನೂರು ಕಡೆಯಿಂದ ಸಿರುಗುಪ್ಪ ಕಡೆಗೆ ತೆರಳುತ್ತಿದ್ದ ಬೊಲೆರೊ ವಾಹನವು, ಕುರಿಗಳನ್ನು ತುಂಬಿಕೊಂಡು ಹೋಗುತ್ತಿತ್ತು. ಸಿರುಗುಪ್ಪದಿಂದ ಸಿಂಧನೂರು ಕಡೆಗೆ ಬರುತ್ತಿದ್ದ ವಾಹನದಲ್ಲಿ ಪ್ರಯಾಣಿಕರಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸಿರುಗುಪ್ಪ ತಾಲ್ಲೂಕಿನ ಚಳ್ಳೆಕಡ್ಲೂರು ಗ್ರಾಮದ ನಿವಾಸಿಗಳಾದ ಸಣ್ಣಯಲ್ಲಯ್ಯ (40), ರಂಗನಾಥ ಕಲ್ಲೂರು (15), ಹರಿ (36), ಆದೋನಿ ತಾಲ್ಲೂಕಿನ ಮಲ್ಲಯ್ಯ ಮದುರಿ ಸೇರಿ ಐವರು ಮೃತಪಟ್ಟಿದ್ದಾರೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಸೇರಿ ಪೊಲೀಸ್ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ.

ಮೈಸೂರು–ಕುಶಾಲನಗರ ರೈಲು ಮಾರ್ಗ ಯೋಜನೆ ರದ್ದು

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು–ಕುಶಾಲನಗರ ನಡುವೆ ಸುಮಾರು 89 ಕಿ.ಮೀ ಉದ್ದದ ಉದ್ದೇಶಿತ ರೈಲು ಮಾರ್ಗ ನಿರ್ಮಾಣ ಮಾಡುವ ಯೋಜನೆಯನ್ನು ನೈರುತ್ಯ ರೈಲ್ವೆಯು ಸದ್ಯಕ್ಕೆ ಕೈಬಿಟ್ಟಿದೆ.

ಈ ಕುರಿತು ನೈರುತ್ಯ ರೈಲ್ವೆ ವಿಭಾಗೀಯ ಅಧಿಕಾರಿಗಳು ಕೇಂದ್ರಕ್ಕೆ ವರದಿ ಸಲ್ಲಿಸಿದ್ದಾರೆ. ‘ಉದ್ದೇಶಿತ ಮಾರ್ಗ ದೀರ್ಘಾವಧಿಯಲ್ಲಿ ಲಾಭದಾಯಕವಾಗಿಲ್ಲ’ ಎನ್ನುವ ಕಾರಣಕ್ಕೆ ಈ ನಿರ್ಧಾರಕ್ಕೆ ಬರಲಾಗಿದೆ.

ಯೋಜನೆ ಜಾರಿಗೆ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಆಸಕ್ತಿ ತೋರಿದ್ದರು. ₹3,084 ಕೋಟಿ ವೆಚ್ಚದಲ್ಲಿ ಪ್ರಾಥಮಿಕ ಪ್ರಸ್ತಾವ ಸಿದ್ಧಪಡಿಸಿದ್ದು, ಜಮೀನು ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಕೋರಿದ್ದರು. ಆದರೆ, ಈ ಪ್ರಸ್ತಾವ ಕೈಬಿಡುವಂತೆ ಸರ್ಕಾರ ಪತ್ರ ಬರೆದಿತ್ತು.

ಯೋಜನೆ ಸಂಬಂಧ ಸಮೀಕ್ಷೆ ನಡೆಸಲು 2018–19ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ನೈರುತ್ಯ ರೈಲ್ವೆಗೆ ಹಸಿರುನಿಶಾನೆ ತೋರಿತ್ತು. 1,379 ಎಕರೆ ಭೂಸ್ವಾಧೀನ ಪಡೆಯುವ ಅಂದಾಜಿತ್ತು. 2022ರ ಜೂನ್‌ನಲ್ಲಿ ಸ್ಥಳ ಸಮೀಕ್ಷೆಯ ಅಂತಿಮ ಪ್ರಕ್ರಿಯೆ ಆರಂಭಗೊಂಡಿತ್ತು.

ಪರಿಸರ ಪ್ರಿಯರಿಂದ ಸಾಕಷ್ಟು ವಿರೋಧವೂ ವ್ಯಕ್ತವಾಗಿತ್ತು.

ಕೇಂದ್ರಕ್ಕೆ ಮನವಿ: ‘ಈ ಯೋಜನೆ ಮೈಸೂರು-ಕೊಡಗು ಜನರ ಬಹುದಿನದ ಕನಸು. ಯೋಜನೆಯ ಪರ-ವಿರೋಧ ಎರಡೂ ಇವೆ. ಎಲ್ಲರ ಅಭಿಪ್ರಾಯ ಪಡೆದು ಮರು ಪರಿಶೀಲಿಸುವಂತೆ ಕೇಂದ್ರಕ್ಕೆ ಮನವಿ ಮಾಡಲಾಗುವುದು’ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಕ್ರಿಯಿಸಿದ್ದಾರೆ.

‘ಸರ್ಕಾರಿ ವೈದ್ಯರ ಖಾಸಗಿ ಪ್ರ್ಯಾಕ್ಟೀಸ್ ತಡೆಗೆ ಕ್ರಮ’

ಕೋಲಾರ: ‘ಸರ್ಕಾರಿ ವೈದ್ಯರು ಕೆಲಸದ ಅವಧಿಯಲ್ಲಿ ಖಾಸಗಿ ಕ್ಲಿನಿಕ್ ಅಥವಾ ಬೇರೆ ಕಡೆ ಕೆಲಸ ಮಾಡದಂತೆ ತಡೆಯಲು ನಿಗಾ ವ್ಯವಸ್ಥೆ ರೂಪಿಸಿದ್ದು, ನಿಯಮ ಉಲ್ಲಂಘಿಸಿದರೆ ಕ್ರಮ ಕೈಗೊಳ್ಳಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಎಚ್ಚರಿಕೆ ನೀಡಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇಲಾಖೆಯಲ್ಲಿ ಹೊಸ ಹಾಜರಿ ಪದ್ಧತಿ ಜಾರಿ ಮಾಡಿದ್ದು, ಮುಖಚರ್ಯೆ ಗುರುತಿಸುವಿಕೆ ಮೂಲಕ ಹಾಜರಿ ಹಾಕಲಾಗುತ್ತಿದೆ. ಶೇ 90ರಷ್ಟು ವೈದ್ಯರು ನೋಂದಣಿ ಆಗಿದ್ದಾರೆ. ಬೆಳಿಗ್ಗೆ 9 ಗಂಟೆಗೆ ಆಸ್ಪತ್ರೆಗೆ ಬಂದು ತಮ್ಮ ಮೊಬೈಲ್ ಮೂಲಕವೇ ನೋಂದಣಿ ಮಾಡಿಕೊಳ್ಳಬೇಕು. ಆಗ ಕೆಲಸದ ಸ್ಥಳ ಮ್ಯಾಪ್ ಆಗುತ್ತದೆ, ಮುಖಚರ್ಯೆ ದಾಖಲಾಗುತ್ತದೆ. ಮತ್ತೆ ಸಂಜೆ 4ಕ್ಕೆ ಇದೇ ಪ್ರಕ್ರಿಯೆ ಮಾಡಬೇಕು. ಈ ಅವಧಿಯಲ್ಲಿ ಕೆಲಸದ ಸ್ಥಳದಿಂದ ಹೊರ ಹೋಗುವುದರ ಪರಿಶೀಲನೆಗೆ ವ್ಯವಸ್ಥೆ ಮಾಡಿದ್ದೇವೆ. ಸಿಕ್ಕಿಬಿದ್ದರೆ ಕ್ರಮ ನಿಶ್ಚಿತ’ ಎಂದರು.

‘ಇದಲ್ಲದೇ, ಕೆಲಸದ ವೈಖರಿ ಮೇಲೂ ನಿಗಾ ಇಟ್ಟಿದ್ದೇವೆ. ಶಸ್ತ್ರಚಿಕಿತ್ಸಕ ಎಷ್ಟು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ? ಪ್ರಸೂತಿತಜ್ಞರು ಎಷ್ಟು ಹೆರಿಗೆ ಮಾಡಿಸಿದ್ದಾರೆ? ಹೀಗೆ, ವೈದ್ಯರ ಕಾರ್ಯವೈಖರಿ ಮ್ಯಾಪ್ ಮಾಡಲಾಗುತ್ತಿದೆ. ಎಂಬಿಬಿಎಸ್ ವೈದ್ಯರ ಕೊರತೆ ಇಲ್ಲ. 1,600 ಮಂದಿ ನೇಮಕ ಮಾಡಿಕೊಳ್ಳಲಾಗಿದೆ. ಕೆಲವೆಡೆ ತಜ್ಞ ವೈದ್ಯರ ಕೊರತೆ ಇದೆ’ ಎಂದರು.

ಪ್ರಜಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಅನುಭವಗಾಥೆ

ನಾಸಾದ ಗಗನಯಾನಿ ಸುನಿತಾ ವಿಲಿಯಮ್ಸ್ ಅವರು ತಮ್ಮ ಗಗನಯಾನದ ಅನುಭವಗಳನ್ನು ದೆಹಲಿಯಲ್ಲಿನ ಅಮೆರಿಕದ ರಾಯಭಾರ ಕಚೇರಿಯಲ್ಲಿ ಹಂಚಿಕೊಂಡರು



ಮಹಿಳೆ ಬಗ್ಗೆ ಗೌರವವೇ ಇಲ್ಲವೇ?

ಪೌರಾಯುಕ್ತೆಗೆ ನಿಂದನೆ ಪ್ರಕರಣ ರಾಜೀವ್ ಗೌಡಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ





ಬೆಂಗಳೂರು: ಶಿಡ್ಲಘಟ್ಟ ಪೌರಾಯುಕ್ತೆ ಅಮೃತಾ ಗೌಡ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿ ಮತ್ತು ಬೆದರಿಕೆ ಒಡ್ಡಿದ್ದ ಆರೋಪ ಎದುರಿಸುತ್ತಿರುವ ಸ್ಥಳೀಯ ಕಾಂಗ್ರೆಸ್ ಮುಖಂಡ ಬಿ.ವಿ. ರಾಜೀವ್ ಗೌಡ ಅವರನ್ನು ರಾಜೀವ್ ಗೌಡ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, 'ನಾಲಗೆಯನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕು. ಮಹಿಳೆ ಎಂದರೆ ಏನು ಗೌರವವೇ ಇಲ್ಲವೇ' ಎಂದು ಪ್ರಶ್ನಿಸಿದೆ.

'ನನ್ನ ವಿರುದ್ಧ ಶಿಡ್ಲಘಟ್ಟ ಟೌನ್ ಪೊಲೀಸ್ ಠಾಣೆಯಲ್ಲಿ ಜಿ.ಅಮೃತಾ ಗೌಡ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿ.ವಿ.ರಾಜೀವ್ ಗೌಡ (46) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ರಾಜೀವ್ ಗೌಡ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ವಿವೇಕ್ ರೆಡ್ಡಿ ಅವರು, 'ಶಿಡ್ಲಘಟ್ಟದ ವ್ಯಕ್ತಿಯೊಬ್ಬರು 'ಕಲ್ಟ್' ಸಿನಿಮಾದಲ್ಲಿ ನಟಿಸಿದ್ದಾರೆ. ಆ ಕಲಾವಿದನನ್ನು ಬೆಂಬಲಿಸಿ ಬ್ಯಾನರ್ ಮತ್ತು ಕಟೌಟ್‌ಗಳನ್ನು ಅಳವಡಿಸಲಾಗಿತ್ತು. ಇದಕ್ಕೆ ವಾಟ್ಸ್‌ಆ್ಯಪ್ ಸಂದೇಶದ ಮೂಲಕ ಪೌರಾಯುಕ್ತರು ಅನುಮತಿಯನ್ನೂ ನೀಡಿದ್ದರು' ಎಂದು ವಿವರಿಸಿದರು.

ಮುಖ್ಯಾಂಶಗಳು

- ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದ ರಾಜೀವ್
- ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದಿಂದ ವಿಚಾರಣೆ
- ಇಂದು ತೀರ್ಪು ಪ್ರಕಟ

'ಬ್ಯಾನರ್ ಅಳವಡಿಕೆಗೆ ಶುಲ್ಕವನ್ನೂ ಪಾವತಿಸಲಾಗಿತ್ತು. ಪೌರಾಯುಕ್ತರು ಏಕಾಏಕಿ ಬ್ಯಾನರ್‌ಗಳನ್ನು ತೆರವು ಮಾಡಿಸಿದ್ದರು. ಅದೇ ಸ್ಥಳಗಳಲ್ಲಿದ್ದ ಜೆಡಿಎಸ್ ಪಕ್ಷದ ಬ್ಯಾನರ್‌ಗಳನ್ನು ಹಾಗೇ ಬಿಡಲಾಗಿತ್ತು. ಹೀಗಾಗಿ, ರಾಜೀವ್ ಗೌಡ ಪೌರಾಯುಕ್ತರ ವಿರುದ್ಧ ಕೆಲವು ಪದಗಳನ್ನು ಬಳಸಿದ್ದಾರೆ. ಈ ವಿಷಯದಲ್ಲಿ ಅರ್ಜಿದಾರರು ಯಾವುದೇ ತೆರನಾದ ಕ್ರಿಮಿನಲ್ ಪದಗಳನ್ನು ಬಳಸಿಲ್ಲ. ರಾಜೀವ್ ಗೌಡ ಈಗಾಗಲೇ ಕ್ಷಮೆ ಕೋರಿದ್ದಾರೆ. ನ್ಯಾಯಾಲಯ ರಕ್ಷಣೆ ಒದಗಿಸಿದರೆ ಬಹಿರಂಗವಾಗಿ ಕ್ಷಮೆ ಕೋರಲು ಸಿದ್ಧ' ಎಂದರು.

ಇದಕ್ಕೆ ವ್ಯಗ್ರರಾದ ನ್ಯಾಯಮೂರ್ತಿ ನಾಗಪ್ರಸನ್ನ ಅವರು, 'ಕಟೌಟ್ ಹಾಕಲು ನೀವೇನು ನಟರಾ? ನಿರ್ಮಾಪಕರಾ? ಮಹಿಳಾ ಅಧಿಕಾರಿ ಬಗ್ಗೆ ಒಂದಿನಿತೂ ಗೌರವವೇ ಇಲ್ಲದಂತೆ ಬಾಯಿಗೆ ಬಂದಂತೆ ಮಾತನಾಡಿದ್ದೀರಲ್ಲಾ' ಎಂದರು. 'ನಿಮ್ಮ ಅರ್ಜಿದಾರರ ಪಕ್ಷವೇ ಆಡಳಿತ ನಡೆಸುತ್ತಿದೆಯಲ್ಲಾ, ಆದರೂ, ರಾಜೀವ್ ಗೌಡ ಎಲ್ಲಿ ಅಡಗಿ ಕುಳಿತಿದ್ದಾರೆ' ಎಂದು ತರಾಟೆಗೆ ತೆಗೆದುಕೊಂಡರು.

ಇದಕ್ಕೆ ವಿವೇಕ್ ರೆಡ್ಡಿ, 'ರಾಜೀವ್ ಗೌಡ ನಿರೀಕ್ಷಣಾ ಜಾಮೀನು ಕೋರಿರುವ ಅರ್ಜಿ ವಿಚಾರಣಾ ನ್ಯಾಯಾಲಯದಲ್ಲಿ ಬಾಕಿ ಇದೆ. ಪೊಲೀಸರು ಬಂಧಿಸಲು ಕಾದು ಕುಳಿತಿದ್ದಾರೆ. ರಕ್ಷಣೆ ಒದಗಿಸಿದರೆ ತನಿಖೆಗೆ ಸಹಕರಿಸುತ್ತಾರೆ' ಎಂದರು. ಆದೇಶ ಕಾಯ್ದಿರಿಸಿದ ನ್ಯಾಯಪೀಠ ಬುಧವಾರ (ಜ.21) ತೀರ್ಪು ಪ್ರಕಟಿಸುವುದಾಗಿ ತಿಳಿಸಿತು.



> ನಾಲಗೆ ಸರಿಯಾಗಿರಬೇಕು. ಎಲ್ಲವನ್ನೂ ಯಾವಾಗಲೂ ನಾಲಗೆಯೇ ನಾಶ ಮಾಡಿದೆ. ನೀವು ಕ್ಷಮೆ ಕೋರಬಹುದು ಆದರೆ, ಬಿರುಕು ಹಾಗೇ ಉಳಿಯಲಿದೆ ಎಂಬುದನ್ನು ನೆನಪಿಡಿ
>
> **ನ್ಯಾ.ಎಂ.ನಾಗಪ್ರಸನ್ನ**

'ರಾಜೀವ್‌ಗೌಡ ಶೀಘ್ರ ಬಂಧನ'



ಜಿ.ಪರಮೇಶ್ವರ

ಕೆಜಿಎಫ್ (ಕೋಲಾರ): 'ಶಿಡ್ಲಘಟ್ಟ ನಗರಸಭೆಯ ಆಯುಕ್ತೆ ಅಮೃತಾ ಗೌಡ ಅವರಿಗೆ ಧಮ್ಕಿ ಹಾಕಿದ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರನ್ನು ಶೀಘ್ರ ಬಂಧಿಸಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜೀವ್ ಗೌಡ ಬಂಧನಕ್ಕೆ ಪ್ರತ್ಯೇಕ ತಂಡ ರಚನೆ ಆಗಿದೆ. ಎಲ್ಲೇ ಇದ್ದರೂ ಹುಡುಕಿ ಕರೆ ತರುತ್ತೇವೆ' ಎಂದರು.

'ಎಷ್ಟು ದಿನ ತಪ್ಪಿಸಿಕೊಂಡು ಓಡಾಡಲು ಸಾಧ್ಯ? ಹಿಡಿದು ತರುತ್ತೇವೆ. ಅವರಿಗೆ ಯಾವುದೇ ಸಚಿವರ ಬೆಂಬಲವಿರಲಿ, ಕಾನೂನು ಎಲ್ಲರಿಗೂ ಒಂದೇ ಅಲ್ಲವೇ' ಎಂದು ಪ್ರಶ್ನಿಸಿದರು.

ಸಚಿವ ಜಮೀರ್ ಅಹಮ್ಮದ್ ಖಾನ್ ಪುತ್ರ ಝೈದ್ ಖಾನ್ ನಟನೆಯ 'ಕಲ್ಟ್' ಸಿನಿಮಾ ಬ್ಯಾನರ್ ತೆರವುಗೊಳಿಸಿದ ಶಿಡ್ಲಘಟ್ಟ ನಗರಸಭೆ ಆಯಕ್ತೆಗೆ ರಾಜೀವ್ ಗೌಡ ದೂರವಾಣಿಯಲ್ಲಿ ಧಮ್ಕಿ ಹಾಕಿದ್ದರು. ಪ್ರಕರಣ ದಾಖಲಾದ ನಂತರ ರಾಜೀವ್ ಗೌಡ ತಲೆ ಮರೆಸಿಕೊಂಡಿದ್ದಾರೆ.

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಖಂಡ್ರೆ ಆಯ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ಈ ಹುದ್ದೆ ತೆರವಾಗಿತ್ತು. ಬೆಂಗಳೂರಿನಲ್ಲಿ ಮಂಗಳವಾರ ನಡೆದ ಮಹಾಸಭಾದ ಕಾರ್ಯಕಾರಿಣಿ ಸಭೆಯಲ್ಲಿ ಸಭಾದ ಮಹಾ ಪ್ರಧಾನ ಕಾರ್ಯದರ್ಶಿಯಾಗಿರುವ ಈಶ್ವರ ಬಿ. ಖಂಡ್ರೆ ಅವರನ್ನು ರಾಷ್ಟ್ರೀಯ ಘಟಕದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲು ನಿರ್ಣಯ ಕೈಗೊಳ್ಳಲಾಯಿತು ಎಂದು ಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'13 ವರ್ಷಗಳಿಂದ ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿಯಾಗಿರುವ ಈಶ್ವರ ಖಂಡ್ರೆ ಒಂದು ವರ್ಷದಿಂದ ಹಿರಿಯ ಉಪಾಧ್ಯಕ್ಷರ ಪ್ರಭಾರ ಹೊಣೆಯನ್ನೂ ನಿಭಾಯಿಸಿದ್ದರು. ಅವರ ತಂದೆ ಭೀಮಣ್ಣ ಖಂಡ್ರೆಯವರ ಮಾರ್ಗದಲ್ಲೇ ನಡೆದು, ಸಮುದಾಯದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ' ಎಂದರು.

ಈ ವೇಳೆ ಮಾತನಾಡಿದ ಖಂಡ್ರೆ, 'ಬೆಂಗಳೂರು ನಗರದಲ್ಲಿ 1,000 ವಿದ್ಯಾರ್ಥಿನಿಯರ ವಸತಿನಿಲಯಕ್ಕೆ ಮಾರ್ಚ್‌ನೊಳಗೆ ಶಂಕುಸ್ಥಾಪನೆ ನೆರವೇರಿಸಿ, ಒಂದೂವರೆ ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುತ್ತದೆ' ಎಂದರು.

▶IV

ಎಸ್‌ಐಆರ್ ಸಂಬಂಧ ರಾಜಕೀಯ ಇಲ್ಲ: ಸಿ.ಎಂ



ಸಿದ್ದರಾಮಯ್ಯ

ಬೆಳಗಾವಿ: 'ಚುನಾವಣೆ ಆಯೋಗವು ನಡೆಸುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಪಕ್ಷವು ರಾಜಕೀಯ ಮಾಡುವುದಿಲ್ಲ. ಆದರೆ, ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯಬಾರದು ಎಂಬುದಷ್ಟೇ ನಮ್ಮ ಕಾಳಜಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಳಗಾವಿ ಜಿಲ್ಲೆಯ ನಂದಗಡದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎಸ್‌ಐಆರ್ ಪ್ರಕ್ರಿಯೆಯಂತೆ ರಾಜ್ಯದ 3 ಕೋಟಿ ಮತದಾರರು 'ಮ್ಯಾಪ್' ಆಗಿಲ್ಲ ಎಂದು ತಿಳಿಸಲಾಗಿದೆ. ಎಸ್‌ಐಆರ್ ಪ್ರಕ್ರಿಯೆ ಎಚ್ಚರಿಕೆಯಿಂದ ನಡೆಯಬೇಕಿದೆ' ಎಂದು ಹೇಳಿದರು.

'ಅರ್ಹ ಮತದಾರರಿಗೆ ಅನ್ಯಾಯ ಆಗದಂತೆ ಕಾರ್ಯನಿರ್ವಹಿಸುವಂತೆ ಬಿಎಲ್‌ಒಗಳಿಗೆ ಸೂಚಿಸಲಾಗಿದೆ' ಎಂದು ತಿಳಿಸಿದರು.

ಜ.21ರಂದು ಗಡಿ ವಿವಾದದ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿರುವ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಒಳ್ಳೆಯ ವಕೀಲರನ್ನು ನೇಮಿಸುತ್ತೇವೆ. ಗಡಿ ವಿಚಾರದಲ್ಲಿ ಕರ್ನಾಟಕ ವಿರುದ್ಧ ಪ್ರಕರಣ ಹಾಕಲು ಮಹಾ-ರಾಷ್ಟ್ರದವರಿಗೆ ಅವಕಾಶವೇ ಇಲ್ಲ' ಎಂದರು. 'ನ್ಯಾಯಾಂಗ ಮಾರ್ಗದಲ್ಲಿಯೇ ನಾವು ಸಾಗುತ್ತೇವೆ. ಗಡಿ ವಿಚಾರವು ನ್ಯಾಯಾಂಗದಡಿ ಚರ್ಚೆ ಆಗಬೇಕೆ ಅಥವಾ ಬೇಡವೇ ಎಂಬುದು ಮೊದಲು ತೀರ್ಮಾನ ಆಗಬೇಕಿದೆ' ಎಂದರು.





ಎಐಬಿಇ: ವರ್ಷದಲ್ಲಿ 2 ಪರೀಕ್ಷೆ

ನವದೆಹಲಿ (ಪಿಟಿಐ): ಅಖಿಲ ಭಾರತ ವಕೀಲರ ಪರೀಕ್ಷೆಯನ್ನು ವರ್ಷದಲ್ಲಿ ಎರಡು ಬಾರಿ ನಡೆಸಲು ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಭಾರತೀಯ ವಕೀಲರ ಪರಿಷತ್ತು (ಬಿಸಿಐ) ಮಂಗಳವಾರ ತಿಳಿಸಿದೆ.

ನೂತನ ನಿಯಮಗಳಿಂದಾಗಿ, ಕಾನೂನು ಪದವಿಯ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಕೂಡ ಅಖಿಲ ಭಾರತ ವಕೀಲರ ಪರೀಕ್ಷೆ ಬರೆಯಲು ಸಾಧ್ಯವಾಗಲಿದೆ ಎಂದು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಹಾಗೂ ಸಂದೀಪ್ ಮೆಹ್ತಾ ಅವರು ಇದ್ದ ಪೀಠಕ್ಕೆ ಬಿಸಿಐ ತಿಳಿಸಿದೆ.

ಕಾನೂನು ಪದವಿಯ ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳು ಕೂಡ ಎಐಬಿಇ ಬರೆಯಲು ಅನುಮತಿ ನೀಡಬೇಕು ಎಂದು ನಿರ್ದೇಶಿಸುವಂತೆ ಕೋರಿ 2024ರಲ್ಲಿ 9 ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಪೀಠ ನಡೆಸಿತು.

ಈ ಕುರಿತು ಬಿಸಿಐ ಹೇಳಿಕೆಯನ್ನು ದಾಖಲಿಸಿಕೊಂಡ ಪೀಠ, ಅರ್ಜಿಯ ವಿಲೇವಾರಿ ಮಾಡಿತು.

ನಿತಿನ್ ಅವರೇ ನನ್ನ ಬಾಸ್: ಮೋದಿ

ನವದೆಹಲಿ (ಪಿಟಿಐ): 'ಈಗ ನಿತಿನ್ ನಬೀನ್ ಅವರು ನಮ್ಮೆಲ್ಲರಿಗೂ ಅಧ್ಯಕ್ಷರಾಗಿದ್ದಾರೆ. ಪಕ್ಷದ ಕಾರ್ಯಕರ್ತ-ನಾಗಿ ನಾನು ಕೂಡ ನಾನು ನಿರ್ವಹಿಸಿದ ಕೆಲಸದ ಮಾಹಿತಿಗಳನ್ನು ಅವರಿಗೆ ನೀಡಬೇಕು. ನಾನು ಇದನ್ನು ಈಗಾಗಲೇ ನೀಡಿದ್ದೇನೆ. ಈಗ ಅವರು ನನ್ನ 'ರಿಪೋರ್ಟ್ ಕಾರ್ಡ್' ಬರೆಯುತ್ತಾರೆ. ನಿತಿನ್ ಅವರೇ, ಪಕ್ಷದ ವಿಚಾರಗಳಲ್ಲಿ ನೀವೇ ನನ್ನ ಬಾಸ್' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ವಿವರ ▶9

‘ನಿಮ್ಮ ಕೆಲಸವನ್ನು ನೆನಪಿಸಬೇಕಾ?’

ಅಸಮರ್ಥ ಅಧಿಕಾರಿಗಳ ಬದಲಾವಣೆ: ಎಪಿಎಂಸಿ ಅಧಿಕಾರಿಗಳಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ‘ಎಪಿಎಂಸಿ: ಲೋಪಗಳ ಸರಿಪಡಿಸಿಕೊಳ್ಳದಿದ್ದರೆ ಶಿಸ್ತುಕ್ರಮ’
- ಅವ್ಯವಸ್ಥೆ ಬಗ್ಗೆ ಅಸಮಾಧಾನ
- ಪ್ರಗತಿ ಪರಿಶೀಲನೆ ಸಭೆಯಲ್ಲಿ ಸಚಿವರ ಹೇಳಿಕೆ

ಬೆಂಗಳೂರು: ‘ರೈತರಿಗೆ ಕುಡಿಯುವ ನೀರು ಕೊಡಿ, ಶೌಚಾಲಯ ವ್ಯವಸ್ಥೆ ಮಾಡಿ ಎಂದು ಉಪ ಲೋಕಾಯುಕ್ತರು ನಿಮಗೆ ಹೇಳಬೇಕಾ?, ನಿಮ್ಮ ಕರ್ತವ್ಯ ನಿಮಗೆ ಗೊತ್ತಿಲ್ಲವೇ’ ಎಂದು ಎಪಿಎಂಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು, ಅಸಮರ್ಥ ಅಧಿಕಾರಿಗಳನ್ನು ಬದಲಾಯಿಸಲು ಸೂಚಿಸಿದರು.

ಬೆಂಗಳೂರು ಮತ್ತು ಮೈಸೂರು ವಿಭಾಗದ ಎಪಿಎಂಸಿಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಕೆಲವು ಎಪಿಎಂಸಿಗಳಿಗೆ ಭೇಟಿ ನೀಡಿದ ಉಪ ಲೋಕಾಯುಕ್ತರು ಅಲ್ಲಿನ ಅವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತೂಕದ ಯಂತ್ರಗಳು ಸರಿಯಾಗಿಲ್ಲ, ದಲ್ಲಾಳಿಗಳು ರೈತರಿಂದ ಹೆಚ್ಚುವರಿ ಕಮಿಷನ್ ಪಡೆಯುತ್ತಿದ್ದಾರೆ ಎಂದಿದ್ದಾರೆ.


ಶಿವಾನಂದ ಪಾಟೀಲ

ಲೋಪಗಳನ್ನು ತಿಳಿಸಿದ ನಂತರವೂ ಸರಿಪಡಿಸಿಕೊಳ್ಳದಿದ್ದರೆ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಎಚ್ಚರಿಸಿದರು.

‘ರೈತರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ನಿಮ್ಮ ಕರ್ತವ್ಯ. ಹಲವು ಸೇವೆಗಳನ್ನು ಒದಗಿಸಲು ಹೊರ ಗುತ್ತಿಗೆ ನೀಡಿದ್ದು, ಪ್ರತಿ ತಿಂಗಳು ಸಕಾಲಕ್ಕೆ ಅವರಿಗೆ ಹಣ ಪಾವತಿ ಮಾಡುತ್ತೀರಿ. ಆದರೆ ಅವರಿಂದ ಕೆಲಸ ಪಡೆಯುವುದು ಯಾರ ಜವಾಬ್ದಾರಿ. ಅದರ ಅರಿವು ನಿಮಗಿಲ್ಲವೇ’ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

‘ಮಳಿಗೆಗಳು, ಗೋದಾಮುಗಳು ಸೇರಿದಂತೆ ಆರ್‌ಐಡಿಎಫ್ ಯೋಜನೆ ಅಡಿ ನಿರ್ಮಾಣ ಮಾಡಿರುವ ಆಸ್ತಿಗಳನ್ನು ಬಳಕೆ ಮಾಡದೇ ಇದ್ದುದರಿಂದ ಆಗಿರುವ ನಷ್ಟವನ್ನು ಎಪಿಎಂಸಿ ಅಧಿಕಾರಿಗಳಿಂದ ವಸೂಲು ಮಾಡಿ’ ಎಂದು ಶಿವಾನಂದ ಪಾಟೀಲ ಸೂಚಿಸಿದರು.

‘ಕೆಲವು ಎಪಿಎಂಸಿಗಳಲ್ಲಿ ಹುದ್ದೆಗಳು ಖಾಲಿ ಇವೆ. ನಿವೃತ್ತಿ ಅಂಚಿನಲ್ಲಿರುವವರು ರಜೆ ಮೇಲೆ ಹೋಗಿದ್ದಾರೆ. ಅಂತಹ ಕಡೆ ತಕ್ಷಣ ನೇಮಕ ಮಾಡಿ. ನಿವೃತ್ತಿ ಸಮೀಪ ಇರುವ ಕಾರಣಕ್ಕೆ ರಜೆ ಮೇಲೆ ಇರುವವರನ್ನು ಕೇಂದ್ರ ಕಚೇರಿಗೆ ವರ್ಗಾವಣೆ ಮಾಡಿ. ಅವರು ಕೇಂದ್ರ ಕಚೇರಿಯಲ್ಲೇ ನಿವೃತ್ತಿ ಪಡೆಯಲಿ. ಅವರ ಅನುಕೂಲಕ್ಕಾಗಿ ರೈತರಿಗೆ ಸಮಸ್ಯೆ ಆಗಬಾರದು’ ಎಂದರು.

ಪ್ರಗತಿ ವಿವರ ನೀಡಿದ ಕೃಷಿ ಮಾರಾಟ ಇಲಾಖೆ ನಿರ್ದೇಶಕ ಶಿವಾನಂದ ಕಾಪಸೆ ಅವರು, ‘ಪ್ರಗತಿ ಗುರಿ ಸಾಮಾನ್ಯವಾಗಿ ಪ್ರತಿವರ್ಷ ಶೇ 10ರಷ್ಟು ಹೆಚ್ಚಿರುತ್ತದೆ. ಆದರೆ ನಮ್ಮ ಗುರಿ ಶೇ 40ರಷ್ಟಿದೆ. ಈ ಗುರಿ ತಲುಪುವ ವಿಶ್ವಾಸ ಇದೆ’ ಎಂದರು. ಸಹಕಾರ ಇಲಾಖೆ ಕಾರ್ಯದರ್ಶಿ ಸಂಜಯ್ ಶೆಟ್ಟಣ್ಣನವರ್ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

‘ಕ್ಲಬ್‌ಗಳ ನಿಯಂತ್ರಣಕ್ಕೆ ಮಸೂದೆ ತನ್ನಿ’


ರಮೇಶ್ ಬಾಬು

ಬೆಂಗಳೂರು: ‘ಕ್ಲಬ್‌ಗಳಲ್ಲಿನ ಕಾನೂನುಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಸದನ ಸಮಿತಿ ನೀಡಿರುವ ವರದಿಯನ್ನು ಅನುಷ್ಠಾನಗೊಳಿಸಬೇಕು’ ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಅವರು ಒತ್ತಾಯಿಸಿದ್ದಾರೆ.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಪತ್ರ ಬರೆದಿರುವ ಅವರು, ಸದನ ಸಮಿತಿ ವರದಿ ಅನುಷ್ಠಾನಗೊಳಿಸಲು ಕಾಯ್ದೆ ಜಾರಿಗೊಳಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

14ನೇ ವಿಧಾನಸಭೆ ವೇಳೆ ರಚನೆಯಾಗಿದ್ದ ಸದನ ಸಮಿತಿಯು 180 ಪುಟಗಳ ಸಮಗ್ರ ವರದಿಯನ್ನು ಸಭಾಧ್ಯಕ್ಷರಿಗೆ ನೀಡಿದೆ. ಬೆಂಗಳೂರು ಸೇರಿದಂತೆ ರಾಜ್ಯದಲ್ಲಿನ ಕ್ಲಬ್‌ಗಳಲ್ಲಿ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳು, ಬೈಲಾ ಉಲ್ಲಂಘನೆ, ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ ಎಂಬುದನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವರದಿ ನೀಡಿ ಎಂಟು ವರ್ಷವಾದರೂ ಅದರ ಅನುಷ್ಠಾನವಾಗಿಲ್ಲ. ರಾಜ್ಯದ ಹಿತರಕ್ಷಣೆ ಮತ್ತು ಕ್ಲಬ್‌ಗಳು ಪಾರದರ್ಶಕವಾಗಿ ನಡೆಯಬೇಕು ಎಂಬ ದೃಷ್ಟಿಯಿಂದ ವರದಿಯನ್ನು ಜಾರಿಗೊಳಿಸಬೇಕು. ಇದರಿಂದ ಸರ್ಕಾರಕ್ಕೂ ಅಧಿಕ ಆದಾಯ ಬರಲಿದೆ ಎಂದು ಅವರು ಮನವಿ ಮಾಡಿದ್ದಾರೆ.

‘ಬಿಜೆಪಿ ಅವಧಿಯ ₹458.6 ಕೋಟಿ ವಸೂಲಿ’



ಬೆಂಗಳೂರು: ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತವಿದ್ದ 2020-21, 2022-23ರ ಅವಧಿಯಲ್ಲಿ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ₹653.25 ಕೋಟಿ ಮೊತ್ತಕ್ಕೆ ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪ ವ್ಯಕ್ತವಾಗಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ₹458.6 ಕೋಟಿ ವಸೂಲಾತಿ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತದಲ್ಲಿ ಕಮಿಷನ್ ಪಿಡುಗಿನಿಂದ ಗ್ರಾಮೀಣಾಭಿವೃದ್ಧಿ ಸಚಿವರೊಬ್ಬರು ರಾಜೀನಾಮೆ ನೀಡಿದ್ದರು. ನಂತರ ಸಚಿವರಿಲ್ಲದ ಇಲಾಖೆಯ ವ್ಯವಸ್ಥೆಯನ್ನು ಹಳ್ಳ ಹಿಡಿಸಲಾಗಿತ್ತು. ಬಿಜೆಪಿ ಮಾಡಿದ್ದ ಅವಾಂತರ ಸರಿಪಡಿಸುವ ಕೆಲಸವನ್ನು ಈಗಿನ ಸರ್ಕಾರ ಮಾಡುತ್ತಿದೆ’ ಎಂದಿದ್ದಾರೆ.

‘15ನೇ ಹಣಕಾಸು ಆಯೋಗದ ಅನುದಾನದಲ್ಲಿ ಶೇ 90ರಷ್ಟು ಜನಸಂಖ್ಯೆಯ ಆಧಾರದಲ್ಲಿ, ಶೇ 10ರಷ್ಟನ್ನು ಭೌಗೋಳಿಕ ಆಧಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ ಬಿಡುಗಡೆ ಮಾಡಲಾಗುತ್ತದೆ. ಒಟ್ಟು ಅನುದಾನದಲ್ಲಿ ಶೇ 60ರಷ್ಟು ನಿರ್ಬಂಧಿತ, ಶೇ 40ರಷ್ಟನ್ನು ಅನಿರ್ಬಂಧಿತ ಅನುದಾನವಾಗಿ ಬಿಡುಗಡೆ ಮಾಡಲಾಗುತ್ತದೆ. ಗ್ರಾಮ ಸಭೆ ನಡೆಸಿ, ಈ ಅನುದಾನ ಬಳಕೆಗೆ ಕ್ರಿಯಾ ಯೋಜನೆ ತಯಾರಿಸಿಕೊಂಡು ಅವರ ಹಂತದಲ್ಲೇ ಕಾಮಗಾರಿ ಮಾಡಲಾಗುತ್ತದೆ. ಕ್ರಿಯಾ ಯೋಜನೆ ಮತ್ತು ಅನುಷ್ಠಾನದ ಮಾಹಿತಿಯನ್ನು ಇ-ಗ್ರಾಮ್ ಸ್ವರಾಜ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗುತ್ತದೆ. ಸರ್ಕಾರದಿಂದ ಪ್ರತ್ಯೇಕ ಅನುಮೋದನೆ ಪಡೆಯುವ ಅಗತ್ಯ ಇಲ್ಲ. ಬಿಜೆಪಿಯ ಕೆಲವರಿಗೆ ಈ ಕುರಿತು ಸಾಮಾನ್ಯ ಜ್ಞಾನವೂ ಇಲ್ಲ’ ಎಂದು ಟೀಕಿಸಿದ್ದಾರೆ.

‘15ನೇ ಹಣಕಾಸು ಆಯೋಗದ ಅನುದಾನವನ್ನು ಬೇರೆಡೆ ವರ್ಗಾಯಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿಲ್ಲ. ಆರೋಪಕ್ಕೆ ಸಾಕ್ಷ್ಯಗಳೇ ಇಲ್ಲ’ ಎಂದಿದ್ದಾರೆ.

ವಿಬಿ–ಜಿ ರಾಮ್ ಜಿ: 26ಕ್ಕೆ ಗ್ರಾಮಸಭೆ

ಬೆಂಗಳೂರು: ನರೇಗಾ ಕುರಿತು ಚರ್ಚಿಸಲು ರಾಜ್ಯ ಸರ್ಕಾರ ಜ.22ರಿಂದ 31ರವರೆಗೆ ವಿಶೇಷ ಅಧಿವೇಶನ ಕರೆದಿದ್ದರೆ, ಅತ್ತ ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರು, ಕೇಂದ್ರ ಸರ್ಕಾರ ಹೊಸದಾಗಿ ರೂಪಿಸಿದ ‘ವಿಬಿ–ಜಿ ರಾಮ್ ಜಿ’ ಕುರಿತು ಚರ್ಚಿಸಲು ಎಲ್ಲ ಗ್ರಾಮ ಪಂಚಾಯಿತಿಗಳು ಜ.26ರಂದು ವಿಶೇಷ ಗ್ರಾಮ ಸಭೆ ಆಯೋಜಿಸುವಂತೆ ಸುತ್ತೋಲೆ ಹೊರಡಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಆಯುಕ್ತರ ನಡೆಗೆ ಗ್ರಾಮೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ವಿವಿಧ ಸಂಘಟನೆಗಳ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ನರೇಗಾ ರದ್ದು ಮಾಡಿ ಕೇಂದ್ರ ಸರ್ಕಾರ ಇತ್ತೀಚೆಗಷ್ಟೇ ಹೊಸ ಕಾಯ್ದೆ ತಂದಿದೆ. ನಿಯಮಗಳನ್ನೇ ರೂಪಿಸಿಲ್ಲ. ನಿಯಮ ರೂಪಿಸದೆ ಕಾಯ್ದೆಯ ಅನುಷ್ಠಾನ ಸಾಧ್ಯವಾಗದು. ಕರ್ನಾಟಕ ಸರ್ಕಾರ ಹೊಸ ಕಾಯ್ದೆಯನ್ನು ವಿರೋಧಿಸಿ, ವಿಶೇಷ ಅಧಿವೇಶನ ಕರೆದಿದೆ. ರಾಜ್ಯವ್ಯಾಪಿ ಹೋರಾಟ ನಡೆಸುವುದಾಗಿ ಕಾಂಗ್ರೆಸ್ ಹೇಳಿದೆ. ಇಂತಹ ಸಮಯದಲ್ಲಿ ಗ್ರಾಮೀಣಾಭಿವೃದ್ಧಿ ಆಯುಕ್ತರು ಹೊಸ ಕಾಯ್ದೆ ಕುರಿತು ಚರ್ಚಿಸಲು ವಿಶೇಷ ಗ್ರಾಮಸಭೆ ಆಯೋಜಿಸಲು ಸೂಚಿಸಿರುವುದು ಸರ್ಕಾರದ ದ್ವಂದ್ವ ನೀತಿಯಂತೆ ಕಾಣುತ್ತಿದೆ’ ಎಂದು ಟೀಕಿಸಿದ್ದಾರೆ.

‘ಗ್ರಾಮಸಭೆಗಳಲ್ಲಿ ಕೇಂದ್ರ ಸರ್ಕಾರದ ‘ವಿಬಿ–ಜಿ ರಾಮ್ ಜಿ’ ಕಾಯ್ದೆ ಜಾರಿಯಿಂದಾಗುವ ಅನುಕೂಲ, ಗ್ರಾಮೀಣಾಭ್ಯುದಯ, ನರೇಗಾ ಲೋಪಗಳ ದೃಶ್ಯಾವಳಿಗಳನ್ನು ಪ್ರಸ್ತುತಪಡಿಸಲಾಗುತ್ತದೆ. ಹೀಗೆ ಮಾಡುವುದಾದರೆ ವಿಶೇಷ ಅಧಿವೇಶನದ ಅಗತ್ಯವೇನು? ಹೋರಾಟ ಏಕೆ ಮಾಡಬೇಕು’ ಎಂದು ಸಂಘಟನೆಗಳು ಪ್ರಶ್ನಿಸಿವೆ.

95 ಸಾವಿರ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕೌಶಲ ಕಲಿಕೆ


ಡಾ.ಎಂ.ಸಿ.ಸುಧಾಕರ್

ಬೆಂಗಳೂರು: ಬ್ರಿಟಿಷ್ ಕೌನ್ಸಿಲ್, ಮೈಕ್ರೋಸಾಫ್ಟ್ ಸಹಯೋಗದಲ್ಲಿ 31 ಸರ್ಕಾರಿ ಪದವಿ, 29 ಪಾಲಿಟೆಕ್ನಿಕ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕೌಶಲ ಕಲಿಕೆ ಆರಂಭಿಸಲಾಗುತ್ತಿದ್ದು, 95,000 ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದಾರೆ.


ಈ ಕುರಿತು ಮಂಗಳವಾರ ಒಪ್ಪಂದ ಮಾಡಿಕೊಂಡ ನಂತರ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ‘ಈಗಾಗಲೇ 16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ಯೋಜನೆ ಜಾರಿಯಲ್ಲಿದ್ದು, ವಿದ್ಯಾರ್ಥಿಗಳಿಗೆ ಉನ್ನತ ಗುಣಮಟ್ಟದ ಅಧ್ಯಯನ ಸಂಪನ್ಮೂಲಗಳು, ಡಿಜಿಟಲ್ ಸಾಧನಗಳು ಮತ್ತು ‘ಇಂಗ್ಲಿಷ್ ತರಬೇತಿ ಕ್ಲಬ್‌ಗಳ’ ಮೂಲಕ ಇಂಗ್ಲಿಷ್ ಅಭ್ಯಾಸದ ಅವಕಾಶಗಳು ಲಭ್ಯವಾಗಲಿವೆ. ದೇಶ–ವಿದೇಶಗಳಲ್ಲಿ ಉದ್ಯೋಗ ಪಡೆಯುವ ಅರ್ಹತೆ ಹೆಚ್ಚಾಗಲಿದೆ’ ಎಂದರು. ‘ಉನ್ನತ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು ಕಾಲೇಜು ಆವರಣದಲ್ಲಿ ಇರುವಾಗ ಇಂಗ್ಲಿಷ್‌ನಲ್ಲಿ ಮಾತನಾಡಬೇಕು. ಅಧ್ಯಾಪಕರೂ ಪರಸ್ಪರ ಸಂವಹನ ನಡೆಸಬೇಕು. ಉನ್ನತ ಶಿಕ್ಷಣದಲ್ಲಿ ಬೋಧನೆಯ ಮಾಧ್ಯಮ ಇಂಗ್ಲಿಷ್ ಆಗಿದ್ದರೂ ಹೆಚ್ಚಿನವರು ಇಂಗ್ಲಿಷ್ ಮಾತನಾಡುವುದಿಲ್ಲ. ಕಾಲೇಜಿನ ಒಳಗೆ ಇದ್ದಾಗ ಇಂಗ್ಲಿಷ್ ಮಾತನಾಡಬೇಕು. ಮನೆಗೆ ಹೋದಾಗ ಪೋಷಕರೊಂದಿಗೆ ತಮ್ಮ ಮಾತೃಭಾಷೆಯಲ್ಲೇ ಮಾತನಾಡಬಹುದು’ ಎಂದು ಹೇಳಿದರು.

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಖಂಡ್ರೆ ಆಯ್ಕೆ

ಫ್ಲ್ಯಾಪ್ 1ನೇ ಪುಟದಿಂದ...

‘ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ವೀರಶೈವ ಲಿಂಗಾಯತ ಭವನ ನಿರ್ಮಿಸಲಾಗುತ್ತದೆ. ಈ ಭವನದಲ್ಲಿ ಸಮುದಾಯದ ಪ್ರತಿಭಾವಂತರಿಗೆ ಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ತರಬೇತಿ ನೀಡಲಾಗುವುದು’ ಎಂದು ತಿಳಿಸಿದರು.

ಸಮುದಾಯದ ಮುಖಂಡರಾದ ಗಣೇಶ್ ಶಾಮನೂರು, ಪ್ರಭಾಕರ ಕೋರೆ, ರಾಜಣ್ಣ, ವೀರಣ್ಣ ಚರಂತಿ ಮಠ ಸೇರಿದಂತೆ ಮಹಾರಾಷ್ಟ್ರ, ಕೇರಳ, ತಮಿಳುನಾಡು ರಾಜ್ಯ ಘಟಕಗಳ ಅಧ್ಯಕ್ಷರು, ಪ್ರತಿನಿಧಿಗಳು ಪಾಲ್ಗೊಂಡಿದ್ದರು.



ಈಶ್ವರ ಬಿ. ಖಂಡ್ರೆ ಅವರನ್ನು ವೀರಶೈವ– ಲಿಂಗಾಯತ ಸಮುದಾಯದ ಮುಖಂಡರು ಅಭಿನಂದಿಸಿದರು

‘ಒಳಪಂಗಡಗಳ ಒಗ್ಗೂಡಿಸುವೆ’

‘ವೀರಶೈವ ಮತ್ತು ಲಿಂಗಾಯತ ಬೇರೆ ಬೇರೆಯಲ್ಲ. ಹೀಗಾಗಿ ಸಮಾಜದ ಎಲ್ಲ ಒಳ ಪಂಗಡಗಳನ್ನು ಒಗ್ಗೂಡಿಸುವುದು ಅತ್ಯಂತ ಮುಖ್ಯ. ಈ ನಿಟ್ಟಿನಲ್ಲಿ ಶ್ರಮಿಸುತ್ತೇನೆ’ ಎಂದು ಈಶ್ವರ ಖಂಡ್ರೆ ಹೇಳಿದರು.

‘ವೀರಶೈವ ಲಿಂಗಾಯತ ಸಮಾಜ ಮತ್ತು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಈ ನಾಡಿನ ಅಭಿವೃದ್ಧಿಗೆ ನೀಡಿರುವ ಕೊಡುಗೆ ಅನುಪಮವಾದದ್ದು’ ಎಂದರು. ‘ನಮ್ಮ ಸಮಾಜದಲ್ಲೂ ಶೇ 40ರಿಂದ 50ರಷ್ಟು ಬಡವರಿದ್ದು, ಶೇ 30ಕ್ಕಿಂತ ಹೆಚ್ಚು ಜನರು ಹಿಂದುಳಿದಿದ್ದಾರೆ. ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗಬೇಕು. ಹೀಗಾಗಿ ಎಲ್ಲರಿಗೂ ಸಮಾನ ನ್ಯಾಯ ದೊರಕಿಸಲು ಸಭಾ ಅಧ್ಯಕ್ಷನಾಗಿ ಶ್ರಮಿಸುತ್ತೇನೆ’ ಎಂದು ಹೇಳಿದರು.


ಮಹಾರಾಷ್ಟ್ರದ ನಿವೃತ್ತ ಸಕ್ಕರೆ ಆಯುಕ್ತ ಶೇಖರ್ ಗಾಯಕವಾಡ ನೇತೃತ್ವ

‘ಮೈಷುಗರ್’ನಲ್ಲಿ ‘ಅಕ್ರಮ’: ತನಿಖೆಗೆ ಸಮಿತಿ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ರಾಜ್ಯದ ಸರ್ಕಾರಿ ಸ್ವಾಮ್ಯದ ಏಕೈಕ ಸಕ್ಕರೆ ಕಾರ್ಖಾನೆಯಾದ ‘ಮೈಸೂರು ಷುಗರ್ ಕಂಪನಿ’ಯಲ್ಲಿ (ಮೈಷುಗರ್) ಅವ್ಯವಹಾರ ಮತ್ತು ಅಕ್ರಮ ನೇಮಕಾತಿಗಳ ಆರೋಪಗಳ ಸಮಗ್ರ ತನಿಖೆಗೆ ಮಹಾರಾಷ್ಟ್ರದ ನಿವೃತ್ತ ಸಕ್ಕರೆ ಆಯುಕ್ತ ಶೇಖರ್ ಗಾಯಕವಾಡ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರ ತನಿಖಾ ಸಮಿತಿ ರಚಿಸಿದೆ.

ಪುಣೆಯ ಶುಗರ್ಸ್ ಎಂಜಿನಿಯರಿಂಗ್ ಮತ್ತು ರಿನೀವಬಲ್ ಎನರ್ಜಿ ಡಿಪಾರ್ಟ್‌ಮೆಂಟ್ ಮುಖ್ಯಸ್ಥ ರಾಜೇಂದ್ರ ಚಾಂದಗುಡೆ, ರೈತಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಬೆಳಗಾವಿಯ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ನಿರ್ದೇಶಕ ಬಿ.ಎಸ್. ರಾಜಗೋಪಾಲ್, ತಾಂತ್ರಿಕ ಸಲಹೆಗಾರ ಸಿ.ಬಿ. ಪಾಟೀಲ, ಮುಜಾವರ ಬಹದ್ದೂರ್ ಅಲಿ ಇಬ್ರಾಹಿಂ ಲಾತೂರು ಈ ಸಮಿತಿ ಸದಸ್ಯರಾಗಿದ್ದಾರೆ.


‘ಮೈಷುಗರ್’ ಕಾರ್ಖಾನೆ

2021–22ನೇ ಸಾಲಿನಿಂದ ಈವರೆಗೆ ನಡೆದಿದೆ ಎನ್ನಲಾದ ಅವ್ಯವಹಾರದಿಂದ ಕಂಪನಿಗಾದ ಆರ್ಥಿಕ ನಷ್ಟದ ಕುರಿತು ಸಮಗ್ರ ತನಿಖೆ ನಡೆಸಬೇಕು ಮತ್ತು 15 ದಿನಗಳಲ್ಲಿ ವರದಿ ಸಲ್ಲಿಸಬೇಕು ಎಂದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ) ಸೂಚಿಸಿದೆ.

ಆರೋಪಗಳೇನು?: ಕಬ್ಬು ಕಟಾವು ಮುಂಗಡ ಪಾವತಿ, ಕಟಾವು ಮತ್ತು ಸಾಗಣೆ, ಕಬ್ಬಿನ ತೂಕ ಮತ್ತು ಹಣ ಪಾವತಿಯಲ್ಲಿ ಅಕ್ರಮವೆಸಗಿ ಆರ್ಥಿಕ ನಷ್ಟ ಉಂಟು ಮಾಡಲಾಗಿದೆ. ಗುತ್ತಿಗೆ, ಹೊರಗುತ್ತಿಗೆ ನೌಕರರ ನೇಮಕದಲ್ಲಿ ಅಕ್ರಮ ಮತ್ತು ಮೀಸಲಾತಿ ಉಲ್ಲಂಘಿಸಲಾಗಿದೆ. 2023–24ನೇ ಸಾಲಿನಲ್ಲಿ ಕಡಿಮೆ ಬೆಲೆಗೆ ಸಕ್ಕರೆ ಮಾರಲಾಗಿದೆ ಎಂಬ ಆರೋಪಗಳು ಕೇಳಿ ಬಂದಿದ್ದವು. ಕೋಣನಹಳ್ಳಿ ಕೆರೆಯಿಂದ ನೀರು ಪೂರೈಸಲು ಪೈಪ್‌ಲೈನ್ ಅಳವಡಿಕೆಯಲ್ಲಿ ಅಕ್ರಮ, ಕಂಪನಿ ಜಾಗವನ್ನು ಅಕ್ರಮವಾಗಿ ಗುತ್ತಿಗೆ ನೀಡಿ ನಷ್ಟ ಉಂಟು ಮಾಡಲಾಗಿದೆ. ಸರ್ಕಾರಿ ಆದೇಶ ಉಲ್ಲಂಘಿಸಿ ನಿವೃತ್ತ ನೌಕರರ ಪುನರ್ ನೇಮಕ ಮಾಡಿರುವ ಬಗ್ಗೆ ದೂರು ಸಲ್ಲಿಕೆಯಾಗಿದ್ದವು. ‘ತನಿಖೆಗೆ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಆದರೆ, ಸಮಿತಿಯಲ್ಲಿ ಕಾರ್ಖಾನೆ ವ್ಯಾಪ್ತಿಯ ಸ್ಥಳೀಯ ರೈತ ಪ್ರತಿನಿಧಿಯೊಬ್ಬರು ಇದ್ದಿದ್ದರೆ ಪಾರದರ್ಶಕ ತನಿಖೆಗೆ ಅನುಕೂಲವಾಗುತ್ತಿತ್ತು’ ಎಂದು ರೈತ ಮುಖಂಡ ಕೆ.ಬೋರಯ್ಯ ಅಭಿಪ್ರಾಯಪಟ್ಟಿದ್ದಾರೆ.

‘₹127 ಕೋಟಿ ನಷ್ಟ ವಸೂಲಾತಿಗೆ ಒತ್ತಾಯ’


ಸಿ.ಡಿ.ಗಂಗಾಧರ್

‘ನಾಗರಾಜಪ್ಪ ಅವರು ಮೈಷುಗರ್ ಅಧ್ಯಕ್ಷರಾಗಿದ್ದ (2008 - 2012) ಅವಧಿಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರದಿಂದ ಕಾರ್ಖಾನೆಗೆ ₹127 ಕೋಟಿ ನಷ್ಟವಾಗಿತ್ತು. ನಷ್ಟ ವಸೂಲಾತಿಗೆ ಉಪ ಲೋಕಾಯುಕ್ತರಾಗಿದ್ದ ಬಿ.ಎಸ್. ಪಾಟೀಲ್ ಆದೇಶ ಹೊರಡಿಸಿದ್ದರು. ಅದನ್ನು ಹೈಕೋರ್ಟ್ ಈಚೆಗೆ ಎತ್ತಿ ಹಿಡಿದಿದೆ. ಆಸ್ತಿ ಜಪ್ತಿಗೆ ಸರ್ಕಾರ ತುರ್ತು ಕ್ರಮ ವಹಿಸಬೇಕು’ ಎಂದು ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಅವರು ಒತ್ತಾಯಿಸಿದ್ದಾರೆ.

f prajavani.net prajavani | ಬುಧವಾರ, ಜನವರಿ 21, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 21 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ



ಸೈನಾ ನಿವೃತ್ತಿ

ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ನಿವೃತ್ತಿ ಘೋಷಿಸಿದ್ದಾರೆ. 35 ವರ್ಷದ ಅವರು 2012ರ ಲಂಡನ್ ಒಲಿಂಪಿಕ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು

ಸೆನ್ಸೆಕ್ಸ್ 82,180 | ನಿಫ್ಟಿ 25,232 | $/₹ 90.97 | ಚಿನ್ನ (Std. 10g) ₹1,52,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,19,700 (ಬೆಂಗಳೂರು)



ಬೆಳ್ಳಿ ₹20,400 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹5,100ರಷ್ಟು ಹೆಚ್ಚಳವಾಗಿ, ₹1,53,200ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿ.ಗೆ ₹20,400ರಷ್ಟು ಏರಿಕೆಯಾಗಿ, ₹3.23 ಲಕ್ಷದಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದೇಶಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನ, ಬೆಳ್ಳಿಗೆ ಬೇಡಿಕೆ ಹೆಚ್ಚಳವಾಗಿದೆ. ಇದೇ ಬೆಲೆ ಏರಿಕೆಗೆ ಕಾರಣ ಎಂದು ತಿಳಿಸಿದೆ. ಸೋಮವಾರದ ವಹಿವಾಟಿನಲ್ಲಿ ಕೆ.ಜಿ ಬೆಳ್ಳಿ ದರವು ಮೊದಲ ಬಾರಿಗೆ ₹3 ಲಕ್ಷ ದಾಟಿತ್ತು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ರಾಜ್ಯ ಪೊಲೀಸ್‌ಗೆ ತನಿಖಾಧಿಕಾರ

ಕೇಂದ್ರ ನೌಕರರ ವಿರುದ್ಧದ ಲಂಚ ಅಥವಾ ಭ್ರಷ್ಟಾಚಾರ ಆರೋಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಿಆರ್‌ಪಿಸಿ ಸೆಕ್ಷನ್ 2 'ಪೊಲೀಸ್ ಠಾಣೆ' ಕುರಿತು ವಿವರಿಸುತ್ತದೆ
- ಸಿಬಿಐಗೆ ಮಾತ್ರ ತನಿಖೆ ಅಧಿಕಾರ ಎಂಬುದು ತಪ್ಪು: ಪೀಠ
- ಹೈಕೋರ್ಟ್ ಆದೇಶ ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ: ಕೇಂದ್ರ ಸರ್ಕಾರಿ ನೌಕರರ ವಿರುದ್ಧದ ಲಂಚದ ಆರೋಪಗಳ ಕುರಿತು ರಾಜ್ಯಗಳ ಪೊಲೀಸರು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸಬಹುದು. ಇದಕ್ಕೆ ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ಅನುಮೋದನೆ ಅಥವಾ ಅನುಮತಿಯ ಅಗತ್ಯ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.



'ಲಂಚ, ಭ್ರಷ್ಟಾಚಾರ ಹಾಗೂ ದುರ್ವರ್ತನೆ ಆರೋಪಗಳನ್ನು ಎದುರಿಸುತ್ತಿರುವ ಕೇಂದ್ರ ಸರ್ಕಾರದ ನೌಕರರ ವಿರುದ್ಧ ರಾಜ್ಯ ಪೊಲೀಸರು ಪ್ರಕರಣ ದಾಖಲಿಸುವುದು ಅಥವಾ ತನಿಖೆ ಕೈಗೊಳ್ಳುವುದನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ (ಪಿ.ಸಿ ಕಾಯ್ದೆ) ಸೆಕ್ಷನ್ 17 ನಿರ್ಬಂಧಿಸುವುದಿಲ್ಲ' ಎಂದೂ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಸತೀಶ್ಚಂದ್ರ ಶರ್ಮಾ ಅವರು ಇದ್ದ ನ್ಯಾಯಪೀಠ ಈ ಕುರಿತ ಮೇಲ್ಮನವಿಯ ವಿಚಾರಣೆ ವೇಳೆ ಈ ಮಾತು ಹೇಳಿದೆ.

ನವಲ್‌ಕಿಶೋರ್ ಮೀನಾ ವಿರುದ್ಧ ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ಸಂಸ್ಥೆಯು (ಎಸಿಬಿ) ಪಿ.ಸಿ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಬಹುದು. ನವಲ್‌ಕಿಶೋರ್ ಕೇಂದ್ರ ಸರ್ಕಾರಿ ನೌಕರರಾಗಿದ್ದರೂ ಅವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸಲು ಈ ಕಾಯ್ದೆಯಡಿ ಅವಕಾಶ ಇದೆ ಎಂದು ರಾಜಸ್ಥಾನ ಹೈಕೋರ್ಟ್ ಕಳೆದ ವರ್ಷ ಅಕ್ಟೋಬರ್ 3ರಂದು ಆದೇಶಿಸಿತ್ತು.

ಹೈಕೋರ್ಟ್ ಆದೇಶ ಪ್ರಶ್ನಿಸಿ ನವಲ್‌ಕಿಶೋರ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಪೀಠ ವಜಾಗೊಳಿಸಿ, ಜನವರಿ 19ರಂದು ತೀರ್ಪು ನೀಡಿದೆ.

'ನವಲ್ ಕಿಶೋರ್ ಮೀನಾ ಪ್ರಕರಣದಲ್ಲಿ ರಾಜಸ್ಥಾನ ಹೈಕೋರ್ಟ್ ಸರಿಯಾದ ನಿಲುವು ತಳೆದಿದೆ' ಎಂದೂ ಪೀಠ ಹೇಳಿದೆ.

'ವಿವಿಧ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿ ತನಿಖೆ ನಡೆಸುವುದು ಸೇರಿ ಕಾನೂನು–ಸುವ್ಯವಸ್ಥೆಯು ರಾಜ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಸಾಮಾನ್ಯವಾಗಿ ಇಂತಹ ಪ್ರಕರಣಗಳ ತನಿಖೆಯನ್ನು ರಾಜ್ಯಗಳೇ ನಡೆಸುತ್ತವೆ' ಎಂದು ನ್ಯಾಯಪೀಠ ಹೇಳಿದೆ.

'ಆದರೆ, ತನಿಖೆ ವಿಚಾರದಲ್ಲಿ ಸಿಬಿಐ ಹಾಗೂ ರಾಜ್ಯ ಪೊಲೀಸ್ ನಡುವಿನ ಸಂಬಂಧ ಪರಸ್ಪರ ಪೂರಕ. ಸಿಬಿಐನ ನಿಯಮಗಳು ಹಾಗೂ ಸಿಬಿಐ ಮತ್ತು ರಾಜ್ಯ ಪೊಲೀಸ್ ನಡುವಿನ ಹೊಂದಾಣಿಕೆ ವಿಚಾರಕ್ಕೆ ಬಂದಾಗ, ಈ ಎರಡೂ ಸಂಸ್ಥೆಗಳು ಹಲವು ವಿಷಯಗಳಿಗೆ ಸಂಬಂಧಿಸಿ ಒಂದಕ್ಕೊಂದು ಸಹಕಾರ ಹಾಗೂ ಬೆಂಬಲ ನೀಡಬೇಕಾಗುತ್ತದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ನ್ಯಾಯಪೀಠ ಹೇಳಿದ್ದು


- ಕೇಂದ್ರ ಸರ್ಕಾರ ಹಾಗೂ ಇದರ ಅಧೀನ ಸಂಸ್ಥೆಗಳ ನೌಕರರ ವಿರುದ್ಧ ಕೇಳಿ ಬರುವ ಲಂಚ/ಭ್ರಷ್ಟಾಚಾರ ಆರೋಪಗಳ ಕುರಿತು ಸಿಬಿಐ ತನಿಖೆ ನಡೆಸುತ್ತದೆ. ಸಿಬಿಐಗೆ, ದೆಹಲಿಯ ವಿಶೇಷ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆಯಡಿ ಈ ಅಧಿಕಾರ ನೀಡಲಾಗಿದೆ.
- ಸರ್ಕಾರಿ ನೌಕರರ ವಿರುದ್ಧದ ಲಂಚ/ಭ್ರಷ್ಟಾಚಾರ ಆರೋಪಗಳ ಕುರಿತು ರಾಜ್ಯ ಸರ್ಕಾರ ಅಧೀನದ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ತನಿಖೆ ನಡೆಸುತ್ತದೆ
- ಲಂಚ/ಭ್ರಷ್ಟಾಚಾರ ಆರೋಪಗಳ ಕುರಿತು ತನಿಖೆ, ವಿಚಾರಣೆ ನಡೆಸುವುದಕ್ಕೆ ಅಪರಾಧಿಕ ಪ್ರಕ್ರಿಯಾ ಸಂಹಿತೆ (ಈಗ ಬಿಎನ್‌ಎಸ್‌ಎಸ್) ಅವಕಾಶ ಕಲ್ಪಿಸುತ್ತದೆ. ಆದರೆ, ತನಿಖೆಗೆ ಸಂಬಂಧಿಸಿ ವಿಶೇಷ ಕಾಯ್ದೆಯು ಇದೆ ಎಂದ ಮಾತ್ರಕ್ಕೆ, ಸಿಆರ್‌ಪಿಸಿ (ಅಪರಾಧಿಕ ಪ್ರಕ್ರಿಯಾ ಸಂಹಿತೆ) ಕಾಯ್ದೆಯನ್ನು ಅನುಸರಿಸಬಾರದು ಎಂದರ್ಥವಲ್ಲ. ತನಿಖೆ ವಿಚಾರದಲ್ಲಿ ಸಿಆರ್‌ಪಿಸಿಯ ಸೆಕ್ಷನ್ 156 ಮುಖ್ಯವಾಗುತ್ತದೆ
- ಗಂಭೀರ ಪ್ರಕರಣಗಳ ಕುರಿತು ತನಿಖೆ ನಡೆಸುವುದಕ್ಕೆ ಯಾವುದೇ ಠಾಣೆಯ ಪೊಲೀಸ್ ಅಧಿಕಾರಿಗೆ ಸಿಆರ್‌ಪಿಸಿ ಸೆಕ್ಷನ್ 156 ಅಧಿಕಾರ ನೀಡುತ್ತದೆ. ಇದಕ್ಕೆ ಮ್ಯಾಜಿಸ್ಟ್ರೇಟ್ ಅವರ ಆದೇಶ ಬೇಕಾಗಿಲ್ಲ
- ಜಾಗೃತ ಮತ್ತು ಭ್ರಷ್ಟಾಚಾರ ನಿಗ್ರಹ ದಳ (ವಿಎಸಿಬಿ) ಕೂಡ ರಾಜ್ಯ ಪೊಲೀಸ್ ಇಲಾಖೆಯ ಭಾಗವೇ ಆಗಿದೆ. ಹೀಗಾಗಿ, ಭ್ರಷ್ಟಾಚಾರ ಕಾಯ್ದೆಯ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ಕುರಿತು ಪೊಲೀಸ್ ಇಲಾಖೆ ಇಲ್ಲವೇ ವಿಎಸಿಬಿ ತನಿಖೆ ನಡೆಸಬಹುದು
- ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಸೆಕ್ಷನ್ 17ರಲ್ಲಿ ಉಲ್ಲೇಖಿಸಿರುವಂತೆ ನಿರ್ದಿಷ್ಟ ಶ್ರೇಣಿಯ ಪೊಲೀಸ್ ಅಧಿಕಾರಿ ಮಾತ್ರ ತನಿಖೆ ನಡೆಸಬೇಕು



ವಿಡಿಯೊ ಬಹಿರಂಗ ಬೆನ್ನಲ್ಲೇ ಸರ್ಕಾರದಿಂದ ಶಿಸ್ತುಕ್ರಮ

ಡಿಜಿಪಿ ರಾವ್ ಅಮಾನತು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎನ್ನಲಾದ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಡಿಜಿಪಿ ಕೆ.ರಾಮಚಂದ್ರ ರಾವ್ ಅವರನ್ನು ಅಮಾನತುಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಮಚಂದ್ರ ರಾವ್ ಅವರು ಪೊಲೀಸ್ ಸಮವಸ್ತ್ರದಲ್ಲಿ ಕಚೇರಿಯ ಕುರ್ಚಿಯಲ್ಲಿ ಕುಳಿತು ಮಹಿಳೆಯನ್ನು ಅಪ್ಪಿಕೊಳ್ಳುತ್ತಿರುವ ಹಾಗೂ ಮುತ್ತಿಡುವ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿತ್ತು. ಇದು ಸರ್ಕಾರಕ್ಕೆ ಮುಜುಗರವನ್ನುಂಟು ಮಾಡಿತ್ತು.

▶ 8

'ವಜಾಗೊಳಿಸಲು ಅವಕಾಶ'

'ಹಿರಿಯ ಅಧಿಕಾರಿ ಎಂಬುದನ್ನು ನೋಡದೆ ರಾಮಚಂದ್ರ ರಾವ್ ವಿರುದ್ಧ ಕ್ರಮ ಜರುಗಿಸಿದ್ದೇವೆ. ಪ್ರಕರಣ ಸಾಬೀತಾದರೆ ಅವರು ವಜಾ ಸಹ ಆಗಬಹುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಸುದ್ದಿ ಪ್ರಸಾರವಾದ ಬಳಿಕ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆದು ಮುಖ್ಯಮಂತ್ರಿಯವರ ಬಳಿ ಚರ್ಚಿಸಿದ್ದೆ. ಈ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲಾಖೆಯಲ್ಲಿ ಯಾವುದೇ ಕಾರಣಕ್ಕೂ ಇಂತಹ ಘಟನೆಗಳು ನಡೆಯಲು ಬಿಡಬಾರದೆಂದು ಅವರು ಸೂಚನೆ ಕೊಟ್ಟಿದ್ದರು' ಎಂದರು.

'ರಾಮಚಂದ್ರ ರಾವ್ ವಿರುದ್ಧದ ಆರೋಪ ಸುಳ್ಳು ಎಂದಾದರೆ ತನಿಖೆ ಬಳಿಕ ನೋಡೋಣ. ಇಂತಹ ವರ್ತನೆ ಯಾರಿಗೂ ಗೌರವ ತರುವುದಿಲ್ಲ ಎಂದು ಅಮಾನತು ಮಾಡಿದ್ದೇವೆ. ಪ್ರಕರಣದ ಸಂತ್ರಸ್ತೆ ಬಗ್ಗೆ ಮಾಹಿತಿಯಿಲ್ಲ. ತನಿಖೆ ಪೂರ್ಣಗೊಂಡ ಬಳಿಕ ಬೇರೆ ಬೇರೆ ಆಯಾಮಗಳೇನು ಎಂಬುದನ್ನು ತಿಳಿದು ಕ್ರಮ ಕೈಗೊಳ್ಳುತ್ತೇವೆ' ಎಂದು ಸ್ಪಷ್ಟಪಡಿಸಿದರು.

ರಾಮಚಂದ್ರ ರಾವ್ ಭೇಟಿಗೆ ಅನುಮತಿ ನಿರಾಕರಿಸಿದ ಬಗ್ಗೆ ಪ್ರತಿಕ್ರಿಯಿಸಿ, 'ನಾನು ವಿಶ್ರಾಂತಿಯಲ್ಲಿದ್ದೆ. ಅವರನ್ನು ಭೇಟಿ ಸಹ ಮಾಡುತ್ತಿರಲಿಲ್ಲ. ಇಂತಹ ಸನ್ನಿವೇಶದಲ್ಲಿ ನಾವು ಬಹಳ ಎಚ್ಚರದಿಂದ ಇರಬೇಕು' ಎಂದರು.

'ಗ್ರೀನ್‌ಲ್ಯಾಂಡ್ ಪಡೆದುಕೊಳ್ಳುತ್ತೇವೆ'



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್/ದಾವೋಸ್ (ಎಪಿ/ಎಎಫ್‌ಪಿ): 'ಗ್ರೀನ್‌ಲ್ಯಾಂಡ್ ಅನ್ನು ವಶಕ್ಕೆ ಪಡೆದುಕೊಳ್ಳುವ ನಮ್ಮ ನಿರ್ಧಾರದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಬಲವಂತವಾದರೂ ಸರಿ ಆ ದೇಶವನ್ನು ಪಡೆದುಕೊಳ್ಳುವುದನ್ನು ನಿರಾಕರಿಸಲಾಗದು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದರು.

ಗ್ರೀನ್‌ಲ್ಯಾಂಡ್ ಕುರಿತು ಟ್ರಂಪ್ ಅವರು ಎಐ ಮೂಲಕ ಸೃಷ್ಟಿಸಿದ ಹಲವು ಚಿತ್ರಗಳು ಮತ್ತು ಪೋಸ್ಟ್‌ಗಳನ್ನೂ ಹಂಚಿಕೊಂಡಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಕಳುಹಿಸಿದ ಸಂದೇಶದ ಸ್ಕ್ರೀನ್‌ಶಾಟ್ ಅನ್ನು ಟ್ರಂಪ್ ಅವರು ಹಂಚಿಕೊಂಡಿದ್ದಾರೆ. 'ನೀವು ಗ್ರೀನ್‌ಲ್ಯಾಂಡ್‌ನಲ್ಲಿ ಏನು ಮಾಡುತ್ತಿದ್ದೀರಿ' ಎಂದು ಮ್ಯಾಕ್ರನ್ ಸಂದೇಶ ಕಳುಹಿಸಿದ್ದಾರೆ. ಸಂದೇಶ ಕಳುಹಿಸಿರುವುದನ್ನು ಫ್ರಾನ್ಸ್ ಸರ್ಕಾರದ ಅಧಿಕಾರಿಗಳು ಖಚಿತಪಡಿಸಿದ್ದಾರೆ.

▶ 8

ವ್ಯಾಪಾರ ನಿಯಂತ್ರಣದ ಬೆದರಿಕೆ ಒಡ್ಡಿದ ಒಕ್ಕೂಟ

ಟ್ರಂಪ್ ಅವರ ಬೆದರಿಕೆಗಳಿಗೆ ವ್ಯಾಪಾರದ ಮೂಲಕ ಪ್ರತ್ಯುತ್ತರ ನೀಡಲು ಐರೋಪ್ಯ ಒಕ್ಕೂಟ ನಿರ್ಧರಿಸಿದೆ. ಅಮೆರಿಕದ ಮೇಲೆ 109 ಬಿಲಿಯನ್ ಡಾಲರ್‌ನಷ್ಟು (ಸುಮಾರು ₹9.92 ಲಕ್ಷ ಕೋಟಿ) ಸುಂಕ ವಿಧಿಸಲು ಒಕ್ಕೂಟ ಯೋಚಿಸುತ್ತಿದೆ. ಇಲ್ಲವಾದಲ್ಲಿ ಒಕ್ಕೂಟದ ಸದಸ್ಯ ರಾಷ್ಟ್ರಗಳು ರೂಪಿಸಿಕೊಂಡಿರುವ, ಈ ದೇಶಗಳಿಗೆ ವಿಶೇಷಾಧಿಕಾರ ನೀಡುವ 'ಬಲವಂತ ತಡೆ ಅಸ್ತ್ರ' ಎಂಬುದನ್ನು ಚಲಾಯಿಸಲೂ ಯೋಚಿಸುತ್ತಿದೆ.

▶ 8





ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ.

ಅಧಿವೇಶನದ ನಂತರ ಬಜೆಟ್‌ಗೆ ತಯಾರಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನವರಿ 22ರಿಂದ ಜನವರಿ 31ರವರೆಗೆ ಅಧಿವೇಶನ ನಡೆಯಲಿದ್ದು, ಕೇಂದ್ರವು ನರೇಗಾ ಯೋಜನೆ ಹೆಸರು ಬದಲಾವಣೆ ಮಾಡಿರುವ ಬಗ್ಗೆ ಚರ್ಚೆಗೆ ಅವಕಾಶ ನೀಡಲಾಗುವುದು. ಅಧಿವೇಶನದ ಬಳಿಕ ಬಜೆಟ್‌ಗೆ ತಯಾರಿ ಆರಂಭಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಬೆಳವಣಿಗೆಗಳ ಕುರಿತು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, 'ವರಿಷ್ಠರು ಕರೆ ನೀಡಿದರೆ ನವದೆಹಲಿಗೆ ತೆರಳುತ್ತೇನೆ' ಎಂದು ಹೇಳಿದರು.

ALANKAR EXPO 2025 - DRAW RESULTS

ALANKAR PEARL PLAZA, K G ROAD, BANGALORE- 560 009.

Dasara / Deepavali / Christmas / New Year / Makara Sankranthi Mela

Draw Held on: 19-01-2026 ಅಲಂಕಾರ್ ಎಕ್ಸ್‌ಪೋ–2025

Sl. No.	Prize Category	Prize Description	Winning Coupon No.
1	Bumper Prize	Maruti Alto K10 VXi MT	150387
2	1st Prize	Hero Pleasure+ XTEC	354005
3	2nd Prize	Hero Pleasure+ VX	346759
4	3rd Prize	Laptop	165174
5	4th Prize	LED TV - 55"	211337
6	5th Prize	Washing Machine -LG 7.5 Kg	325505
7	6th Prize	Refrigerator - 240 Litres	249997
8	7th Prize	OPPO Mobile (A Series)	347913
9	8th Prize	Hero Sports Cycle	128169
10	9th Prize	Mixer Grinder with Juicer (Preethi)	395317
11	10th Prize	Consolation Prizes 100 Nos Coupons with last 4 digits ending with	1) 9976, 2) 9390, 3) 2120

Note : 1) No Claim of Prize will be entertained without original coupon.
2) No Claim will be entertained after 30 days from the date of Draw
3) All taxes are payable by the Prize Winner.

Organised by: Alankar Pearl Plaza Shop Owners' Association Bangalore-09
Contact: 080-22913718

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗ್ರಾ.ಕು.ನೀ.&ನೈ. ವಿಭಾಗ, ಪಂಚಾಯತ್ ಭವನ, 3ನೇ ಮಹಡಿ, ರಾಮನಗರ ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ – 562 159, ಇಮೇಲ್ : eerdwsdrmgr2017@gmail.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 09/ಕಾ.ಅ./ಗ್ರಾ.ಕು.ನೀ.&ನೈ.ವಿ./ರಾ/ಟೆಂಡರ್/ಸ.ಇಂ.–1/ಒ&ಎಂ/1871/25–26 ದಿನಾಂಕ : 20–01–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ. ಮತ್ತು ನೈ. ವಿಭಾಗ, ರಾಮನಗರ ಇವರು ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ಕಾಮಗಾರಿಯ ಹೆಸರು : ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲೂಕಿನ ಚಕ್ರಬಾವಿ ಮತ್ತು ಇತರೆ 11 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆಯ ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣೆ.

1) ಟೆಂಡರ್‌ಗಿಟ್ಟ ಮೊತ್ತ : ರೂ. 40.40 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 81,000/–, 2) ಕಾಲಾವಧಿ : 12 ತಿಂಗಳು, (ಒಟ್ಟು 05 ವರ್ಷಗಳವರೆಗೆ ಪ್ರತಿ ವರ್ಷ ನವೀಕರಿಸಲಾಗುವುದು), 3) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ : 04–02–2026 ರ ಸಂಜೆ 5.30 ಗಂಟೆಯವರೆಗೆ, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06–02–2026 ರ ಬೆಳಿಗ್ಗೆ 11.00 ಗಂಟೆಯ ನಂತರ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : 09–02–2026 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದು ಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ ವೆಬ್‌ಸೈಟ್ : https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ರಾಮನಗರ ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ.

ಡಿಐಪಿಆರ್/ರಾಮನಗರ/584/ಮಣಿಪಾಲ್/2025–26

ಆರಂಭವಾಗದ ಮುಂಬೈ ಎಕ್ಸ್‌ಪ್ರೆಸ್ ರೈಲು

15 ದಿನಗಳಲ್ಲಿ ಶುರುವಾಗುವ ನಿರೀಕ್ಷೆ ಬೇರೆ ರೈಲು ಬಗ್ಗೆ ಹಬ್ಬಿದ ವದಂತಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮುಂಬೈ–ಎಸ್‌ಎಂವಿಟಿ ಬೆಂಗಳೂರು ನಡುವೆ ವಾರಕ್ಕೆ ಎರಡು ದಿನ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ರೈಲ್ವೆ ಮಂಡಳಿ ಅನುಮತಿ ನೀಡಿ ತಿಂಗಳು ಕಳೆದರೂ ಇನ್ನೂ ಸಂಚಾರ ಆರಂಭವಾಗಿಲ್ಲ. ಈ ನಡುವೆ ಹೊಸ ತುರಂತೊ ರೈಲು ಸಂಚರಿಸಲಿದೆ ಎಂಬ ಸುದ್ದಿ ಹರಡಿದೆ. ಅಂಥ ಯಾವುದೇ ನಿರ್ಧಾರವಾಗಿಲ್ಲ ಎಂದು ರೈಲ್ವೆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್‌ಗೆ 'ಉದ್ಯಾನ್' ಎಕ್ಸ್‌ಪ್ರೆಸ್ ರೈಲು ಇದೆಯಾದರೂ ಅದು ಕಲಬುರಗಿ ಮಾರ್ಗವಾಗಿ ಸಂಚರಿಸುತ್ತಿದೆ. ಹುಬ್ಬಳ್ಳಿ ಮಾರ್ಗವಾಗಿ ಇರುವ ರೈಲು ಬೆಂಗಳೂರು ನಗರದ ಒಳಗೆ ಬಾರದೇ ಇರುವುದರಿಂದ ಹೊಸ ರೈಲಿಗಾಗಿ ಬೇಡಿಕೆ ಇತ್ತು.

ಬೆಂಗಳೂರಿನಿಂದ ಹುಬ್ಬಳ್ಳಿ ಮಾರ್ಗವಾಗಿ ಮುಂಬೈನ ದಾದರ್‌ಗೆ ಚಾಲುಕ್ಯ ಎಕ್ಸ್‌ಪ್ರೆಸ್ ರೈಲು 1983ರಲ್ಲಿ ಆರಂಭವಾಗಿತ್ತು. 2014ರವರೆಗೆ ಈ ರೈಲು ಮೆಜೆಸ್ಟಿಕ್‌ನಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣಕ್ಕೆ ಬರುತ್ತಿತ್ತು. ಆನಂತರ ಅದನ್ನು ಯಶವಂತಪುರ ನಿಲ್ದಾಣಕ್ಕೆ ಸೀಮಿತಗೊಳಿಸಲಾಯಿತು. ಅದೇ ಸಮಯದಲ್ಲಿ ಈ ರೈಲನ್ನು ವಾರದಲ್ಲಿ ಮೂರು ದಿನ ಪುದುಚೇರಿಗೆ ಹಾಗೂ ಮೂರು ದಿನ ತಮಿಳುನಾಡಿನ ತಿರುನಲ್ವೇಲಿ ಹಾಗೂ ಒಂದು ದಿನ ಮೈಸೂರಿಗೆ ವಿಸ್ತರಿಸಲಾಯಿತು. ಇದರಿಂದ ನಗರದ ನಾಗರಿಕರಿಗೆ ಈ ರೈಲಿನ ಉಪಯೋಗ ಕಡಿಮೆಯಾಯಿತು.

ಹುಬ್ಬಳ್ಳಿ ಮಾರ್ಗವಾಗಿ ಮುಂಬೈಗೆ ಇನ್ನೊಂದು ರೈಲು ಬೇಕು ಎಂಬ ಬೇಡಿಕೆ ಎರಡು ದಶಕದ ಹಿಂದೆಯೇ ಆರಂಭವಾಗಿತ್ತು. ಚಾಲುಕ್ಯ ಎಕ್ಸ್‌ಪ್ರೆಸ್ ರೈಲು ಈ ರೀತಿ ಬೇರೆ ದಾರಿಗೆ ತಿರುಗಿದ್ದರಿಂದ ಬೇಡಿಕೆಯು ಒತ್ತಡ ಇನ್ನಷ್ಟು ಹೆಚ್ಚಿತ್ತು. ಬೆಂಗಳೂರು ನಗರ ವ್ಯಾಪ್ತಿಯ ಸಂಸದರು ಕೂಡ 2019ರಲ್ಲಿ ಈ ಬಗ್ಗೆ ಪತ್ರ ಬರೆದಿದ್ದರು. ಆದರೆ, ಹೊಸ ರೈಲು ಬರುವ ಬದಲು ಚಾಲುಕ್ಯ ರೈಲಿನ ನಿಲುಗಡೆಯನ್ನೇ ಬದಲಾಯಿಸಲಾಯಿತು. ಯಶವಂತಪುರಕ್ಕೂ ಬಾರದೇ ಚಿಕ್ಕಬಾಣಾವರದಿಂದಲೇ ಬಾಣಸವಾಡಿ ಮೂಲಕ ಸಂಚರಿಸುವಂತೆ ಮಾಡಲಾಯಿತು. ಇದರಿಂದ ನಗರದ ನಿವಾಸಿಗಳಿಗೆ ಉಪಯೋಗವೇ ಇಲ್ಲದಂತಾಯಿತು.

ಬೆಂಗಳೂರಿಗೆ ರೈಲು ಬೇಕೇ ಬೇಕು ಎಂಬ ಬೇಡಿಕೆಯನ್ನು ರೈಲು ಪ್ರಯಾಣಿಕರು, ವಿವಿಧ ಸಂಘಟನೆಗಳು ಇಟ್ಟಿದ್ದರಿಂದ ರೈಲ್ವೆ ಸಚಿವಾಲಯವು ಸ್ಪಂದಿಸಿತ್ತು. ಸಚಿವಾಲಯದ ಸೂಚನೆಯಂತೆ ಮುಂಬೈನ ಕುರ್ಲಾ ಉಪನಗರದಲ್ಲಿರುವ ಲೋಕಮಾನ್ಯ ತಿಲಕ್ ಟರ್ಮಿನಲ್ ಮತ್ತು ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ನಡುವೆ ವಾರಕ್ಕೆ ಎರಡು ಬಾರಿ ಎಕ್ಸ್‌ಪ್ರೆಸ್ ರೈಲು (16553/4) ಸಂಚಾರ ನಡೆಸಲು ರೈಲ್ವೆ ಮಂಡಳಿಯು 2025ರ ಡಿಸೆಂಬರ್ 9ರಂದು ಅನುಮೋದನೆ ನೀಡಿತ್ತು. ಆದರೆ, ಸಂಚಾರ ಆರಂಭವಾಗಿಲ್ಲ ಎಂದು ರೈಲು ಪ್ರಯಾಣಿಕರು ದೂರಿದ್ದಾರೆ.



'ಸಂಸದರಿಗೇ ಗೊತ್ತಿಲ್ಲ'




ಟಿ.ಪಿ. ಲೋಕೇಶ್

ಮುಂಬೈ–ಬೆಂಗಳೂರು ನಡುವೆ ಎಕ್ಸ್‌ಪ್ರೆಸ್ ರೈಲು ಸಂಚರಿಸಲು ರೈಲ್ವೆ ಮಂಡಳಿ ಅನುಮತಿ ನೀಡಿದ್ದರೂ ರೈಲು ಸಂಚರಿಸುತ್ತಿಲ್ಲ ಎಂಬುದು ಇಲ್ಲಿನ ಸಂಸದರಿಗೇ ಗೊತ್ತಿಲ್ಲ ಎಂದು ರೈಲ್ವೆ ಪ್ರಯಾಣಿಕ ಟಿ.ಪಿ. ಲೋಕೇಶ್ ತಿಳಿಸಿದರು.

ಅನುಮೋದನೆ ಸಿಕ್ಕಿರುವ ರೈಲು ಸಂಚರಿಸುವಂತೆ ಮಾಡಿ ಎಂದು ಸಂಸದ ತೇಜಸ್ವಿ ಸೂರ್ಯ ಅವರಿಗೆ ಮನವಿ ಮಾಡಲು ಹೋಗಿದ್ದೆವು. ರೈಲು ಸಂಚರಿಸುತ್ತಿದೆ ಎಂದು ಅವರು ಪ್ರತಿಕ್ರಿಯಿಸಿದರು. ಇನ್ನೂ ಆರಂಭವಾಗಿಲ್ಲ ಎಂದರೂ ಆರಂಭದಲ್ಲಿ ನಮ್ಮ ಮಾತು ಒಪ್ಪಲಿಲ್ಲ. ಆ ನಂತರ ಅವರೇ ಆಪ್ತ ಸಹಾಯಕರಿಗೆ ಕರೆ ಮಾಡಿ ಖಚಿತಪಡಿಸಿಕೊಂಡರು. ಈ ರೈಲು ಓಡಾಡುವಂತೆ ಜನಪ್ರತಿನಿಧಿಗಳು ಒತ್ತಡ ಹಾಕಬೇಕು ಎಂದು ಒತ್ತಾಯಿಸಿದರು.

24 ಗಂಟೆ ಅವಧಿ ಕಡಿಮೆ ಮಾಡಿ



ಕೆ.ಎನ್. ಕೃಷ್ಣಪ್ರಸಾದ್

ರೈಲ್ವೆ ಮಂಡಳಿ ಅನುಮೋದನೆ ನೀಡಿರುವ ರೈಲು ಮುಂಬೈಯಿಂದ ಎಸ್‌ಎಂವಿಟಿಗೆ ಬರಲು ಅಥವಾ ಇಲ್ಲಿಂದ ಮುಂಬೈಗೆ ಹೋಗಲು 24 ತಾಸು ನಿಗದಿಪಡಿಸಲಾಗಿದೆ. ಸಂಚಾರ ಅವಧಿಯನ್ನು ಕಡಿಮೆ ಮಾಡದೇ ಇದ್ದರೆ ಪ್ರಯೋಜನವಿಲ್ಲ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಅಭಿಪ್ರಾಯ ವ್ಯಕ್ತಪಡಿಸಿದರು.

ಅಲ್ಲದೇ ಈ ರೈಲು ಕೆಎಸ್‌ಆರ್ ನಿಲ್ದಾಣಕ್ಕಾಗಲಿ, ಯಶವಂತಪುರಕ್ಕಾಗಲಿ ಬರುತ್ತಿಲ್ಲ. ಅದು ಎಸ್‌ಎಂವಿಟಿಗೆ ನಿಲ್ದಾಣಕ್ಕೆ ಬರುತ್ತಿದೆ. ಅಲ್ಲಿಗೆ ಹೋಗುವುದಕ್ಕೇ ಒಂದೆರಡು ತಾಸು ಬೇಕಾಗುತ್ತದೆ. ರಾತ್ರಿ 10.30ರ ನಂತರ ರೈಲು ಬಂದರೆ ಮನೆ ಸೇರುವುದು ಹೇಗೆ? ರಾತ್ರಿ 11 ಗಂಟೆಯ ನಂತರ ಹೊರಡುವ ರೈಲಿಗೆ ಹೋಗುವುದು ಹೇಗೆ? ಹಾಗಾಗಿ ಸಂಚಾರ ಅವಧಿಯನ್ನು ನಾಲ್ಕು ತಾಸು ಕಡಿಮೆ ಮಾಡಬೇಕು. ಇಲ್ಲವೇ ನಗರದ ಒಳಗೆ ರೈಲು ಬರುವಂತೆ ಮಾಡಬೇಕು ಎಂದು ಒತ್ತಾಯಿಸಿದರು.

15 ದಿನಗಳಲ್ಲಿ ಸಂಚಾರ ಶುರು

ಲೋಕಮಾನ್ಯ ತಿಲಕ್ ಟರ್ಮಿನಲ್‌ನಿಂದ ಬೆಂಗಳೂರು ಎಸ್‌ಎಂವಿಟಿಗೆ 15 ದಿನಗಳಲ್ಲಿ ರೈಲು ಸಂಚಾರ ಆರಂಭವಾಗಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಎಸ್‌ಎಂವಿಟಿಯಿಂದ ಶನಿವಾರ ಮತ್ತು ಮಂಗಳವಾರ ರಾತ್ರಿ 10.35ಕ್ಕೆ ಹೊರಟು ಮರುದಿನ ರಾತ್ರಿ 10.30ಕ್ಕೆ ಲೋಕಮಾನ್ಯ ತಿಲಕ್ ಟರ್ಮಿನಲ್‌ಗೆ, ಲೋಕಮಾನ್ಯ ತಿಲಕ್ ಟರ್ಮಿನಲ್‌ನಿಂದ ಭಾನುವಾರ ಮತ್ತು ಬುಧವಾರ ರಾತ್ರಿ 11.15ಕ್ಕೆ ಹೊರಟು ಮರುದಿನ ರಾತ್ರಿ 10.40ಕ್ಕೆ ಎಸ್‌ಎಂವಿಟಿಗೆ ತಲುಪುವಂತೆ ವೇಳಾಪಟ್ಟಿಯನ್ನು ರೈಲ್ವೆ ಮಂಡಳಿ ನೀಡಿದೆ. ಈ ವೇಳಾಪಟ್ಟಿ ಬಗ್ಗೆ ಕೇಂದ್ರ ರೈಲ್ವೆ ಮತ್ತು ನೈರುತ್ಯ ರೈಲ್ವೆ ಅಧಿಕಾರಿಗಳು ಜಂಟಿಯಾಗಿ ಚರ್ಚೆ ನಡೆಸಿ ಅಗತ್ಯವಿದ್ದರೆ ಬದಲಾವಣೆ ಮಾಡಿ ವೇಳಾಪಟ್ಟಿ ಅಂತಿಮಗೊಳಿಸಲಿದ್ದಾರೆ. ಆ ನಂತರ ಸಂಚಾರಕ್ಕೆ ಸಂಬಂಧಿಸಿದ ಅಧಿಸೂಚನೆ ಬರಲಿದೆ ಎಂದು ತಿಳಿಸಿದ್ದಾರೆ.

'ತುರಂತೊ ಮಾಹಿತಿ ಇಲ್ಲ'

ಬೆಂಗಳೂರು–ಮುಂಬೈ ನಡುವೆ ತುರಂತೊ ರೈಲು ಸಂಚರಿಸುವ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ರೈಲ್ವೆ ಮಂಡಳಿಯಲ್ಲಿ ಚರ್ಚೆಯಾಗಿರುವುದು ಗೊತ್ತಿಲ್ಲ. ವಾರಕ್ಕೆ ಎರಡು ದಿನ ಸಂಚರಿಸುವ ರೈಲಿಗೆ ಮಂಡಳಿಯು ಅನುಮತಿ ನೀಡಿದ್ದು, ಅದು ಕಾರ್ಯಗತಗೊಳ್ಳಲಿದೆ ಎಂದು ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಮುಂಬೈ- ಬೆಂಗಳೂರು ನಡುವೆ 18 ಗಂಟೆಗಳಲ್ಲಿ ಸಂಚರಿಸುವ ಹೊಸ ತುರಂತೊ ಎಕ್ಸ್‌ಪ್ರೆಸ್' ರೈಲನ್ನು ಭಾರತೀಯ ರೈಲ್ವೆ ಪರಿಚಯಿಸಲು ಚಿಂತನೆ ನಡೆಸಿದೆ. ಈ ಹೊಸ ರೈಲು, ಪ್ರಸ್ತುತ 24 ಗಂಟೆ ತೆಗೆದುಕೊಳ್ಳುವ ಸೂಪರ್‌ಫಾಸ್ಟ್ ರೈಲಿಗಿಂತ ವೇಗವಾಗಿ ಸಂಚರಿಸಲಿದೆ ಎಂಬ ಸುದ್ದಿ ಮತ್ತು ಅದರ ವೇಳಾಪಟ್ಟಿಯು ಸಾಮಾಜಿಕ ಜಾಲತಾಣ ಸೇರಿದಂತೆ ವಿವಿಧ ಮಾಧ್ಯಮಗಳಲ್ಲಿ ಹರಿದಾಡಿತ್ತು.

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಓಪನ್ ಟೆಂಡರು ಸೂಚನೆ ಸಂ.: BE-29-2025-26-OT-22

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಎಸ್‌ಎಸ್‌ಇ/ಪಿ/ ಯಶವಂತಪುರ ವ್ಯಾಪ್ತಿಯಲ್ಲಿ ಎಲೆಕ್ಟ್ರಿಕಲ್ ಕಾಮಗಾರಿಗಳಿಗಾಗಿ ಪ್ರಾಂತೀಯ ಟೆಂಡರು.	ರೂ. 41,79,506/-

ಓಪನ್ ಟೆಂಡರು ಸೂಚನೆ ಸಂ.: BE-29-2025-26-OT-26

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
2		ರೂ. 33,53,336/-

ಓಪನ್ ಟೆಂಡರು ಸೂಚನೆ ಸಂ.: BE-29-2025-26-OT-27

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
3		ರೂ. 32,00,351/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.02.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು

PUB/829/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ.: BE-TLAC-Modif-OT-2026-1 ದಿನಾಂಕ: 12.01.2026

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1		ರೂ. 77,57,428.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.02.2026, 15:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್//ಬೆಂಗಳೂರು

PUB/831/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನಗರಸಭಾ ಕಾರ್ಯಾಲಯ, ನೆಲಮಂಗಲ

ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂ.: 080–27722735, ಸಹಾಯವಾಣಿ: 080–27723627, Web : www.nelamangala.mrc.gov.in, Email : itstaffnelamangala@yahoo.com

ಸಂಖ್ಯೆ: ನೆನ/ಆಶಾ/ಘವನಿ/ಟೆಂಡರ್/ಸಿಆರ್/11/2025–26 ದಿನಾಂಕ: 20.01.2026

"ಟೆಂಡರ್ ಪ್ರಕಟಣೆ" (ಕೆ.ಪಿ.ಪಿ.ಪಿ.ಪೋರ್ಟಲ್ ಮೂಲಕ)

ನೆಲಮಂಗಲ ನಗರಸಭೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025–26ನೇ ಸಾಲಿನ ಎಸ್.ಬಿ.ಎಂ.2.0 ಅನುದಾನದಲ್ಲಿ ಹಾಗೂ ನಗರಸಭೆ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ ಡಾಕ್ಯೂಮೆಂಟ್ ಪ್ರಕಾರ ಟೆಂಡರ್‌ನ್ನು ದ್ವಿ–ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ / ಸಂಸ್ಥೆಯಿಂದ ಭಾಗವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
01	DMA/2025-26/SE7113	49.64
02	DMA/2025-26/SE126/CALL-03	2.69 (ಸೇವಾಶುಲ್ಕ)
03	DMA/2025-26/SE127/CALL-03	2.30 (ಸೇವಾಶುಲ್ಕ)

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in/portal-home ನಿಂದ ಡೌನ್ ಲೋಡ್ ಮಾಡಿಕೊಳ್ಳುವುದು. (2) ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಆರೋಗ್ಯ ಶಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರನ್ನು ಸಂಪರ್ಕಿಸುವುದು.

ಸಹಿ/– ಪೌರಾಯುಕ್ತರು ನಗರಸಭೆ ನೆಲಮಂಗಲ.

ವಾ.ಸಾ.ಸಂ.ಇ/ವಾಪ್ರ/5135/ಶಿರಡಿಸಾಯಿ/2025–26

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/169/2026 ದಿನಾಂಕ: 14.01.2026

The undersigned, on behalf of the President of India, Invites E-Tenders for the following works:

ಕ್ರಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	... WFD-GOODSHED)	ರೂ. 36,44,29,676/-
2	... XINGSTN)	ರೂ. 31,11,02,446/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.02.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/832/AAMO/PRB/SWR/2025-26

South Western Railway - SWR | SWRRLY | SWRAILWAYHQ | sw_railways


ನಗರದಲ್ಲಿ ಇಂದು

ಏಳು ಸುತ್ತಿನಕೋಟೆ ಸಪ್ತಮಾತೃಕಾ ಸಹಿತ ಆದಿಶಕ್ತಿ ದೇವಾಲಯದ ಉದ್ಘಾಟನೆ, ದೇವತಾ ಪೂಜಾ ಕಾರ್ಯಕ್ರಮಗಳು: ಭಾನು ಪ್ರಕಾಶ್ ಶರ್ಮಾ, ಆಯೋಜನೆ: ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಜಿಬಿಎ ಕೇಂದ್ರ ಕಚೇರಿ, ಬೆಳಿಗ್ಗೆ 6ರಿಂದ

ವಲ್ಲೀದೇವಸೇನಾ ಸಮೇತ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನದ ರಜತ ಬ್ರಹ್ಮ ರಥೋತ್ಸವ: ಮೂಲದೇವತಾ ಪ್ರಾರ್ಥನೆ, ಗಣಪತಿ ಪೂಜೆ, ರುದ್ರಾಭಿಷೇಕ, ಆಯೋಜನೆ: ವಲ್ಲೀದೇವಸೇನಾ ಸಮೇತ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯಪುರ, ಬೆಳಿಗ್ಗೆ 10

ಲಂಡನ್ ಮಾದರಿಯ ಅಂಬಾರಿ ಡಬಲ್ ಡೆಕರ್ ಬಸ್‌ಗಳಿಗೆ ಚಾಲನೆ: ಎಚ್.ಕೆ. ಪಾಟೀಲ, ಆಯೋಜನೆ: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಸ್ಥಳ: ರವೀಂದ್ರ ಕಲಾಕ್ಷೇತ್ರದ ಮುಂಭಾಗ, ಬೆಳಿಗ್ಗೆ 10.30

ನಿಜಶರಣ ಅಂಬಿಗರ ಚೌಡಯ್ಯ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ಎಸ್. ತಂಗಡಗಿ, ಅತಿಥಿಗಳು: ಉದಯ್ ಬಿ. ಗರುಡಾಚಾರ್, ಬಾಬುರಾವ್ ಚಿಂಚನಸೂರ, ಮಾಲಾ ಬಿ. ನಾರಾಯಣರಾವ್, ಗಂಗಾಧರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 11



ಬೆಳ್ಳಿ ಮಹೋತ್ಸವ: ಅತಿಥಿಗಳು: ಸಿ.ಪಿ. ರಾಧಾಕೃಷ್ಣನ್, ಥಾವರಚಂದ್ ಗೆಹಲೋತ್, ಕೆ.ಪಿ. ಗೋಪಾಕೃಷ್ಣ, ಕೆ.ಸಿ. ರಾಮಮೂರ್ತಿ, ಆಯೋಜನೆ ಮತ್ತು ಸ್ಥಳ: ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಇಸಿಎಸ್ ಲೇಔಟ್, ಐಟಿ ಪಾರ್ಕ್ ರಸ್ತೆ, ಮಧ್ಯಾಹ್ನ 2

ಗಾಯನ, ಸಾಂಸ್ಕೃತಿಕ ಕಾರ್ಯಕ್ರಮ: ಅರುಣ್ ಕುಮಾರ್ ಆರ್.ಟಿ., ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕಿದ್ವಾಯಿ ಗ್ರಂಥಿ ಸಂಸ್ಥೆಯ ಸಭಾಂಗಣ, ಮಧ್ಯಾಹ್ನ 3ರಿಂದ

ತೇಜಸ್ವಿ ನಾಟಕೋತ್ಸವ: 'ಪಾಕ ಕ್ರಾಂತಿ' ನಾಟಕ ಪ್ರದರ್ಶನ: ಪ್ರಸ್ತುತಿ: ವಿಶ್ವಪಥ ಕಲಾ ಸಂಗಮ, ಆಯೋಜನೆ: ತೋಟಗಾರಿಕೆ ಇಲಾಖೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಸ್ಥಳ: ಲಾಲ್‌ಬಾಗ್, ಸಂಜೆ 5

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ರೂಪಾ ಅಯ್ಯರ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ರಾಜ್ಯಮಟ್ಟದ 24ನೇ ನಾಟಕೋತ್ಸವ: 'ಪ್ರಾಣ ಪದ್ಮಿನಿ' ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ, ತಂಡ: ಸ್ಪಂದನ, ಆಯೋಜನೆ: ಭಾಗವತರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

ಬೆಂಗಳೂರು ಹಬ್ಬ: ಸಂಜೆ 5ಕ್ಕೆ ಬಸವನಗುಡಿ ತಿಂಡಿ ವಾಕ್, ಸ್ಥಳ: ನಮ್ಮ ಎಸ್‌ಎಲ್‌ಎನ್ ಗಾಂಧಿ ಬಜಾರ್, 5.30ರಿಂದ, ಸಂಗೀತ ಕಾರ್ಯಕ್ರಮ: ಬ್ಯಾಂಡ್ಸ್ ಗ್ಲೋರ್, ಮೈ ಭಿ ಖಾದಿ ಹೂಂ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಸಂಜೆ 6.30ಕ್ಕೆ ಸಿತಾರ್ ಸಂಧ್ಯಾ: ಮೋಹಸೀನ್ ಖಾನ್, ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸ್ಥಳ: 7ಕ್ಕೆ 'ಕವನ–ಆನ್ ಅಂಬೇಡ್ಕರೈಟ್ ಒಪೆರಾ' ನಾಟಕ ಪ್ರದರ್ಶನ: ಸ್ಥಳ: ಸಭಾ, ಕಾಮರಾಜ ರಸ್ತೆ, 7.30ಕ್ಕೆ ನೃತ್ಯ ಪ್ರದರ್ಶನ: ಅನ್‌ಚಾರ್ಟಟೆಡ್ ಸೀಸ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ರಾತ್ರಿ 8ಕ್ಕೆ ಅಬೂಟ್ ಟೈಮ್ ನೃತ್ಯ: ಕಿರಣ್ ಕುಮಾರ್, ರಂಗೋಲಿ ಮೆಟ್ರೊ ಕೇಂದ್ರ, ಎಂ.ಜಿ. ರಸ್ತೆ, 8ಕ್ಕೆ ಜ್ವಾಲಾ ನೃತ್ಯ ಪ್ರದರ್ಶನ: ಮೈಥಿಲಿ ಪ್ರಕಾಶ್, ಸ್ಥಳ: ರವೀಂದ್ರ ಕಲಾಕ್ಷೇತ್ರ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ದಿನಾಂಕ: 20.01.2026

ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂ/ಪ್ರ(ಕಾ)/ವೃತ್ತ–ದಕ್ಷಿಣ/ ... 1/24–25/ಇಪಿಆರ್–82 ಕರೆ–5 ದಿನಾಂಕ: 01.02.2025ರ ... ಉಪ–ಕೇಂದ್ರಗಳಿಗೆ ಅವಶ್ಯವಿರುವ 66ಕೆವಿ ... ಸರಬರಾಜು ಮಾಡಲು" ಬಿಡ್‌ಗಳನ್ನು ಆಹ್ವಾನಿಸಿದೆ.

... ವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ ... inಗೆ ಹೈಪರ್‌ಲಿಂಕ್ E Procurement ... https://kppp.karnataka.gov.inನಲ್ಲಿ ... ಲಾಗಿನ್ ಮಾಡುವ ಮೂಲಕ ಪಡೆಯಬಹುದು. ... ರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ... ಕ ಇಂಜಿನಿಯರ್(ವಿ), ಪ್ರಸರಣ(ಕಾರ್ಯಾಚರಣೆ) ... ಕ್ಷಿಣ, ನೆಲಮಹಡಿ, ಕವಿಪ್ರನಿನಿ ಕಛೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು–560 009.

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ (ಗುಣಮಟ್ಟ ಭರವಸೆ/ಗುಣಮಟ್ಟ ನಿಯಂತ್ರಣ ವಿಭಾಗ) ವಲಯ–1, ಬ್ಯಾಟರಾಯನಪುರ, ಬೆಂಗಳೂರು–92.

ದಿನಾಂಕ : 20.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮೊತ್ತ ರೂ. 20.00 ಲಕ್ಷಗಳು, ಇಎಂಡಿ : ರೂ.50,000/–

ಸಹಿ/–, ಕಾರ್ಯಪಾಲಕ ಅಭಿಯಂತರರು (ಗು.ಭ/ಗು.ನಿ ವಿಭಾಗ), ವಲಯ–1, ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು 2ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ಅರಮನೆ ನಗರ, ಬೆಂಗಳೂರು, ವಾರ್ಡ್ ನಂ. 35–ಅರಮನೆ ನಗರದ ಮುನಿಸಿಪಲ್ ನಂ. 271ರ (ಇಪಿಐಡಿ ನಂ. 1974629645) (ಹಿಂದಿನ ಮುನಿಸಿಪಲ್ ನಂ. 1634/2040 ಸ್ಯಾಂಕಿ ರಸ್ತೆ, ...

ಸಹಿ/– ಆರ್. ಸುನೀತಾ, ವಕೀಲರು, ... ದೂ. +91 80-40726600

ಫೆ.1ರಿಂದ ಭಾರತ ರಂಗ ಮಹೋತ್ಸವ

ಬೆಂಗಳೂರು: ರಾಷ್ಟ್ರೀಯ ನಾಟಕ ಶಾಲೆಯ (ಎನ್‌ಎಸ್‌ಡಿ) ಸಹಯೋಗದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ಫೆ.1ರಿಂದ ಫೆ.6ರವರೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ 'ಭಾರತ ರಂಗ ಮಹೋತ್ಸವ' ಹಾಗೂ 'ರಂಗ ಪರಿಷೆ' ರಂಗ ಉತ್ಸವ ಹಮ್ಮಿಕೊಂಡಿದೆ.

'ಆರು ದಿನಗಳ ಈ ಉತ್ಸವದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯಲ್ಲಿರುವ ಅಕಾಡೆಮಿ ಮತ್ತು ಪ್ರಾಧಿಕಾರಗಳ ವತಿಯಿಂದಲೂ ಕಾರ್ಯಕ್ರಮ, ವಸ್ತು ಹಾಗೂ ಪುಸ್ತಕ ಪ್ರದರ್ಶನ ನಡೆಯಲಿದೆ. ಬೆಂಗಳೂರಿನ 45ಕ್ಕೂ ಅಧಿಕ ರಂಗ ತಂಡಗಳು ಛಾಯಾಚಿತ್ರ ಹಾಗೂ ರಂಗ ಪರಿಕರಗಳನ್ನು ಪ್ರದರ್ಶನ ಮಾಡಲಿವೆ' ಎಂದು ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ತಿಳಿಸಿದ್ದಾರೆ.

'ಒಟ್ಟು 5 ವೇದಿಕೆಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕವಿಗೋಷ್ಠಿ, ರಂಗ ಚಿಂತನೆ, ಕಲಾಕೃತಿಗಳ ಪ್ರದರ್ಶನ, ಚಿತ್ರ ರಚನೆ, ಬೀದಿ ನಾಟಕ, ರಂಗಭೂಮಿಗೆ ಸಂಬಂಧಿಸಿದ ಕಾರ್ಯಾಗಾರ, ಯಕ್ಷಗಾನ ಮತ್ತು ಬಯಲಾಟ, ನೃತ್ಯ ಪ್ರದರ್ಶನ, ರಂಗಗೀತೆಗಳ ಗಾಯನ, ಸುಗಮ ಸಂಗೀತ ಸೇರಿ ಹಲವು ಕಾರ್ಯಕ್ರಮಗಳ ಮೂಲಕ ವೈವಿಧ್ಯಮಯ ರಂಗ ಪರಿಷೆ ಆಯೋಜಿಸಲಾಗುತ್ತಿದೆ' ಎಂದು ಹೇಳಿದ್ದಾರೆ.

DIAGEO India — ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001, ಕರ್ನಾಟಕ, ಭಾರತ. ಫೋನ್: +91 80 2221 0705; ಫ್ಯಾಕ್ಸ್: +91 80 2224 5253; ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com

ಡಿಸೆಂಬರ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳ ಲೆಕ್ಕಪರಿಶೋಧಿಸದ ಹಣಕಾಸು ಫಲಿತಾಂಶಗಳು (ಪ್ರತ್ಯೇಕಿತ ಮತ್ತು ಕ್ರೋಢೀಕೃತ) ಮತ್ತು ಮಾರ್ಚ್ 31, 2026ಕ್ಕೆ ಕೊನೆಗೊಳ್ಳುವ ಹಣಕಾಸು ವರ್ಷಕ್ಕೆ ಮಧ್ಯಂತರ ಲಾಭಾಂಶ

ಜನವರಿ 20, 2026ರಂದು ನಡೆದ ತನ್ನ ಸಭೆಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು ಈ ಕೆಳಗಿನವುಗಳನ್ನು ಅನುಮೋದಿಸಿದೆ:

1) ಡಿಸೆಂಬರ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳಿಗೆ (ಪ್ರತ್ಯೇಕಿತ ಮತ್ತು ಕ್ರೋಢೀಕೃತ) ಲೆಕ್ಕಪರಿಶೋಧಿಸದ ಹಣಕಾಸು ಫಲಿತಾಂಶಗಳು.

ಭಾರತದ ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015ರ ನಿಯಮ 33 ರೊಂದಿಗೆ ಓದಲಾದ ನಿಯಮ 47 ಪ್ರಕಾರ, ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ಹೊರಡಿಸಿದ ಸೀಮಿತ ಪರಿಶೀಲನಾ ವರದಿಯೊಂದಿಗೆ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ https://www.diageoindia.com/pdf-viewer.aspx?gid=307336661&src=%2F%7E%2Fmedia%2FFiles%2FD%2FDiageo-V2%2FDiageo-India%2Finvestors%2Ffinancials%2Fresults-reports-and-presentations%2Foutcome-of-the-board-meeting-unaudited-financial-results-for-the-quarter-and-nine-months-ended-31-dec-2025.pdf ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ ಮತ್ತು ಕ್ವಿಕ್ ರೆಸ್ಪಾನ್ಸ್ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರವೇಶಿಸಬಹುದು.

2) ಮಾರ್ಚ್ 31, 2026ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಮಧ್ಯಂತರ ಲಾಭಾಂಶ ಘೋಷಣೆ ಸಂಬಂಧಿತ ವಿವರಗಳು ಕೆಳಗೆ:

ಮಧ್ಯಂತರ ಲಾಭಾಂಶ ಹಣಕಾಸು ವರ್ಷ 26ಕ್ಕೆ	INR 6 ಪ್ರತಿ ಈಕ್ವಿಟಿ ಷೇರಿಗೆ
ದಾಖಲೆ ದಿನಾಂಕ	ಮಂಗಳವಾರ, ಜನವರಿ 27, 2026
ಪಾವತಿ ದಿನಾಂಕ (ರಂದು ಅಥವಾ ನಂತರ)	ಸೋಮವಾರ, ಫೆಬ್ರವರಿ 16 2026.

ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಸೂಚನೆ: ದಯವಿಟ್ಟು ಗಮನಿಸಿ, ಪ್ಯಾನ್, ವಿಳಾಸ, ಮೊಬೈಲ್ ಸಂಖ್ಯೆ, ಇಮೇಲ್ ಐಡಿ ಮುಂತಾದ KYC ವಿವರಗಳೊಂದಿಗೆ ನವೀಕರಿಸದ ಫೋಲಿಯೊಗಳು ತಮ್ಮ KYC ವಿವರಗಳನ್ನು ಒದಗಿಸಿದ ನಂತರ ಎಲೆಕ್ಟ್ರಾನಿಕ್ ಮೋಡ್ ಮೂಲಕ ಮಾತ್ರ ಲಾಭಾಂಶವನ್ನು ಪಡೆಯಲು ಅರ್ಹವಾಗಿರುತ್ತವೆ. ಅಂತೆಯೇ, ಕಂಪನಿಯು ಅಂತಹ ಭೌತಿಕ ಸದಸ್ಯರು ತಮ್ಮ ಲಾಭಾಂಶವನ್ನು ಸಕಾಲಿಕವಾಗಿ ಪಡೆಯಲು ತಮ್ಮ ಫೋಲಿಯೊಗಳು KYC ಅನುಸರಣೆಯನ್ನು ಖಚಿತಪಡಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತದೆ.

ಇದನ್ನು ಸ್ಟಾಕ್ ಎಕ್ಸ್ಚೇಂಜ್‌ಗಳ ವೆಬ್‌ಸೈಟ್, ಅಂದರೆ BSE ಲಿಮಿಟೆಡ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಸಹ ಲಭ್ಯವಾಗುವಂತೆ ಮಾಡಲಾಗಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್
ಸಹಿ/–
ಪ್ರವೀಣ್ ಸೋಮೇಶ್ವರ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
DIN: 01802656

ಸ್ಥಳ : ಬೆಂಗಳೂರು
ದಿನಾಂಕ : 20ನೇ ಜನವರಿ 2026

ಲಂಚ: ಜಗದೀಶ್, ತಮ್ಮಣ್ಣ ಅಮಾನತು

ಬೆಂಗಳೂರು: ಅಬಕಾರಿ ಪರವಾನಗಿ ನೀಡಲು ಲಂಚ ಪಡೆದ ಆರೋಪ ಪ್ರಕರಣದಲ್ಲಿ ಅಬಕಾರಿ ಉಪ ಆಯುಕ್ತ ಜಗದೀಶ್ ನಾಯ್ಕ ಹಾಗೂ ಸೂಪರಿಂಟೆಂಡೆಂಟ್ ಕೆ.ಎಂ.ತಮ್ಮಣ್ಣ ಅವರನ್ನು ಅಮಾನತು ಮಾಡಲಾಗಿದೆ.

ಜ. 17ರಂದು ₹25 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು, ಜಗದೀಶ್ ನಾಯ್ಕ್, ತಮ್ಮಣ್ಣ ಮತ್ತು ಕಾನ್‌ಸ್ಟೆಬಲ್ ಲಕ್ಕಪ್ಪ ಗನಿಯನ್ನು ಬಂಧಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಅಬಕಾರಿ ಜಂಟಿ ಆಯುಕ್ತರು, ಆಯುಕ್ತರಿಗೆ ವರದಿ ಸಲ್ಲಿಸಿದ್ದರು. ಅದನ್ನು ಆಧರಿಸಿ ಕರ್ನಾಟಕ ನಾಗರಿಕ ಸೇವಾ ನಿಮಯದಡಿ ಅಮಾನತುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಗರದ ಹುಳಿಮಾವು ನಿವಾಸಿ ಲಕ್ಷ್ಮೀನಾರಾಯಣ ಸೋಮವಾರ ಲೋಕಾಯುಕ್ತ ಎಸ್ಪಿ ಅವರನ್ನು ಭೇಟಿ ಮಾಡಿ, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಮತ್ತು ಅಧಿಕಾರಿಗಳ ವಿರುದ್ಧ ದೂರು ನೀಡಿದ್ದರು. ಅಲ್ಲದೆ ದೂರಿನ ಜತೆ ಆಡಿಯೊ ರೆಕಾರ್ಡ್, ಪೆನ್ ಡ್ರೈವ್ ನೀಡಿದ್ದರು.

ಆದಿಶಕ್ತಿ ದೇವಾಲಯ ಜೀರ್ಣೋದ್ಧಾರ

ಜಿಬಿಎ ನೌಕರರು, ಸಂಘದಿಂದ ದೇಣಿಗೆ; ₹1.80 ಕೋಟಿ ವೆಚ್ಚದಲ್ಲಿ ನವೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅತ್ಯಂತ ಪುರಾತನ ದೇವಸ್ಥಾನಗಳಲ್ಲಿ ಒಂದಾಗಿರುವ ಏಳು ಸುತ್ತಿನ ಕೋಟೆ ಸಪ್ತಮಾತೃಕಾ ಸಹಿತ ಆದಿಶಕ್ತಿ ದೇವಾಲಯ ಜೀರ್ಣೋದ್ಧಾರ ಕಾರ್ಯ ಮುಗಿದಿದ್ದು, ಜ.21ರಿಂದ ಉದ್ಘಾಟನಾ– ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಸುಮಾರು 800 ವರ್ಷಗಳ ಇತಿಹಾಸವಿರುವ ಈ ಏಳು ಸುತ್ತಿನ ಕೋಟೆಯ ದೇವಾಲಯದ ಆವರಣದಲ್ಲಿ ಮಹಾಗಣಪತಿ, ಸಪ್ತಮಾತೃಕೆಯರು, ಕಾಶಿ ವಿಶ್ವನಾಥ ದಂಪತಿ ಸಮೇತ ಪೋತುರಾಜಸ್ವಾಮಿ, ವಲ್ಲಿ ದೇವಸೇನಾ ಸಮೇತ ಕಾರ್ತಿಕೇಯ, ಆಂಜನೇಯ, ಆದಿ ದೇವತೆಗಳು, ಅಷ್ಟ ದಿಕ್ಪಾಲಕರೊಂದಿಗೆ ನವಗ್ರಹ, ಶನಿ ಮಹಾತ್ಮ ದೇವರುಗಳಿದ್ದು, ಸೂರ್ಯ ಭಗವಾನ್



ಏಳು ಸುತ್ತಿನ ಕೋಟೆ ಸಪ್ತಮಾತೃಕೆ ಆದಿಶಕ್ತಿ ದೇವಾಲಯದ ಬಾಗಿಲು

ಮತ್ತು ಕಾಲಭೈರವ ಮೂರ್ತಿಯನ್ನು ಹೊಸದಾಗಿ ಸ್ಥಾಪಿಸಲಾಗಿದೆ.

ಬೆಂಗಳೂರು ಕರಗದ ಸಂದರ್ಭದಲ್ಲಿ ಹಸಿ ಕರಗ ಈ ದೇವಸ್ಥಾನದಲ್ಲಿ ಮೊದಲು ಪೂಜೆ ಸಲ್ಲಿಸುತ್ತದೆ. ಈ ದೇವಾಲಯ ಹಲವು ವರ್ಷ ಶಿಥಿಲಾವಸ್ಥೆಯಲ್ಲಿತ್ತು. ದೇವಸ್ಥಾನದ ಆಡಳಿತ ಮಂಡಳಿಯವರು ಜೀರ್ಣೋದ್ಧಾರಕ್ಕಾಗಿ ಜಿಬಿಎ–ನಗರ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದೊಂದಿಗೆ ಸಮಾಲೋಚನೆ ನಡೆಸಿದರು. ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ಅವರು ಅಧಿಕಾರಿ– ಸಿಬ್ಬಂದಿಯೊಂದಿಗೆ ಮಾತುಕತೆ ನಡೆಸಿ, ಎಲ್ಲ ಸಿಬ್ಬಂದಿಯೂ ತಲಾ ಒಂದು ಸಾವಿರವನ್ನು ದೇಣಿಗೆಯಾಗಿ ನೀಡಲು ಒಪ್ಪಿಸಿದರು. ಆಗಿನ ಬಿಬಿಎಂಪಿ ಮುಖ್ಯ ಆಯುಕ್ತರು ಇದಕ್ಕೆ ಸಮ್ಮತಿ ನೀಡಿ, ₹1.60 ಕೋಟಿಯನ್ನು ದೇವಸ್ಥಾನದ ನೌಕರರ ವರ್ಗದಿಂದ ದೇಣಿಗೆಯಾಗಿ ನೀಡಿದರು. ಇದರ ಜೊತೆಗೆ ಸಂಘದ ವತಿಯಿಂದ ₹20 ಲಕ್ಷ ದೇಣಿಯನ್ನೂ ನೀಡಿ, ನವೀಕರಣಕ್ಕೆ ಕೈಜೋಡಿಸಿದರು.

ನೌಕರರ ಸಂಘದ ಸಹಾಯ, ಬೆಂಬಲದಿಂದ ಜೀರ್ಣೋದ್ಧಾರವಾಗಿರುವ ಏಳು ಸುತ್ತಿನ ಕೋಟೆ ಸಪ್ತಮಾತೃಕಾ ಸಹಿತ ಆದಿಶಕ್ತಿ ದೇವಾಲಯದ ಉದ್ಘಾಟನೆ ಹಾಗೂ ದೇವತಾ ಪೂಜಾ ಕಾರ್ಯ ಜನವರಿ 21ರಿಂದ 23ರವರೆಗೆ ನಡೆಯಲಿದೆ. ಆಗಮ ಶಾಸ್ತ್ರಜ್ಞ ಭಾನು ಪ್ರಕಾಶ್ ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳು ನಡೆಯಲಿವೆ. ಎಂದು ಜಿಬಿಎ–ನಗರ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ಮಾಹಿತಿ ನೀಡಿದರು.

ದೇವತಾ ಕಾರ್ಯಕ್ಕೆ ಆನೆ


ಏಳು ಸುತ್ತಿನ ಕೋಟೆ ಸಪ್ತಮಾತೃಕಾ ಸಹಿತ ಆದಿಶಕ್ತಿ ದೇವಾಲಯದ ದೇವತಾ ಕಾರ್ಯಕ್ಕೆ ತುಮಕೂರು ಜಿಲ್ಲೆಯ ತಿಪಟೂರಿನ ನೊಣವಿನಕೆರೆಯ ಕಾಡಸಿದ್ದೇಶ್ವರ ಮಠ ಟ್ರಸ್ಟ್‌ನ ಸೋಮೇಕಟ್ಟೆ ಕಾಡಸಿದ್ದೇಶ್ವರ ಮಠ ಹಾಗೂ ಹಾವೇರಿಯ ರಾಣೆಬೆನ್ನೂರಿನ ಐರಣಿ ಹೊಳೆಮಠದ ದತ್ತಾತ್ರೇಯ ಅವಧೂತ ಗುರುಪೀಠದಿಂದ ಎರಡು ಆನೆಗಳನ್ನು ಕರೆಸಲಾಗುತ್ತದೆ ಎಂದು ಜಿಬಿಎ–ನಗರ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಸಮಗ್ರ ತನಿಖೆ ನಡೆಸಿ: ರಾಜ್ಯ ಮಹಿಳಾ ಆಯೋಗ

ಬೆಂಗಳೂರು: ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್ ಅವರು ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಬೇಕು' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗ ತಿಳಿಸಿದೆ.

ಈ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದು, 'ರಾಮಚಂದ್ರ ರಾವ್ ಅವರು ಪೊಲೀಸ್ ಸಮವಸ್ತ್ರದಲ್ಲಿಯೇ ಮಹಿಳೆಯೊಂದಿಗೆ ಅನುಚಿತವಾಗಿ ನಡೆದುಕೊಂಡಿರುವ ವಿಡಿಯೊ ಮಾಧ್ಯಮಗಳಲ್ಲಿ ಪ್ರಸಾರಗೊಂಡಿದೆ. ಆಯೋಗ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ. ಮಹಿಳೆಯರಿಗೆ ರಕ್ಷಣೆ ನೀಡುವ ಉನ್ನತ ಹುದ್ದೆಯಲ್ಲಿರುವ ಪೊಲೀಸ್ ಅಧಿಕಾರಿಯೇ ಅಸಭ್ಯ ವರ್ತನೆಯಲ್ಲಿ ತೊಡಗಿರುವುದು ಖಂಡನೀಯ' ಎಂದು ಪತ್ರದಲ್ಲಿ ಉಲ್ಲೇಖಿಸಿದೆ.

'ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ-2013' ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ರಾಮಚಂದ್ರ ರಾವ್ ಅವರ ವಿರುದ್ಧ ಪಾರದರ್ಶಕ ತನಿಖೆ ನಡೆಸಬೇಕು. ಮಹಿಳೆಯರ ಘನತೆ ಮತ್ತು ಗೌರವವನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಅಧಿಕಾರಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಈ ಕುರಿತ ವರದಿಯನ್ನು ಏಳು ದಿನಗಳ ಒಳಗೆ ಆಯೋಗಕ್ಕೆ ಸಲ್ಲಿಸಬೇಕು' ಎಂದು ತಿಳಿಸಿದೆ.



'ನೋವಿಗೆ ಪುಸ್ತಕಗಳೇ ಮದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದಲ್ಲಿ ವಿಷಮತೆ ಹೆಚ್ಚುತ್ತಿದ್ದು, ಪುಸ್ತಕಗಳು ಮಾತ್ರ ಇದಕ್ಕೆ ಮದ್ದಾಗಬಲ್ಲವು' ಎಂದು ದೂರದರ್ಶನದ ಕಾರ್ಯಕ್ರಮ ಮುಖ್ಯಸ್ಥೆ ಎಚ್.ಎನ್. ಆರತಿ ಅಭಿಪ್ರಾಯಪಟ್ಟರು.

ಕರ್ನಾಟಕ ಪ್ರಕಾಶಕರ ಸಂಘ ಹಾಗೂ ಹೊಸತು ಮಾಸಿಕ ಪತ್ರಿಕೆಯ ಸಹಯೋಗದೊಂದಿಗೆ ನವಕರ್ನಾಟಕ ಪ್ರಕಾಶನದ ಹೊಸತು ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಪ್ರಕಾಶಕರ ಸಂಘದ ನೂತನ ಸಾಮಾಜಿಕ ಜಾಲತಾಣಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. 'ನಾವೆಲ್ಲ ಪುಸ್ತಕ ಓದಿ ಬೆಳೆದವರು, ಅದು ನಮ್ಮಲ್ಲಿ ಸಂಸ್ಕೃತಿ ಬಿತ್ತಿತ್ತು' ಎಂದು ತಿಳಿಸಿದರು.

'ಇಂದಿನ ಕೆಸರೆರಚಾಟ, ಕಿತ್ತಾಟಗಳ ಮಧ್ಯೆ ಯುವಜನರಲ್ಲಿ ಪುಸ್ತಕ ಸಂಸ್ಕೃತಿ ಬೆಳೆಸುವ ಜವಾಬ್ದಾರಿ ಹಾಗೂ ಅರಿವಿನ ಜಾಗೃತಿ ಮೂಡಿಸುವಲ್ಲಿ ಪುಸ್ತಕಗಳು ಹೇಗೆ ಮುಖ್ಯ ಎಂಬುದನ್ನು ಮನವರಿಕೆ ಮಾಡಿಕೊಡಬೇಕಿದೆ' ಎಂದರು.

ಕಾನೂನು ತಜ್ಞ ವೈ.ಜಿ. ಮುರಳೀಧರನ್ ಮಾತನಾಡಿ, 'ಕನ್ನಡದಲ್ಲಿ ಪ್ರಕಟವಾಗುವ ಪುಸ್ತಕಗಳು, ಮಾರಾಟ ಮಳಿಗೆಗಳು, ಲೇಖಕರ ಪುಸ್ತಕಗಳ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿಲ್ಲ. ಪುಸ್ತಕ ಮಾರಾಟ ಮಾತ್ರವಲ್ಲದೆ ಪುಸ್ತಕ ಸಂಸ್ಕೃತಿಯನ್ನು ಹುಟ್ಟುಹಾಕುವ ಕೆಲಸ ಇಂದಿನ ತುರ್ತು ಅಗತ್ಯ' ಎಂದರು.



ದೂರದರ್ಶನದ ಕಾರ್ಯಕ್ರಮ ಮುಖ್ಯಸ್ಥೆ ಎಚ್.ಎನ್. ಆರತಿ ಮಾತನಾಡಿದರು. ಕಾನೂನು ತಜ್ಞ ವೈ.ಜಿ. ಮುರಳೀಧರನ್, ನವಕರ್ನಾಟಕ ಪ್ರಕಾಶನದ ಆಡಳಿತ ನಿರ್ದೇಶಕ ಸಿದ್ದನಗೌಡ ಪಾಟೀಲ್ ಮತ್ತು ಸಂಘದ ಅಧ್ಯಕ್ಷೆ ವಸುಂಧರಾ ಭೂಪತಿ ಇದ್ದರು

ನವಕರ್ನಾಟಕ ಪ್ರಕಾಶನದ ಆಡಳಿತ ನಿರ್ದೇಶಕ ಸಿದ್ದನಗೌಡ ಪಾಟೀಲ್ ಮಾತನಾಡಿ, 'ವೈಚಾರಿಕ ಜಾಗೃತಿ ಮೂಡಿಸಿ ಜನರ ಮನೋವಿಕಾಸಕ್ಕೆ ಕಾರಣವಾಗುವ ಪುಸ್ತಕಗಳು ಮತ್ತು ಜನಪ್ರಿಯತೆ ಹೆಸರಿನಲ್ಲಿ ಹುಸಿತನ ಪ್ರಚಾರ ಮಾಡುವ ಪುಸ್ತಕಗಳು ಪ್ರಚಲಿತದಲ್ಲಿವೆ. ಜನಪ್ರೀತಿಯ ಮೂಲಕ ಸಮಸಮಾಜ ನಿರ್ಮಾಣಕ್ಕೆ ಸಮುದಾಯದ ಉನ್ನತಿಗಾಗಿ ಪೂರಕವಾದ ಪುಸ್ತಕಗಳನ್ನು ಪ್ರಕಟಿಸುವುದು ಕಷ್ಟ ಮತ್ತು ಸವಾಲಿನ ಕೆಲಸ' ಎಂದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಪ್ರಕಾಶಕರ ಸಂಘದ ಅಧ್ಯಕ್ಷೆ ವಸುಂಧರಾ ಭೂಪತಿ ಮಾತನಾಡಿ, 'ಕರ್ನಾಟಕ ಸರ್ಕಾರ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಸಲ್ಲಿಸಿರುವ ಪುಸ್ತಕ ನೀತಿಯನ್ನು ಜಾರಿಗೆ ತರಬೇಕು. ತಮಿಳುನಾಡಿನ ಮಾದರಿಯಲ್ಲಿ ಸರ್ಕಾರ ಪುಸ್ತಕ ಪ್ರದರ್ಶನ ಮತ್ತು ಮಾರಾಟಕ್ಕೆ ಕನ್ನಡದ ಅತ್ಯುತ್ತಮ ಪುಸ್ತಕಗಳು ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಳ್ಳಲು ಕಾರ್ಯಯೋಜನೆಗಳನ್ನು ರೂಪಿಸಬೇಕು' ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಪ್ರಕಾಶಕರ ಸಂಘದ ಉಪಾಧ್ಯಕ್ಷ ಯು. ಪ್ರೇಮ್ ಚಂದ್, ಸಾಮಾಜಿಕ ಜಾಲತಾಣ ಸಂಚಾಲಕ ರಾಜೇಂದ್ರ ಪ್ರಸಾದ್, ಅಭಿನವ ಪ್ರಕಾಶನದ ಎನ್. ರವಿಕುಮಾರ್ ಹಾಗೂ ಬಹುರೂಪಿ ಪ್ರಕಾಶನದ ಜಿ.ಎನ್. ಮೋಹನ್ ಇದ್ದರು.

ರಸ್ತೆ ಗುಣಮಟ್ಟ ಪರಿಶೀಲನೆ: ಐಐಎಸ್‌ಸಿಗೆ ಬಿಡಿಎ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ರಸ್ತೆಗಳ ಗುಣಮಟ್ಟ ಪರಿಶೀಲನೆಗಾಗಿ ಐಐಎಸ್‌ಸಿಗೆ ಪತ್ರ ಬರೆಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಧರಿಸಿದೆ.

ಪ್ರಾಧಿಕಾರ ನಿರ್ಮಿಸುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಶೇಕಡ 80ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಉಳಿದಿರುವ ಕೆಲಸಗಳು ತ್ವರಿತವಾಗಿ ನಡೆಯುತ್ತಿವೆ. ರಸ್ತೆ ಗುಣಮಟ್ಟಕ್ಕೆ ಸಂಬಂಧಿಸಿದಂತೆ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಐಐಎಸ್‌ಸಿಗೆ ಪತ್ರ ಬರೆದು, ಗುಣಮಟ್ಟ ಪರೀಕ್ಷೆ ನಡೆಸಲಾಗುವುದು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

'ಬಡಾವಣೆಯಲ್ಲಿ ಕೈಗೊಂಡಿರುವ ರಸ್ತೆ ಕಾಮಗಾರಿ ಸಂಪೂರ್ಣ ಅವೈಜ್ಞಾನಿಕವಾಗಿದೆ. ಎಲ್ಲ ರಸ್ತೆಗಳು ಸಮತಟ್ಟಾಗಿದ್ದರೆ ಸಂಚಾರ ಸುಲಭವಾಗುತ್ತದೆ. ಆದರೆ, ಇಲ್ಲಿನ ರಸ್ತೆಗಳನ್ನು ಒಂದು ಕಡೆಗೆ ಏರು ಮಾಡಿದ್ದರೆ, ಇನ್ನೊಂದು ಕಡೆಗೆ ಇಳಿಜಾರು ಮಾಡಲಾಗಿದೆ. ರಸ್ತೆ ಮೇಲೆ ನಿಲ್ಲುವ ನೀರು, ಚರಂಡಿ ಸೇರಲು ಸೂಕ್ತ ವ್ಯವಸ್ಥೆ ಕಲ್ಪಿಸಿಲ್ಲ. ರಸ್ತೆಗಳ ಗುಣಮಟ್ಟ ಕಳಪೆ ಆಗಿರುವುದಲ್ಲದೇ, ಏರಿಳಿತ ಮಾಡಿದ್ದರಿಂದ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗಿದೆ' ಎಂದು ನಿವೇಶನದಾರರು ಆರೋಪಿಸಿದ್ದಾರೆ.


ಕೆಂಪೇಗೌಡ ಬಡಾವಣೆಯ ಮೂರನೇ ಬ್ಲಾಕ್‌ನ ರಸ್ತೆಯೊಂದರಲ್ಲಿ ಒಳಚರಂಡಿಯ ಮ್ಯಾನ್‌ಹೋಲ್ ನೆಲಮಟ್ಟದಿಂದ ಮೇಲೆ ಬರುವಂತೆ ನಿರ್ಮಿಸಲಾಗಿದೆ.

'ಒಳಚರಂಡಿ ಕಾಮಗಾರಿಯನ್ನೂ ಸಮರ್ಪಕವಾಗಿ ಪೂರ್ಣಗೊಳಿಸಿಲ್ಲ. ಇದರಿಂದ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಮೂಲಸೌಕರ್ಯಗಳಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೂ ಜನರಿಗೆ ಪ್ರಯೋಜನವಾಗುತ್ತಿಲ್ಲ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಸಂಘದ ಪದಾಧಿಕಾರಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಅಪಘಾತ: ದ್ವಿತೀಯ ದರ್ಜೆ ಸಹಾಯಕ ಸಾವು

ಪ್ರಜಾವಾಣಿ ವಾರ್ತೆ

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ 75ರ ಮಲ್ಲರಬಾಣವಾಡಿ ಬಳಿ, ಕರ್ತವ್ಯ ಮುಗಿಸಿ ಮನೆಗೆ ತೆರಳುತ್ತಿದ್ದ ಪಟ್ಟಣದ ವಿಶ್ವೇಶ್ವರಪುರ ಬೈರವೇಶ್ವರ ಪ್ರೌಢಶಾಲೆಯ ದ್ವಿತೀಯ ದರ್ಜೆ ಸಹಾಯಕ ಜಿ.ಎ.ರಂಗನಾಥ್(41) ಅವರು ಸೋಮವಾರ ಅಪಘಾತದಲ್ಲಿ ಮೃತಪಟ್ಟಿದ್ದಾರೆ.


ರಂಗನಾಥ್

ದ್ವಿಚಕ್ರ ವಾಹನದಲ್ಲಿ ಗುಡೆಮಾರನಹಳ್ಳಿಗೆ ತೆರಳುತ್ತಿದ್ದ ಇವರಿಗೆ ಮತ್ತೊಂದು ದ್ವಿಚಕ್ರ ವಾಹನ ಗುದ್ದಿದ ಪರಿಣಾಮ ಸ್ಥಳದಲ್ಲಿಯೇ ರಂಗನಾಥ್ ಮೃತರಾಗಿದ್ದಾರೆ. ಅವರಿಗೆ ಪತ್ನಿ, ಒಂದು ಗಂಡು, ಒಂದು ಹೆಣ್ಣು ಮಗಳಿದ್ದಾಳೆ. ಮಂಗಳವಾರ ಮಧ್ಯಾಹ್ನ ಗುಡೆಮಾರನಹಳ್ಳಿಯಲ್ಲಿ ಅಂತ್ಯಸಂಸ್ಕಾರ ನಡೆಯಿತು.

'ಎಸ್‌ಸಿ ಮೀಸಲು ಶೇ 18ಕ್ಕೆ ಏರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವರ್ಗೀಕರಣದಲ್ಲಿ ಬಂಜಾರ, ಭೋವಿ, ಕೊರಮ, ಕೊರಚ ಮತ್ತು ಅಲೆಮಾರಿ ಸಮುದಾಯಗಳಿಗೆ ಆಗಿರುವ ಅನ್ಯಾಯ ಸರಿಪಡಿಸಲು ಮೀಸಲಾತಿ ಪ್ರಮಾಣವನ್ನು ಶೇ 18ಕ್ಕೆ ಏರಿಸಬೇಕು ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದೆ.

ಎಚ್.ಎನ್.ನಾಗಮೋಹನ್ ದಾಸ್ ಆಯೋಗ ನೀಡಿರುವ ವರದಿಯಂತೆ ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗಳಲ್ಲಿ ಪ್ರವರ್ಗಗಳನ್ನು ಮಾಡಿ ಮೀಸಲಾತಿ ಹಂಚಲು ಮಾನದಂಡ ಅನುಸರಿಸಿಲ್ಲ. ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಗೆ ವ್ಯತಿರಿಕ್ತವಾಗಿ ಸರ್ಕಾರಿ ಆದೇಶದ ಮೂಲಕ ಕಾನೂನಿನ ರೂಪ ನೀಡಲು ಹೊರಟಿರುವುದಕ್ಕೆ ನಮ್ಮ ವಿರೋಧವಿದೆ ಎಂದು ರಾಜ್ಯಪಾಲರಿಗೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಲಾಗಿದೆ.

ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ವಿಧಾನಸಭೆ ಉಪ ಸಭಾಪತಿ ರುದ್ರಪ್ಪ ಲಮಾಣಿ, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಬಿ. ಟಿ. ಲಲಿತಾ ನಾಯಕ್, ಮಾಜಿ ಸಂಸದ ಜನಾರ್ದನ ಸ್ವಾಮಿ, ಮಾಜಿ ಶಾಸಕರಾದ ಭೀಮಾ ನಾಯ್ಕ, ಬಸವರಾಜ್ ನಾಯ್ಕ, ಜಲಜಾ ನಾಯ್ಕ, ನಿವೃತ್ತ ಐಎಎಸ್ ಅಧಿಕಾರಿ ಮಂಜುನಾಥ ಪ್ರಸಾದ್, ವಕೀಲರಾದ ಶಂಕರಪ್ಪ, ಎನ್.ಅನಂತನಾಯ್ಕ ಉಪಸ್ಥಿತರಿದ್ದರು.


ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ನಿಯೋಗವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು.

ಬೇಡಿಕೆಗಳೇನು?: ಪ್ರರ್ಗ-ಸಿ ಗುಂಪಿನ 63 ಸಮುದಾಯಗಳ ಮೀಸಲಾತಿ ಪ್ರಮಾಣ ಶೇ 6ಕ್ಕೆ ಹೆಚ್ಚಿಸಬೇಕು. ಅಲೆಮಾರಿ, ಸೂಕ್ಷ್ಮ ಸಮುದಾಯಗಳಿಗೆ ಪ್ರತ್ಯೇಕ ಶೇ 1 ಮೀಸಲಾತಿ ಒದಗಿಸಬೇಕು. ಪ್ರವರ್ಗ-ಸಿ ಗುಂಪನ್ನು ಬದಲಾಯಿಸಿ ಪ್ರವರ್ಗ-1 ಎಂದು ಮರು ಸಂಯೋಜನೆ ಮಾಡಬೇಕು. ಪರಿಶಿಷ್ಟ ಜಾತಿಗಳ ಮೀಸಲಾತಿ ಪ್ರಮಾಣ ಕನಿಷ್ಠ ಶೇ 18ಕ್ಕೆ ಹೆಚ್ಚಿಸಬೇಕು.

ಧಾರವಾಡ ಕೃಷಿ ವಿಶ್ವವಿದ್ಯಾಲಯ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಶ್ವ-ವಿದ್ಯಾಲಯದಲ್ಲಿ ನೇಮಕ ಮತ್ತು ಶೈಕ್ಷಣಿಕ ಪ್ರವೇಶ ಪ್ರಕ್ರಿಯೆ ಆದೇಶ ವಾಪಸ್ ಪಡೆದು ಹೊಸ ನಿಯಮ ರೂಪಿಸಬೇಕು. ಅಲ್ಲಿಯವರೆಗೆ ಎಲ್ಲಾ ನೇಮಕಾತಿ ಪ್ರ-ಕ್ರಿಯೆಗಳನ್ನು ಹಳೆಯ ನಿಯಮಗಳಂತೆ ಮುಂದುವರಿಸಬೇಕು.

ಎಸ್.ಸಿ.ಪಿ, ಟಿ.ಎಸ್.ಪಿ, ಯೋಜನೆಯ ಅನುದಾನ ಹಂಚಿಕೆ ನಿಯಮದಂತೆ ಪ್ರವರ್ಗ ಸಿ ಗುಂಪಿನಡಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ-ವಡ್ಡರ್ ಅಭಿವೃದ್ಧಿ ನಿಗಮ ಮತ್ತು ಅಲೆಮಾರಿ ಅಭಿವೃದ್ಧಿ ನಿಗಮಗಳಿಗೆ ಶೇ 6ರಷ್ಟು ಹಂಚಿಕೆ ಮಾಡಲು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಬೇಕು.

ನೆಲಮಂಗಲ ತಾಲ್ಲೂಕಿನ 1,250 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ

ಹೇರಳ ಮಾವು ನಿರೀಕ್ಷೆಯಲ್ಲಿ ರೈತರು

● ಸಿ.ಜಿ. ಮೋಹನ್ ಕುಮಾರ್

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನಲ್ಲಿ ಕಳೆದ ವರ್ಷಕ್ಕಿಂತ ಈ ಬಾರಿ ಮಾವಿನ ಗಿಡಗಳಲ್ಲಿ ಹೆಚ್ಚು ಹೂ ಬಿಟ್ಟಿರುವುದು, ರೈತರು ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದಾರೆ.

ತಾಲ್ಲೂಕಿನಲ್ಲಿ 1,250 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಿದೆ. ಮುಂಗಾರಿನಲ್ಲಿ ಉತ್ತಮ ಮಳೆ ಆಗಿದ್ದು, ಮಾವಿಗೆ ಬೇಕಾದ ಪೂರಕ ವಾತಾವರಣವಿದೆ. ಮುಂದೆ ಯಾವುದೇ ರೀತಿಯ ಪ್ರಕೃತಿ ವಿಕೋಪ ಆಗದಿದ್ದರೆ ಮಾವಿನ ಹೇರಳ ಫಸಲು ನಿರೀಕ್ಷಿಸಬಹುದು ಎಂದು ತೋಟಗಾರಿಕೆ ಸಹಾಯಕ ನಿರ್ದೇಶಕ ಎಂ.ವಿಜಯಕುಮಾರ್ ಹೇಳಿದರು.


ಎಂ.ವಿಜಯ ಕುಮಾರ್


ಮಾವಿನ ಮರದಲ್ಲಿ ಹೂಗಳು ಬಿಟ್ಟಿವೆ

ಬಾದಾಮಿ ಇಲ್ಲಿನ ಪ್ರಮುಖ ತಳಿ. ಶೇ 80ರಷ್ಟು ಬೆಳೆಗಾರರು ಈ ತಳಿಯನ್ನು ನೆಟ್ಟಿದ್ದಾರೆ. ಉಳಿದಂತೆ ಮಲ್ಲಿಕಾ, ರಸಪುರಿ, ತೋತಾಪುರಿ ತಳಿಗಳಿವೆ. ರೈತರ ಸಾಧ್ಯವಾದಷ್ಟು ಸ್ಥಳೀಯವಾಗಿಯೇ ತೋಟದ ಲೆಕ್ಕದಲ್ಲಿ ಹೂ ಕಚ್ಚುವ ಹಂತದಲ್ಲಿಯೇ ಮಾರಾಟ ಮಾಡುತ್ತಾರೆ. ಇನ್ನು ಹೆಚ್ಚಿನ ಆಸಕ್ತಿ ಹಾಗೂ ಲಾಭದ ನಿರೀಕ್ಷೆಯ ರೈತರು ಹಾಪ್‌ಕಾಮ್ಸ್ ಮಳಿಗೆಗಳು, ಮಾವು ಮೇಳಗಳು ಹಾಗೂ ಮಾವು ಅಭಿವೃದ್ಧಿ– ಮಾರುಕಟ್ಟೆ ನಿಗಮ ಅಡಿಯಲ್ಲಿ ಮಾರಾಟ ಮಾಡುತ್ತಾರೆ. ರಾಸಾಯನಿಕ ಬಳಸಿ ಕೃತಕವಾಗಿ ಹಣ್ಣು ಮಾಡಿಸುವುದಕ್ಕಿಂತ, ನೈಸರ್ಗಿಕವಾಗಿ ಹಣ್ಣು ಮಾಡಿಸಿದರೆ ಉತ್ತಮ ಬೆಲೆ ಸಿಗುತ್ತದೆ ಎಂದು ತಿಳಿಸಿದರು.

ಮಾವು ಬೆಳೆಗಾರರು ಪ್ರಕೃತಿ ವಿಕೋಪದಿಂದಾಗುವ ತೊಂದರೆಗೆ ಪರಿಹಾರ ಪಡೆಯಲು ಬೆಳೆ ವಿಮೆ ಮಾಡಿಸಿಕೊಂಡರೆ ಒಳ್ಳೆಯದು. ಕಳೆದ ಬಾರಿ ತಾಲ್ಲೂಕಿನಲ್ಲಿ ಸುಮಾರು 4,000 ಟನ್ ಮಾವು ಬಂದಿತ್ತು. ಈ ಬಾರಿ 6,500 ಟನ್ ಬರುವ ನೀರಿಕ್ಷೆ ಇದೆ ಎಂದು ಹೇಳಿದರು.

ಮಾವಿನ ಗಿಡಗಳಿಗೆ ಬೆಳೆ ಹಾಳಾಗದಂತೆ ತಡೆಯಲು ರಾಸಾಯನಿಕ ಔಷಧಿ ಸಿಂಪಡಣೆ ಮಾಡುತ್ತಾರೆ. ಇದರಿಂದ ಕೆಟ್ಟ ವಾಸನೆ ಜೊತೆಗೆ ಅಕ್ಕಪಕ್ಕದ ಮನೆ ತೋಟಗಳಿಗೂ ಹಾನಿಯಾಗುತ್ತಿದೆ' ಎಂದು ರೈತ ಶಿವಕುಮಾರ್ ಆತಂಕ ವ್ಯಕ್ತಪಡಿಸಿದರು.



ಮಹಿಳೆಯರ ಒಳ ಉಡುಪು ಕದಿಯುತ್ತಿದ್ದ ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಒಳ ಉಡುಪುಗಳನ್ನು ಕದಿಯುತ್ತಿದ್ದ ವ್ಯಕ್ತಿಯನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೆಬ್ಬಗೋಡಿ ನಿವಾಸಿ ಅಮಲ್(23) ಬಂಧಿತ ಆರೋಪಿ. ಈ ಸಂಬಂಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದ ಪೊಲೀಸರು ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಠಾಣಾ ವ್ಯಾಪ್ತಿಯ ವಿದ್ಯಾನಗರದಲ್ಲಿ ವ್ಯಕ್ತಿಯೊಬ್ಬ ಕಟ್ಟಡದ ಮೇಲೆ ಮತ್ತು ಮನೆಯ ಅಂಗಳದಲ್ಲಿ ಹಾಕಿದ್ದ ಮಹಿಳೆಯರ ಒಳ ಉಡುಪುಗಳನ್ನು ಕದಿಯುವುದು, ಅವುಗಳನ್ನು ಧರಿಸಿ, ಫೋಟೊ ತೆಗೆದುಕೊಂಡು ಸಾರ್ವಜನಿಕವಾಗಿ ಪ್ರದರ್ಶಿಸುತ್ತಿರುವ ಮಾಹಿತಿ ಪೊಲೀಸರಿಗೆ ಬಂದಿತ್ತು.

ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ತೆರಳಿ, ವಕ್ತಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಮಹಿಳೆಯರ ಒಳ ಉಡುಪು ಕದ್ದಿರುವುದಾಗಿ ಒಪ್ಪಿಕೊಂಡಿದ್ದಾನೆ.

ಪ್ರಾಥಮಿಕ ತನಿಖೆ ವೇಳೆ, ಆರೋಪಿ ಅಮಲ್, ಮಹಿಳೆಯರ ಒಳ ಉಡುಪುಗಳನ್ನು ಕದ್ದು, ಅವನ್ನು ಧರಿಸಿಕೊಂಡು ಫೋಟೊ ತೆಗೆದುಕೊಂಡಿರುವ ಹಲವಾರು ಫೋಟೊಗಳು ದೊರೆತಿವೆ. ನಂತರ ಆತ ವಾಸವಿದ್ದ ಮನೆಯ ಪರಿಶೀಲನೆ ಮಾಡಿದಾಗ, ಮನೆಯಲ್ಲಿಯೂ ಮಹಿಳೆಯರ ಒಳ ಉಡುಪುಗಳನ್ನು ಸಂಗ್ರಹಿಸಿಟ್ಟುಕೊಂಡಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹2.16 ಕೋಟಿ ಮುಟ್ಟುಗೋಲು

‘ಗೋಲ್ಡನ್ ಅವರ್’ನಲ್ಲೇ ಪ್ರಕರಣ ಭೇದಿಸಿದ ಸಿಸಿಬಿ ಪೊಲೀಸರು

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಟ್ಟದಲ್ಲಿ ಇ-ಮೇಲ್‌ಗಳನ್ನು ಹ್ಯಾಕ್ ಮಾಡಿ ಕೋಟ್ಯಂತರ ರೂಪಾಯಿ ದೋಚುವ ಜಾಲವನ್ನು ಭೇದಿಸಿರುವ ನಗರದ ಸೈಬರ್ ಕ್ರೈಂ ಪೊಲೀಸರು, ಸೈಬರ್ ವಂಚಕರ ಕೈ ಸೇರಿದ್ದ ₹2.16 ಕೋಟಿಯನ್ನು ‘ಗೋಲ್ಡನ್ ಅವರ್’ನಲ್ಲಿ (ಕೃತ್ಯ ನಡೆದ ಒಂದು ತಾಸಿನ ಒಳಗಾಗಿ) ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿಗಳ ಜಾಲ ಭೇದಿಸಿರುವ ಪೊಲೀಸರು, ನ್ಯಾಯಾಲಯದ ಅನುಮತಿ ಪಡೆದು ಡಾ. ರೆಡ್ಡೀಸ್ ಲ್ಯಾಬೋರೇಟರೀಸ್‌ಗೆ ₹2.16 ಕೋಟಿ ಮರು ಪಾವತಿ ಮಾಡಿಸಿದ್ದಾರೆ. ಸೈಬರ್ ವಂಚಕರು ನೈಜೀರಿಯಾದಲ್ಲಿ ಕುಳಿತು ಬೆಂಗಳೂರಿನಲ್ಲಿರುವ ಗ್ರೂಪ್ ಕಂಪನಿಯ ಸರ್ವರ್ ಹ್ಯಾಕ್ ಮಾಡಿ, ಇ-ಮೇಲ್ ಸ್ಪೂಫಿಂಗ್ ಮಾಡಿ ರೆಡ್ಡೀಸ್ ಲ್ಯಾಬೋರೇಟರೀಸ್‌ಗೆ ಇ-ಮೇಲ್ ಸಂದೇಶ ಕಳುಹಿಸಿರುವುದು ಗೊತ್ತಾಗಿದೆ. ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಗರದ ಎಂ.ಜಿ.ರಸ್ತೆಯಲ್ಲಿರುವ ಗ್ರೂಪ್ ಫಾರ್ಮಾ ಕಂಪನಿ ಹೈದರಾಬಾದ್‌ನ ಡಾ. ರೆಡ್ಡೀಸ್ ಲ್ಯಾಬೋರೇಟರೀಸ್ ಜೊತೆ ಔಷಧಿ ವಿತರಣಾ ಒಪ್ಪಂದ ಮಾಡಿಕೊಂಡಿದ್ದು, ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸುತ್ತಿದೆ. ಕಳೆದ ವರ್ಷ ಫೆಬ್ರುವರಿ ಯಲ್ಲಿ ಗ್ರೂಪ್ ಫಾರ್ಮಾವು ರೆಡ್ಡೀಸ್ ಲ್ಯಾಬೋರೇಟರೀಸ್‌ಗೆ ₹2.16 ಕೋಟಿ ಮೌಲ್ಯದ ಔಷಧಿಯನ್ನು ಕಳುಹಿಸಿತ್ತು. ಬಳಿಕ ಬಿಲ್ ಕಳುಹಿಸಿ ಹಣ ಪಾವತಿ ಮಾಡುವಂತೆ ಇ-ಮೇಲ್ ಮೂಲಕ ಗ್ರೂಪ್ ಫಾರ್ಮಾ ಸಿಬ್ಬಂದಿ ರೆಡ್ಡೀಸ್ ಕಂಪನಿಗೆ ಸಂದೇಶ ಕಳುಹಿಸಿದ್ದರು.

ಈ ನಡುವೆ ಗ್ರೂಪ್ ಕಂಪನಿಯ ಸರ್ವರ್ ಹ್ಯಾಕ್ ಮಾಡಿರುವ ಸೈಬರ್ ವಂಚಕರು, ಕಂಪನಿಯ ಕೇಶವ ಎಂಬುವವರ ಇ-ಮೇಲ್ ವಿಳಾಸವನ್ನು ನಕಲಿ ಮಾಡಿದ್ದಾರೆ. ಅಂದರೆ ಎಲ್ಲಾ ಬಿಗ್ ಲೆಟರ್‌ಗಳಿಂದ ಹೊಸ ಇ-ಮೇಲ್ ವಿಳಾಸ ಸೃಷ್ಟಿಸಿ, ಹಣವನ್ನು ನಿರ್ದಿಷ್ಟ ಖಾತೆಗೆ ಜಮೆ ಮಾಡುವಂತೆ ಡಾ ರೆಡ್ಡೀಸ್ ಗ್ರೂಪ್‌ಗೆ ಸಂದೇಶ ಕಳುಹಿಸಿದ್ದಾರೆ. ರೆಡ್ಡೀಸ್ ಲ್ಯಾಬೋರೇಟರೀಸ್ ಕಂಪನಿ ಸಿಬ್ಬಂದಿ, ನಕಲಿ ಇ-ಮೇಲ್ ವಿಳಾಸದಿಂದ ಬಂದಿದ್ದ ಮೇಲ್‌ನಲ್ಲಿ ಉಲ್ಲೇಖಿಸಿದ್ದ ಬ್ಯಾಂಕ್ ಖಾತೆಗೆ ₹2.16 ಕೋಟಿ ವರ್ಗಾವಣೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಕೆಲ ಹೊತ್ತಿನ ಬಳಿಕ ಹಣ ಕಳುಹಿಸಿದ ಬಗ್ಗೆ ಗ್ರೂಪ್ ಫಾರ್ಮಾ ಸಿಬ್ಬಂದಿ ಯನ್ನು ಪ್ರಶ್ನಿಸಿದಾಗ, ಹಣ ಜಮೆ ಆಗದಿರುವ ಬಗ್ಗೆ ತಿಳಿಸಿದ್ದಾರೆ. ತಕ್ಷಣ ಎಚ್ಚೆತ್ತ ಗ್ರೂಪ್ ಕಂಪನಿಯ ಅಧಿಕಾರಿಯೊಬ್ಬರು ಫೆ. 2ರಂದು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ದೂರು ಸ್ವೀಕರಿಸಿದ ತಕ್ಷಣ ಕಾರ್ಯಾಚರಣೆ ನಡೆಸಿದ ಪೊಲೀಸರು, ಯಾವ ಖಾತೆಗೆ ಹಣ ಜಮೆಯಾಗಿದೆ ಎಂಬ ಮಾಹಿತಿ ಪಡೆದು, ನಂತರ ನಿರ್ದಿಷ್ಟ ಬ್ಯಾಂಕ್‌ಗೆ ನೋಟಿಸ್ ನೀಡಿ ನಕಲಿ ಬ್ಯಾಂಕ್ ಖಾತೆ ಯಲ್ಲಿರುವ ಹಣ ಜಪ್ತಿಗೆ ಕೋರಿದ್ದರು. ಅದರಂತೆ ಬ್ಯಾಂಕ್ ಅಧಿಕಾರಿಗಳು ಹಣ ಜಪ್ತಿ ಮಾಡಿದ್ದಾರೆ ಎಂದರು.

ಗುಜರಾತ್‌ನ ವಡೋದರದಲ್ಲಿರುವ ಮಹಿಳೆಯೊಬ್ಬರ ಬ್ಯಾಂಕ್ ಖಾತೆಗೆ ಪೂರ್ಣ ಹಣ ಜಮೆ ಆಗಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಆಕೆ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿರುವ ಕಾರಣ ಮಹಿಳೆಯನ್ನು ವಶಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಆಕೆ ಗುಣಮುಖರಾದ ಬಳಿಕ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತದೆ ಎಂದು ತಿಳಿಸಿದರು.

‘ಗೋಲ್ಡನ್ ಅವರ್’ನಲ್ಲಿ ಮಾಹಿತಿ ನೀಡಿ’


ಸೈಬರ್ ವಂಚನೆಗೆ ಒಳಗಾದವರು ಒಂದು ಗಂಟೆಯೊಳಗಾಗಿ ದೂರು ನೀಡಬೇಕು. ಅದನ್ನು ಗೋಲ್ಡನ್ ಅವರ್ ಎಂದು ಹೇಳಲಾಗುತ್ತದೆ. ಆ ಅವಧಿಯಲ್ಲಿ ದೂರು ನೀಡಿದರೆ ಹಣ ಜಪ್ತಿ ಮಾಡಲು ಸಾಧ್ಯವಾಗುತ್ತದೆ ಎಂದು ಸೀಮಾಂತ್ ಕುಮಾರ್ ಸಿಂಗ್ ಹೇಳಿದರು.

ಗ್ರೂಪ್ ಫಾರ್ಮಾದ ಸಿಬ್ಬಂದಿ ಹಣ ಕಳೆದುಕೊಂಡ ಕೆಲವೇ ಕ್ಷಣಗಳಲ್ಲಿ ದೂರು ನೀಡಿದ್ದರು. ಹೀಗಾಗಿ ಪೊಲೀಸರು ಕ್ಷಣಾರ್ಧದಲ್ಲಿ ಕಾರ್ಯಾಚರಣೆ ಕೈಗೊಂಡು ವರ್ಗಾವಣೆಯಾಗಿರುವ ಬ್ಯಾಂಕ್ ಖಾತೆ ವಿವರ ಪಡೆದು ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಿ ‘ಫ್ರೀಜ್’ ಮಾಡಿಸಿದ್ದರಿಂದ ವಂಚಕರ ಖಾತೆಗೆ ಹಣ ಹೋಗದೆ ಉಳಿದಿದೆ. ಸಾರ್ವಜನಿಕರು ಸೈಬರ್ ವಂಚನೆಗೆ ಒಳಗಾದಲ್ಲಿ ಮೊದಲ ಒಂದು ಗಂಟೆಯೊಳಗೆ ದೂರು ನೀಡಬೇಕು ಎಂದರು.

ನೈಜೀರಿಯಾ ಪ್ರಜೆ ಸೆರೆ: ಜೈಲಿನಿಂದ ಬಿಡುಗಡೆ ಬಳಿಕ ಕೃತ್ಯ

₹5.15 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ



ಅರ್ನೆಸ್ಟ್ ಯುಗಾಹ್ಸ್

ಬೆಂಗಳೂರು: ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ನೈಜೀರಿಯಾ ಪ್ರಜೆಯನ್ನು ಸಿಸಿಬಿ ಕೇಂದ್ರ ಅಪರಾಧ ದಳದ ಆ್ಯಂಟಿ-ನಾರ್ಕೋಟಿಕ್ಸ್ ಘಟಕದ ತಂಡವು ಕಾರ್ಯಾಚರಣೆ ನಡೆಸಿ ಬಂಧಿಸಿದೆ.

ಮಾರತ್‌ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಮುನೇನಕೊಳಲು ಪ್ರದೇಶದ ಬಾಡಿಗೆ ಮನೆಯಲ್ಲಿ ವಾಸವಿದ್ದ ಅರ್ನೆಸ್ಟ್ ಯುಗಾಹ್ಸ್ (45) ಎಂಬಾತನನ್ನು ಬಂಧಿಸಲಾಗಿದೆ. 2.5 ಕೆ.ಜಿ ಎಂಡಿಎಂಎ, 300 ಎಕ್ಸ್‌ಟೆಸಿ ಮಾತ್ರೆಗಳ ಸಹಿತ ಒಟ್ಟು ₹5.15 ಕೋಟಿ ಮೌಲ್ಯದ ಮಾದಕ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯು ವಾಸದ ಮನೆಯಲ್ಲೇ ಮಾದಕ ವಸ್ತುಗಳನ್ನು ಸಂಗ್ರಹಿಸಿಕೊಂಡು ವಿದ್ಯಾರ್ಥಿಗಳು, ಖಾಸಗಿ ಕಂಪನಿ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿದ್ದುದು ವಿಚಾರಣೆ ವೇಳೆ ಗೊತ್ತಾಗಿದೆ. ಈ ಹಿಂದೆ ಕಾಡುಗೋಡಿ, ಹೆಣ್ಣೂರು ಠಾಣೆಗಳಲ್ಲಿ ಅರ್ನೆಸ್ಟ್ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಇತ್ತೀಚೆಗೆ ಜೈಲಿನಿಂದ ಬಿಡುಗಡೆಯಾದ ಬಳಿಕ ಮತ್ತೆ ಅಕ್ರಮ ಚಟುವಟಿಕೆ ಮುಂದುವರಿಸಿದ್ದ. ಸಿಸಿಬಿ ಎಎನ್‌ಡಬ್ಲ್ಯು ಅಧಿಕಾರಿಗಳು ಆತನ ಚಲನವಲನದ ಮೇಲೆ ನಿಗಾ ವಹಿಸಿ, ಮತ್ತೆ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದಾಗ ಬಂಧಿಸಿದ್ದಾರೆ ಎಂದರು.

ಆರೋಪಿಯು ವೈದ್ಯಕೀಯ ವೀಸಾ ಮೇಲೆ ಭಾರತಕ್ಕೆ ಬಂದಿದ್ದು, ವೀಸಾ ಅವಧಿ ಮುಗಿದು ಐದು ವರ್ಷ ಕಳೆದರೂ ವಾಸವಿದ್ದ. ಮುಂಬೈ, ದೆಹಲಿ ಮೂಲಕ ಬೆಂಗಳೂರಿಗೆ ಬಂದು ಡ್ರಗ್ಸ್ ಮಾರಾಟ ದಂದೆಯಲ್ಲಿ ತೊಡಗಿದ್ದ. ಒಂದು ಎಕ್ಸ್‌ಟೆಸಿ ಮಾತ್ರೆ ದರ ₹3 ಸಾವಿರದಿಂದ ₹5 ಸಾವಿರ. ಇದನ್ನು ಮದ್ಯದ ಪಾರ್ಟಿಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಜೋಧಪುರ ಮತ್ತು ಮುಂಬೈನಿಂದ ಡ್ರಗ್ಸ್ ತರಿಸಿಕೊಂಡು ಮಾರಾಟ ಮಾಡುತ್ತಿದ್ದುದು ಗೊತ್ತಾಗಿದೆ. ಈತನ ಜತೆ ಸಂಪರ್ಕದಲ್ಲಿದ್ದವರು, ಗ್ರಾಹಕರನ್ನು ಪತ್ತೆಹಚ್ಚುವ ಕೆಲಸ ಮುಂದುವರಿಸಲಾಗಿದೆ ಎಂದು ಮಾಹಿತಿ ನೀಡಿದರು.

ರೌಡಿಶೀಟರ್ ಹತ್ಯೆ: 8 ಮಂದಿ ಬಂಧನ

ಹಳೇ ದ್ವೇಷದ ಕಾರಣಕ್ಕೆ ರೌಡಿಶೀಟರ್, ನಿವೃತ್ತ ಎಎಸ್‌ಐ ಪುತ್ರನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಟು ಆರೋಪಿಗಳನ್ನು ಬಂಡೇಪಾಳ್ಯ ಠಾಣೆ ಪೊಲೀಸರು ಬಂಧಿಸಿದಾರೆ.

ಹೊಸರೋಡ್ ನಿವಾಸಿ ಶಬ್ಬೀರ್ (29) ಕೊಲೆಯಾಗಿದ್ದ ರೌಡಿ ಶೀಟರ್. ಕೃತ್ಯವೆಸಗಿದ ಮಂಗಮ್ಮನಪಾಳ್ಯ ನಿವಾಸಿಗಳಾದ ನೂರುಲ್ಲಾ ಅಲಿಯಾಸ್ ಸೈಫುಲ್ಲಾ (33), ನದೀಮ್ (34), ಸಲ್ಮಾನ್ ಖಾನ್ (27), ಮೊಹಮ್ಮದ್ ಅಲಿ (29), ಸೈಯದ್ ಇಸ್ಮಾಯಿಲ್ ಅಲಿಯಾಸ್ ಮೊಹಮ್ಮದ್ ಸಿದ್ದೀಕ್ (30), ಸೈಯದ್ ಕಲೀಮ್ (32) ಹಾಗೂ ಉಮ್ರೇಜ್ ರೆಹಮಾನ್ (26) ಬಂಧಿತರು.

ನಗರದ ಮಂಗಮ್ಮನಪಾಳ್ಯದ ಮುಖ್ಯರಸ್ತೆಯಲ್ಲಿ ಜನವರಿ 12ರಂದು ತಡರಾತ್ರಿ ಘಟನೆ ನಡೆದಿತ್ತು. ಮೃತ ಶಬ್ಬೀರ್ ತಂದೆ ಕೆಎಸ್‌ಆರ್‌ಪಿಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿಯಾಗಿದ್ದರು. ಶಬ್ಬೀರ್ ಹೊಸರೋಡ್‌ನ ಮನೆ ಸಮೀಪದಲ್ಲೇ ಗುಜರಿ ಅಂಗಡಿ ಇಟ್ಟುಕೊಂಡಿದ್ದ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಂಬಂಧಿಯೊಬ್ಬರು ಚಿಕಿತ್ಸೆಗೆ ದಾಖಲಾಗಿದ್ದರಿಂದ ಅವರನ್ನು ನೋಡಿಕೊಂಡು ತಡರಾತ್ರಿ 11 ಗಂಟೆ ಸುಮಾರಿಗೆ ಸ್ನೇಹಿತರ ಜತೆ ಆಟೊದಲ್ಲಿ ಮನೆಗೆ ಹೋಗುತ್ತಿದ್ದ. ಅದೇ ವೇಳೆ ಎಂಟು ಮಂದಿ ಗುಂಪು ಆಟೊ ನಿಲ್ಲಿಸಿ ಶಬ್ಬಿರ್ ಕಣ್ಣಿಗೆ ಕಾರದ ಪುಡಿ ಎರಚಿ, ಮಂಗಮ್ಮನಪಾಳ್ಯ ಮುಖ್ಯರಸ್ತೆಯ ಪೆಟ್ರೋಲ್ ಬಂಕ್ ಮಾರಕಾಸ್ತ್ರಗಳಿಂದ ಭೀಕರವಾಗಿ ಹಲ್ಲೆ ನಡೆಸಿ, ಹತ್ಯೆಗೈದು ಪರಾರಿಯಾಗಿತ್ತು.

ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಡಿಸಿಪಿ ಎಂ.ನಾರಾಯಣ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿ ಆರೋಪಿಗಳನ್ನು ಮಂಗಳವಾರ ಬಂಧಿಸಿದ್ದಾರೆ.

ನಾಪತ್ತೆಯಾಗಿರುವ ಆರೋಪಿ ವಿರುದ್ಧ 40 ಪ್ರಕರಣ

ಬೈಕ್‌ನಲ್ಲಿ ಬಂದು ಮನೆಗಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳ ಬೀಗ ಒಡೆದು ಚಿನ್ನಾಭರಣಗಳನ್ನು ಕಳ್ಳತನ ಮಾಡಿ, ಮಾರಾಟ ಮಾಡಿದ್ದ ಆರೋಪಿಯನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ಪಾಂಡವಪುರದ ಶ್ರೀಕಾಂತ್ (36) ಎಂಬಾತನನ್ನು ಬಂಧಿಸಿ, 348 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ಸೇರಿ ₹42 ಲಕ್ಷ ಮೌಲ್ಯದ ಸ್ವತ್ತು ವಶಪಡಿಸಿಕೊಳ್ಳಲಾಗಿದೆ.

ಕೃತ್ಯದಲ್ಲಿ ಭಾಗಿಯಾಗಿರುವ ಮತ್ತೊಬ್ಬ ಆರೋಪಿ ಸಿದ್ದು ಅಲಿಯಾಸ್ ನಾಗರಾಜ್ ಬಂಧನಕ್ಕೆ ಶೋಧ ಮುಂದುವರಿದಿದ್ದು, ಈತನ ವಿರುದ್ಧ ಮನೆಗಳ್ಳತನಕ್ಕೆ ಸಂಬಂಧಿಸಿದಂತೆ 40 ಪ್ರಕರಣಗಳು ದಾಖಲಾಗಿವೆ. ಈತನಿಂದಲೂ ಆಭರಣ ವಶಪಡಿಸಿಕೊಳ್ಳಬೇಕಾಗಿದೆ ಎಂದು ಪೊಲೀಸರು ತಿಳಿಸಿದರು.

ಆಗಸ್ಟ್ 9ರಂದು ಠಾಣಾ ವ್ಯಾಪ್ತಿಯ ಅಂಚೆಪಾಳ್ಯ ಗ್ರಾಮದ ನಿವಾಸಿಯೊಬ್ಬರು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ತಮಿಳುನಾಡಿಗೆ ಹೋಗಿದ್ದರು. ಆಗ ಮನೆಯ ಬೀಗ ಒಡೆದು ಚಿನ್ನಾಭರಣ ಕಳವು ಮಾಡಲಾಗಿತ್ತು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡರು.



ಆರೋಪಿಯಿಂದ ವಶಪಡಿಸಿಕೊಂಡ ಚಿನ್ನಾಭರಣ

ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಾವಳಿ, ಬಾತ್ಮಿದಾರರ ಮಾಹಿತಿ ಹಾಗೂ ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನದ ಸುಳಿವಿನ ಮೇರೆಗೆ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಸಂಬಂಧಿ ಜತೆ ಸೇರಿ ಕಳ್ಳತನ ಮಾಡಿರುವುದು ಹಾಗೂ ಮಾದನಾಯಕನಹಳ್ಳಿಯ ಮತ್ತೊಂದು ಮನೆಯಲ್ಲೂ ಚಿನ್ನಾಭರಣ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಕೃತ್ಯಕ್ಕೆ ಬಳಸಿದ್ದ ಬೈಕ್‌ಗೆ ನಂಬರ್ ಪ್ಲೇಟ್ ಇರಲಿಲ್ಲ. ರಾತ್ರಿ ವೇಳೆ ಬೈಕ್ ನಲ್ಲಿ ಬಂದು ಕಳ್ಳತನ ಮಾಡಿ ಆರೋಪಿಗಳು ಪರಾರಿಯಾಗುತ್ತಿದ್ದರು. ವಾಹನದ ಎಂಜಿನ್ ಮತ್ತು ಚಾಸಿ ಸಂಖ್ಯೆಯನ್ನು ಪರಿಶೀಲಿಸಿದಾಗ, ಕಳ್ಳತನಕ್ಕೆ ಬಳಸಿರುವುದು ಇದೇ ವಾಹನ ಎಂಬುದು ಗೊತ್ತಾಯಿತು ಎಂದರು.

ಆರೋಪಿ ನೀಡಿದ ಮಾಹಿತಿ ಆಧರಿಸಿ, ಪಾಡವಪುರ ಮತ್ತು ಮೈಸೂರಿನ ಆಭರಣ ಅಂಗಡಿಗಳಲ್ಲಿ ಅಡವಿಟ್ಟಿದ್ದ 348 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಯಿತು. ಈತನ ಬಂಧನದಿಂದ ಠಾಣೆಯ ಎರಡು ಮನೆ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಮಾಹಿತಿ ನೀಡಿದರು.

ಜ್ಞಾನಭಾರತಿ ಠಾಣೆ ಇನ್‌ಸ್ಪೆಕ್ಟರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯಲೋಪ ಆರೋಪದ ಮೇಲೆ ಜ್ಞಾನಭಾರತಿ ಠಾಣೆ ಇನ್‌ಸ್ಪೆಕ್ಟರ್ ಎಂ.ಎಸ್.ರವಿ ಅವರನ್ನು ಅಮಾನತುಗೊಳಿಸಿ ನಗರ ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಮಂಗಳವಾರ ಆದೇಶಿಸಿದ್ದಾರೆ.

2025ರ ಸೆಪ್ಟಂಬರ್ ಮೊದಲ ವಾರದಲ್ಲಿ ಮಲ್ಲತ್ತಹಳ್ಳಿಯಲ್ಲಿ ಅನ್ನಪೂರ್ಣೇಶ್ವರಿನಗರ ನಿವಾಸಿ ದೀಪಕ್ ರಾಜ್ (18) ಎಂಬ ಯುವಕನ ಹತ್ಯೆಯಾಗಿತ್ತು. ಆದರೆ, ಜ್ಞಾನಭಾರತಿ ಠಾಣಾಧಿಕಾರಿ ರವಿ ಅವರು ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಯಾವುದೇ ಪ್ರಕರಣ ದಾಖಲಿಸಿಕೊಂಡಿರಲಿಲ್ಲ. ಆದರೆ, ತಾವರೆಕೆರೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡಿದ್ದರು.

ತನಿಖೆ ವೇಳೆ ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ದುರ್ಘಟನೆ ನಡೆದಿದೆ ಎಂಬುದು ಗೊತ್ತಾಗಿ, ಮತ್ತೆ ಇದೇ ಠಾಣೆಗೆ ವರ್ಗಾವಣೆ ಮಾಡಿದ್ದರು. ಹೀಗಾಗಿ ಸೆ.13ರಂದು ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದರು. ಈ ಹಿನ್ನೆಲೆಯಲ್ಲಿ ಕರ್ತವ್ಯಲೋಪ ಹಾಗೂ ನಿರ್ಲಕ್ಷ್ಯದ ಆರೋಪದ ಮೇರೆಗೆ ಅವರ ವಿರುದ್ಧ ಹಿರಿಯ ಅಧಿಕಾರಿಗಳಿಗೆ ಡಿಸಿಪಿ ವರದಿ ನೀಡಿದ್ದರು.

ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ್ ಶೆಟ್ಟಿ ಸಲಹೆ

‘ಸಾಮಾಜಿಕ ಪಿಡುಗು ತಡೆಗಟ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿ ಮಹಿಳೆಯರು, ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಹಿಂಸೆ, ವರದಕ್ಷಿಣೆ ಕಿರುಕುಳ, ಬಾಲ್ಯ ವಿವಾಹದಂತಹ ಸಾಮಾಜಿಕ ಪಿಡುಗುಗಳನ್ನು ತಡೆಗಟ್ಟಿ, ಜಾಗೃತಿ ಮೂಡಿಸಬೇಕು’ ಎಂದು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ್ ಶೆಟ್ಟಿ ಸಲಹೆ ನೀಡಿದರು.

ಡೆವಲಪ್‌ಮೆಂಟ್ ಎಜುಕೇಷನ್ ಸರ್ವಿಸ್(ಡೀಡ್ಸ್), ಕಾನೂನು ಸೇವಾ ಪ್ರಾಧಿಕಾರ ಹಾಗೂ ಪ್ಯಾರಾ ಲೀಗಲ್ ಫೆಸಿಲಿಟರ್ಸ್ ಕಲೆಕ್ಟಿವ್ ಸಹಯೋಗದಲ್ಲಿ ಮಂಗಳವಾರ ನಡೆದ ಅರೆಕಾಲಿಕ ಕಾನೂನು ಸ್ವಯಂಸೇವಕರಿಗೆ ಉಚಿತ ಕಾನೂನು ಸೇವೆಗಳ ಕುರಿತ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

‘ಮಹಿಳೆಯರು ಹಾಗೂ ಮಕ್ಕಳ ಕಳ್ಳಸಾಗಣೆ ಪ್ರಕರಣಗಳು ಹೆಚ್ಚುತ್ತಿವೆ. ಬಾಲಕಾರ್ಮಿಕ ಹಾಗೂ ದೇವದಾಸಿ ಪದ್ಧತಿಯ ಕುರಿತು ಸಮಾಜದಲ್ಲಿ ಅರಿವು ಮೂಡಿಸಬೇಕು. ಇವರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸಬೇಕು. ಇತ್ತೀಚೆಗೆ ಪೋಕ್ಸೊ ಹಾಗೂ ಬಾಲ ಗರ್ಭಿಣಿಯರ ಪ್ರಕರಣಗಳು ಹೆಚ್ಚುತ್ತಿದ್ದು, ಇವುಗಳನ್ನು ನಿಯಂತ್ರಿಸಬೇಕು. ಈ ಬಗ್ಗೆ ರಾಜ್ಯದಾದ್ಯಂತ ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಮೂಡಿಸಬೇಕು. ಕಾನೂನು ಸೇವಾ ಪ್ರಾಧಿಕಾರದ ಸಹಾಯವನ್ನು ಪಡೆದುಕೊಳ್ಳಬೇಕು’ ಎಂದರು.

‘ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸುವವರು ಗ್ರಾಮೀಣ ಭಾಗದಲ್ಲಿ ಕಾನೂನು ಹಾಗೂ ಕಾಯ್ದೆಗಳ ಕುರಿತು ಜಾಗೃತಿ ಮೂಡಿಸಬೇಕು. ಅಂಗವಿಕಲರು, ವೃದ್ಧರು ಹಾಗೂ ಸಂಚಾರಕ್ಕೆ ಸಂಬಂಧಿಸಿದ ಕಾಯ್ದೆ-ಕಾನೂನುಗಳ ಕುರಿತು ತಿಳಿದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

ವಕೀಲ ವಿನಯ್ ಶ್ರೀನಿವಾಸ್, ಸುಮಿತ್ರಾ ಆಚಾರ್ಯ, ಮರ್ಲಿನ್ ಮಾರ್ಟಿಸ್ ಉಪಸ್ಥಿತರಿದ್ದರು.



ವಿಚಾರಸಂಕಿರಣದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ ಹಾಗೂ ವಕೀಲ ವಿನಯ್ ಶ್ರೀನಿವಾಸ್ ಚರ್ಚೆ ನಡೆಸಿದರು. ವಕೀಲರಾದ ಸುಮಿತ್ರಾ ಆಚಾರ್ಯ, ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

BE(CIVIL) GRADUATE 5 YEARS Experience Ready Mix Concrete QA/QC/MARKETING Athani Associates Shivamogga 9886721202

Teachers/ Professors

GEMS- ET @ 2002
THE PRESIDENCY GROUP OF INSTITUTIONS
Gurukula, Amarapura Road, Sira-572137, Tumkur (Dist), Karnataka
Co-Educational English Medium, secular Day Cum Residential Institutions with a strength of around 6000 students located on a 20 Acre campus in the heart of SIRA city, 120KM from Bangalore on NH4, requires qualified, competent & experienced staff. Those fluent in English, effective in teaching / administration and looking for long-term association with the institution can apply for the following posts.
PRINCIPALS
Trained Post Graduates with minimum 05 years experience in the said post in reputed ICSE/CBSE Schools & PU Colleges with proven track record.
Salary: Rs. 100,000 - 1,50,000 pm based on competency.
THE PRESIDENCY PUBLIC SCHOOL - ICSE (KA-118)
MIDDLE / HIGH SCHOOL TEACHERS
Trained Post Graduates/ Graduates in English, History, Geography, Physics, Chemistry, Biology, Mathematics & Computer Application with Min. 2 years experience & a proven track record of teaching in ICSE Classes.
Salary: Rs.50,000 - 1,00,000 pm based on competency.
PRESIDENCY PU COLLEGE (UU0228)
LECTURERS
Trained Post Graduates in Physics, Chemistry, Biology, Mathematics, Computer Science &, English with min. 2 years Exp. & a proven track record of teaching in English medium classes and competency to train students for IIT-JEE, NEET & CET.
Salary: Rs.75,000 - 1,25,000 pm based on competency
THE PRESIDENCY PUBLIC SCHOOL - CBSE (No.830710)
SECONDARY TEACHERS
Trained Post Graduates/ Graduates in Science, Mathematics, English, Social Studies, Humanities & Computer Science with min. 2 years Experience & a proven track record of teaching in CBSE classes IX & X.
Salary: Rs. 50,000 -1,00,000 pm based on competency.
MIDDLE SCHOOL TEACHERS
Trained Science / Arts / Humanities Graduates to teach VI - VIII classes with minimum 2 years experience.
Salary: Rs.35,000 - 60,000 pm based on competency.
PRIMARY TEACHERS
Graduates with D.Ed / B.Ed to teach I to V classes with min. 2 years experience.
Salary: Rs.30,000 - 50,000 pm based on competency.
NURSERY TEACHERS
Graduates with Nursery / Montessori Training with min. 2 years experience.
Salary: Rs.20,000 - 35,000 pm based on competency.
INDIAN LANGUAGE TEACHERS
Indian Language Teachers PRT/TGT/PGT in Kannada & Hindi with min. 2 years Exp.
Salary : State Scale
OTHERS
- Student Counselor
- Physical Education Teacher
- Fine Arts / Crafts
- Librarian
- Sports Coaches
- (Games/Swimming)
- Life Skill Instructors
- Lab Instructors
- Wardens (Gents/Ladies)
Salary : State Scale
Food & Accommodation will be provided on request
INTERVIEWS
Please send a hand written application with CV & Recent Passport Size photograph within 15 days to the Administrator at the above mentioned address. Short listed candidates will be called for interview. Preference will be given to female teachers and couples. interviews / Demo will be held in the month of February 2026.
tppsresource@gmail.com

VIDYA SOUDHA PUBLIC SCHOOL
Affiliated to CISCE, Code-KA 301
No. 9/1, Main, Peenya 1st Stage, Near Basaveshwara Bus Station, Bangalore-58.
Website: www.vidyasoudha.edu.in/vspsblr
WE ARE HIRING ...
High School Teachers:
Subject : Mathematics, Chemistry, Physcis, English, Physical Education
Qualification : Master's degree in relevant subject with B.Ed/B.Ped
Experience : Min 3-5 years
Primary Teachers:
Subject : Mathematics, English, Kannada, Physical Education
Qualification : Master / Bachelor's degree in relevant subject with B.Ed/B.Ped
Experience : Min 3-4 years
Pre-Primary Teachers:
Qualification : Degree with NTT/MTT
Experience : Minimum 2 years
Please apply on or before 30th Jan. 2026
Email ID: hr.01@vidyasoudha.edu.in
Contact No: 8971566659

MANASA EDUCATIONAL TRUST (R)
M.S.CONVENT
Sultanpalya, R.T.Nagar, Bangalore-32
TEACHERS REQUIRED
English, Science (High School)
Kannada, Computer Science (High School & Primary)
Admission Counselor & Office Admin
Graduates with B.Ed/M.Ed, M.Sc, MCA, MBA, M.A, B.Sc, BCA, B.Com
Walk-in interview
Send your updated resume to: manasa.edu.trust@gmail.com
9844043770 / 9844456549

SRI AYYAPPAN NURSERY PRIMARY AND HIGH SCHOOL, BENSON TOWN, BANGALORE-46 MOBILE 9986155417 9113062970 WE ARE HIRING GRADUATES WITH B.ED, PUC WITH NTT/MONTESSORI GRADUATE CLERK, sriayyappaninstitutions@gmail.com

Multiple Vacancy

VACANCY
Shri Lakshmi Steel Suppliers, One of the Leading Steel companies In South India, is looking for HR Manager, Sales Managers, Accounts Manager and Warehouse Operations Manager in Bengaluru.
CONTACT:
Mr. Rajganesh
948 0834 473
Email:ganesh.c@slgroup.in

Manager

WANTED MALE Candidate for Leading Wireless Telecom Company: (A) MANAGER -Marketing /Business Development, (B) MANAGER -Sales & Service, Qualification- Diploma /B.Sc. /Engg (E&C/ E&E) 5-8 years experience with 2 wheeler. 9845602130 9945026468

Tailors

EXPERENCED LADIES Dress Stichiing Females/ Partner Required For Proposed Tailorshop in Jalahalli: 9845182814

RENTAL PROPERTIES

Accommodation Available

Commercial

FOR RENT: PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF- 300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321

REAL ESTATE BUYING

Commercial Building

Jayanagar

WANTED COMMERCIAL Building Jayanagar J.P.Nagar R.R.Nagar Budget 10 Crore to 25 Crore Call Aswath: 9845074355

REAL ESTATE SELLING

House

J P Nagar

BBMP-A/E-KHATA, 20'X30',G+2 Semi Commercial Building for Sale in JP Nagar 5th Phase, Rs.1.15Cr, Direct:9008716584

BUSINESS

Business Offers

Finance

WE ARRANGE Loan against Commercial/ Residential Building/School Building/ Hospital Building Convention Hall/ Bar & Restaurant Property and Business loan from Schedule Banks. Mrs Jyothi 8971132289 /9380509779

MSME LOAN Available For Any Start-UpsCompanies And Existing Running Companies,Hotels,Shops Establishments Etc Contact-7204995189

EDUCATIONAL

Admission

WORKING PROFESSIONALS Complete Your AMIIE (B.Tech)- TMIIE (Diploma). Direct/ Private 10th 12th. BBA MBA: 9341273990

PERSONAL

Change of Name

CHANGE OF NAME
I, EAJAZ AHMED ISMAIL S/o Ismail Khan, Residing at 5th Cross, Telephone Exchange Road, M.V. Extension, Hoskote, Bengaluru - 562114, have changed my name to EAJAZ AHMED vide affidavit dated 19-01-2026 before notary R. Jyshree, Bengaluru. Henceforth I shall be called as EAJAZ AHMED only

I, MRS. Rani Priya R spouse/ wife of 740294H Ex Cpl. Sujit Sadasivan R/o S-0358, "USHAS", 7th Cross, BEL Layout II Phase, Viswaneedam (PO) Bangalore 560091, have changed my name from Mrs. Rani Priya R to Mrs. Priya Sujit vide Affidavit dated 19-01-2026 before notary H.R Karunakara

Yellarigu Swagatha
Book Your Pass
Namma Karigaru, Namma Parampara
2026
Karigar Bazaar
SECOND EDITION
17–26 January | 11am - 8pm
What's New This Year?
200+ master artisans from across India • Handlooms • Folk art • Jewellery • Home décor • Live craft demonstrations • Cultural evenings • Regional food
Every piece is handmade. Every story is heartfelt. Come, experience the warmth of India's crafts.
Join us to celebrate craft, culture and community — together, once again.
Jayamahal Palace Hotel, #1, Near Cantonment Railway Station Road, Bengaluru
Entry: ₹100 | Free Parking | Pet-Friendly | Mob: +91 87883 49654

Kalakruthi
Confluence of Arts, Crafts & Textiles
presents
ಸಂತೆ santhe
SHOPPING FESTIVAL
FREE ENTRY
SANRANTHI SPECIAL EDITION
JAN 16 TO FEB 1 11 AM - 9 PM
Sri Hari Kalyana Mantapa
NEAR KIMS COLLEGE, BSK 2ND STAGE, BENGALURU
CONTACT - 8553836868, 9845597553
SCAN FOR LOCATION

DH DECCAN HERALD
THANKSGIVING
Book your Thanksgiving Advertisement in Deccan Herald for ANNUAL FEAST OF MOTHER OF PERPETUAL HELP ON 25th January 2026
@ 2100 with GST
(Size 4cmx5cm)
For more Details Contact:
Ph :080 - 45557163 | 164 | 9731810277

CONSTRUCTION MATERIALS FOR SALE
Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3&4 Bag Mixers, and Tractor Mounted 16 KVA D.G, Material hoist Electrical & Diesal 30 & 40 mts height, Cutting & Bar Bending Machines (Electrical) for sale.
Contact:
6360605636 / 8431164733

ಕೋರಮಂಗಲ ವೃತ್ತ: ಸಂಚಾರ ದುಸ್ತರ

ಐ.ಟಿ. ಹಬ್ ವ್ಯಾಪ್ತಿಯ ವಾಹನ ಸವಾರರಿಗೆ ನಿತ್ಯವೂ ಪಡಿಪಾಟಲು

• ಉಮೇಶಭಟ್ಟ ಪಿ.ಎಚ್.

ಬೆಂಗಳೂರು: ನಗರದ ಪೂರ್ವ ಭಾಗದಲ್ಲಿ ಐ.ಟಿ ಕಂಪನಿಗಳ ಸಂಖ್ಯೆ ಹೆಚ್ಚಾಗುತ್ತಿದಂತೆ ಸಂಚಾರ ದಟ್ಟಣೆ ಸಮಸ್ಯೆ ಬಿಗಡಾಯಿಸುತ್ತಲೇ ಇದೆ. ಈ ಭಾಗದಲ್ಲಿ ನಿತ್ಯ ಕಿ.ಮೀ. ವರೆಗೂ ವಾಹನಗಳು ರಸ್ತೆಯಲ್ಲೇ ನಿಂತಿರುವುದರಿಂದ ವಾಹನ ಸವಾರರು ಹೈರಾಣಾಗಿದ್ದಾರೆ.

ಹೊಸೂರು ಮಾರ್ಗದಲ್ಲಿ ತಮಿಳುನಾಡು, ಕೇರಳ ಕಡೆಗೆ ಸಂಪರ್ಕ ಕಲ್ಪಿಸುವ ಕೋರಮಂಗಲ ಭಾಗ, ಪ್ರಮುಖ ಐ.ಟಿ ಕಂಪನಿಗಳ ಹಬ್ ಆಗಿರುವ ಬೆಳ್ಳಂದೂರು–ಮಾರತ್‌ಹಳ್ಳಿ ಹೊರವರ್ತುಲ ರಸ್ತೆಯಲ್ಲಿ ಸಂಚಾರ ದಟ್ಟಣೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ.

ಆಡುಗೋಡಿಯಿಂದ ಆರಂಭಗೊಂಡು ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಬಡಾವಣೆ, ಬೆಳ್ಳಂದೂರು, ಮಾರತ್‌ಹಳ್ಳಿ ವರೆಗೂ ವಾಹನಗಳು ರಸ್ತೆಯಲ್ಲೇ ಹೆಚ್ಚು ಹೊತ್ತು ನಿಂತಿರುತ್ತವೆ. ಅದರಲ್ಲೂ ಕೋರಮಂಗಲದ ಸೇಂಟ್ ಜಾನ್ಸ್ ವೃತ್ತವನ್ನು ದಾಟಿ ಸಿಲ್ಕ್‌ಬೋರ್ಡ್ ಜಂಕ್ಷನ್ ತಲುಪುವ ಹೊತ್ತಿಗೆ ವಾಹನ ಸವಾರರು ಸುಸ್ತಾಗಿ ಹೋಗುತ್ತಾರೆ. ಬೆಳಿಗ್ಗೆ ಕಚೇರಿ ಆರಂಭಕ್ಕೂ ಮುನ್ನವೇ ಶುರುವಾಗುವ ವಾಹನಗಳ ಸಾಲು ರಾತ್ರಿವರೆಗೂ ಕಡಿಮೆ ಆಗುವುದಿಲ್ಲ.

ಸಂಚಾರ ಸಂಕಟ

ಕೋರಮಂಗಲ ವೃತ್ತದಲ್ಲಿ ದಟ್ಟಣೆ: ರೂಪೇನ ಅಗ್ರಹಾರದಿಂದ ಸಿಲ್ಕ್ ಬೋರ್ಡ್ ಜಂಕ್ಷನ್, ಮಡಿವಾಳ, ಕೋರ ಮಂಗಲದ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ವೃತ್ತ ದಾಟಿ ಆಡುಗೋಡಿವರೆಗಿನ 8ರಿಂದ 9 ಕಿ.ಮೀ. ಮಾರ್ಗದಲ್ಲಿನ ಸಂಚಾರ ದಟ್ಟಣೆ ವಾಹನ ಸವಾರರನ್ನು ಹೈರಾಣಾಗಿಸುತ್ತಿದೆ. ಶುಕ್ರವಾರ ಇಲ್ಲವೇ ರಜೆಯ ಮುನ್ನಾದಿನ ರಾತ್ರಿ 11 ಗಂಟೆಯಾದರೂ ದಟ್ಟಣೆ ಕರಗುವುದಿಲ್ಲ.

ಸೇಂಟ್ ಜಾನ್ಸ್ ವೃತ್ತದಲ್ಲಿ ಸಿಗ್ನಲ್ ದಾಟಿ ಹೋಗಲು ಕನಿಷ್ಠ 8ರಿಂದ 10 ನಿಮಿಷ ಕಾಯಬೇಕು. ಅದರಲ್ಲೂ ಬಲ ಬದಿಯಲ್ಲಿ ಚಲಿಸುವವರಿಗೆ ಕೆಲವೊಮ್ಮೆ ಇನ್ನೂ ಹೆಚ್ಚು ಸಮಯ ಬೇಕಾಗುತ್ತದೆ. ಈ ಮಾರ್ಗದಲ್ಲಿ ಆಂಬುಲೆನ್ಸ್ ಏನಾದರೂ ಸಿಲುಕಿಕೊಂಡರೆ, ಅಲ್ಲಿಂದ ಹೊರಬರಲು ಚಾಲಕ ಹರಸಾಹಸ ಪಡಬೇಕಾಗುತ್ತದೆ.

‘ಮೂರು ದಶಕಗಳಿಗೆ ಹೋಲಿಸಿದರೆ ವಾಹನಗಳ ಸಂಖ್ಯೆ ಈಗ ಮೂರ್ನಾಲ್ಕು ಪಟ್ಟು ಹೆಚ್ಚಾಗಿದೆ. ಆದರೆ, ರಸ್ತೆಗಳ ಅಗಲ ಮಾತ್ರ ಅಷ್ಟೇ ಇದೆ. ಸೇಂಟ್ ಜಾನ್ಸ್ ವೃತ್ತದಲ್ಲಂತೂ ದಟ್ಟಣೆ ಹೆಚ್ಚಾಗಿದೆ. ಒಂದು ಕಡೆ ಹೆಚ್ಚು ಅಗಲದ ರಸ್ತೆ ಇದ್ದರೆ, ಇನ್ನೊಂದು ಕಡೆ ಕಿರಿದಾಗಿದೆ. ನಾಲ್ಕೂ ಕಡೆಗಳಿಂದ ವಾಹನಗಳು ಬರುತ್ತವೆ. ಇಲ್ಲಿ ಏಕಮುಖ ರಸ್ತೆ ಪ್ರಯೋಗ ಮಾಡಿದರೆ ದಟ್ಟಣೆಯನ್ನು ಶೇ 25ರಷ್ಟಾದರೂ ತಪ್ಪಿಸಬಹುದು. ಇಲ್ಲದೇ ಇದ್ದರೆ ಮೇಲ್ಸೇತುವೆ ನಿರ್ಮಿಸಿದರೆ ಆಡುಗೋಡಿವರೆಗೂ ದಟ್ಟಣೆ ತಗ್ಗಿಸಬಹುದು’ ಎನ್ನುತ್ತಾರೆ ಸ್ಥಳೀಯರು.

ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಕಡೆ ತಿರುಗುವಾಗ ಇರುವ ಅಡೆ–ತಡೆಯನ್ನು ನಿವಾರಿಸಿ, ವೃತ್ತವನ್ನು ಸಂಚಾರಿಸ್ನೇಹಿಯಾಗಿ ಅಭಿವೃದ್ಧಿಪಡಿಸಬೇಕು. ವೃತ್ತದ ಸಮೀಪದಲ್ಲಿಯೇ ಬಸ್ ನಿಲ್ದಾಣ ಇದ್ದರೂ ಅಲ್ಲಿ ಅನಗತ್ಯವಾಗಿ ಬಸ್ ಬೇ ನಿರ್ಮಿಸಿ ವಾಹನಗಳ ಸಾಲು ನಿಲ್ಲುವುದನ್ನು ತಪ್ಪಿಸಬೇಕು ಎನ್ನುವುದು ಸ್ಥಳೀಯರ ಸಲಹೆ.

ಯೂ ಟರ್ನ್ ಸಮಸ್ಯೆ: ಆಡುಗೋಡಿಯ ಯೂಕೋ ಬ್ಯಾಂಕ್ ಅಕ್ಕಪಕ್ಕದ ಪ್ರದೇಶದಲ್ಲಿ ಪಬ್‌ಗಳ ಸಂಖ್ಯೆ ಅಧಿಕ. ಎದುರಿನಲ್ಲೇ ಮಾಲ್ ಕೂಡ ಇದೆ. ವಾರಾಂತ್ಯ ಇಲ್ಲವೇ ಹಬ್ಬದ ಹಿಂದಿನ ದಿನ ಇಲ್ಲಿ ದಟ್ಟಣೆ ಹೆಚ್ಚಾಗಿರುತ್ತದೆ. ಇಲ್ಲಿ ಯೂ ಟರ್ನ್ ಪಡೆಯಲು ಕನಿಷ್ಠ 2 ಕಿ.ಮೀ. ದೂರವನ್ನು ಸವಾರರು ಕ್ರಮಿಸಬೇಕು. ಸೇಂಟ್ ಜಾನ್ಸ್ ವೃತ್ತದವರೆಗೆ ಬರಬೇಕಾದ ಸ್ಥಿತಿ ಇರುವುದರಿಂದ ಸಹಜವಾಗಿಯೇ ದಟ್ಟಣೆ ಹೆಚ್ಚುತ್ತದೆ.

ಹೊರ ವರ್ತುಲ ರಸ್ತೆ: ಮಡಿವಾಳ ದಾಟಿ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಶುರುವಾಗುವ ವರ್ತುಲ ರಸ್ತೆ ಪ್ರವೇಶಿಸಿದರೆ ದಟ್ಟಣೆ ಪ್ರಮಾಣ ಇನ್ನೂ ಹೆಚ್ಚುತ್ತದೆ. ಬೆಳ್ಳಂದೂರು, ಅಗರ, ಇಬ್ಬಲೂರು ಮಾರ್ಗವಾಗಿ ಮಾರತ್‌ಹಳ್ಳಿವರೆಗೂ ಇದು ಮುಂದುವರಿಯುತ್ತದೆ. ಇಲ್ಲಿ ಐ.ಟಿ ಕಂಪನಿಗಳು ಅಧಿಕ ಸಂಖ್ಯೆಯಲ್ಲಿವೆ. ನಗರ ಪ್ರವೇಶಿಸುವುದನ್ನು ತಪ್ಪಿಸಲು ವಾಹನ ಸವಾರರು ಹೆಚ್ಚಾಗಿ ಹೊರ ವರ್ತುಲ ರಸ್ತೆ ಬಳಸುವುದರಿಂದ ಮಧ್ಯಾಹ್ನ 12 ಗಂಟೆಯಾದರೂ ದಟ್ಟಣೆ ಇದ್ದೇ ಇರುತ್ತದೆ.

ದೇವರಬಿಸನಹಳ್ಳಿ, ಕಾಡುಬಿಸನಹಳ್ಳಿ ಜಂಕ್ಷನ್‌ಗಳು, ಸರ್ವಿಸ್ ರಸ್ತೆಯಲ್ಲಿ ವಾಹನಗಳು ಸಾಲು ಗಟ್ಟಿ ನಿಧಾನಗತಿಯಲ್ಲಿ ಸಂಚರಿಸುತ್ತವೆ. ಈ ಭಾಗದಲ್ಲಿ ಸಂಚಾರ ಪೊಲೀಸರನ್ನು ಕಟ್ಟುನಿಟ್ಟಾಗಿ ನಿಯೋಜಿಸಿ ದಟ್ಟಣೆ ನಿವಾರಣೆಗೆ ಮುಂದಾಗಬೇಕು ಎಂಬುದು ಸ್ಥಳೀಯರ ಒತ್ತಾಯ.



ಹೊಸೂರು ರಸ್ತೆಯಲ್ಲಿ ದಟ್ಟಣೆಯಿಂದಾಗಿ ನಿಧಾನವಾಗಿ ಸಾಗಿದ ವಾಹನಗಳು ಚಿತ್ರ: ಪ್ರಶಾಂತ್ ಎಚ್‌.ಜಿ.



ಕೋರಮಂಗಲದಲ್ಲಿ ಕಚೇರಿ ಇರುವುದರಿಂದ ಬೆಳಿಗ್ಗೆ ಬರುವ ಹೊತ್ತಿಗೆ ಸೇಂಟ್ ಜಾನ್ಸ್ ವೃತ್ತದಲ್ಲಿ ದಟ್ಟಣೆ ಇರುತ್ತದೆ. ಸಂಜೆ ವೇಳೆಯಂತೂ ಇದು ಮೂರು ಪಟ್ಟು ಹೆಚ್ಚುತ್ತದೆ. ಸಂಚಾರ ನಿರ್ವಹಣೆಗೆ ಇಲ್ಲಿ ವಿಶೇಷ ಒತ್ತು ನೀಡಲೇಬೇಕು
ತ್ರಿಷ್ಮಾ, ಖಾಸಗಿ ಸಂಸ್ಥೆಯ ಉದ್ಯೋಗಿ



ಸಿಂಗಸಂದ್ರದ ಮನೆಯಿಂದ ಕೋರಮಂಗಲಕ್ಕೆ 6 ಕಿ.ಮೀ. ಇದೆ. ಆದರೂ ಕಚೇರಿಗೆ ಪತ್ನಿಯನ್ನು ಬಿಡಲು 1 ಗಂಟೆ ಬೇಕಾಗುತ್ತದೆ. ಮಡಿವಾಳದಲ್ಲಿ ಯು ಟರ್ನ್ ಇದ್ದರೂ ಸಂಚಾರಕ್ಕೆ ಅವಕಾಶ ನೀಡದಿರುವುದರಿಂದ ದಟ್ಟಣೆ ಹೆಚ್ಚಾಗಿದೆ
ಶ್ರೀನಿವಾಸ್, ವಿಪ್ರೊ ಉದ್ಯೋಗಿ

‘ಮೆಟ್ರೊ ಕಾಮಗಾರಿ ಬೇಗ ಮುಗಿಸಿ’

ಸಿಲ್ಕ್‌ಬೋರ್ಡ್‌ನಿಂದ ಎಚ್‌ಎಸ್‌ಆರ್ ಲೇಔಟ್, ಅಗರ, ಇಬ್ಬಲೂರು, ಬೆಳ್ಳಂದೂರು, ಕಾಡುಬೀಸನಹಳ್ಳಿ, ಮಾರತ್‌ಹಳ್ಳಿ ಮಾರ್ಗವಾಗಿ ಹೆಬ್ಬಾಳವರೆಗೂ ಸಂಪರ್ಕ ಕಲ್ಪಿಸುವ ನೀಲಿ ಮಾರ್ಗದ ಮೆಟ್ರೊ ಕಾಮಗಾರಿ ಆರಂಭವಾಗಿ ಐದು ವರ್ಷವಾದರೂ ಮುಗಿದಿಲ್ಲ. ಈ ವರ್ಷ ಮೆಟ್ರೊ ಮಾರ್ಗ ಭಾಗಶಃ ಆರಂಭವಾದರೆ ಹೊರ ವರ್ತುಲ ರಸ್ತೆಯಲ್ಲಿ ಸಂಚಾರ ದಟ್ಟಣೆ ಕಡಿಮೆಯಾಗಬಹುದು.

‘ಇಬ್ಬಲೂರು ಬಳಿ ಸದಾ ದಟ್ಟಣೆ ಇರುತ್ತದೆ. ಈ ಮಾರ್ಗದಲ್ಲಿ ಐ.ಟಿ ಉದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುತ್ತಾರೆ. ಐದು ವರ್ಷವಾದರೂ ಮೆಟ್ರೊ ಕಾಮಗಾರಿ ಮುಗಿಯದ ಕಾರಣ ಸ್ವಂತ ವಾಹನ ಬಳಸುವವರ ಪ್ರಮಾಣ ಹೆಚ್ಚಾಗಿದೆ. ಇದರಿಂದ ಸದಾ ವಾಹನಗಳ ಸಾಲು ನೋಡುವಂತಾಗಿದೆ’ ಎನ್ನುತ್ತಾರೆ ಇಬ್ಬಲೂರಿನ ವ್ಯಾಪಾರಿ ವೆಂಕಟೇಶ್.

ಮಾರತ್‌ಹಳ್ಳಿ ಮಾರ್ಗದಲ್ಲೂ ಅಡೆ–ತಡೆ

ಮಾರತ್‌ಹಳ್ಳಿಯಿಂದ ಎಚ್‌ಎಎಲ್ ಕಡೆಗೆ ಹೋಗುವ ಮುಖ್ಯರಸ್ತೆಯಲ್ಲಿ ಸಂಚಾರ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಿಲ್ಲ. ಬಿಎಂಟಿಸಿ ಬಸ್‌ಗಳನ್ನು ನಿಲ್ದಾಣ ಬರುವುದಕ್ಕೂ ಮುನ್ನವೇ ನಿಲ್ಲಿಸಲಾಗುತ್ತಿದೆ. ದೊಡ್ಡನೆಕ್ಕುಂದಿ ಕ್ರಾಸ್ ನಿಲ್ದಾಣದಲ್ಲೂ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ.

ಎಚ್‌ಎಎಲ್‌ಗೆ ಹೊಂದಿಕೊಂಡಿರುವ ರಸ್ತೆಯ ಪಾದಚಾರಿ ಮಾರ್ಗದ ನಿರ್ವಹಣೆಯೂ ಚೆನ್ನಾಗಿಲ್ಲ. ಅಲ್ಲಲ್ಲಿ ಕಲ್ಲುಗಳು ಎದ್ದಿದ್ದು, ಜನರು ಮುಖ್ಯರಸ್ತೆಯಲ್ಲೇ ನಡೆದುಹೋಗುವ ವಾತಾವರಣವಿದೆ.

ಸಂಚಾರ ದಟ್ಟಣೆ ಎಲ್ಲೆಲ್ಲಿ?

- ಆಡುಗೋಡಿ ಚೆಕ್‌ಪೋಸ್ಟ್
- ಕೋರಮಂಗಲ ಸೇಂಟ್ ಜಾನ್ಸ್ ವೃತ್ತ
- ಮಡಿವಾಳ ಅಂಡರ್‌ಪಾಸ್
- ಬೆಳ್ಳಂದೂರು ಸರ್ವಿಸ್ ರಸ್ತೆ
- ಕಾಡುಬಿಸನಹಳ್ಳಿ ಜಂಕ್ಷನ್
- ಮಾರತ್‌ಹಳ್ಳಿಯ ಗಿರಿಯಾಸ್ ಎದುರು

ಆರೋಪಿಗಳ ಮನೆ ಊಟಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಆರೋಪಿಗಳಾಗಿ ಜೈಲಿನಲ್ಲಿರುವ ಪವಿತ್ರಾ ಗೌಡ, ನಾಗರಾಜ್ ಮತ್ತು ಲಕ್ಷ್ಮಣ್‌ಗೆ ವಾರಕೊಮ್ಮೆ ಮನೆಯಿಂದ ಊಟ ತರಿಸಿಕೊಳ್ಳಲು ಅನುಮತಿ ನೀಡಿದ್ದ ಸೆಷನ್ಸ್ ನ್ಯಾಯಾಲಯದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.



ಪವಿತ್ರಾಗೌಡ

‘ವಾರಕ್ಕೊಮ್ಮೆ ಮನೆ ಊಟಕ್ಕೆ ಅವಕಾಶ ಕಲ್ಪಿಸಿ ನಗರದ 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ 2026ರ ಇದೇ 12ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಜೈಲು ಆಹಾರ ಗುಣಮಟ್ಟದ ಬಗ್ಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ (ಎಫ್‌ಎಸ್‌ಎಸ್‌ಎಐ) ಪ್ರಾಧಿಕಾರ ನಾಲ್ಕು ಸ್ಟಾರ್ ಪ್ರಮಾಣಪತ್ರ ನೀಡಿದೆ. ವೈದ್ಯರು ಸೂಚಿಸಿದರೆ ಮಾತ್ರವೇ ಮನೆ ಊಟಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ಆರೋಪಿಗಳಿಗೆ ಯಾವುದೇ ವಿಶೇಷ ಸೌಲಭ್ಯ ನೀಡಬಾರದು ಎಂಬ ಸುಪ್ರೀಂ ಕೋರ್ಟ್ ಆದೇಶವಿದೆ. ಆದರೆ, ಈ ಪ್ರಕರಣದಲ್ಲಿ ಮೂವರು ಆರೋಪಿಗಳಿಗೆ ವಾರಕ್ಕೊಮ್ಮೆ ಮನೆ ಊಟ ತರಿಸಿಕೊಳ್ಳುವುದಕ್ಕೆ ಸೆಷನ್ಸ್ ನ್ಯಾಯಾಲಯ ಜೈಲು ಅಧಿಕಾರಿಗಳಿಗೆ ನಿರ್ದೇಶಿಸಿದ್ದು, ಈ ಆದೇಶಕ್ಕೆ ತಡೆ ನೀಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಅರ್ಜಿದಾರರ ಪರ ವಕೀಲ ಎಸ್.ಸುನಿಲ್ ಕುಮಾರ್, ‘ಪವಿತ್ರಾ ಗೌಡ ಹೃದ್ರೋಗದಿಂದ ಬಳಲುತ್ತಿದ್ದು ಮನೆ ಊಟಕ್ಕೆ ಅವಕಾಶ ನೀಡಬೇಕು’ ಎಂದು ಕೋರಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಸೆಷನ್ಸ್ ಕೋರ್ಟ್ ಆದೇಶಕ್ಕೆ ತಡೆ ನೀಡಿತು. ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಚೆಸ್: ವೆಂಕಟನಾಗ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ವತಿಯಿಂದ ನಡೆದ ಬೆಂಗಳೂರು ನಗರ ಜಿಲ್ಲಾ ಮಟ್ಟದ 15 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಲೇಕ್ ಮಾಂಟ್‌ಫೋರ್ಟ್ ಶಾಲೆಯ ವೆಂಕಟನಾಗ ಕಾರ್ತಿಕ್ ಮಲ್ಲಾದಿ (ರೇಟಿಂಗ್: 1834) ಎಂಟು ಸುತ್ತುಗಳಿಂದ ಸಂಭವನೀಯ ಎಂಟು ಅಂಕ ಗಳಿಸಿ ಚಾಂಪಿಯನ್ ಪಟ್ಟ ಪಡೆದರು.

ಯುನೈಟೆಡ್ ವರ್ಲ್ಡ್ ಅಕಾಡೆಮಿ ಮತ್ತು ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ಈ ಟೂರ್ನಿ ಭಾನುವಾರ ಮುಕ್ತಾಯಗೊಂಡಿತು. ನ್ಯೂ ಹೊರೈಝನ್ ಗುರುಕುಲದ ಅರ್ಣವ್ ಮಂಚೆ (1856) ಒಟ್ಟು 7 ಅಂಕ ಸಂಗ್ರಹಿಸಿ ಬೆಳ್ಳಿ ಗೆದ್ದರು.

ಬಾಲಕಿಯರ ವಿಭಾಗದಲ್ಲಿ ಇಂದುಶೀತಲಾ ಎನ್. (ರೇಟಿಂಗ್: 1679) ಆರು ಸುತ್ತುಗಳಿಂದ ಐದು ಅಂಕ ಗಳಿಸಿ ಮೊದಲಿಗರಾದರು. ಕೃಪಾ ಎಸ್.ಉಕ್ಕಲಿ (1861) ಇಷ್ಟೇ ಅಂಕ ಗಳಿಸಿದರೂ, ಕಡಿಮೆ ಟೈಬ್ರೇಕರ್‌ನಿಂದಾಗಿ ಎರಡನೇ ಸ್ಥಾನ ಗಳಿಸಿದರು.

ಏಳು ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲಿ ಯುಕೆಜಿ ವಿದ್ಯಾರ್ಥಿನಿ ರಿಹಾನ್ವಿ ಮುನಾಗಲ (5/5) ಮೊದಲ ಸ್ಥಾನ ಮತ್ತು ಸಾಯಿ ರಕ್ಷಾ (4/5) ಎರಡನೇ ಸ್ಥಾನ ಪಡೆದಳು.

ಬಾಲಕರ ವಿಭಾಗದಲ್ಲಿ ಸಾತ್ವಿಕ್ ಆರ್.ಭಟ್ (7/7) ಅಜೇಯ ಸಾಧನೆಯೊಡನೆ ಚಿನ್ನ ಮತ್ತು ಸಾಯಿಷ್ಣು ಸೂರ್ಯ ಸಿ. (6/7) ಎರಡನೇ ಬೆಳ್ಳಿ ಗೆದ್ದನು.

ಚಿಟಿಕೆ ಸುದ್ದಿ

ನವನರಸಿಂಹ ವಜ್ರಕವಚ ದೇಣಿಗೆ

ಬೆಂಗಳೂರು: ‘ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸಾವನದುರ್ಗದ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನಕ್ಕೆ 30 ಕೆ.ಜಿ. ಬೆಳ್ಳಿಯಲ್ಲಿ ತಯಾರಿಸಿದ ನವನರಸಿಂಹ ವಜ್ರಕವಚವನ್ನು ದೇಣಿಗೆಯಾಗಿ ನೀಡಲಾಗುವುದು’ ಎಂದು ಶ್ರೀಲಕ್ಷ್ಮೀನರಸಿಂಹಸ್ವಾಮಿ ಸೇವಾ ಟ್ರಸ್ಟ್‌ನ ಅಧ್ಯಕ್ಷ ಶ್ರೀನಿವಾಸಮೂರ್ತಿ ತಿಳಿಸಿದರು.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜ. 28ರಂದು ನಡೆಯುವ ಸಮಾರಂಭದಲ್ಲಿ ನವನರಸಿಂಹ ವಜ್ರಕವಚವನ್ನು ನೀಡಲಾಗುತ್ತದೆ. ಕಾರ್ಯಕ್ರಮದಲ್ಲಿ ನಂಜಾವಧೂತ ಸ್ವಾಮೀಜಿ, ಕಾಂಗ್ರೆಸ್ ನಾಯಕ ಕೆ.ಎಂ. ನಾಗರಾಜ್, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರದ ಸಚಿವ ಎಚ್.ಡಿ. ಕುಮಾರಸ್ವಾಮಿ, ಶಾಸಕ ಬಾಲಕೃಷ್ಣ, ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ.ಸಿ.ಎನ್. ಮಂಜುನಾಥ್, ಸಚಿವ ರಾಮಲಿಂಗಾರೆಡ್ಡಿ ಭಾಗವಹಿಸಲಿದ್ದಾರೆ’ ಎಂದರು. ಟ್ರಸ್ಟ್ ಖಜಾಂಚಿ ಕೆ. ಲಕ್ಷ್ಮೀಪತಿ, ಕಾರ್ಯದರ್ಶಿ ಎನ್. ರಶ್ಮಿ ಸುದ್ದಿಗೋಷ್ಠಿಯಲ್ಲಿದ್ದರು.

ನಗರಸಭೆಗೆ ಹೆಚ್ಚುವರಿ ಸದಸ್ಯರ ನೇಮಕ

ನೆಲಮಂಗಲ: ನೆಲಮಂಗಲ ಪುರಸಭೆಯು ನಗರಸಭೆಯಾಗಿ ಮೇಲ್ದರ್ಜೆಗೇರಿದ್ದು, ಇದಕ್ಕೆ ಸೇರ್ಪಡೆಯಾಗಿರುವ ಗ್ರಾಮ ಪಂಚಾಯಿತಿಗಳಿಂದ ನಾಮನಿರ್ದೇಶಿತ ಸದಸ್ಯರನ್ನು ನೇಮಿಸಲಾಗಿದೆ.

ಹಾಲಿ ಇರುವ ನಾಮನಿರ್ದೇಶಿತ ಸದಸ್ಯರ ಬದಲಾಗಿ ಹೊಸದಾಗಿ ನೇಮಕಮಾಡಲು ಜಿಲ್ಲಾಧಿಕಾರಿಗಳು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದರು. ಅದರಂತೆ, ವಾಜರಹಳ್ಳಿಯಿಂದ ಬಿ.ಎಸ್.ಮುನಿರಾಜು, ಅರಿಶಿನಕುಂಟೆಯಿಂದ ಎಂ.ಲಕ್ಷ್ಮೀನಾರಾಯಣ್, ಬಸವನಹಳ್ಳಿಯಿಂದ ಬಿ.ಎನ್.ನರಸಿಂಹಮೂರ್ತಿ, ವಿಶ್ವೇಶ್ವರಪುರದಿಂದ ಆರ್.ರಂಗಸ್ವಾಮಿ ಅವರನ್ನು ನೇಮಿಸಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಭಾರತಕ್ಕೆ ವಾಪಸ್ ಆಗಲು ಸೂಚನೆ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮುನ್ನೆಚ್ಚರಿಕಾ ಕ್ರಮವಾಗಿ ಅಲ್ಲಿ ನಿಯೋಜಿಸಲಾದ ಅಧಿಕಾರಿಗಳ ಕುಟುಂಬಗಳಿಗೆ ತವರಿಗೆ ವಾಪಸಾಗುವಂತೆ ಭಾರತ ಮಂಗಳವಾರ ಸಲಹೆ ನೀಡಿದೆ.

ಬಾಂಗ್ಲಾದೇಶದಲ್ಲಿ ಸಂಸತ್ ಚುನಾವಣೆಗೆ ಒಂದು ವಾರವಿದ್ದು, ಅದಕ್ಕೂ ಮುಂಚೆ ಭಾರತ ಈ ನಿರ್ಧಾರ ಕೈಗೊಂಡಿದೆ. ಆದಾಗ್ಯೂ, ರಾಜತಾಂತ್ರಿಕರ ಕುಟುಂಬದವರು ಮತ್ತು ಇತರ ಅಧಿಕಾರಿಗಳು ಯಾವಾಗ ಭಾರತಕ್ಕೆ ಮರಳುತ್ತಾರೆ ಎಂದು ಇನ್ನೂ ತಿಳಿದುಬಂದಿಲ್ಲ.

ಹಣಕಾಸು ಆಯೋಗದ ವರದಿ ಶೀಘ್ರದಲ್ಲೇ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಅನುಗುಣವಾಗಿ ಶಿಫಾರಸುಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ರಾಜ್ಯದ 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣ ಸ್ವಾಮಿ ತಿಳಿಸಿದರು.

ಜಿಬಿಎ ಹಾಗೂ ಐದು ನಗರ ಪಾಲಿಕೆಗಳು ಮತ್ತು 369 ವಾರ್ಡ್‌ಗಳಿಗೆ ಅನುದಾನ ಒದಗಿಸುವ ಕುರಿತಾಗಿ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಲಹೆಗಳನ್ನು ಕ್ರೋಡೀಕರಿಸಿ ಶಿಫಾರಸುಗಳನ್ನು ಒಳಗೊಂಡ ವರದಿ ಸಲ್ಲಿಸಲಾಗುವುದು ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಐದು ನಗರ ಪಾಲಿಕೆಗಳೊಂದಿಗೆ ಈಗಾಗಲೇ ಸಮಾಲೋಚನೆ ನಡೆಸಲಾಗಿದ್ದು, ಕೂಲಂಕಷ ಚರ್ಚೆ ಮೂಲಕ ಸಲಹೆಗಳನ್ನು ಪಡೆಯಲಾಗಿದೆ. ಕೆಲವು ವಾರ್ಡ್‌ಗಳಿಗೆ ಭೇಟಿ ನೀಡಿ, ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಲಾಗಿದೆ ಎಂದು ತಿಳಿಸಿದರು.

ಆಯಾ ಪಾಲಿಕೆಗಳ ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕಿಸಿ, ಜಿಬಿಎ ಹಾಗೂ ಐದು ನಗರ ಪಾಲಿಕೆಗಳಿಂದ ಲಭ್ಯವಾಗಿರುವ ಸಲಹೆಗಳ ಆಧಾರದಲ್ಲಿ ಶಿಫಾರಸುಗಳನ್ನು ಸಿದ್ಧಪಡಿಸಲಾಗುವುದು ಎಂದರು. ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಮಾತನಾಡಿ, ‘ಪಶ್ಚಿಮ ನಗರ ಪಾಲಿಕೆಯಲ್ಲಿ 112 ವಾರ್ಡ್‌ಗಳಿದ್ದು, ಬಹುತೇಕ ವಸತಿ ಪ್ರದೇಶಗಳೇ ಇವೆ. ಇಲ್ಲಿ ತೆರಿಗೆ ಸಂಗ್ರಹ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ. ಆಯಾ ಪಾಲಿಕೆಗಳಲ್ಲಿ ಸಂಗ್ರಹವಾಗುವ ತೆರಿಗೆಯನ್ನು ಬೇರೆ ಪಾಲಿಕೆಗಳಿಗೆ ಯಾವ ರೀತಿಯಲ್ಲಿ ವರ್ಗಾಯಿಸಬೇಕು ಎಂಬುದನ್ನು ಅವಲೋಕಿಸಲಾಗುತ್ತಿದೆ’ ಎಂದು ಹೇಳಿದರು.

ಹಣಕಾಸು ಆಯೋಗದ ಸದಸ್ಯ ಮೊಹಮ್ಮದ್ ಸನಾವುಲ್ಲಾ ಮಾತನಾಡಿ, ‘ಮೂಲಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ ಕಾರ್ಯನಿರ್ವಹಿಸಬೇಕು’ ಎಂದರು.

ಅನಧಿಕೃತ ಫ್ಲೆಕ್ಸ್, ಬ್ಯಾನರ್ ತೆರವು


ಬೆಂಗಳೂರು: ಪರವಾನಗಿ ಪಡೆಯದೆ ಅನಧಿಕೃತವಾಗಿ ಹಾಕಲಾಗಿರುವ ಫ್ಲೆಕ್ಸ್, ಬ್ಯಾನರ್ ಮತ್ತು ಹೋರ್ಡಿಂಗ್‌ಗಳ ತೆರವು ಕಾರ್ಯಾಚರಣೆಯನ್ನು ಬೆಂಗಳೂರು ಉತ್ತರ ನಗರ ಪಾಲಿಕೆಯ ಅಧಿಕಾರಿಗಳು ಆರಂಭಿಸಿದ್ದು, ಮಂಗಳವಾರ ಒಂದೇ ದಿನ 473 ಫ್ಲೆಕ್ಸ್, ಬ್ಯಾನರ್ ಮತ್ತು ಹೋರ್ಡಿಂಗ್‌ಗಳನ್ನು ತೆರವುಗೊಳಿಸಿದ್ದಾರೆ.

ಕೊಡಿಗೆಹಳ್ಳಿಯಲ್ಲಿ ಅತಿ ಹೆಚ್ಚು 280 ಫ್ಲೆಕ್ಸ್, ಬ್ಯಾನರ್, ಹೋರ್ಡಿಂಗ್‌ಗಳನ್ನು ತೆರವುಗೊಳಿಸಲಾಗಿದೆ. ಉಳಿದಂತೆ ಟಿ. ದಾಸರಹಳ್ಳಿಯಲ್ಲಿ 54, ಥಣಿಸಂದ್ರದಲ್ಲಿ 45, ಜಕ್ಕೂರಿನಲ್ಲಿ 38, ಅಟ್ಟೂರಿನಲ್ಲಿ 35, ಯಲಹಂಕ ಸ್ಯಾಟಲೈಟ್ ಟೌನ್‌ನಲ್ಲಿ 21 ಸೇರಿ ಒಟ್ಟಾರೆ 473 ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸಿ ದಾಖಲೆ ನಿರ್ಮಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಮ್ ಮಾಧವ್ ಚುನಾವಣಾ ಉಸ್ತುವಾರಿ

ನವದೆಹಲಿ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳ ಬಿಜೆಪಿ ಚುನಾವಣಾ ಉಸ್ತುವಾರಿಯಾಗಿ ಪಕ್ಷದ ಮಾಜಿ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಮ್ ಮಾಧವ್ ಅವರನ್ನು ಪಕ್ಷವು ಮಂಗಳವಾರ ರಾತ್ರಿ ನೇಮಿಸಿದೆ.

ಸಹ ಉಸ್ತುವಾರಿಗಳಾಗಿ ರಾಜಸ್ಥಾನ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಸತೀಶ್ ಪುನಿಯಾ ಹಾಗೂ ಮಹಾರಾಷ್ಟ್ರದ ಶಾಸಕ ಸಂಜಯ್ ಉಪಾಧ್ಯಾಯ ಅವರನ್ನು ಬಿಜೆಪಿ ನೂತನ ಅಧ್ಯಕ್ಷ ನಿತಿನ್ ನಬಿನ್ ನೇಮಕ ಮಾಡಿದ್ದಾರೆ. ಐದು ಪಾಲಿಕೆಗಳಿಗೆ ಜೂನ್ ಅಂತ್ಯದೊಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ಐದು ಪಾಲಿಕೆಗಳನ್ನು ಕೈವಶ ಮಾಡಿಕೊಳ್ಳಬೇಕು ಎಂದು ಪಣ ತೊಟ್ಟಿರುವ ಕಮಲ ಪಾಳಯವು ಅದಕ್ಕಾಗಿ ಸಿದ್ಧತೆ ಆರಂಭಿಸಿದೆ. ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ನಬಿನ್ ಅವರು ಚುನಾವಣಾ ಉಸ್ತುವಾರಿಗಳನ್ನು ನೇಮಿಸಿದ್ದಾರೆ.



ದಕ್ಷಿಣ ವಲಯ ಅಂತರ ವಿ.ವಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜೈನ್ ವಿಶ್ವವಿದ್ಯಾಲಯ ಪುರುಷರ ತಂಡ. (ನಿಂತವರು) ಎಡದಿಂದ;ದೇಶ್ ಪೂವಯ್ಯ, ಅನಂತ್ ಎಚ್‌.ಎಂ, ಸಪನ್ ಅಯ್ಯಪ್ಪ, ವಚನ್ ಅಯ್ಯಪ್ಪ, ಗೋಪಾಲ್ ಎಚ್‌. ನಾಯ್ಕ್ (ಮ್ಯಾನೇಜರ್),ವಿಜಯಕೃಷ್ಣ ಟಿ. (ಕೋಚ್), ಆರ್ಯನ್ ಉತ್ತಪ್ಪ, ರೋನಕ್ ತಿಮ್ಮಯ್ಯ, ಧನುಷ್ ಬಿ.ಎಚ್‌, ಯಶವಂತ್ ಕೆ.ಎಂ, ಉಜ್ವಲ್ ಅಪ್ಪಚ್ಚು, ಬಿಪಿನ್ ಬಿ.ಆರ್‌, ಮೊಹಮ್ಮದ್ ಮಜ್‌ (ಕುಳಿತವರು)ತರುಣ್ ಗಣಪತಿ, ಗೌರವ್ ಗಣಪತಿ, ವಚನ್ ಎಚ್‌.ಎ, ಮೌರ್ಯ ತಿಮ್ಮಯ್ಯ, ಲಿವಿನ್ ಸಿ.ಪಿ, ಆಕರ್ಷ್ ಬಿದ್ದಪ್ಪ, ವರುಣ್ ಮಾದಪ್ಪ

ಹಾಕಿ: ಜೈನ್ ವಿ.ವಿ ಚಾಂಪಿಯನ್

ಬೆಂಗಳೂರು: ನಗರದ ಜೈನ್ ವಿಶ್ವವಿದ್ಯಾಲಯದ ಪುರುಷರ ತಂಡವು ಚೆನ್ನೈನ ಸತ್ಯಭಾಮ ವಿಶ್ವವಿದ್ಯಾಲಯದಲ್ಲಿ ಸೋಮವಾರ ಮುಕ್ತಾಯಗೊಂಡ ದಕ್ಷಿಣ ವಲಯ ಅಂತರ ವಿ.ವಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಫೈನಲ್ ಹಣಾಹಣಿಯಲ್ಲಿ ಜೈನ್ ತಂಡವು 1–0 ಗೋಲಿನಿಂದ ತಮಿಳುನಾಡಿನ ತಿರುನಲ್ವೇಲಿ ಎಂ.ಎಸ್. ವಿ.ವಿ ತಂಡವನ್ನು ಮಣಿಸಿತು. ಈ ಗೆಲುವಿನೊಂದಿಗೆ ಜೈನ್ ವಿವಿ ಹಾಕಿ ತಂಡವು ಅಖಿಲ ಭಾರತ ವಿಶ್ವವಿದ್ಯಾಲಯ ಹಾಕಿ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯಿತು.

ಯುಪಿಐ ದುರ್ಬಳಕೆ: ಮೂವರ ಅಮಾನತು

ಬೆಂಗಳೂರು: ‘ಬಿಎಂಟಿಸಿಯ ಅಧಿಕೃತ ಯುಪಿಐ ಸ್ಕ್ಯಾನರ್ ಬದಲಿಗೆ ವೈಯಕ್ತಿಕ ಸ್ಕ್ಯಾನರ್ ಬಳಸಿ ಟಿಕೆಟ್ ನೀಡಿ, ಸಾರ್ವಜನಿಕ ಹಣ ದುರುಪಯೋಗ ಮಾಡಿದ ಆರೋಪದ ಮೇಲೆ ಮೂವರು ನಿರ್ವಾಹಕರನ್ನು ಕರ್ತವ್ಯದಿಂದ ಅಮಾನತುಗೊಳಿಸಲಾಗಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

‘2025ರ ಡಿಸೆಂಬರ್‌ನಲ್ಲಿ ಬಿಎಂಟಿಸಿ ಅಧಿಕಾರಿಗಳು ನಡೆಸಿದ್ದ ತಪಾಸಣೆ ವೇಳೆ ಈ ಕೃತ್ಯ ಬೆಳಕಿಗೆ ಬಂದಿದೆ. ನಿರ್ವಾಹಕರಾದ ಸುರೇಶ್ ₹47,257, ಅಶ್ವಾಕ್ ಖಾನ್ ₹ 3,206 ಹಾಗೂ ಚಾಲಕ ಕಮ್ ನಿರ್ವಾಹಕ ಮಂಚೇಗೌಡ ₹ 54,358 ಹಣ ದುರುಪಯೋಗ ಮಾಡಿದ್ದಾರೆ. ಈಗಾಗಲೇ ಆರೋಪಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿದ್ದಾರೆ.

‘ಬಿಎಂಟಿಸಿಯಿಂದ ಸದ್ಯದಲ್ಲಿಯೇ ಡೈನಾಮಿಕ್ ಕ್ಯೂಆರ್ ಯುಪಿಐ ಪಾವತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುವುದು’ ಎಂದು ತಿಳಿಸಿದ್ದಾರೆ.

‘ಗೃಹ ಸಚಿವರ ವಜಾ ಮಾಡಿ’

ಸಿ.ಎಂಗೆ ಬಿಜೆಪಿ ವಕ್ತಾರ ಅಶ್ವತ್ಥನಾರಾಯಣ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಪೊಲೀಸ್ ಇಲಾಖೆಯೇ ರಿಯಲ್ ಎಸ್ಟೇಟ್ ಕಚೇರಿಯಾಗಿದ್ದು, ಗೃಹ ಇಲಾಖೆ ಒಂದು ರೀತಿ ಸತ್ತಿದೆ. ಗೃಹ ಸಚಿವರನ್ನು ವಜಾ ಮಾಡಬೇಕು’ ಎಂದು ಬಿಜೆಪಿ ವಕ್ತಾರ ಅಶ್ವತ್ಥನಾರಾಯಣ್ ಆಗ್ರಹಿಸಿದರು.

‘ರಾಜ್ಯದ ಗೃಹ ಸಚಿವರಿಗೆ ತಮ್ಮ ಜವಾಬ್ದಾರಿ ಏನೆಂದೇ ಅರ್ಥ ಆಗಿಲ್ಲ. ಕೇವಲ ‘ಝೀರೊ ಟ್ರಾಫಿಕ್’ನಲ್ಲಿ ಓಡಾಡುವುದೇ ಗೃಹ ಸಚಿವರ ಜವಾಬ್ದಾರಿ ಅಂದುಕೊಂಡಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

‘ಉನ್ನತ ಅಧಿಕಾರಿ ಕಚೇರಿಯಲ್ಲಿ ಸಮವಸ್ತ್ರದಲ್ಲಿ ಮಹಿಳೆ ಜೊತೆ ಅಸಭ್ಯವಾಗಿ ವರ್ತಿಸುವ ಮಟ್ಟಕ್ಕೆ ಪೊಲೀಸ್ ಇಲಾಖೆ ಬಂದು ನಿಂತಿದೆ ಎಂದರೆ, ಗೃಹ ಸಚಿವರು ತಮ್ಮ ಹಿಡಿತ ಇಟ್ಟುಕೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ. ಪೊಲೀಸ್ ಅಧಿಕಾರಿಗಳಿಗೆ ಜವಾಬ್ದಾರಿಯೇ ಇಲ್ಲವಾಗಿದೆ. ಇದು ಸಿ.ಡಿ. ಮಾಡುವ ಸರ್ಕಾರವಾಗಿದೆ’ ಎಂದು ಆರೋಪಿಸಿದರು.

‘ಒಬ್ಬರ ಮೇಲೆ ಇನ್ನೊಬ್ಬರು ಸಿ.ಡಿ. ಮಾಡುವುದು, ಸಿ.ಡಿ. ಬಿಡುಗಡೆ ಮಾಡುವುದು, ಸಿ.ಡಿ. ಇದೆ ಎಂದು ಹೆದರಿಸುವುದು, ಮಂತ್ರಿಗಳ ರಾಜೀನಾಮೆ ಪಡೆಯುವುದು, ಅಧಿಕಾರಿ ವಿರುದ್ಧ ಮಹಿಳೆ ಮೂಲಕ ಸಿ.ಡಿ. ಮಾಡಿಸಿ ಬಿಡುಗಡೆ ಮಾಡಿಸುವುದು ನಡೆದಿದೆ. ರಾಜಣ್ಣನವರ ರಾಜೀನಾಮೆ ತೆಗೆದುಕೊಳ್ಳಲು ಸಿ.ಡಿ. ಭಯ ಹುಟ್ಟಿಸಿದ್ದರು. ಈ ಸರ್ಕಾರಕ್ಕೆ ಜವಾಬ್ದಾರಿ ಏನೆಂದೇ ಅರ್ಥ ಆಗುತ್ತಿಲ್ಲ’ ಎಂದರು.

‘ಬಿಜೆಪಿ ನಾಯಕರಿಗೆ ಪ್ರಬುದ್ಧತೆ ಇದೆಯೆ?’

ಮಡಿಕೇರಿ: ‘ರಾಜ್ಯದ ಬಿಜೆಪಿ ನಾಯಕರಿಗೆ ಪ್ರಬುದ್ಧತೆ ಇದೆಯೆ’ ಎಂದು ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್.ಭೋಸರಾಜು ಇಲ್ಲಿ ಪ್ರಶ್ನಿಸಿದರು.

‘ಬಿ.ವೈ.ವಿಜಯೇಂದ್ರ, ಆರ್.ಅಶೋಕ ಅವರಿಗೆ ಪ್ರಬುದ್ಧತೆಯೇ ಇಲ್ಲ. ನಿತ್ಯ ಏನಾದರೂ ಹೇಳುತ್ತಿರುತ್ತಾರೆ. ಅವರ ಮಾತುಗಳಲ್ಲಿ ಶೇ 10ರಷ್ಟೂ ನಿಜವಿರುವುದಿಲ್ಲ. ಗಂಭೀರವಾಗಿ ಜನರೂ ಪರಿಗಣಿಸುತ್ತಿಲ್ಲ’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಪಾದಿಸಿದರು.

‘ಮದ್ಯ ಮಾರಾಟ ಸನ್ನದು ನೀಡುವಲ್ಲಿ ₹2,500 ಕೋಟಿಗೂ ಹೆಚ್ಚು ಲಂಚ ಹೊಡೆಯಲು ಮುಂದಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಪಾಲಿದೆ’ ಎಂಬ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಹೇಳಿಕೆ ಕುರಿತು ಈ ರೀತಿ ಪ್ರತಿಕ್ರಿಯಿಸಿದರು.

‘ಡ್ರಗ್ಸ್ ವ್ಯಸನ: ಸಹಜ ಜೀವನಕ್ಕೆ ಯೋಗ ಪೂರಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆರಾಯಿನ್, ಮಾರ್ಫಿನ್, ಹೈಡ್ರೊಮಾರ್ಫಿನ್ ಸೇರಿ ವಿವಿಧ ಡ್ರಗ್ಸ್ (ಒಪಿಯಾಡ್) ಸೇವಿಸುವವರು, ಸಹಜ ಜೀವನಕ್ಕೆ ಮರಳುವ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ವಿವಿಧ ಸಮಸ್ಯೆಗಳನ್ನು ದ್ವಿಗುಣ ವೇಗದಲ್ಲಿ ಜಯಿಸಲು ಯೋಗ ಸಹಕಾರಿ’ ಎನ್ನುವುದು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಸಂಶೋಧಕರು ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ಸಂಸ್ಥೆಯ ವ್ಯಸನ ಚಿಕಿತ್ಸಾ ಕೇಂದ್ರದ ಸಂಶೋಧಕರಾದ ಡಾ. ಹೇಮಂತ್ ಭಾರ್ಗವ್, ಭರತ್ ಹೊಳ್ಳ ಮತ್ತು ಸುದ್ದಲಾ ಗೌತಮ್ ಅವರು ಈ ಅಧ್ಯಯನ ನಡೆಸಿದ್ದಾರೆ. ‘ಮಾದಕ ವ್ಯಸನಿಗಳು ದುರಭ್ಯಾಸ ತ್ಯಜಿಸಿದ ತಕ್ಷಣ, ಅವರ ಶರೀರದಲ್ಲಿ ಉಂಟಾಗುವ ಬದಲಾವಣೆ ಹಾಗೂ ಕಾಣಿಸಿಕೊಳ್ಳುವ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆಗೆ ಯೋಗ ಸಹಕಾರಿಯಾಗಲಿದೆಯೇ’ ಎಂಬುದರ ಬಗ್ಗೆ ಅವರು ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನವು ‘ಜಮಾ ಸೈಕಿಯಾಟ್ರಿ’ ಜರ್ನಲ್‌ನಲ್ಲಿ ಪ್ರಕಟವಾಗಿದೆ.

‘ಸಹಜ ಜೀವನಕ್ಕೆ ಮರಳಲು ಚಿಕಿತ್ಸೆ ಪಡೆಯುತ್ತಿರುವವರು, ಯೋಗವನ್ನು ಅಳವಡಿಸಿಕೊಂಡಲ್ಲಿ ಅತ್ಯುತ್ತಮ ಫಲಿತಾಂಶ ದೊರೆಯಲಿದೆ. ಚೇತರಿಕೆ ಅವಧಿ ಅರ್ಧದಷ್ಟು ಕಡಿತವಾಗಲಿದೆ’ ಎಂಬ ಫಲಿತಾಂಶ ಈ ಅಧ್ಯಯನದಿಂದ ದೊರೆತಿದೆ.

ಡ್ರಗ್ಸ್ ವ್ಯಸನಿಗಳಲ್ಲಿ 59 ಮಂದಿಯನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಔಷಧದ ಜತೆಗೆ ಯೋಗಾಭ್ಯಾಸ ಮಾಡಿದವರು ಐದು ದಿನಗಳಲ್ಲಿ ಸಹಜ ಜೀವನಕ್ಕೆ ಮರಳಿದ್ದಾರೆ. ಔಷಧವೊಂದನ್ನೇ ಪಡೆದವರ ಈ ಅವಧಿ ಒಂಬತ್ತು ದಿನಗಳಾಗಿದ್ದವು. ಯೋಗಾಭ್ಯಾಸದಿಂದ ಉತ್ತಮ ನಿದ್ದೆಯ ಜತೆಗೆ ಆತಂಕ ಹಾಗೂ ನೋವು ತಕ್ಕಮಟ್ಟಿಗೆ ಕಡಿಮೆಯಾಗಲಿದೆ ಎಂದು ಅಧ್ಯಯನ ವರದಿಯಲ್ಲಿ ತಿಳಿಸಲಾಗಿದೆ.

‘ಯೋಗವು ಒತ್ತಡ ನಿವಾರಣೆ ಹಾಗೂ ದೇಹದ ನಿಯಂತ್ರಣಕ್ಕೆ ಸಹಕಾರಿಯಾಗಲಿದೆ. ಅಧ್ಯಯನಕ್ಕೆ ಒಳಪಟ್ಟವರಿಗೆ ಪ್ರತಿನಿತ್ಯ 45 ನಿಮಿಷಗಳ ಯೋಗಾಭ್ಯಾಸ ಮಾಡಿಸಲಾಗುತ್ತಿತ್ತು. ಸಹಜ ಭಂಗಿಗಳು, ಉಸಿರಾಟದ ವ್ಯಾಯಾಮಗಳನ್ನು ಒಳಗೊಂಡಿದ್ದವು’ ಎಂದು ಡಾ. ಹೇಮಂತ್ ಭಾರ್ಗವ್ ತಿಳಿಸಿದರು.

ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಸಲಹೆ

‘ನವೋದ್ಯಮಗಳಿಗೆ ಪ್ರೋತ್ಸಾಹ ಸಿಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಪರಿಸರ ಮತ್ತು ಡಿಜಿಟಲ್ ಸೇರಿದಂತೆ ವಿವಿಧ ಸವಾಲುಗಳಿಗೆ ಪರಿಹಾರ ನೀಡುವ ನವೋದ್ಯಮಗಳನ್ನು ವಿಶ್ವವಿದ್ಯಾಲಯಗಳು ಸಕ್ರಿಯವಾಗಿ ಪ್ರೋತ್ಸಾಹಿಸಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದರು.

ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟಿ (ಎಐಯು) ಹಾಗೂ ರಾಮಯ್ಯ ಆನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಆಯೋಜಿಸಿರುವ ದಕ್ಷಿಣ ವಲಯದ ಕುಲಪತಿಗಳ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದಕ್ಷಿಣ ಭಾರತ ಸದಾ ನಾಯಕತ್ವ ನೀಡಿದೆ. ಶಿಕ್ಷಣ, ಸಂಶೋಧನೆ ಮತ್ತು ಉದ್ಯಮಗಳು ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಬೆಂಗಳೂರು ಸೇರಿದಂತೆ ಹಲವು ನಗರಗಳು ಜಾಗತಿಕ ಮಟ್ಟದ ನವೋದ್ಯಮಗಳಿಗೆ ವೇದಿಕೆಯಾಗುತ್ತವೆ ಎಂಬುದನ್ನು ಕಂಡಿದ್ದೇವೆ. ಈ ಮಾದರಿಯನ್ನು ದೇಶದ ಇತರ ನಗರಗಳಿಗೂ ವಿಸ್ತರಿಸಬೇಕು ಎಂದರು.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಉದ್ಯಮಶೀಲತೆ ಮತ್ತು ನವೋದ್ಯಮಗಳ ಪೋಷಣೆ ಎಂಬ ಸಮ್ಮೇಳನದ ವಿಷಯ ಅತ್ಯಂತ ಪ್ರಾಸಂಗಿಕವಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳು ಕೇವಲ ಪದವಿ ನೀಡುವ ಕೇಂದ್ರಗಳಷ್ಟೇ ಅಲ್ಲ. ಅವು ನವೋದ್ಯಮ, ನಾಯಕತ್ವ ಮತ್ತು ರಾಷ್ಟ್ರ ನಿರ್ಮಾಣದ ಕೇಂದ್ರಗಳಾಗಿವೆ. ಯುವ ಮನಸ್ಸುಗಳು ಅತ್ಯಮೂಲ್ಯ ಸಂಪತ್ತಾಗಿದ್ದು, ಅವರಿಗೆ ಸರಿಯಾದ ಮಾರ್ಗದರ್ಶನ, ಸಂಪನ್ಮೂಲ ಮತ್ತು ಅವಕಾಶಗಳು ದೊರೆತರೆ ಅವರ ಕಲ್ಪನೆಗಳು ಆತ್ಮನಿರ್ಭರತೆಯನ್ನು ಸಾಧಿಸುತ್ತವೆ. ಈ ಮೂಲಕ ಉದ್ಯೋಗ ಸೃಷ್ಟಿಯಾಗಿ, ಸಮಾಜ ಮತ್ತು ರಾಷ್ಟ್ರಕ್ಕೆ ಲಾಭವಾಗುತ್ತವೆ ಎಂದು ಹೇಳಿದರು.



ಸಮಾರಂಭದಲ್ಲಿ ಎಸ್‌.ಅಶೋಕ್‌ರಾವ್, ಪಂಕಜ್ ಮಿತ್ತಲ್, ಎಂ.ಆರ್‌. ಜಯರಾಂ, ಥಾವರಚಂದ್ ಗೆಹಲೋತ್, ವಿನಯ್‌ಕುಮಾರ್ ಪಾಠಕ್, ಕುಲದೀಪ್ ಕುಮಾರ್ ರೈನಾ ಭಾಗವಹಿಸಿದ್ದರು

ಕುಲಪತಿ ಕುಲದೀಪ್ ಕುಮಾರ್ ರೈನಾ ಮಾತನಾಡಿ, ‘ಸಮ್ಮೇಳನ ಎರಡು ದಿನ ನಡೆಯಲಿದ್ದು, ತಮಿಳುನಾಡು, ಆಂಧ್ರಪ್ರದೇಶ, ಪುದುಚೇರಿ, ಕೇರಳ ರಾಜ್ಯಗಳಿಂದ 120ಕ್ಕೂ ಹೆಚ್ಚು ಕುಲಪತಿಗಳು, ಶಿಕ್ಷಣ ತಜ್ಞರು, ಶೈಕ್ಷಣಿಕ ನಾಯಕರು ಭಾಗವಹಿಸಿದ್ದಾರೆ’ ಎಂದರು.

‘ವಿಶ್ವವಿದ್ಯಾಲಯಗಳು ನವೋದ್ಯಮವನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳನ್ನು ಸ್ವಯಂ ಉದ್ಯಮಿಗಳನ್ನಾಗಿ ರೂಪಿಸಲು ಗಮನಹರಿಸಬೇಕು’ ಎಂದು ಆನ್ವಯಿಕ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ಜಯರಾಂ ಹೇಳಿದರು.

ಎಐಯು ಅಧ್ಯಕ್ಷ ಪ್ರೊ. ವಿನಯ್ ಕುಮಾರ್ ಪಾಠಕ್, ಪ್ರಧಾನ ಕಾರ್ಯದರ್ಶಿ ಪಂಕಜ್ ಮಿತ್ತಲ್, ಕುಲಸಚಿವ ಎಸ್. ಅಶೋಕ್ ರಾವ್ ಭಾಗವಹಿಸಿದ್ದರು.

ಮುಡಾ: ದಿನೇಶ್ ಕುಮಾರ್ ಅರ್ಜಿ ತಿರಸ್ಕೃತ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೆ ಒಳಗಾಗಿರುವ ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಅವರು ಬಿಡುಗಡೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

‘ಜಾರಿ ನಿರ್ದೇಶನಾಲಯದ (ಇ.ಡಿ) ಬಂಧನದಿಂದ ಬಿಡುಗಡೆ ಮಾಡಲು ನಿರ್ದೇಶಿಸಬೇಕು’ ಎಂದು ಕೋರಿ ದಿನೇಶ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿ ಮಂಗಳವಾರ ಆದೇಶಿಸಿದೆ.

ಮುಡಾದ ಆಯುಕ್ತರಾಗಿದ್ದ ಅವಧಿಯಲ್ಲಿ ಜಿ.ಟಿ.ದಿನೇಶ್ ಕುಮಾರ್ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮವಾಗಿ ಅನರ್ಹರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆಂಬ ಆರೋಪ ಎದುರಿಸುತ್ತಿದ್ದಾರೆ. ಈ ಸಂಬಂಧ ಪಿಎಂಎಲ್‌ಎ ಕಾಯ್ದೆ ಅಡಿ ಪ್ರಕರಣ ದಾಖಲಾಗಿದ್ದು 2025ರ ಸೆಪ್ಟೆಂಬರ್ 17ರಂದು ಅವರನ್ನು ಬಂಧಿಸಲಾಗಿತ್ತು. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಗಾಜು ನಡೆದು ಬಂದ ದಾರಿ!



• ವಿಕ್ರಮ ಜೋಶಿ

‘ಗಾಜಿನ ಮನೆಯಲ್ಲಿ ಕೂತು ಕಲ್ಲನ್ನು ಎಸೆಯಬಾರದು’ – ಎನ್ನುವ ಗಾದೆಯೊಂದಿದೆ. ಇವತ್ತು ಪಟ್ಟಣಗಳಲ್ಲಿ ನೋಡಿದಲ್ಲೆಲ್ಲಾ ಗಾಜಿನ ಕಟ್ಟಡಗಳು. ಅಲ್ಲಿ ಕುಳಿತೇ ಜನರು ಗುಂಡು ಹೊಡೆಯುವುದು! ನಮಗೆ,ನಮ್ಮ ಪರಿಸರಕ್ಕೆ ಗಾಜಿನ ಮನೆ ಒಳಿತೋ, ಕೆಡಕೋ ಗೊತ್ತಿಲ್ಲ ಆದರೆ ವೈಭವಯುತವಾದ ಗಾಜಿನ ಮಹಲನ್ನು ಕಟ್ಟಿ ನಿಲ್ಲಿಸಿದರೆ ಅಲ್ಲಿದ್ದವರಿಗೆ ನೆಮ್ಮದಿಯ ಭ್ರಮೆ. ಗಾಜು ಮನುಷ್ಯ ಕಂಡುಕೊಂಡ ಅತ್ಯಾಕರ್ಷಕ ವಸ್ತುಗಳಲ್ಲಿ ಮೊದಲಿನದಾಗಿರಬಹುದೇನೋ? ಏಕೆಂದರೆ ಗಾಜಿನ ಇತಿಹಾಸ ಕ್ರಿ.ಪೂ. 3500ಕ್ಕೂ ಹಿಂದಕ್ಕೆ ಹೋಗುತ್ತದೆ! ಅತ್ಯಂತ ಹೆಚ್ಚಿನ ಉಷ್ಣಾಂಶದಲ್ಲಿ ಮರಳು, ಸೋಡಿಯಂ ಕಾರ್ಬೋನೇಟ್ (ಸೋಡಾ ಆ್ಯಶ್) ಹಾಗೂ ಸುಣ್ಣದ ಕಲ್ಲಿನ ಮಿಶ್ರಣವನ್ನು ಬಳಸುತ್ತಿರುವಾಗ ಆತನಿಗೆ ಅಕಸ್ಮಿಕವಾಗಿ ಜಗಮಗ ಹೊಳೆಯುವ ಪದರೊಂದು ಕಾಣಿಸಿರಬೇಕು. ಅದುವೇ ಗಾಜಿನ ಆವಿಷ್ಕಾರಕ್ಕೆ ಕಾರಣ. ಮೆಸೊಪಟ್ಯಾಮಿಯಾದ ನಾಗರಿಕತೆಯ ಕಾಲದಲ್ಲಿ ಅಲ್ಲಿಯ ಕುಶಲಕರ್ಮಿಗಳು ಮಣ್ಣಿನ ಮಡಿಕೆಗಳನ್ನು ಮಾಡುತ್ತಿರುವಾಗ ಗಾಜು ಹುಟ್ಟಿಕೊಂಡಿತು ಎನ್ನಬಹುದು.

ಈ ಹೊಸದಾದ, ಮನಮೋಹಿಸುವ ವಸ್ತುವಿನ ಪ್ರವೇಶವಾದಾಗ ಅದರ ಮೊದಲ ಬಳಕೆ ಆಗಿನ ಕಾಲದಲ್ಲಿ ಆ ನಗರಗಳನ್ನು ಆಳುತ್ತಿದ್ದ ರಾಜರಾಣಿಯರನ್ನು ಶೃಂಗರಿಸುವ ಆಭರಣಗಳಲ್ಲಾಗಿರಬೇಕು. ಅನಂತರ ಕಾಲಕ್ರಮೇಣ ಜನರು ತಾವು ಕಂಡುಕೊಂಡ ಹೊಸ ತಂತ್ರಜ್ಞಾನವನ್ನು ಮುತ್ತುಗಳನ್ನು, ಮಣಿಗಳನ್ನು, ಬಣ್ಣ ಬಣ್ಣದ ಗಾಜಿನ ಪಾತ್ರೆಗಳನ್ನು ತಯಾರಿಸಲು ಬಳಸಿದರು. ಎರಡು ಸಾವಿರ ವರ್ಷಗಳ ಕಾಲ ಇದರಲ್ಲಿ ಹೆಚ್ಚು ಬದಲಾವಣೆಗಳೇನೂ ಆಗಿರಲಿಲ್ಲ. ಕ್ರಿ.ಪೂ. 1,500ರ ಸುಮಾರಿಗೆ ಈಜಿಪ್ಟಿನಲ್ಲಿ ಅಲ್ಲಿಯ ತನಕ ನಡೆದುಕೊಂಡು ಬರುತ್ತಿದ್ದ ಗಾಜಿನ ತಯಾರಿಕೆಯ ಪ್ರಕ್ರಿಯೆಯನ್ನು ಬದಲಾಯಿಸಿದರು. ಅವರು ಹೊಸ ಪ್ರಕ್ರಿಯೆಯ ಮೂಲಕ ಕೊಳವೆ, ಕುಡಿಕೆಗಳು ಹಾಗೂ ಸಂಕೀರ್ಣವಾದ ಆಭರಣದ ತಯಾರಿಕೆಗೆ ಶುರುಮಾಡಿದ್ದು, ಗಾಜಿನ ವ್ಯಾಪಕವಾದ ಬಳಕೆ ಶುರುವಾಗಿದ್ದು ಅಲ್ಲಿಂದ ಎಂದು ಹೇಳಬೇಕು. ಆದರೂ ಗಾಜು ಅಷ್ಟೊಂದು ಜನಪ್ರಿಯವಾಗಿರಲಿಲ್ಲ. ರೋಮನರ ಕಾಲದಲ್ಲಿ ಅಲ್ಲಿಯ ಕುಶಲಕರ್ಮಿಗಳು ಗಾಜಿನ ತಯಾರಿಕೆಯಲ್ಲಿ ಮ್ಯಾಂಗನೀಸನ್ನು ಸೇರಿಸಿ ಪಾರದರ್ಶಕತೆಯನ್ನು ಹೆಚ್ಚಿಸಿದರು. ಕ್ರಿ. ಶ. ಒಂದನೆಯ ಶತಮಾನದ ಹೊತ್ತಿಗೆ ಸಾರ್ವಜನಿಕ ಸ್ನಾನಗೃಹಗಳು ಈ ಹೊಸ ಬಗೆಯ ಗಾಜಿನಿಂದ ನಿರ್ಮಿಸಲ್ಪಡುತ್ತಿದ್ದವು. ಗಾಜಿನ ಜನಪ್ರಿಯತೆ ಹೆಚ್ಚಿದ್ದು ರೋಮನರ ಕಾಲದಲ್ಲಿ.

ಪ್ರತಿಯೊಂದು ತಂತ್ರಜ್ಞಾನದಲ್ಲೂ ಒಂದು ಮಹತ್ವದ ತಿರುವು ಬರುತ್ತದೆ. ಗಾಜಿನ ತಂತ್ರಜ್ಞಾನದಲ್ಲಿ ಇಂತಹುದೇ ಒಂದು ‘ಬ್ರೇಕ್ ಥ್ರೂ’ ನಡೆದಿದ್ದು ಮಧ್ಯಕಾಲೀನ ಯುಗದಲ್ಲಿ. ವೆನೆಟಿಯನ್ ಗಾಜು ತಯಾರಕರು ಪಾರದರ್ಶಕ ಗಾಜಿನ ತಯಾರಿಕೆಯಲ್ಲಿ ನಿಪುಣರು. ಅವರು ಅದಕ್ಕೆ ‘ಕ್ರಿಸ್ಟಿಲೋ’ ಎಂದು ಕರೆಯುತ್ತಿದ್ದರು. ಇವತ್ತು ನಾವು ಬಳಸುವ ‘ಕ್ರಿಸ್ಟಲ್ ಕ್ಲಿಯರ್’ ಎನ್ನುವ ಶಬ್ದವು ಅಲ್ಲಿಂದಲೇ ಬಂದಿದ್ದು. ಅವರು ಈ ತಂತ್ರಜ್ಞಾನವನ್ನು ಹೊರಗೆ ಬಿಟ್ಟುಕೊಟ್ಟಿರಲಿಲ್ಲ. ಹೀಗಾಗಿ ಆ ಸಮಯದಲ್ಲಿ ವ್ಯಾಪಾರ ಹಾಗೂ ಕಳ್ಳಸಾಗಾಣಿಕೆ ತುಂಬಾ ಹೆಚ್ಚಿತು. ಕೆಲವರ ಕಪಿಮುಷ್ಟಿಯಲ್ಲಿ ಇದ್ದ ಗಾಜು ತಯಾರಿಕೆಯ ತಂತ್ರಜ್ಞಾನಕ್ಕೆ ಮುಕ್ತಿ ಸಿಕ್ಕಿದ್ದು ಕೈಗಾರಿಕಾ ಕ್ರಾಂತಿಯು ಶುರುವಾದಾಗ. ಬಳಕೆಯು ಹೆಚ್ಚುತ್ತಿದ್ದಂತೆ ‘ಮಾಸ್ ಪ್ರೊಡಕ್ಷನ್’ನ ಬೇಡಿಕೆಯೂ ಹೆಚ್ಚಿತು.

ಗಾಜಿನ ತಯಾರಿಕೆಯನ್ನು ಕೈಗಾರೀಕರಣಕ್ಕೆ ಅನುವು ಮಾಡಿಕೊಟ್ಟಿದ್ದು 1959ರಲ್ಲಿ ಅಲಾಸ್ಟೇರ್ ಪಿಕಿಂಗ್ ಎನ್ನುವಾತನ ಫ್ಲೋಟಿಂಗ್ ಗ್ಲಾಸ್ ವಿಧಾನ. ದ್ರವರೂಪದಲ್ಲಿಯ ಗಾಜು ತವರಿನ ಪದರಿನ ಮೇಲೆ ಹರಿಯುತ್ತಾ ಚಪ್ಪಟೆಯಾದ ಹಾಳೆಯನ್ನಾಗಿ ಮಾಡುವ ಈ ತಂತ್ರಜ್ಞಾನವು ಗಾಜಿನ ಬಳಕೆಯಲ್ಲಿ ಹೊಸದೊಂದು ಕ್ರಾಂತಿಯನ್ನೇ ತಂದಿತು. ಹತ್ತಾರು ಮಹಡಿಯ ಕಟ್ಟಡಗಳಲ್ಲಿ, ವಾಹನಗಳ ವಿನ್ಯಾಸದಲ್ಲಿ ಗಾಜಿನ ಬಳಕೆಯು ಶುರುವಾಗಿದ್ದು ಅಲ್ಲಿಂದ. ಆದರೂ ಗಾಜು ತುಂಬಾ ಭಿದುರ ವಸ್ತುವಾಗಿಯೇ ಪರಿಗಣಿಸಲ್ಪಟ್ಟಿತ್ತು. ಸದೃಢವಾದ ಗಾಜಿನ ಅಭಿವೃದ್ಧಿಯು ಆಮೆಯ ವೇಗದಲ್ಲಿ ನಡೆಯುತ್ತಿರುವಾಗ ಮೂಲೆ ಗುಂಪಾಗಿ ಬಿದ್ದಿದ್ದ ಗೋರಿಲ್ಲಾ ಗಾಜಿನ ತಂತ್ರಜ್ಞಾನವನ್ನು ಮತ್ತೆ 2007ರಲ್ಲಿ ಹೊರಗಡೆಗೆ ತಂದು ಕೊರ್ನಿಂಗ್ ಇಂಕ್ ಎನ್ನುವ ಕಂಪನಿ. ಈ ತಂತ್ರಜ್ಞಾನದ ಜನಕ ಸ್ಟೇನ್ಲಿ ಡೊನಾಲ್ಡ್ ಸ್ಟೂಕಿ: ಕೊರ್ನಿಂಗ್‌ಯ ವಿಜ್ಞಾನಿ. ಗಾಜು ಹಾಗೂ ಸಿರಾಮಿಕ್ಸ್ ತಂತ್ರಜ್ಞಾನದ ಮೇಲೆ ಅವರದ್ದು ಅರವತ್ತಕ್ಕೂ ಹೆಚ್ಚು ಅವಿಷ್ಕಾರಗಳಿವೆ. ಗೋರಿಲ್ಲಾ ಗಾಜು ಪ್ರಾಜೆಕ್ಟ್ ಮಸಲ್‌ನ ಫಲಿತಾಂಶ; ರಾಸಾಯನಿಕ ಸಮೀಕರಣದಲ್ಲಿ ಅಯಾನ್ ಸೇರಿಸಿ ಹಾಗೂ ಸೋಡಿಯಂ ಬದಲು ಪೊಟ್ಯಾಸಿಯಮ್ ಬಳಸಿದ್ದರಿಂದ ಒಂದೂವರೆ ಮೀಟರ್ ಎತ್ತರದಿಂದ ಬೀಳಿಸಿದರೂ ಒಡೆಯದಂತಹ ಸದೃಢ ಗಾಜನ್ನು ತಯಾರಿಸಲು ಸಾಧ್ಯವಾಯಿತು. ಈ ತಂತ್ರಜ್ಞಾನವೀಗ ಲಕ್ಷಾಂತರ ಮೊಬೈಲ್ ಫೋನ್‌ಗಳಲ್ಲಿ, ಎಲೆಕ್ಟ್ರಾನಿಕ್ ಉಪಕರಣಗಳ ಪರದೆಯಲ್ಲಿ ಬಳಕೆಯಾಗುತ್ತಿದೆ!

ಇಂದು ಗಾಜು ಕೇವಲ ನಿಷ್ಕ್ರಿಯವಾದ ವಸ್ತುವಲ್ಲ, ಅದು ಉಳಿದ ವಸ್ತುಗಳ ಹಾಗೆಯೇ ‘ಸ್ಮಾರ್ಟ್’ ಆಗುತ್ತಿದೆ. ಎಲೆಕ್ಟ್ರೊ ಕ್ರೊಮಿಕ್ ಗ್ಲಾಸ್ ಇದು ಕಟ್ಟಡಗಳಲ್ಲಿ ಬಳಕೆಯಾಗುತ್ತಿದ್ದು ಬೆಳಕಿನ ತೀವ್ರತೆಗೆ ತಕ್ಕಂತೆ ಸೂರ್ಯಕಿರಣವನ್ನು ಹೀರುವ ಕ್ಷಮತೆಯಲ್ಲಿ ವೈಪರೀತ್ಯಗಳನ್ನು ತಂದು ಕಟ್ಟಡದ ವಿದ್ಯುತ್ ಬಳಕೆಯನ್ನು ಕಡಿಮೆ ಮಾಡುತ್ತದೆ. ಇದನ್ನು ‘ಡೈನಾಮಿಕ್ ಶೇಡಿಂಗ್’ ಎಂದೂ ಕರೆಯುತ್ತಾರೆ. ‘ಫೋಟೊವೊಲ್ಟಿಕ್ ಇಂಟಿಗ್ರೇಟೆಡ್’ ಗಾಜುಗಳು ಕಿಟಕಿಗಳನ್ನು ಸೌರಫಲಕವಾಗಿ ಬದಲಾಗಿಸುತ್ತವೆ. ವಿದ್ಯುತ್ ತಯಾರಿಕೆಯ ಜೊತೆಗೆ ಪಾರದರ್ಶಕತೆ ಇದು ಇದರ ‘ಟು ಇನ್ ವನ್’ ಉಪಯೋಗ! ಆಪ್ಟಿಕ್ಸ್ ಅಥವಾ ದೃಗ್ವಿಜ್ಞಾನ ಕ್ಷೇತ್ರದಲ್ಲಂತೂ ಗಾಜಿನ ಬಳಕೆಯು ಅತ್ಯಂತ ಮಹತ್ವವನ್ನು ಪಡೆಯುತ್ತಿದೆ. ಸೂಕ್ಷ್ಮದರ್ಶಕದ ತಯಾರಿಕೆಗೆ ಗಾಜಿನ ಪಾತ್ರ ಅತ್ಯಂತ ದೊಡ್ಡದು. ಕ್ವಾಂಟಮ್ ಮೆಕ್ಯಾನಿಕ್ಸ್ ಅನ್ನು ಬಳಸಿ ತಯಾರಿಸಬಲ್ಲ ಕ್ವಾಂಟಮ್ ಗಾಜುಗಳು ಮಂಗಳನ ಮೇಲೆ ವಸತಿಯನ್ನು ನಿರ್ಮಿಸಬಲ್ಲ ಸಾಧ್ಯತೆಗೆ ತೆರವು ಮಾಡಿಕೊಟ್ಟಿವೆ. ‘ಸೆಲ್ಫ್ ಹೀಲಿಂಗ್’ ಅಥವಾ ಸ್ವ-ಚಿಕಿತ್ಸಕ ಗಾಜುಗಳು ಅಂತರಿಕ್ಷ ವಿಜ್ಞಾನದ ಉಪಕರಣಗಳ ವಿನ್ಯಾಸದಲ್ಲಿ ಹೊಸ ಭರವಸೆಗಳನ್ನು ಹುಟ್ಟುಹಾಕಿವೆ. ಮನುಷ್ಯನ ಕೂದಲಿನ ಎಳೆಗಿಂತಲೂ ಕಡಿಮೆ ತೆಳ್ಳಗಿರುವ ಗಾಜಿನ ಎಳೆಗಳು ಮಡಚಬಹುದಾದ ಪರದೆಗಳ ನಿರ್ಮಾಣಕ್ಕೆ ಅತಿ ಅವಶ್ಯಕ. ಸ್ಯಾಮ್‌ಸಂಗ್ ಕಂಪನಿಯ ಯುಟಿಜಿ (ಅಲ್ಟ್ರಾ ಥಿನ್ ಗ್ಲಾಸ್) ಎರಡು ಲಕ್ಷ ಬಾರಿ ಮಡಚಿದರೂ ಸುಕ್ಕುಗಟ್ಟದು. ಹೀಗೆ ಪಟ್ಟಿ ಮಾಡುತ್ತಾ ಹೋದರೆ ದೊಡ್ಡ ಪುಸ್ತಕವನ್ನೇ ಬರೆಯಬಹುದು.



ಹಚ್ಚೆಯನು ‘ಮೆಚ್ಚದ’ ಲಸಿಕೆ

• ಕೊಳ್ಳೇಗಾಲ ಶರ್ಮ

ಹಚ್ಚೆ ಗೊತ್ತಲ್ಲ? ಅಲಂಕಾರಕ್ಕೆಂದು ಶಾಯಿಯನ್ನು ಹಚ್ಚಿ ಚರ್ಮದ ಮೇಲೆ ಬರೆಯುವ ಚಿತ್ರಗಳು ಇವು. ಒಮ್ಮೆ ಹಚ್ಚಿದರೆ ಸುಲಭವಾಗಿ ಅಳಿಸದ ರಂಗೋಲಿ. ಈ ರಂಗೋಲಿಯ ಅಲಂಕಾರ ಕೆಲವೊಮ್ಮೆ ಅನನುಕೂಲಿಯೂ ಆಗಬಹುದಂತೆ. ಹಚ್ಚೆಗೆ ಹಚ್ಚುವ ಶಾಯಿ, ರೋಗಗಳಿಂದ ರಕ್ಷಣೆ ಪಡೆಯಲು ಬಳಸುವ ಲಸಿಕೆಗಳ ಪ್ರಭಾವವನ್ನು ಕಂದಿಸಬಹುದು, ಕೆಲವೊಮ್ಮೆ ಹೆಚ್ಚಿಸಲೂಬಹುದು – ಎಂದು ಜೆಕ್ ರಿಪಬ್ಲಿಕ್‌ನ ಪಶು ಸಂಶೋಧನಾ ಸಂಸ್ಥೆಯ ಸ್ಯಾಂಟಿಯಾಗೊ ಗೊಂಸಾಲೆಸ್ ಮತ್ತು ಸಂಗಡಿಗರು ವರದಿ ಮಾಡಿದ್ದಾರೆ.

ಹಚ್ಚೆ ಎನ್ನುವುದು ಅನಾದಿಕಾಲದಿಂದ ರೂಢಿಯಲ್ಲಿರುವ ಅಲಂಕಾರ. ಹಲವು ಬುಡಕಟ್ಟು ಜನಾಂಗಗಳಲ್ಲಿ ಹಚ್ಚೆ ಹಚ್ಚಿಕೊಳ್ಳುವುದು ಒಂದು ಧಾರ್ಮಿಕ ಸಂಪ್ರದಾಯವೂ ಹೌದು. ಆದರೆ ಇತ್ತೀಚೆಗೆ ಇದು ಒಂದು ಅಲಂಕಾರವಾಗಿ, ‘ಫ್ಯಾಷನ್’ ಎನ್ನಿಸಿಕೊಂಡಿದೆ. ಹದಿಹರೆಯದವರಿಂದ ಅರವತ್ತರ ಅರುಳುಮರುಳರೂ ಹಚ್ಚೆಗಳನ್ನು ಹಚ್ಚಿಕೊಳ್ಳುತ್ತಿದ್ದಾರೆ. ಯುವಜನಾಂಗದಲ್ಲಿ ಈಗ ಇದು ‘ಪ್ರತಿಷ್ಠೆ’ಯ ಸಂಕೇತವೂ ಆಗಿದೆ.

ಹಚ್ಚೆ ಹಚ್ಚುವುದು ಎಂದರೆ ಸೂಜಿಯಿಂದ ಚರ್ಮದೊಳಗೆ ಶಾಯಿಯನ್ನು ಸೇರಿಸುವುದು ಎಂದರ್ಥ. ಅತಿ ಮೊನಚಾದ ಸಾಧನಗಳಿಗೆ ಹಚ್ಚಿದ ಶಾಯಿಯನ್ನು ಚರ್ಮದ ಕೆಳಪದರದೊಳಗೆ ತೂರಿಸಲಾಗುತ್ತದೆ. ಈ ಶಾಯಿಯಲ್ಲಿರುವ ಕಣಗಳು ಚರ್ಮದ ಜೀವಕೋಶಗಳೊಳಗೆ ಸೇರಿಕೊಂಡು, ಚರ್ಮದ ಬಣ್ಣವನ್ನು ಬದಲಿಸುತ್ತವೆ. ಹೀಗೆ ಚರ್ಮದ ಮೇಲೂ ರಂಗೋಲಿಯನ್ನು ಬಿಡಿಸಬಹುದು.

> ಹಚ್ಚೆ ಹಚ್ಚುವುದು ಎಂದರೆ ಸೂಜಿಯಿಂದ ಚರ್ಮದೊಳಗೆ ಶಾಯಿಯನ್ನು ಸೇರಿಸುವುದು ಎಂದರ್ಥ. ಅತಿ ಮೊನಚಾದ ಸಾಧನಗಳಿಗೆ ಹಚ್ಚಿದ ಶಾಯಿಯನ್ನು ಚರ್ಮದ ಕೆಳಪದರದೊಳಗೆ ತೂರಿಸಲಾಗುತ್ತದೆ. ಆದರೆ ಹಚ್ಚೆಗೆ ಹಚ್ಚುವ ಶಾಯಿ ಲಸಿಕೆಯನ್ನು ಬಾಧಿಸುತ್ತದೆ ಎನ್ನುತ್ತದೆ, ಸಂಶೋಧನೆ

ಹಚ್ಚೆಗೆ ಬಳಸುವ ಶಾಯಿಯ ಬಗ್ಗೆ ಹಲವು ಅನುಮಾನಗಳು ಇವೆ. ಇವು ದೇಹಕ್ಕೆ ತೊಂದರೆ ಕೊಡುತ್ತವೆಯೇ ಎಂಬುದು ಮೊದಲನೆಯದು. ಕೆಲವರಲ್ಲಿ ಈ ಶಾಯಿ ಅಲರ್ಜಿಯನ್ನು ಉಂಟುಮಾಡಿದ್ದೂ ಇದೆ. ಅದರೆ ಮಾರಕ ಎನ್ನುವಂತಹ ಅಪಾಯ ಕಾಣದ್ದರಿಂದ ಹಚ್ಚೆಯ ಬಳಕೆ ಇನ್ನೂ ವ್ಯಾಪಕವಾಗಿದೆ. ಹಚ್ಚೆಯ ಶಾಯಿ ನಮಗೇ ಗೊತ್ತಿಲ್ಲದ ಹಾಗೆ ಏನಾದರೂ ಅಪಾಯವನ್ನು ಉಂಟುಮಾಡುತ್ತಿರಬಹುದೇ ಎನ್ನುವುದು ಸಾಂಟಿಯಾಗೋ ತಂಡದ ಅನುಮಾನವಾಗಿತ್ತು. ಈ ಅನುಮಾನಕ್ಕೆ ಕಾರಣವಿದೆ. ಈ ಹಿಂದೆ ನಡೆದ ಕೆಲವು ಶೋಧಗಳಲ್ಲಿ ಹಚ್ಚೆಗೆ ಹಚ್ಚಿದ ಶಾಯಿಯು ದೇಹದಲ್ಲಿರುವ ದುಗ್ಧಗ್ರಂಥಿಗಳಲ್ಲಿ ಉಳಿದಿರುವುದನ್ನು ಕಾಣಲಾಗಿತ್ತು. ದುಗ್ಧ ಗ್ರಂಥಿಗಳು ಹಾಗೂ ದುಗ್ಧರಸ ದೇಹದ ರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ದೇಹಾಂಗಗಳು. ಉದಾಹರಣೆಗೆ, ಯಾವುದೇ ಸೋಂಕು ಉಂಟಾದಾಗ ಮೊದಲು ದುಗ್ಧಗ್ರಂಥಿಗಳಲ್ಲಿ ಊತ ಕಾಣಿಸುತ್ತದೆ. ನೆಗಡಿ ಆದಾಗ, ಗಂಟಲ ಹಿಂದೆ ತುಸು ಗಡ್ಡೆ ಕಟ್ಟಿದಂತ ಆಗುವುದು ಇನ್ನೇನಲ್ಲ. ಅಲ್ಲಿರುವ ದುಗ್ಧನಾಳಗಳು ಊದಿಕೊಳ್ಳುವುದರಿಂದ ಹೀಗಾಗುತ್ತದೆ. ಅಲ್ಲಿ ರಕ್ತದಲ್ಲಿರುವ ಕೆಲವು ಬಗೆಯ ಬಿಳಿಯ ರಕ್ತಕಣಗಳು ಕೂಡಿಕೊಂಡಿರುತ್ತವೆ.

ದೇಹದೊಳಗೆ ರೋಗಾಣುಗಳು ಹೊಕ್ಕಾಗ ದೇಹವು ಅದಕ್ಕೆ ತೋರುವ ಪ್ರತಿಕ್ರಿಯೆಯೇ ಈ ಊತ. ಅಲರ್ಜಿಯ ವೇಳೆಯೂ ಹೀಗೆ ಆಗುವುದುಂಟು. ದುಗ್ಧರಸ ದೇಹದ ವಿವಿಧ ಅಂಗಾಂಶಗಳಲ್ಲಿ ಇರುವ ತ್ಯಾಜ್ಯ ಮತ್ತು ಸತ್ತ ರೋಗಾಣುಗಳನ್ನು ಹೊತ್ತು ಕೈ, ಕಾಲು, ತೋಳು, ತೊಡೆ, ಮಂಡಿ ಮೊದಲಾದ ಮೂಳೆಗಳ ಸಂಧಿಗಳು ಇರುವ ತೆರಪಿನಲ್ಲಿ ಕೂಡುತ್ತದೆ. ಅದರಲ್ಲಿರುವ ತ್ಯಾಜ್ಯ ಹಾಗೂ ರೋಗಾಣುಗಳನ್ನು ಸೋಸಿದ ಮೇಲೆ ದುಗ್ಧರಸ ಮರಳಿ ರಕ್ತದ ಮೂಲಕ ವಿವಿಧ ಅಂಗಾಂಶಗಳಿಗೆ ಹರಿಯುತ್ತದೆ. ಆದ್ದರಿಂದ ಸೋಂಕು ಉಂಟಾದಾಗ ಈ ತೆರಪುಗಳಲ್ಲಿ ರೋಗಾಣುಗಳು ಹಾಗೂ ಅವನ್ನು ಕೊಲ್ಲುವ ರಕ್ತಕೋಶಗಳು ಬಂದು ಸಂಗ್ರಹವಾಗುವುದರಿಂದ ಊತ ಉಂಟಾಗುತ್ತದೆ.

ಶಾಯಿಯ ಕಣಗಳು ಕೂಡ ದೇಹಕ್ಕೆ ಸೋಂಕಿನಂತೆಯೇ ಹೊರಗಿನಿಂದ ಬಂದಂಥವು. ಅವು ಕೂಡ ದುಗ್ಧ ವ್ಯವಸ್ಥೆಯನ್ನು ಬಾಧಿಸುತ್ತಿರಬಹುದೇ ಎಂದು ಸಾಂಟಿಯಾಗೊ ತಂಡ ಪರಿಶೀಲಿಸಿದೆ. ಇದಕ್ಕಾಗಿ ಇದು ಇಲಿಯ ಪಾದಗಳಿಗೆ ಹಚ್ಚೆ ಹಚ್ಚಿದೆ. ಅನಂತರ ಈ ಶಾಯಿಯ ಕಣಗಳು ಎಲ್ಲೆಲ್ಲಿ ಕಾಣಿಸಿಕೊಳ್ಳುತ್ತವೆ ಎಂದು ಗಮನಿಸಿದೆ. ಶಾಯಿಯ ಕಣಗಳು ಪಾದದ ಚರ್ಮದಾಚೆ, ದುಗ್ಧಗ್ರಂಥಿಗಳಲ್ಲಿಯೂ ಕಂಡು ಬಂದುವಂತೆ. ಎಂದರೆ ದುಗ್ಧರಸ ಇವನ್ನು ಹೊತ್ತು ಬಂದಿರಬೇಕಷ್ಟೆ. ಆದರೆ ಈ ಕಣಗಳು ದೇಹದಿಂದ ತಕ್ಷಣ ಹೊರ ಹೋಗುವುದಿಲ್ಲವಂತೆ. ಸಾಂಟಿಯಾಗೊ ತಂಡದ ಪರೀಕ್ಷೆಗಳು ಇವು ಎರಡು–ಮೂರು ತಿಂಗಳಾದರೂ ದುಗ್ಧಗ್ರಂಥಿಗಳಲ್ಲಿ ಇರುವುದನ್ನು ಕಂಡಿದೆ.

ದುಗ್ಧಗ್ರಂಥಿಗಳಲ್ಲಿ ಇಷ್ಟು ದೀರ್ಘ ಕಾಲ ಇರುವ ಶಾಯಿಯ ಕಣಗಳಿಂದ ಏನಾದರೂ ಬಾಧೆ ಬರಬಹುದೇ? ಹಚ್ಚೆ ಹಚ್ಚಲು ಬಳಸುವ ಕೆಂಪು, ಕಪ್ಪು ಹಾಗೂ ಹಸಿರು ಬಣ್ಣದ ಶಾಯಿಗಳು ಮೂರನ್ನೂ ಇವರು ಪರೀಕ್ಷಿಸಿದ್ದಾರೆ. ಈ ಶಾಯಿಯ ಕಣಗಳು ದುಗ್ಧಗ್ರಂಥಿಗಳಲ್ಲಿ ಇದ್ದಾಗ ಅಲ್ಲಿರುವ ‘ಮ್ಯಾಕ್ರೊಫೇಜ್’ ಎನ್ನುವ ರಕ್ತಕೋಶಗಳ ಪ್ರಮಾಣ ಮೊದಲ ಐದು ದಿನಗಳಲ್ಲಿ ಹೆಚ್ಚಿ, ಅನಂತರದ ದಿನಗಳಲ್ಲಿ ಮೊದಲಿದ್ದುದಕ್ಕಿಂತಲೂ ಕಡಿಮೆ ಆದುವಂತೆ. ಶಾಯಿಯ ಕಣಗಳನ್ನು ಹೊರದೂಡಲೆಂದು ಬಂದ ಮ್ಯಾಕ್ರೊಫೇಜ್‌ಗಳನ್ನು ಶಾಯಿ ಕೊಂದಿದ್ದರಿಂದ ಹೀಗಾಗಿರಬೇಕು ಎಂದು ಊಹಿಸಬಹುದು.

ಮ್ಯಾಕ್ರೊಫೇಜ್‌ಗೂ, ಸೋಂಕಿಗೂ ಸಂಬಂಧವಿರುವುದರಿಂದ, ಶಾಯಿ ಸೋಂಕನ್ನು ತಡೆಯುವ ಲಸಿಕೆಗಳನ್ನು ಬಾಧಿಸುವುದೇ ಎಂದೂ ಇವರು ಪರೀಕ್ಷೆ ನಡೆಸಿದ್ದಾರೆ. ಇಲಿಗಳಿಗೆ ಹಚ್ಚೆ ಹಾಕಿದ ಎರಡು ದಿನ ಹಾಗೂ ಎರಡು ತಿಂಗಳ ನಂತರ ಕೋವಿಡ್ ಲಸಿಕೆಯನ್ನು ಚುಚ್ಚಿದ್ದಾರೆ. ಲಸಿಕೆಯಿಂದಾಗಿ ತಯಾರಾಗುವ ಕೋವಿಡ್ ವೈರಸ್ಸನ್ನು ಕೊಲ್ಲುವ ಪ್ರೊಟೀನುಗಳ ಪ್ರಮಾಣ ಯಾವ ಶಾಯಿಯ ಹಚ್ಚೆ ಹಚ್ಚಿದ್ದರೂ ಕಡಿಮೆ ಆಗುವುದನ್ನು ಇವರು ಕಂಡರು; ಎಂದರೆ ಲಸಿಕೆಯ ಪರಿಣಾಮವನ್ನು ಶಾಯಿ ಕುಗ್ಗಿಸಿತ್ತು. ಹಚ್ಚೆ ಹಚ್ಚಿದ ಎರಡು ತಿಂಗಳ ನಂತರವೂ ಈ ಪರಿಣಾಮವೇ ಇತ್ತಂತೆ. ಕೋವಿಡ್ ಲಸಿಕೆಗಿಂತ ಭಿನ್ನವಾಗಿ ವರ್ತಿಸುವ ‘ಎಚ್1 ಎನ್1’ ಲಸಿಕೆಯ ಪರಿಣಾಮವನ್ನು ಹಚ್ಚೆ ಶಾಯಿ ಕುಗ್ಗಿಸಲಿಲ್ಲ. ಪ್ರನಾಳಗಳಲ್ಲಿ ಮನುಷ್ಯರ ರಕ್ತದಲ್ಲಿರುವ ವಿವಿಧ ರಕ್ತಕೋಶಗಳನ್ನಿಟ್ಟು, ಅದರೊಟ್ಟಿಗೆ ಶಾಯಿಯನ್ನು ಬೆರೆಸಿದಾಗಲೂ, ಸೋಂಕನ್ನು ತಡೆಯುವ ರಕ್ತಕೋಶಗಳ ಸಂಖ್ಯೆ ಕಡಿಮೆ ಆದುದ್ದನ್ನು ಇವರು ಗುರುತಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

17) ಕಾರಣ ಕೊಡಿ

ಎ) ವಿದ್ಯುತ್ ದೀಪಗಳ ತಂತುಗಳಲ್ಲಿ ಟಂಗ್‌ಸ್ಟನ್ ಅನ್ನು ಬಳಸಲಾಗುತ್ತದೆ?

ಬಿ) ಗೃಹಬಳಕೆ ವಿದ್ಯುತ್ ಮಂಡಲಗಳಲ್ಲಿ ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಿಲ್ಲ (ಏಪ್ರಿಲ್– 2024)

ಅಥವಾ

ವಿದ್ಯುತ್ ಮಂಡಲಗಳಲ್ಲಿ ಫ್ಯೂಸ್ ಜೋಡಣೆ ಅವಶ್ಯ ಏಕೆ? ವಿವರಿಸಿ

ಉತ್ತರ:–(ಎ) ಟಂಗ್‌ಸ್ಟಂನ್‌ನ ದ್ರವನಬಿಂದು ಮತ್ತು ರೋಧಶೀಲತೆಯು ಅತಿಹೆಚ್ಚು ಇದು ಅತಿಹೆಚ್ಚಿನ ತಾಪಮಾನದಲ್ಲಿ ಕರಗಬಾರದು

ವಿದ್ಯುತ್ ದೀಪಗಳು ಅತಿಹೆಚ್ಚು ತಾಪಮಾನದಲ್ಲಿ ಬೆಳಗುತ್ತವೆ, ಆದ್ದರಿಂದ ಟಂಗ್‌ಸ್ಟನ್‌ಅನ್ನು ವಿದ್ಯುತ್ ದೀಪಗಳ ತಂತುಗಳಲ್ಲಿ ಮುಖ್ಯವಾಗಿ ಬಳಸಲಾಗುತ್ತದೆ.

ಬಿ) ಗೃಹ ಬಳಕೆಯ ವಿದ್ಯುತ್ ಮಂಡಲಗಳಲ್ಲಿ ವಿವಿಧ ವಿದ್ಯುತ್ ಘಟಕಗಳು ವಿವಿಧ ವಿದ್ಯುತ್ ಪ್ರವಾಹದ ಮೌಲ್ಯದಲ್ಲಿ ಸೂಕ್ತವಾಗಿ ಕಾರ್ಯನಿರ್ವಹಿಸುತ್ತದೆ. ಒಂದು ಘಟಕವು ಹಾನಿಗೊಂಡರೆ, ಮಂಡಲವು ಕಡಿತಗೊಂಡು ಇತರೆ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ, ಆದ್ದರಿಂದ ಗೃಹಬಳಕೆ ವಿದ್ಯುತ್ ಮಂಡಲಗಳಲ್ಲಿ ಸರಣಿಕ್ರಮ ವ್ಯವಸ್ಥೆಯಲ್ಲಿ ವಿದ್ಯುತ್ ಉಪಕರಣಗಳನ್ನು ಜೋಡಿಸುವುದಿಲ್ಲ

ಅಥವಾ

ಫ್ಯೂಸ್ ಒಂದು ಸುರಕ್ಷಾ ಸಾಧನವಾಗಿದ್ದು ಅತಿಹೆಚ್ಚಿನ ವಿದ್ಯುತ್ ಪ್ರವಾಹವು ವಿದ್ಯುತ್ ಮಂಡಲಗಳ ಹಾಗೂ ವಿದ್ಯುತ್ ಉಪಕರಣಗಳ ಮೂಲಕ ಪ್ರವಹಿಸದಂತೆ ತಡೆದು ಅವುಗಳನ್ನು ರಕ್ಷಿಸುತ್ತದೆ. ಇದು ಸೂಕ್ತ ದ್ರವನ ಬಿಂದು ಹೊಂದಿರುವ ಲೋಹ ಅಥವಾ ಮಿಶ್ರಲೋಹದ ತಂತಿಯಿಂದ ಮಾಡಲ್ಪಟ್ಟಿದ್ದು ವಿದ್ಯುತ್ ಉಪಕರಣಗಳೊಂದಿಗೆ ಸರಣಿಕ್ರಮದಲ್ಲಿ ಇರಿಸಲ್ಪಟ್ಟಿರುತ್ತದೆ. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ವಿದ್ಯುತ್ ಪ್ರವಾಹವು ಪ್ರವಹಿಸಿದಾಗ ಫ್ಯೂಸ್ ತಂತಿಯ ತಾಪವು ಹೆಚ್ಚಾಗುತ್ತದೆ, ಇದು ಫ್ಯೂಸ್ ತಂತಿಯನ್ನು ಕರಗಿಸಿ ಮಂಡಲವನ್ನು ಕಡಿತಗೊಳಿಸುತ್ತದೆ. ಆದ್ದರಿಂದ ವಿದ್ಯುತ್ ಮಂಡಲಗಳಲ್ಲಿ ಫ್ಯೂಸ್‌ನ ಜೋಡಣೆ ಅವಶ್ಯಕ

18) ಪಳೆಯುಳಿಕೆ ಇಂಧನ ಎಂದರೇನು? ಉದಾ ಕೊಡಿ

ಉತ್ತರ:– ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯಡಿಯಲ್ಲಿ ಹುದುಗಿದ್ದ ಸಸ್ಯ ಮತ್ತು ಪ್ರಾಣಿಗಳು ಆಕ್ಸಿಜನ್ ಸಂಪರ್ಕವಿಲ್ಲದ ಅಪಾರ ಒತ್ತಡ ಮತ್ತು ಉಷ್ಣತೆಗೆ ಒಳಗಾಗಿ ರೂಪುಗೊಂಡ ಇಂಧನಕ್ಕೆ ಪಳಯುಳಿಕೆ ಇಂಧನಗಳು ಎನ್ನುವರು

ಉದಾ:– ಕಲ್ಲಿದ್ದಲು ಮತ್ತು ಪೆಟ್ರೋಲಿಯಂ

19)ಪಟ್ಟಿ:1ರಲ್ಲಿ ಸಾಧನಗಳ ಹೆಸರನ್ನು ಪಟ್ಟಿ–2ರಲ್ಲಿ ಅವುಗಳ ಅನುರೂಪ ಕಾರ್ಯಗಳನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ ಬರೆಯಿರಿ

ಪಟ್ಟಿ: 1

(ಎ) ದಿಕ್ಪರಿವರ್ತಕ
(ಬಿ) ಫ್ಯೂಸ್
(ಸಿ) ಗೆಲ್ವನೋ ಮೀಟರ್
(ಡಿ) ವಿದ್ಯುತ್ ಜನಕ

ಪಟ್ಟಿ–2


1) ಒಂದು ಮಂಡಲದಲ್ಲಿ ವಿದ್ಯುತ್ ಪ್ರವಾಹದ ಉಪಸ್ಥಿತಿಯನ್ನು ಕಂಡುಹಿಡಿಯುತ್ತದೆ.
2) ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುತ್ತದೆ.
3) ವಿಭವಾಂತರವನ್ನು ಅಳೆಯುತ್ತದೆ.
4) ವಾಹಕದ ಚಲನೆಯ ದಿಕ್ಕನ್ನು ತೋರಿಸುತ್ತದೆ.
5) ವಿದ್ಯುತ್ ಉಪಕರಣಗಳನ್ನು ರಕ್ಷಿಸುತ್ತದೆ.
6) ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುತ್ತದೆ.
7) ವಿದ್ಯುತ್ ಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ.

ಉತ್ತರ:– ಎ–6 ಬಿ–5 ಸಿ–1 ಡಿ–2

20) ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವು ಯಾವುದರಿಂದ ಆಗಬಹುದಾಗಿದೆ?

ಉತ್ತರ:– ಪ್ರತಿ ಹೊಸ ಪೀಳಿಗೆಯು ಈ ಮೊದಲೇ ಅಸ್ತಿತ್ವದಲ್ಲಿರುವ ಜೀವಿಗಳ ಡಿಎನ್‌ಎ ಪ್ರತಿಗಳ ಸಂಯೋಜನೆಯಿಂದ ಉಂಟಾದ ಪಕ್ಷದಲ್ಲಿ ಪ್ರತಿ ಹೊಸ ಪೀಳಿಗೆಯು ಹಿಂದಿನ ಪೀಳಿಗೆ ಹೊಂದಿರುವುದಕ್ಕಿಂತ ಎರಡು ಪಟ್ಟು ಹೆಚ್ಚು ಪ್ರಮಾಣದ ಡಿಎನ್‌ಎಯನ್ನು ಹೊಂದಿರಬೇಕಾಗುತ್ತದೆ. ಇದರಿಂದ ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವಿರುತ್ತದೆ

21) ಕೆಳಗಿನ ವಿದ್ಯುತ್ ಮಂಡಲವನ್ನು ಗಮನಿಸಿ



‘R’ Ω ರೋಧವಿರುವ ತಂತಿಯನ್ನು ‘X’ ಮತ್ತು ‘Y’ ಗಳ ನಡುವೆ ಸಂಪರ್ಕಿಸಿದಾಗ ಅಮ್ಮೀಟರ್‌ನ ಸೂಚ್ಯಂಕ 3A ಆಗಿದೆ. ಇದೇ ಮಂಡಲದಲ್ಲಿ ‘R’ Ω ರೋಧವಿರುವ ತಂತಿಯನ್ನು ‘2R’ Ω ರೋಧವಿರುವ ತಂತಿಯಿಂದ ಬದಲಾಯಿಸಿದಾಗ, ಅಮ್ಮೀಟರ್‌ನ ಸೂಚ್ಯಂಕವನ್ನು ಊಹಿಸಿ. ನಿಮ್ಮ ಉತ್ತರಕ್ಕೆ ವೈಜ್ಞಾನಿಕ ಕಾರಣ ನೀಡಿ.

ಉತ್ತರ (ಆಗಸ್ಟ್– 2024 ಪರೀಕ್ಷೆ–3)

$R = R\Omega$
$I = 3A$ ಆದರೆ,
$V = IR$
$V = (3A)R$
$= 3R$

$R\Omega$ ಅನ್ನು $2R\Omega$ ನಿಂದ ಬದಲಾಯಿಸಿದಾಗ,

$R = 2R\Omega$
$I = ?$
$V = 3R$
$V = IR$
$I = \frac{V}{R} = \frac{3\cancel{R}}{2\cancel{R}} =$
$= \frac{3}{2}$
$= 1{\cdot}5\,A$

ಅಮ್ಮೀಟರ್‌ನ ಸೂಚ್ಯಂಕವು 1·5 A

ಕಾರಣ : ರೋಧವನ್ನು ದ್ವಿಗುಣಗೊಳಿಸಿದರೆ ವಿದ್ಯುತ್‌ಪ್ರವಾಹ ಅರ್ಧದಷ್ಟಾಗುತ್ತದೆ.

22) ಯಾವುದಕ್ಕೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು?

ಉತ್ತರ:– ಅಲ್ಯುಮಿನಿಯಂ ಆಕ್ಸೈಡ್, ಸತುವಿನ ಆಕ್ಸೈಡ್‌ಗಳಂಥ ಕೆಲವು ಲೋಹದ ಆಕ್ಸೈಡ್‌ಗಳು ಆಮ್ಲೀಯ ಹಾಗೂ ಪ್ರತ್ಯಾಮ್ಲೀಯ ಗುಣಗಳೆರಡನ್ನೂ ಪ್ರದರ್ಶಿಸುತ್ತವೆ. ಇಂತಹ ಲೋಹದ ಆಕ್ಸೈಡ್‌ಗಳು ಆಮ್ಲ ಮತ್ತು ಪ್ರತ್ಯಾಮ್ಲಗಳೆರಡರ ಜೊತೆಗೂ ಪ್ರತಿವರ್ತಿಸಿದಾಗ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತವೆ. ಇವುಗಳಿಗೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು.

(ಮುಂದುವರಿಯುವುದು)

CHEMISTRY

REVISION : MODEL QUESTIONS

III. Answer the following:-


19. Name a colligative property.

Ans:- Osmotic pressure is a Colligative property.
Some of the other colligative properties are –
a) Relative lowering of vapour pressure
b) Elevation in boiling point
c) Depression in freezing point

Extra information:-
The properties of dilute solutions which depend only on the number of solute particles and not on the nature of solute particles are called colligative properties.

20 Draw labeled diagram of Hall-Heroult Electrolytic cell for the extraction of aluminium. Write anode and cathode reactions.

Ans:-



At Cathode: $Al^{3+}_{(melt)} + 3e^- \rightarrow Al_{(l)}$
At Anode: $C_{(s)} + O^{2-}_{(melt)} \rightarrow CO_{(g)} + 2e^-$
$C_{(s)} + 2O^{2-}_{(melt)} \rightarrow CO_{2(g)} + 4e^-$

21. For the manufacture of Ammonia by Haber's process. Write the equation and optimum conditions for maximum yield of ammonia.

Ans:- In large scale Ammonia is manufactured by Haber's process. It involves the direct combination of nitrogen and hydrogen to form ammonia.

$N_2(g) + 3H_2(g) \rightleftharpoons 2NH_3(g); \Delta = -46.\ kJ\ mol^{-1}$

This reaction is reversible and exothermic.
According to Le Chatelier's principle, the formation of ammonia is favoured by
i) High pressure of about 200 atm.
ii) A moderate temperature of 773K
iii) Iron oxide is used as catalyst with small amounts of K_2O and Al_2O_3 to increase the rate of attainment of equilibrium.

22. Write the equation for
i] The action of SO_2 with chlorine in the presence of charcoal
ii] The action of SO_4 with concentrated sulphuric acid
iii] The action of ozone with lead sulphide.

Ans:- i] $SO_2 + Cl_2 \rightarrow SO_2Cl_2$
ii] $SO_3 + H_2SO_4 \rightarrow H_2S_2O_7$
iii] $PbS + 4O_3 \rightarrow PbSO_4 + 4O_2$

23. Explain the bonding in coordination compounds in terms of Werner's postulates.

Ans: (a) A metal shows two kinds of valencies viz primary valency and secondary valency. Negative ions satisfy primary valencies, and secondary valencies are filled by both neutral ions and negative ions.


(b) A metal ion has a fixed amount of secondary valencies about the central atom. These valencies also orient themselves in a particular direction in the space provided to the definite geometry of the coordination compound.

(c) Secondary valencies cannot be ionised, while primary valencies can usually be ionised.

24. Complete the following equation:
i] $2NaOH + Cl_2 \rightarrow$
(Cold and dilute)
ii] $2\ FeSO_4 + H_2SO_4 + Cl_2 \rightarrow$
iii] $Cl_2 + 3F_2 \rightarrow$
Excess

Ans:- i] $2NaOH + Cl_2 \rightarrow NaCl + NaOCl + H_2O$
ii] $2\ FeSO_4 + H_2SO_4 + Cl_2 \rightarrow Fe_2(SO_4)_3 + 2HCl$
iii] $Cl_2 + 3F_2 \rightarrow 2ClF_3$
(Excess)


25. a] i] How do you convert benzoic acid to benzamide? Write the reaction.
ii] Complete the reaction:




Benzene

b] What happens when carbonyl compounds are treated with hydrazine? Write the reaction.

Ans:- a] i] When benzoic acid treated with ammonia, ammonium benzoate is obtained which on heating to high temperature gives benzamide.



ii]



b] When carbonyl compounds are treated with hydrazine, respective hydrazones are obtained.

$>C=O + H_2N\text{-}NH_2 \xrightarrow{H^+} >C=N\text{-}NH_2 + H_2O$

ಡಿ.ಸಿ ವಿರುದ್ಧ ಸಿ.ಎಂ.ಗೆ ದೂರು

ಉಡುಪಿ ಶೀರೂರು ಪರ್ಯಾಯ ಮೆರವಣಿಗೆ ವೇಳೆ ಕೇಸರಿ ಧ್ವಜ ಪ್ರದರ್ಶಿಸಿದ ಜಿಲ್ಲಾಧಿಕಾರಿ: ವಿವಾದ

ಪ್ರಜಾವಾಣಿ ವಾರ್ತೆ

ಉಡುಪಿ: ಉಡುಪಿ ಕೃಷ್ಣಮಠದ ಪರ್ಯಾಯದ ಮೆರವಣಿಗೆಗೆ ಚಾಲನೆ ನೀಡುವ ವೇಳೆ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಅವರು ಕೇಸರಿ ಧ್ವಜವನ್ನು ಪ್ರದರ್ಶಿಸಿದ್ದು, ವಿವಾದಕ್ಕೆ ಕಾರಣವಾಗಿದೆ. ಇದು, ಸಾಮಾಜಿಕ ಜಾಲತಾಣಗಳಲ್ಲಿ ಪರ-ವಿರೋಧ ಚರ್ಚೆ ನಡೆದಿದೆ.

'ಆರ್‌ಎಸ್‌ಎಸ್ ಧ್ವಜ ಪ್ರದರ್ಶಿಸಿದ ಜಿಲ್ಲಾಧಿಕಾರಿ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಉಡುಪಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾನೂನು ಮತ್ತು ಮಾನವ ಹಕ್ಕುಗಳ ವಿಭಾಗದ ಅಧ್ಯಕ್ಷ ಹರೀಶ್ ಶೆಟ್ಟಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರು ನೀಡಿದ್ದಾರೆ.

'ಜ.18ರಂದು ಮೆರವಣಿಗೆ ಆರಂಭಕ್ಕೂ ಮೊದಲು ಶಾಸಕ ಯಶ್‌ಪಾಲ್ ಸುವರ್ಣ ಅವರು ಆರ್‌ಎಸ್‌ಎಸ್ ಧ್ವಜವನ್ನು ಜಿಲ್ಲಾಧಿಕಾರಿ ಕೈಗೆ ನೀಡಿದ್ದಾರೆ. ಜಿಲ್ಲಾಧಿಕಾರಿ ಅವರು ಧ್ವಜವನ್ನು ಹಿಡಿದು ಮೇಲಕ್ಕೆ ಎತ್ತಿ, ಪ್ರದರ್ಶಿಸಿದ್ದಾರೆ. ಅವರ ನಡೆ ಸರ್ಕಾರಿ ಸೇವಾ ನಿಯಮಗಳು ಮತ್ತು ಸಂವಿಧಾನದ ಧರ್ಮ ನಿರಪೇಕ್ಷ ತತ್ವಗಳಿಗೆ ವಿರುದ್ಧವಾಗಿದ್ದು, ಆಕ್ಷೇಪಾರ್ಹವಾಗಿದೆ. ತನಿಖೆ ನಡೆಸಿ, ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ., 'ನಾನು ಪ್ರದರ್ಶಿಸಿದ್ದು ಭಗವಾಧ್ವಜ ಅಷ್ಟೆ. ಕೃಷ್ಣಮಠದ ಕಾರ್ಯಕ್ರಮಗಳಲ್ಲಿ ಅಂತಹ ಧ್ವಜವನ್ನು ಬಳಸುತ್ತಾರೆ. ರಾಜಕೀಯ ಪ್ರೇರಿತವಾಗಿ ನಾನು ಭಾಗವಹಿಸಿಲ್ಲ' ಎಂದು ಹೇಳಿದ್ದಾರೆ.



ಉಡುಪಿ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಅವರು ಪರ್ಯಾಯ ಮೆರವಣಿಗೆಗೆ ಚಾಲನೆ ನೀಡುವ ವೇಳೆ ಕೇಸರಿ ಧ್ವಜ ಪ್ರದರ್ಶಿಸಿದ್ದರು

ಉಡುಪಿ ಪರ್ಯಾಯದ ಮೆರವಣಿಗೆಯಲ್ಲಿ ಕೇಸರಿ ಧ್ವಜ ಹಾರಿಸಿದರೆ ಕಾಂಗ್ರೆಸ್ ಬಾವುಟ ಪ್ರದರ್ಶನ ಮಾಡಬೇಕಿತ್ತೆ?
ವಿ. ಸುನಿಲ್ ಕುಮಾರ್, ಶಾಸಕ

ಜಿಲ್ಲಾಡಳಿತದ ಪರವಾಗಿ ಭಾಗವಹಿಸಿದಾಗ ಸಾಂವಿಧಾನಿಕ ನಿಯಮಗಳನ್ನು ಪಾಲಿಸಬೇಕು ಎಂಬ ಜ್ಞಾನ ಜಿಲ್ಲಾಧಿಕಾರಿ ಅವರಿಗೆ ಇರಬೇಕಿತ್ತು. ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು
ಕೆ.ಫಣಿರಾಜ್, ಪ್ರಧಾನ ಸಂಚಾಲಕ, ಸಹಬಾಳ್ವೆ ಸಂಘಟನೆ

'ಮೆರವಣಿಗೆಗೆ ಸಾಮಾನ್ಯವಾಗಿ ಉಡುಪಿ ನಗರಸಭೆ ಅಧ್ಯಕ್ಷರು ಚಾಲನೆ ನೀಡುತ್ತಾರೆ. ಈಗ ಆಡಳಿತ ಮಂಡಳಿ ಇಲ್ಲ. ನಗರಸಭೆಯ ಆಡಳಿತಾಧಿಕಾರಿಯಾಗಿ ಚಾಲನೆ ನೀಡಿದ್ದೇನೆ' ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

'ಪಾಕ್ ಧ್ವಜವಾಗಿದ್ದರೆ ಟೀಕಿಸಬಹುದಿತ್ತು'

'ಜಿಲ್ಲಾಧಿಕಾರಿ ಭಗವಾಧ್ವಜ ಹಿಡಿದು ಚಾಲನೆ ಕೊಟ್ಟಿದ್ದಾರೆ. ಹಿಂದೆಯೂ ಹೀಗೇ ನೀಡಲಾಗುತ್ತಿತ್ತು, ಒಂದು ವೇಳೆ ಅವರಿಗೆ ಪಾಕಿಸ್ತಾನ ಧ್ವಜ ಕೊಟ್ಟಿದ್ದರೆ ಟೀಕೆ ಮಾಡಬಹುದಿತ್ತು' ಎಂದು ಶಾಸಕ ಯಶ್‌ಪಾಲ್ ಸುವರ್ಣ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಅಂದವರ ಮೇಲೆ ಕ್ರಮ ಕೈಗೊಂಡಿಲ್ಲ. ಪರ್ಯಾಯದ ಯಶಸ್ಸನ್ನು ಸಹಿಸಲಾಗದೆ ಈಗ ಟೀಕೆ ಮಾಡಲಾಗುತ್ತಿದೆ' ಎಂದರು.

'ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅನಿವಾರ್ಯ ಕಾರಣದಿಂದ ಪರ್ಯಾಯಕ್ಕೆ ಬರಲಿಲ್ಲ, ಆದರೆ, ಕನಿಷ್ಠ ಮಾಧ್ಯಮದ ಮೂಲಕವಾದರೂ ಪರ್ಯಾಯಕ್ಕೆ ಅವರು ಶುಭ ಹಾರೈಸಿಲ್ಲ, ನಾನು ದುರುದ್ದೇಶದಿಂದ ಜಿಲ್ಲಾಧಿಕಾರಿ ಕೈಗೆ ಧ್ವಜ ಕೊಟ್ಟಿಲ್ಲ' ಎಂದೂ ಹೇಳಿದರು.

ದಯಾಮರಣಕ್ಕೆ ಅನುಮತಿ ಕೋರಿ ರಾಷ್ಟ್ರಪತಿಗೆ ಪತ್ರ

ಮುಂಡರಗಿ (ಗದಗ ಜಿಲ್ಲೆ): 'ಮೇಲಧಿಕಾರಿಗಳು ಕಿರುಕುಳ ನೀಡುತ್ತಿದ್ದು, ನನಗೆ ದಯಾಮರಣಕ್ಕೆ ಅನುಮತಿ ನೀಡಬೇಕು' ಎಂದು ಕೋರಿ ತಾಲ್ಲೂಕಿನ ಡಂಬಳ ಹೋಬಳಿಯ ಗ್ರಾಮ ಆಡಳಿತಾಧಿಕಾರಿ ಯೋಗೇಶ ಕುರಹಟ್ಟಿ ರಾಷ್ಟ್ರಪತಿ ಅವರಿಗೆ ಪತ್ರ ಬರೆದಿದ್ದಾರೆ.

'ಸಮರ್ಪಕವಾಗಿ ಕೆಲಸ ನಿರ್ವಹಿಸಿದರೂ ಕಿರುಕುಳ ನೀಡುತ್ತಾರೆ. ವಿನಾಕಾರಣ ಪದೇ ಪದೇ ನೋಟಿಸ್ ನೀಡಿ ಹಿಂಸೆ ಕೊಡುತ್ತಾರೆ. ದಿನಚರಿ ನೀಡಿಲ್ಲ ಎಂಬ ಆರೋಪದ ಮೇಲೆ ಎರಡು ತಿಂಗಳಿನಿಂದ ವೇತನ ತಡೆಹಿಡಿದಿದ್ದಾರೆ' ಎಂದು ಪತ್ರದಲ್ಲಿ ಆರೋಪಿಸಿದ್ದಾರೆ.

'ಯೋಗೀಶ ಕುರಹಟ್ಟಿ ಅವರು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಹಲವು ಬಾರಿ ನೋಟಿಸ್ ನೀಡಲಾಗಿದೆ. ಪ್ರೊಬೇಷನರಿ ಅವಧಿಯನ್ನೂ ಪೂರ್ಣಗೊಳಿಸಿಲ್ಲ. ಪತ್ರ ಕುರಿತಂತೆ ಮೇಲಧಿಕಾರಿಗಳ ಜತೆಗೆ ಚರ್ಚಿಸುತ್ತೇನೆ' ಎಂದು ತಹಶೀಲ್ದಾರ್ ಎರ್ರಿಸ್ವಾಮಿ ಅವರು ಪ್ರತಿಕ್ರಿಯಿಸಿದ್ದಾರೆ.

ಸಿದ್ಧಗಂಗಾ ಶ್ರೀ ಪುಣ್ಯಸ್ಮರಣೆ ಇಂದು: ಉಪರಾಷ್ಟ್ರಪತಿ ಭಾಗಿ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರ 7ನೇ ಪುಣ್ಯ ಸಂಸ್ಮರಣೋತ್ಸವ ಬುಧವಾರ (ಜ.21) ನಡೆಯಲಿದ್ದು, ಉಪರಾಷ್ಟ್ರ ಪತಿ ಸಿ.ಪಿ.ರಾಧಾಕೃಷ್ಣನ್ ಭಾಗವಹಿಸಲಿದ್ದಾರೆ.



ಶಿವಕುಮಾರ ಸ್ವಾಮೀಜಿ

ಬೆಳಿಗ್ಗೆ 11 ಗಂಟೆಗೆ ಪುಣ್ಯ ಸ್ಮರಣೋತ್ಸವ ಆರಂಭವಾಗಲಿದೆ. ಉಪರಾಷ್ಟ್ರ ಪತಿ ಸುಮಾರು ಒಂದು ತಾಸು ಮಠದಲ್ಲಿ ಕಳೆಯಲಿದ್ದಾರೆ.

ಸಂಸ್ಮರಣೋತ್ಸವಕ್ಕೆ ಮಠದಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ನಾಡಿನ ವಿವಿಧೆಯಿಂದ ಬರುವ ಸಾವಿರಾರು ಭಕ್ತರಿಗೆ ಬೆಳಿಗ್ಗೆಯಿಂದ ರಾತ್ರಿವರೆಗೂ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಬುಧವಾರ ಬೆಳಗಿನ ಜಾವ ಶಿವಕುಮಾರ ಸ್ವಾಮೀಜಿ ಅವರ ಗದ್ದುಗೆಗೆ ಮಹಾರುದ್ರಭಿಷೇಕದ ಮೂಲಕ ಸಂಸ್ಮರಣೋತ್ಸವ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ. ಇಡೀ ದಿನ ಧಾರ್ಮಿಕ ಕಾರ್ಯಗಳು ನೆರವೇರಲಿದ್ದು, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಗುರುವಿಗೆ ನಮಿಸುವ ಮೂಲಕ ಶಿವಕುಮಾರ ಸ್ವಾಮೀಜಿಯನ್ನು ಸ್ಮರಿಸಲಿದ್ದಾರೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಮಧುಸೂದನ್ ಸಾಯಿ ಗ್ಲೋಬಲ್ ಹ್ಯುಮಾನಿಟೇರಿಯನ್ ಮಿಷನ್ ಸಂಸ್ಥಾಪಕ ಮಧುಸೂದನ ಸಾಯಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಸಚಿವ ಜಿ.ಪರಮೇಶ್ವರ ಇತರ ಪ್ರಮುಖರು ಪಾಲ್ಗೊಳ್ಳಲಿದ್ದಾರೆ.

'ಅಂಕಿತ ಪ್ರಕಾಶನ'ಕ್ಕೆ ಪ್ರಶಸ್ತಿ

ಆಲಮೇಲ: ತಾಲ್ಲೂಕಿನ ಬೆರಗು ಪ್ರಕಾಶನ ಸಂಸ್ಥೆ 2026ನೇ ಸಾಲಿನ ಪ್ರಶಸ್ತಿಗಳನ್ನು ಘೋಷಿಸಿದೆ. ಮಾಜಿ ಸಚಿವ ದಿ. ಎಂ.ಸಿ.ಮನಗೂಳಿ ಸ್ಮರಣಾರ್ಥ 'ಕರುನಾಡಿನ ಅತ್ಯುತ್ತಮ ಪ್ರಕಾಶನ' ಪ್ರಶಸ್ತಿಗೆ ಬೆಂಗಳೂರಿನ ಅಂಕಿತ ಪ್ರಕಾಶನ ಆಯ್ಕೆಯಾಗಿದೆ. ಪ್ರಶಸ್ತಿ ₹25 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ. 'ಬೆರಗು ಸಮಗ್ರ ಸಾಹಿತ್ಯ' ಪ್ರಶಸ್ತಿಗೆ ಕಲಬುರಗಿಯ ಸಾಹಿತಿ ಶ್ರೀಶೈಲ ನಾಗರಾಳ ಅವರು ಆಯ್ಕೆ ಆಗಿದ್ದು, ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. 'ಫೆಬ್ರುವರಿ ಮೊದಲವಾರ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ಸಂಸ್ಥೆಯ ಹೇಳಿಕೆ ತಿಳಿಸಿದೆ.

ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ
ಲಸಿಕೆ ಸಂಸ್ಥೆ ಆವರಣ, 2ನೇ ರೇಲ್ವೆಗೇಟ್ ಹತ್ತಿರ, ಟಿಳಕವಾಡಿ, ಬೆಳಗಾವಿ – 590 006. ದೂರವಾಣಿ : 0831 – 2407241, ಇ–ಮೇಲ್ : dhobelagavi-hfws@karnataka.gov.in

ಸಂಖ್ಯೆ : ಜಿ.ಆರ್.ಸಿ.ಹೆಚ್./ಮ.ಆ./ಬೆ./01/2025–26 ದಿನಾಂಕ : 20–01–2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಬೆಳಗಾವಿಗೆ 2025–26 ನೇ ಶುಚಿ ಕಾರ್ಯಕ್ರಮದಡಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ಜಿಲ್ಲಾ ಹಂತದಲ್ಲಿ ಖರೀದಿಸಿ ಪೂರೈಸಲು ನೊಂದಾಯಿತ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂ ವಾರು ಅಲ್ಪಾವದಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಫಾರ್ಮಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ್ ಪುಸ್ತಕವನ್ನು ದಿನಾಂಕ : 20–01–2026 ರಿಂದ ದಿನಾಂಕ : 04–02–2026 ರ ಸಂಜೆ 5.00 ಗಂಟೆಯೊಳಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : www.kppp.karnataka.gov.in ದಲ್ಲಿ ಇ–ಪೋರ್ಟಲ್ ನಿಗದಿಪಡಿಸಿದ ಶುಲ್ಕದೊಂದಿಗೆ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರ್ಮಗಳನ್ನು ದಿನಾಂಕ : 05–02–2026 ರ ಸಂಜೆ 5.00 ಗಂಟೆಯವರೆಗೆ ಇ–ಪೋರ್ಟಲ್‌ದಲ್ಲಿ ಅಪ್‌ಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರ್‌ಗಳನ್ನು ದಿನಾಂಕ : 07–02–2026 ರ ಮಧ್ಯಾಹ್ನ 12.00 ಗಂಟೆಗೆ ತೆರೆಯಲಾಗುವುದು.

ಹೆಚ್ಚಿನ ವಿವರಗಳನ್ನು (0831–2407241) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯ, ಬೆಳಗಾವಿಯಲ್ಲಿ ಪಡೆಯಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು. ಕ. ಅಧಿಕಾರಿಗಳು, ಬೆಳಗಾವಿ.
ಡಿಐಪಿಆರ್/ಬೆಳಗಾವಿ/1663/ಮಣಿಪಾಲ್/2025–26

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 080–22483636/38/39, ಇ–ಮೇಲ್: edfa@ksbcl.com, mbrs@ksbcl.com, ma@ksbcl.com

ಸಂಖ್ಯೆ: ಕರಾಪಾನಿನಿ/2025–26/ಆಕ್ಷನ್13 ದಿನಾಂಕ: 21.01.2026

ಇ–ಹರಾಜು ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು ರೂ. 60.00 ಕೋಟಿಗಳನ್ನು (ಹಿಂತೆಗೆಯಬಹುದಾದ) ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಸೇರಿದಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ 1 ವರ್ಷದ ಅವಧಿಗೆ ನಿಶ್ಚಿತ ಠೇವಣಿಗಾಗಿ ತೊಡಗಿಸಲು ಉದ್ದೇಶಿಸಲಾಗಿದ್ದು, ಠೇವಣಿ ಸ್ವೀಕರಿಸಲು ಸದರಿ ಬ್ಯಾಂಕ್‌ಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಈ–ಆಕ್ಷನ್ ಮುಖಾಂತರ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಗಳನ್ನು https://kppp.karnataka.gov.in/#/portal/portal-home ಮತ್ತು www.ksbcl.com ವೆಬ್‌ಸೈಟ್ ನಲ್ಲಿ ದಿನಾಂಕ 21.01.2026 ರಿಂದ ಪಡೆಯಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಹ & ಮಾ.ತಂ)
ವಾಸಾಸಂಇ/ವಾಪ್ರ/ಜಿಎ/5122/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ಕ್ರಸಂ. ಕಾನಿಇಂಧಾ/ಗುತ್ತಿಗೆ/ಪಿ.ಬಿ.1/2025–26/4950 ದಿನಾಂಕ: 19.01.2026

ತಿದ್ದುಪಡಿ ಟೆಂಡರ್ ಪ್ರಕಟಣೆ – I.F.T – KW –4
ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ವಿಷಯ:– ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾದ ಕಾಮಗಾರಿಗಳಲ್ಲಿ ತಿದ್ದುಪಡಿ

ಉಲ್ಲೇಖ:– ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,3,4,5/2025–26/4584, ದಿನಾಂಕ: 26.12.2025 ರಂದು ಪ್ರಕಟಿಸಲಾದ ಕಾಮಗಾರಿಗಳ ಹೆಸರು:

1) Improvement and Widening to NH to Lokur via Narendra Mangalgatti MDR From km 6.00 to km 10.00 in Selected reaches of Dharwad taluk. PWD/2025-26/RD/WORK_INDENT32117 ಹಾಗೂ

2) Improvement of Supa Annigeri SH-28 road in Dharwad Taluk (Improvement of roads at selected reaches in Kyarkoppa village). PWD/2025-26/RD/WORK_INDENT 32148. ಕಾಮಗಾರಿಗಳ ಇಂಡೆಂಟ್ ಬದಲಾವಣೆಯಾದ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಹೊರಡಿಸಲಾದ ಕಾಮಗಾರಿಗಳ ಇಂಡೆಂಟ್‌ಗಳನ್ನು ಬದಲಾವಣೆಯಾಗಿದ್ದು, ಈ ಕೆಳಗಿನಂತೆ ತಿದ್ದುಪಡಿ ಮಾಡಲಾದ ಕಾಮಗಾರಿಗಳ ಇಂಡೆಂಟ್‌ಗಳನ್ನು ಓದಿಕೊಳ್ಳಬಹುದಾಗಿದೆ.

As per publication in News Paper	Now to be Read as
1) PWD/2025-26/ RD/WORK_INDENT31537	1) PWD/2025-26/ RD/WORK_INDENT32117
2) PWD/2025-26/ RD/WORK_INDENT31553	2) PWD/2025-26/ RD/WORK_INDENT32148

ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ವಾಸಾಸಂಇ/ಧಾ/ದಿಶಾ/1122/2025–26

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–1,
ಫೋನ್: 080-22214350 WEB SITE: (http://www.schooleducation.kar.nic.in)

No: DPI-CPI0CPE1(UFP)/1/2025-1900278 Date: 19.01.2026

ಟೆಂಡರ್‌ಗಾಗಿ ಆಹ್ವಾನ

ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಶಾಲಾ ಶಿಕ್ಷಣ ಇಲಾಖೆ ಇವರು, 2026–27ನೇ ಸಾಲಿಗೆ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಯೂನಿಫಾರ್ಮ್ ಬಟ್ಟೆಯನ್ನು ಪೂರೈಸಲು ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮಗಳು 2000 ರ ಪ್ರಕಾರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ನೋಂದಾಯಿತ ಮತ್ತು ಅರ್ಹ ಕಂಪನಿಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಟೆಂಡರನ್ನು ಆಹ್ವಾನಿಸಿದ್ದಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತ ಬಿಡ್ಡರ್‌ಗಳು ಮೇಲೆ ತಿಳಿಸಲಾದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು.

1	ಟೆಂಡರ್ ಉಲ್ಲೇಖ ಸಂಖ್ಯೆ	DPI/2025-26/IND0637
2	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ:	19/01/2026 ರಿಂದ
3	ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ	28/01/2026ರ ಬೆಳಿಗ್ಗೆ 11:00 ಗಂಟೆಗೆ, ಈ ಕೆಳಗಿನ ಸ್ಥಳದಲ್ಲಿ: ಆಯುಕ್ತರ ಕಚೇರಿ, ಶಾಲಾ ಶಿಕ್ಷಣ, ಮೊದಲ ಮಹಡಿ, ಹೊಸ ಸಾರ್ವಜನಿಕ ಕಚೇರಿ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು.
4	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	28/01/2026ರ ಸಂಜೆ 5:00 ಗಂಟೆಯವರೆಗೆ
5	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಇ–ಟೆಂಡರನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	09/02/2026ರ ಸಂಜೆ 5:00 ಗಂಟೆಗೆ
6	ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ	10/02/2026ರ ಸಂಜೆ 5:10 ಗಂಟೆಗೆ
7	ಸ್ಯಾಂಪಲ್‌ಗಳನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ	11/02/2026ರ ಸಂಜೆ 5:00 ಗಂಟೆಯವರೆಗೆ
8	ಸಂಪರ್ಕ ವಿಳಾಸ	ಮೊದಲನೇ ಮಹಡಿ, ಹೊಸ ಸಾರ್ವಜನಿಕ ಕಚೇರಿಗಳ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್ ವೃತ್ತ, ಬೆಂಗಳೂರು – 560001, ಇಮೇಲ್: primarydpi@gmail.com, ದೂರವಾಣಿ: 080–22270072.

- ಭರ್ತಿಮಾಡಿದ ಟೆಂಡರ್‌ಗಳನ್ನು ಬಳಕೆದಾರರ ಐಡಿ ಬಳಸಿ ಇ–ಟೆಂಡರಿಂಗ್ ವ್ಯವಸ್ಥೆಯ ಮೂಲಕ ಕೊನೆಯ ದಿನಾಂಕ ಮತ್ತು ಸಮಯದ ಮೊದಲು ಅಪ್‌ಲೋಡ್ ಮಾಡಬೇಕು.
- ತಾಂತ್ರಿಕ ಬಿಡ್ (ಮೊದಲ ಕವರ್) ತೆರೆಯುವ ನಿರ್ದಿಷ್ಟ ದಿನಾಂಕ ಖರೀದಿದಾರರಿಗೆ ರಜಾದಿನವೆಂದು ಘೋಷಿಸಲ್ಪಟ್ಟರೆ, ತಾಂತ್ರಿಕ ಬಿಡ್ ಅನ್ನು ಮುಂದಿನ ಕೆಲಸದ ದಿನದಂದು ತೆರೆಯಲಾಗುತ್ತದೆ.

ಸಹಿ/–
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)
ವಾಸಾಸಂಇ/ವಾಪ್ರ/ಜಿಎ/5121/2025–26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೋಂದಾಯಿತ ಕಛೇರಿ: ನಗರಾಭಿವೃದ್ಧಿ ಭವನ, #22, 17ನೇ 'ಎಫ್' ಅಡ್ಡರಸ್ತೆ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, 2ನೇ ಹಂತ, ಬೆಂಗಳೂರು–560 038 ಫೋ: 080–25196124–129, ಫ್ಯಾಕ್ಸ್: 080–25196110 ಇಮೇಲ್: info@kuidfc.com, ವೆಬ್‌ಸೈಟ್: www.kuidfc.com

ಸಂಖ್ಯೆ: KIUWMIP/T-1/RNB/Add-work/2025-26 ದಿನಾಂಕ: 20.01.2026

ಅಲ್ಪಾವಧಿ ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಅರ್ಹ ಸಲಹೆಗಾರರಿಂದ ಕೆಳಗೆ ತಿಳಿಸಲಾದ ಯೋಜನೆಗೆ ಕೆಐಯುಡಬ್ಲ್ಯುಎಂಐಪಿ ಅಡಿಯಲ್ಲಿ ಸೇವೆಗಳನ್ನು ಆಹ್ವಾನಿಸುತ್ತದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್ ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

Sl. No.	Name of the Service	EMD in Rs.
1	Consultancy Services for Survey, Design, detailed project report and bid documents for 24/7 water supply system to extended layouts for Ranebennur City.	50,000/- (Fifty Thousand Only)

(1) ಟೆಂಡರ್ ಪ್ರಕಟಣೆ ದಿನಾಂಕ: 21.01.2026, (2) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: 28.01.2026 ಸಮಯ: 11.30 ಪೂರ್ವಾಹ್ನ, (3) ಬಿಡ್ ಸಲ್ಲಿಕೆಗಾಗಿ ಕೊನೆಯ ದಿನಾಂಕ ಮತ್ತು ಸಮಯ: 11.02.2026 ಸಮಯ: 5.30 ಅಪರಾಹ್ನ, (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 13.02.2026 ಸಮಯ: 11.00 ಪೂರ್ವಾಹ್ನ, (5) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 19.01.2026 ಸಮಯ: 11.30 ಪೂರ್ವಾಹ್ನ.
ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಮಾಹಿತಿಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಕ್ವಿಮಿಪ್– ಕೆಯುಐಡಿಎಫ್‌ಸಿ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/5108/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 080 22220227
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 18/2025–26
ದಿನಾಂಕ: 19–01–2026

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂ–1 & ಕೆಡಬ್ಲ್ಯೂ–3 & ಕೆಡಬ್ಲ್ಯೂ–4 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.
1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೊರ್‌ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 19.01.2026 ರಿಂದ 27.01.2026 ಸಂಜೆ 04.00 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೊರ್‌ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 27.01.2026 ಸಂಜೆ 4.00 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 28.01.2026 ರಂದು ಸಂಜೆ 04.00 ಕ್ಕೆ ತೆರೆಯಲಾಗುವುದು.
ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/5128/NR/2025-26

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.
ದೂರವಾಣಿ ಸಂಖ್ಯೆ : 08532–225778
THESE WORKS ARE CATAGEORY WISE CONTRACTORS
ಲೋಇ/ರಾವಿ/ತಾಂಶಾ–4/ಟೆಂಪ್ರ/2025–26/4483 ದಿ:13–01–2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2 ,3 & 4)

1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: ಲೋಇ/ರಾವಿ/ತಾಂಶಾ–4/ಟೆಂಪ್ರ/2025–26/4483 ದಿನಾಂಕ: 13–01–2026 2) ಕಾಮಗಾರಿ ಹೆಸರು: ರಾಯಚೂರು ಜಿಲ್ಲೆಯ ಒಟ್ಟು 34 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು & ಸಿಂಧನೂರು ತಾಲೂಕು ವಿವಿಧೆಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) ಕಾಮಗಾರಿಯ ಮೊತ್ತ: ಕನಿಷ್ಠ ರೂ. 335646.34 ಗರಿಷ್ಠ ರೂ.75629701.39 4) ಮುಂಗಡ ಠೇವಣಿ ಮೊತ್ತ: ಕನಿಷ್ಠ ರೂ. 4200.00 ಗರಿಷ್ಠ ರೂ. 1135000.00 5) ಕಾಲಾವಧಿ (ಮಳೆಗಾಲ ಸೇರಿ): ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು 6) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 31/01/2026 ಸಂಜೆ 4.00 ಗಂಟೆಯವರೆಗೆ 7) ಟೆಂಡರ್ ತೆರೆಯುವ ದಿನಾಂಕ: 01/02/2026 ಸಂಜೆ 4.30 ಗಂಟೆಯವರೆಗೆ

ಕಾರಣಾಂತರಗಳಿಂದ ತಿಳಿಯಪಡಿಸಿದ ಟೆಂಡರ ದಿನಾಂಕಗಳು ಹಾಗೂ ಇನ್ನಿತರ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ ಆಹ್ವಾನಿಸಿದಲ್ಲಿ ಗುತ್ತೆದಾರರು ಕೆ.ಪಿ.ಪಿ ಪೋರ್ಟನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಯಿರಾತು ಹೊರಡಿಸಲಾಗುವುದಿಲ್ಲ ಮತ್ತು ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ
ರಾಯಚೂರು.
DIP/RCR/666/KSMCA/669/2025-26

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ ಕೇಂದ್ರ ಸಮಿತಿ
(ರಿ.ನಂ.466/1975)
ನಿಗಮ ಕಾರ್ಯಾಲಯ, ಬೆಸ್ಕಾಂ ಅವರಣ, ಕೆ.ಆರ್. ವೃತ್ತ, ಡಾ| ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001.

ಕ್ರಮಸಂಖ್ಯೆ: ಕವಿಮಂ:ಪಜಾ/ಪವ.ಕಸಂ/ಕೇಂ.ಸ/2025–2026/1036 ದಿನಾಂಕ:19/01/2026

ಪತ್ರಿಕಾ ಪ್ರಕಟಣೆ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ. ಕೇಂದ್ರ ಸಮಿತಿ (ರಿ.466). ಈ ಸಂಸ್ಥೆಯ ಬೈಲಾ ನಿಯಮಾವಳಿ ಪ್ರಕಾರ ಸಂಸ್ಥೆಗೆ ರಾಜ್ಯಾದಾದ್ಯಂತ ಪ್ರತಿನಿಧಿಗಳನ್ನು ವೃತ್ತ/ವಿಭಾಗ ಹಾಗೂ ಮತ ಕ್ಷೇತ್ರವಾರು ಚುನಾಯಿಸಲು **ದಿನಾಂಕ: 19.01.2026** ರಂದು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ನಾಮಪತ್ರಗಳನ್ನು **ದಿನಾಂಕ: 27.01.2026 ರಿಂದ 28.01.2026ರ ಸಂಜೆ 3 ಗಂಟೆ ರವರೆಗೆ** ಸಲ್ಲಿಸಬಹುದಾಗಿರುತ್ತದೆ. ಚುನಾವಣೆಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಸಂಸ್ಥೆಯ ಕೇಂದ್ರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ನಿಮ್ಮ ವ್ಯಾಪ್ತಿಯ ಕೇಂದ್ರ/ವೃತ್ತ ಮತ್ತು ವಿಭಾಗೀಯ/ಮತಕ್ಷೇತ್ರವಾರು ಕಛೇರಿಗಳಲ್ಲಿ ಅರ್ಹ ಸದಸ್ಯರ ವೇಳಾಪಟ್ಟಿಯಂತೆ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಂಸ್ಥೆಯ ಹಿತದೃಷ್ಟಿಯಿಂದ ಕೋರಲಾಗಿದೆ.

ಸಹಿ/–
ಪ್ರಧಾನ ಕಾರ್ಯದರ್ಶಿ
ಕವಿಮಂ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ ಕೇಂದ್ರ ಸಮಿತಿ
ದಿನಾಂಕ:19.01.2026
ಸ್ಥಳ: ಬೆಂಗಳೂರು

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570001, ಕರ್ನಾಟಕ, ದೂ: +91-0821-2520512 (Off), 2520803 (Fax),
Email- mmcrimysore@yahoo.com, website: www.mmcri/karnataka.gov.in

ಸಂಖ್ಯೆ : ಉಪಕರಣ/38/2024–25/Call-2 ದಿನಾಂಕ: 19.01.2026

ಟೆಂಡರ್ ಅಧಿಸೂಚನೆ

ವಿಷಯ: ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ. ಮೈಸೂರು ಇಲ್ಲಿನ ಕೆ.ಆರ್. ಆಸ್ಪತ್ರೆಯ Centre of Competence ಕೇಂದ್ರಕ್ಕೆ ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಕೆ.ಆರ್. ಆಸ್ಪತ್ರೆಯ Centre of Competence ಕೇಂದ್ರಕ್ಕೆ ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಮೂಲಕ **ದಿನಾಂಕ: 20.01.2026** ರಿಂದ ಪಡೆಯಬಹುದಾಗಿದ್ದು, **ದಿನಾಂಕ: 03.02.2026 ರಂದು ಅಪರಾಹ್ನ 5.00** ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು
ವಾಸಾಸಂಇ/ಮೈಸೂರು/ಶಿರಡಿ ಸಾಯಿ/1541/2025–26

ಜಲ ಸಂಪನ್ಮೂಲ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೊಪ್ಪಳ.
www.eemidnkst@rediffmail.com.

ಸಂ: ಕಾನಿಇಂ/ಸನೀ&ಅಂಅವಿ/ಕೊಪ್ಪಳ/ತಾಶಾ/2025–26/4852 ದಿ:19/01/2026

ತಿದ್ದುಪಡಿ–ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಉಲ್ಲೇಖ:– ಈ ಕಛೇರಿ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 4656 ದಿನಾಂಕ: 02–01–2026

ಮೇಲಿನ ಉಲ್ಲೇಖದಲ್ಲಿ ಪ್ರಕಟಣೆಗೊಂಡ ಟೆಂಡರನಲ್ಲಿನ ಕಾಮಗಾರಿಯ ಈ ಕೆಳಗಿನಂತೆ ಮಾರ್ಪಾಡಿಸಿ ತಿದ್ದುಪಡಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಮೂಲ ಟೆಂಡರ್ ಪ್ರಕಟಣೆ: ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20–01–2026 ರ ಸಂಜೆ 5.30 ಗಂಟೆಗೆ **ತಿದ್ದುಪಡಿ:** ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23–01–2026** ಸಂಜೆ 5.30 ಗಂಟೆಗೆ
ಮೂಲ ಟೆಂಡರ್ ಪ್ರಕಟಣೆ: ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 22–01–2026 ರ ಬೆಳಿಗ್ಗೆ 11.00 ಗಂಟೆಗೆ. **ತಿದ್ದುಪಡಿ:** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **27–01–2026** ರ ಬೆಳಿಗ್ಗೆ 11.00 ಗಂಟೆಗೆ.
ಮೂಲ ಟೆಂಡರ್ ಪ್ರಕಟಣೆ: ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 24–01–2026 ಬೆಳಿಗ್ಗೆ 11.00 ಗಂಟೆಗೆ. **ತಿದ್ದುಪಡಿ:** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **29–01–2026** ಬೆಳಿಗ್ಗೆ 11.00 ಗಂಟೆಗೆ.

ಮೇಲಿನ ಟೆಂಡರ ಅಧಿಸೂಚನೆಯ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/629/ಕೆಎಸ್‌ಎಂಸಿಎ/2025–26

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ
(ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು)
ಇ–ಮೇಲ್: ka.bengaluru.urban.dudc@gmail.com
ದೂರವಾಣಿ ಸಂಖ್ಯೆ: 080–22211372/352

ಸಂ: ಜಿನಕೋ/ತಾ.ಶಾ/ನಗರೋತ್ಥಾನ ಹಂತ–04/01/2025–26 ದಿನಾಂಕ: 19.01.2026

ಟೆಂಡರ್ ಪ್ರಕಟಣೆ

ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿನ ಮಾದನಾಯಕನಹಳ್ಳಿ ನಗರಸಭೆ, ಮಾದನಾಯಕನಹಳ್ಳಿ ನಗರಸಭೆ ಪುರಸಭೆ, ಮತ್ತು ಕೋನಪ್ಪನ ಅಗ್ರಹಾರ ಪುರಸಭೆ ಅಮೃತ್ ನಗರೋತ್ಥಾನ ಹಂತ 4.0 ನಿಧಿ ಅನುದಾನದಡಿ ಕಾಮಗಾರಿಗಳನ್ನು ನಿರ್ಹಹಿಸಲು ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಮೊಹರಾದ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ
1	DMA/2025-26/BD/WORK_INDENT53835	208.07	ಸಾಮಾನ್ಯ
2	DMA/2025-26/RD/WORK_INDENT50872/CALL-3	272.16	ಸಾಮಾನ್ಯ
3	DMA/2025-26/BD/WORK_INDENT52216/CALL-2	318.23	ಸಾಮಾನ್ಯ
4	DMA/2025-26/BD/WORK_INDENT52186/CALL-3	99.00	ಸಾಮಾನ್ಯ

1) ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸುವ, ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ, ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕದ ವಿವರಗಳನ್ನು https://kppp.karnataka.gov.in ಪೋರ್ಟಲ್ ಮೂಲಕ ಪಡೆಯಬಹುದಾಗಿದೆ. 2) ಹೆಚ್ಚಿನ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು.
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆ
DIPR/CP/SPAN/5129/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂಖ್ಯೆ 2, 2/1 & 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು–560 009. ದೂ.ಸಂ: 080–22265383
ವೆಬ್‌ಸೈಟ್: www.kiadb.in ಇ–ಮೇಲ್: ceoem@kiadb.in

ಪ್ರಕಟಣೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ The Superintendent of Customs and Central Excise, Bidar ಇಲಾಖೆ ರವರಿಗೆ ಹಂಚಿಕೆ ಮಾಡಲಾದ ಬೀದರ್ ಜಿಲ್ಲೆ, ನೌಬಾದ್ ಹೌಸಿಂಗ್ ಏರಿಯಾ ಕೈಗಾರಿಕಾ ಪ್ರದೇಶದಲ್ಲಿನ ನಿವೇಶನ ಸಂಖ್ಯೆ: 309 ರಲ್ಲಿನ ವಿಸ್ತೀರ್ಣ: 3569.70 ಚ.ಮೀ ಜಮೀನನ್ನು ಮತ್ತು Karnataka State Road Transport Corporation ರವರಿಗೆ ಹಂಚಿಕೆ ಮಾಡಿರುವ ಬೀದರ್ ಜಿಲ್ಲೆ, ಕೊಲ್ಹಾರ್ ಕೈಗಾರಿಕಾ ಪ್ರದೇಶದಲ್ಲಿನ ನಿವೇಶನ ಸಂಖ್ಯೆ: 135–A ರಲ್ಲಿನ ವಿಸ್ತೀರ್ಣ: 16234.00 ಚ.ಮೀ ಜಮೀನನ್ನು ಮಂಡಳಿಗೆ ನಿಯಮಾನುಸಾರ ಹಿಂಪಡೆಯಲಾಗಿರುತ್ತದೆ.

ಸದರಿ ನಿವೇಶನಗಳ ಮರು ಹಂಚಿಕೆ ವಿಷಯವಾಗಿ ಮಂಡಳಿಯಲ್ಲಿ ವಿಚಾರಣೆ ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ಸದರಿ ನಿವೇಶನಗಳನ್ನು ಯಾವುದೇ ವ್ಯಕ್ತಿ / ಸಂಸ್ಥೆಯವರು ಖರೀದಿ ಅಥವಾ ಇನ್ನಾವುದೇ ವ್ಯವಹಾರ ಕೈಗೊಳ್ಳಬಾರದೆಂದು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಈ ಪ್ರಕಟಣೆ ಹೊರಡಿಸಿದಾಗ್ಯೂ ಯಾವುದೇ ವ್ಯವಹಾರ ನಡೆಸಿದ್ದಲ್ಲಿ ಮಂಡಳಿಯು ಜವಬ್ದಾರಿಯಾಗಿರುವುದಿಲ್ಲ.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಶಿವಾಜಿನಗರ ವಿಭಾಗ
ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು
ಸಂಖ್ಯೆ: ಕಾಪಾಅ/ಶಿವಿ/ಇ–ಪ್ರೊಕ್/15/2025–26 ದಿನಾಂಕ: 19–01–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಶಿವಾಜಿನಗರ ವಿಭಾಗ), ಬೆಂ.ಕೇ.ನ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	2025–26 ನೇ ಸಾಲಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸುಧಾರಣೆ ಮತ್ತು ನಿರ್ಮಾಣ ಮಾಡುವುದು (ಸರ್ಕಾರದ ಅನುಬಂಧ–1ರಲ್ಲಿ 03 ಕಾಮಗಾರಿಗಳನ್ನು ಒಳಗೊಂಡಿದೆ) (ಪ್ಯಾಕೇಜ್–03) **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.950.00 ಲಕ್ಷಗಳು, ಇಎಂಡಿ ಮೊತ್ತ: ₹.9,50,000.00 (ರೂ. 1,00,000.00 ಎನ್‌ಇಎಫ್‌ಟಿ ಮೂಲಕ ಉಳಿದ ರೂ. 8,50,000.00 ಬ್ಯಾಂಕ್ ಗ್ಯಾರಂಟಿ ಮೂಲಕ)**
2.	2025–26 ನೇ ಸಾಲಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸುಧಾರಣೆ ಮತ್ತು ನಿರ್ಮಾಣ ಮಾಡುವುದು (ಸರ್ಕಾರದ ಅನುಬಂಧ–1ರಲ್ಲಿ 03 ಕಾಮಗಾರಿಗಳನ್ನು ಒಳಗೊಂಡಿದೆ) (ಪ್ಯಾಕೇಜ್–04) **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.1000.00 ಲಕ್ಷಗಳು, ಇಎಂಡಿ ಮೊತ್ತ: ₹.10,00,000.00 (ರೂ. 1,00,000.00 ಎನ್‌ಇಎಫ್‌ಟಿ ಮೂಲಕ ಉಳಿದ ರೂ. 9,00,000.00 ಬ್ಯಾಂಕ್ ಗ್ಯಾರಂಟಿ ಮೂಲಕ)**
3.	2025–26 ನೇ ಸಾಲಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸುಧಾರಣೆ ಮತ್ತು ನಿರ್ಮಾಣ ಮಾಡುವುದು (ಸರ್ಕಾರದ ಅನುಬಂಧ–1ರಲ್ಲಿ 05 ಕಾಮಗಾರಿಗಳನ್ನು ಒಳಗೊಂಡಿದೆ) (ಪ್ಯಾಕೇಜ್–05) **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.1000.00 ಲಕ್ಷಗಳು, ಇಎಂಡಿ ಮೊತ್ತ: ₹.10,00,000.00 (ರೂ. 1,00,000.00 ಎನ್‌ಇಎಫ್‌ಟಿ ಮೂಲಕ ಉಳಿದ ರೂ. 9,00,000.00 ಬ್ಯಾಂಕ್ ಗ್ಯಾರಂಟಿ ಮೂಲಕ)**

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **28–01–2026**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **23–01–2026**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ವಲಯ–2, ಬೆಂಗಳೂರು ಕೇಂದ್ರ ನಗರ ಪಾಲಿಕೆ, ಅನೆಕ್ಸ್–3, 4ನೇ ಮಹಡಿ, ಜಿಬಿಎ ಕಚೇರಿ ಕಾಂಪೌಂಡ್, ನರಸಿಂರಾಜ ಚೌಕ, ಬೆಂಗಳೂರು ಇಲ್ಲಿ ನಡೆಸಲಾಗುವುದು. (3) ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **28–01–2026**ರ ಸಂಜೆ **4:00** ಗಂಟೆಯವರೆಗೆ. (4) ಟೆಂಡರಿನ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **29–01–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ



ಸುಭಾಷಿತ

ಜೀವನದಲ್ಲಿ ಬುದ್ಧಿವಂತಿಕೆಯೊಂದೇ ಸಾಲದು. ತಾಳ್ಮೆ ಮತ್ತು ವಿವೇಚನೆಯೂ ಮುಖ್ಯ. ಅಂತಹವರ ಬದುಕು ನಿಜಕ್ಕೂ ಸಾರ್ಥಕ.
-ವಿನೋಬಾ ಭಾವೆ

ಸಂಪಾದಕೀಯ

ಅನುದಾನ: ರಾಜ್ಯದ ಕಣ್ಣಿಗೆ ಸುಣ್ಣ ಕೇಂದ್ರದಿಂದ ಪಕ್ಷಪಾತ ಧೋರಣೆ

ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ನೀಡುವಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಒಕ್ಕೂಟ ತತ್ವಕ್ಕೆ ಎಸಗುತ್ತಿರುವ ಅಪಚಾರವಾಗಿದೆ. ದೇಶದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತಿರುವ ರಾಜ್ಯಕ್ಕೆ ಕೇಂದ್ರದಿಂದ ನ್ಯಾಯಬದ್ಧವಾಗಿ ದೊರೆಯಬೇಕಾದ ಪಾಲನ್ನು ನೀಡದೆ ವಂಚಿಸಲಾಗುತ್ತಿದೆ. ಎಲ್ಲ ರಾಜ್ಯಗಳನ್ನು ಸಮಾನ ದೃಷ್ಟಿಯಿಂದ ನೋಡಬೇಕಾದ ಕೇಂದ್ರ ಸರ್ಕಾರ, ತನ್ನ ಮಿತ್ರಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ಭರಪೂರ ಅನುದಾನ ನೀಡುತ್ತಿದ್ದು, ಕಾಂಗ್ರೆಸ್ ಪಕ್ಷ ಆಡಳಿತ ನಡೆಸುತ್ತಿರುವ ಕರ್ನಾಟಕಕ್ಕೆ ದೊರಕಬೇಕಾದ ಪಾಲು ನೀಡುವಲ್ಲಿ ಪಕ್ಷಪಾತ ಧೋರಣೆ ಅನುಸರಿಸುತ್ತಿದೆ. ಕರ್ನಾಟಕದ 24 ಇಲಾಖೆಗಳ ಪ್ರಸ್ತಾವಗಳು ಅನುದಾನಕ್ಕಾಗಿ ಹಾಗೂ ಅನುಮೋದನೆಗಾಗಿ ವರ್ಷಗಳಿಂದ ಕೇಂದ್ರದ ವಿವಿಧ ಸಚಿವಾಲಯಗಳ ಮುಂದಿವೆ. ಇವುಗಳಲ್ಲಿ ಒಂದೇ ಒಂದು ಪ್ರಸ್ತಾವಕ್ಕೂ ಇತ್ತೀಚೆಗೆ ಅನುಮೋದನೆ ಸಿಕ್ಕಿಲ್ಲ. ಕಳೆದ 17 ತಿಂಗಳುಗಳಲ್ಲಿ ರಾಜ್ಯದ ಎರಡು ಯೋಜನೆಗಳಿಗಷ್ಟೇ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ₹3,432 ಕೋಟಿ ಮೊತ್ತದ ಬಳ್ಳಾರಿ-ಚಿಕ್ಕಜಾಜೂರು ರೈಲು ಮಾರ್ಗ ಹಾಗೂ ಬೆಂಗಳೂರಿನ ನಮ್ಮ ಮೆಟ್ರೊ ಮೂರನೇ ಹಂತದ ಯೋಜನೆಗೆ ಕೇಂದ್ರದಿಂದ ಹಸಿರುನಿಶಾನೆ ಸಿಕ್ಕಿದೆ. ಅದರಲ್ಲೂ, ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿ 19 ತಿಂಗಳು ಕಳೆದ ಬಳಿಕ ಮೆಟ್ರೊ ಯೋಜನೆಗೆ ಅನುಮತಿ ದೊರೆತಿದೆ.



ಇದಕ್ಕೆ ತದ್ವಿರುದ್ಧವಾಗಿ, ಆಂಧ್ರಪ್ರದೇಶ ಹಾಗೂ ಬಿಹಾರದ ಅಭಿವೃದ್ಧಿ ಯೋಜನೆಗಳಿಗೆ ತಲಾ ₹1 ಲಕ್ಷ ಕೋಟಿಗೂ ಹೆಚ್ಚಿನ ಹಣ ಕೇಂದ್ರದಿಂದ ದೊರೆತಿದೆ. '2024ರ ಜೂನ್‌ನಿಂದ ಇಲ್ಲಿಯವರೆಗೆ ಆಂಧ್ರಪ್ರದೇಶಕ್ಕೆ ಕೇಂದ್ರ ಸರ್ಕಾರ ₹3 ಲಕ್ಷ ಕೋಟಿ ಆರ್ಥಿಕ ಸಹಾಯ ನೀಡಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಇತ್ತೀಚೆಗಷ್ಟೇ ಹೇಳಿಕೆ ನೀಡಿದ್ದಾರೆ.

ಕೇಂದ್ರದ ಎನ್‌ಡಿಎ ಮೈತ್ರಿಕೂಟದ ಸರ್ಕಾರದಲ್ಲಿ ಕರ್ನಾಟಕದ ಜೆಡಿಎಸ್ ಕೂಡ ಪಾಲುದಾರ ಪಕ್ಷವಾಗಿದೆ ಹಾಗೂ ಆ ಪಕ್ಷದ ಎಚ್‌.ಡಿ. ಕುಮಾರಸ್ವಾಮಿ ಸಂಪುಟದರ್ಜೆ ಸಚಿವರಾಗಿದ್ದಾರೆ. ಅವರು ಸ್ವಯಂ ಆಸಕ್ತಿ ವಹಿಸಿ, ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಯ ಪುನಶ್ಚೇತನಕ್ಕೆ ₹4,000 ಕೋಟಿ ಮೊತ್ತದ ಯೋಜನಾ ವರದಿ ಸಿದ್ಧಪಡಿಸಿ ಹಲವು ತಿಂಗಳು ಕಳೆದಿದ್ದರೂ ಇದುವರೆಗೆ ಅದಕ್ಕೆ ಫಲ ಸಿಕ್ಕಿಲ್ಲ. ಆದರೆ, ವಿಶಾಖಪಟ್ಟಣದ ರಾಷ್ಟ್ರೀಯ ಉಕ್ಕು ಕಾರ್ಖಾನೆಯ ಪುನರುಜ್ಜೀವನಕ್ಕೆ ಕೇಂದ್ರ ಸರ್ಕಾರ ಕಳೆದ ವರ್ಷವೇ ದೊಡ್ಡ ಪ್ಯಾಕೇಜ್ ಪ್ರಕಟಿಸಿದೆ. ಕರ್ನಾಟಕ ರಾಜ್ಯಕ್ಕೆ 15ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ ಆರೋಗ್ಯ ಅನುದಾನವನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎರಡು ವರ್ಷಗಳಿಂದ ಬಿಡುಗಡೆ ಮಾಡಿಲ್ಲ. ಜಲಜೀವನ್ ಮಿಷನ್ ಯೋಜನೆಯಲ್ಲೂ ಕೇಂದ್ರದ ಪಾಲು ₹4,574 ಕೋಟಿ ಬರಬೇಕಿದೆ. ವಿಪತ್ತು ಪರಿಹಾರ ಅನುದಾನ, ಕೇಂದ್ರ ಪ್ರಾಯೋಜಿತ ಯೋಜನೆಗಳ ಪಾಲು, ಮೂಲಸೌಕರ್ಯ ಯೋಜನೆಗಳಿಗೆ ಒದಗಿಸಬೇಕಾದ ನೆರವಿಗೆ ಸಂಬಂಧಿಸಿದಂತೆಯೂ ಕರ್ನಾಟಕ ಕಡೆಗಣನೆಗೆ ಒಳಗಾಗಿರುವ ನಿದರ್ಶನಗಳೇ ಹೆಚ್ಚು. ಈ ನಿರ್ಲಕ್ಷ್ಯ ಹಾಗೂ ರಾಜ್ಯದ ಅಭಿವೃದ್ಧಿ ಯೋಜನೆಗಳ ಕಡೆಗಣನೆಗೆ ಕೇಂದ್ರ ಸರ್ಕಾರದ ರಾಜಕೀಯ ಧೋರಣೆ ಕಾರಣವಾಗಿರುವಂತೆಯೇ, ರಾಜ್ಯವನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳ ಲೋಪವೂ ಕಾರಣವಾಗಿದೆ. ಸರ್ಕಾರದ ಪ್ರಸ್ತಾವಗಳ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ನಿರಂತರ ಸಂವಹನ ನಡೆಸುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ತಮ್ಮ ಪಕ್ಷದ ನಾಯಕರ ಮನವೊಲಿಸಿ ಹಣ ತರಬೇಕಾದ, ರಾಜ್ಯವನ್ನು ಪ್ರತಿನಿಧಿಸುವ ಬಿಜೆಪಿ ಸಂಸದರು, ಸಚಿವರು ಕೂಡ ಹೊಣೆಗೇಡಿತನದಿಂದ ವರ್ತಿಸುತ್ತಿದ್ದಾರೆ. ಕರ್ನಾಟಕಕ್ಕೆ ಅನ್ಯಾಯವಾದರೂ ಪಕ್ಷವನ್ನು ಪ್ರಶ್ನಿಸದಿರುವ ಜನಪ್ರತಿನಿಧಿಗಳ ಧೋರಣೆ ರಾಜ್ಯಕ್ಕೂ, ಮತದಾರರಿಗೂ ಮಾಡುತ್ತಿರುವ ವಿಶ್ವಾಸದ್ರೋಹ.

ಅನುದಾನ ನೀಡುವುದರಲ್ಲಿ ಪಕ್ಷಪಾತ ಮಾಡುವ ಮೂಲಕ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಎಸಗುತ್ತಿದೆ. ಈ ಪಕ್ಷಪಾತ, ಒಕ್ಕೂಟ ವ್ಯವಸ್ಥೆಗೆ ಎಸಗುತ್ತಿರುವ ಅಪಚಾರ.

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ದೇಶದ ಮುಂಚೂಣಿ ರಾಜ್ಯಗಳಲ್ಲೊಂದಾಗಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಉತ್ಪಾದನಾ ವಲಯಗಳ ಮೂಲಕ ಕರ್ನಾಟಕದಿಂದ ಗಣನೀಯ ವರಮಾನ ಕೇಂದ್ರ ಸರ್ಕಾರಕ್ಕೆ ದೊರೆಯುತ್ತಿದೆ. ಆದರೆ, ಇದಕ್ಕೆ ಪ್ರತಿಯಾಗಿ ರಾಜ್ಯದ ಮೂಲಸೌಕರ್ಯ, ನೀರಾವರಿ, ಶಿಕ್ಷಣ, ಆರೋಗ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಗೆ ನೆರವು ನೀಡಲು ಕೇಂದ್ರ ಚೌಕಾಸಿ ನಡೆಸುತ್ತಿದೆ. ಈ ಧೋರಣೆ, ತೆರಿಗೆ ಸಂಗ್ರಹದಲ್ಲಿ ದೊಡ್ಡ ಸಾಧನೆ ತೋರಿದ ರಾಜ್ಯಗಳನ್ನು ಉತ್ತೇಜಿಸುವ ಬದಲು ಶಿಕ್ಷಿಸುವಂತಿದೆ. ಕೇಂದ್ರ ಸರ್ಕಾರ ನೀಡುವ ಅನುದಾನ ಕರುಣೆ ಆಗಿರದೆ, ರಾಜ್ಯಕ್ಕೆ ಸಂವಿಧಾನಬದ್ಧವಾಗಿ ದೊರೆಯಬೇಕಾದ ಪಾಲಾಗಿದೆ. ಈ ಪಾಲನ್ನು ವಂಚಿಸುವುದು ರಾಜ್ಯವನ್ನು ಆರ್ಥಿಕ ಬಿಕ್ಕಟ್ಟಿಗೆ ದೂಡುವ ಪ್ರಯತ್ನವಾಗಿರುವಂತೆಯೇ, ಒಕ್ಕೂಟ ವ್ಯವಸ್ಥೆಯ ಅಡಿಪಾಯವನ್ನು ಶಿಥಿಲಗೊಳಿಸುವ ಪ್ರಯತ್ನವೂ ಆಗಿದೆ. ಗಣತಂತ್ರ ವ್ಯವಸ್ಥೆಯಲ್ಲಿ ಅಪನಂಬಿಕೆ ಉಂಟಾಗುವಂತೆ ಕೇಂದ್ರ ಸರ್ಕಾರ ನಡೆದುಕೊಳ್ಳಬಾರದು.

ಚಾಟಿ

ಮನರಂಜನೆಯ ಔಚಿತ್ಯ



ಜೀವನದಲ್ಲಿ ಮನರಂಜನೆ ಬೇಕು. ಆದರೆ, ನಮ್ಮ ಜೀವನವೇ ಮತ್ತೊಬ್ಬರಿಗೆ ಮನರಂಜನೆ ಆಗುವುದು ಬೇಡ.

ಅಮರನಾಥ್ ಶಿವಶಂಕರ್, ಟೆಕ್ಕಿ, 'ಎಕ್ಸ್'ನಿಂದ

ಕಿಡಿನುಡಿ



ಒಂದು ಪಾದಯಾತ್ರೆ ನಡೆಸಲೂ ಹೈಕಮಾಂಡ್‌ನ ಅನುಮತಿ ಪಡೆಯಬೇಕಾದ ಸ್ಥಿತಿ ಬಿಜೆಪಿಯಲ್ಲಿದೆ. ಕೇಂದ್ರದಿಂದ ಬರಬೇಕಾದ ಅನುದಾನದ ಕುರಿತು ಮಾತನಾಡುವುದಿಲ್ಲ. ಆ ಪಕ್ಷದ ನಾಯಕರು ಚಿಲ್ಲರೆ ರಾಜಕಾರಣ ಮಾಡುತ್ತಿದ್ದಾರೆ.

ಎನ್‌.ಎಸ್‌. ಬೋಸರಾಜು, ಸಣ್ಣ ನೀರಾವರಿ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 21-1-2001

• ಹಲವು ಹುದ್ದೆ ರದ್ದು: ಸಂಪುಟಕ್ಕೆ ಕತ್ತರಿ

ಬೆಂಗಳೂರು, ಜ. 20– ವಿಭಾಗೀಯ-ಮಟ್ಟದ ಆಡಳಿತ ಯಂತ್ರ ಹಾಗೂ ನಾಡ ಕಚೇರಿಗಳನ್ನು ರದ್ದುಪಡಿಸುವ ಜೊತೆಯಲ್ಲಿ ತಹಶೀಲ್ದಾರ್, ಪ್ರಥಮ ದರ್ಜೆ ಸಹಾಯಕ, ದ್ವಿತೀಯದರ್ಜೆ ಸಹಾಯಕ, ಕಿರಿಯ ಸಹಾಯಕ ಮತ್ತು ಸಹಾಯಕ ಹುದ್ದೆಗಳಿಗೆ ಇನ್ನು ಮುಂದೆ ನೇಮಕ ಮಾಡಬಾರದು ಎಂದು ರಾಜ್ಯ ಸರ್ಕಾರ ನೇಮಿಸಿದ್ದ ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿದೆ.

ಸಚಿವ ಸಂಪುಟವನ್ನು ಅವಶ್ಯಕತೆಗೆ ತಕ್ಕಂತೆ ಚಿಕ್ಕ ಹಾಗೂ ಚೊಕ್ಕವಾಗಿ ರಚಿಸಬೇಕು ಎಂದಿರುವ ಆಯೋಗವು ವೈದ್ಯಕೀಯ ಶಿಕ್ಷಣ ಇಲಾಖೆಯನ್ನು ಆರೋಗ್ಯದಲ್ಲಿ, ತೋಟಗಾರಿಕೆಯನ್ನು ಕೃಷಿಯಲ್ಲಿ ಸೇರಿಸಬೇಕು. ವಿಧಾನಸಭೆ ಮತ್ತು ವಿಧಾನಪರಿಷತ್‌ಗೆ ಒಂದೇ ಸಚಿವಾಲಯ ರಚಿಸಬೇಕು ಎಂದು ತಿಳಿಸಿದೆ.

• ಅಮೆರಿಕದ 43ನೇ ಅಧ್ಯಕ್ಷರಾಗಿ ಬುಷ್ ಅಧಿಕಾರ ಸ್ವೀಕಾರ

ವಾಷಿಂಗ್ಟನ್, ಜ. 20 (ಯುಎನ್‌ಐ)– ಜಾರ್ಜ್ ವಾಕರ್ ಬುಷ್ ಅವರು ಇಂದು ಅಮೆರಿಕದ 43ನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಮೂಲಕ ರಿಪಬ್ಲಿಕನ್ ಪಕ್ಷದ ಆಳ್ವಿಕೆ ಜಾರಿಗೆ ಬಂದಿತು.

ನಲವತ್ನಾಲ್ಕು ವರ್ಷದ ಟೆಕ್ಸಾಸ್‌ನ ಮಾಜಿ ಗೌರ್ನರ್ ಬುಷ್ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುತ್ತಿರುವ ಈ ಹಿಂದೆ ಅಧ್ಯಕ್ಷರಾಗಿದ್ದವರ ಪುತ್ರರಲ್ಲಿ ಎರಡನೆಯವರು.

75 ವರ್ಷಗಳ ಹಿಂದೆ

ಭಾನುವಾರ, 21-1-1951

• ಚೀಣಾದೊಡನೆ ಒಪ್ಪಂದಕ್ಕಾಗಿ ಕಡೇ ಘಳಿಗೆ ಸಂಧಾನ

ಲೇಕ್‌ಸಕ್ಸಸ್, ಜ. 20– ಕೊರಿಯದ ಸಮಸ್ಯೆ ಬಗ್ಗೆ ಪೀಕಿಂಗಿನೊಡನೆ ಒಪ್ಪಂದಕ್ಕೆ ಬರುವ ಮಾರ್ಗವನ್ನು ಪರಿಶೀಲಿಸಲು ಕೆಲವು ಅರಬ್ ಮತ್ತು ಏಷ್ಯನ್ ರಾಷ್ಟ್ರಗಳು ಇಂದು ಕಡೇಘಳಿಗೆ ಯತ್ನ ಮಾಡಿದವು.

ಚೀಣಾದ ಧೋರಣೆ ಖಂಡನೀಯವೆಂದು ಸಮಿತಿಯ ಬಹುಮತಾಭಿಪ್ರಾಯ ನಿರ್ಧಾರವಾದುದಾದರೂ ಚೀಣಾ ವಿರೋಧವಾಗಿ ಯಾವ ರೀತಿ ಪ್ರತಿಬಂಧಕಗಳನ್ನು ಜಾರಿಗೆ ತರಬೇಕೆಂಬ ವಿಷಯದಲ್ಲಿ ಏಕಾಭಿಪ್ರಾಯವಿರಲಿಲ್ಲ.

ವಿಶ್ವಸಂಸ್ಥೆಯು ಮಂಡಿಸುವ ನಿರ್ಣಯದಲ್ಲಿ ಆಕ್ರಮಣಕಾರಿ ರಾಷ್ಟ್ರಕ್ಕೆ ವಿರೋಧವಾಗಿ ಸಾಮೂಹಿಕ ಪ್ರತಿಬಂಧಕ ಹಾಕಲು ಅಮೆರಿಕ ಒತ್ತಾಯಪಡಿಸುವ ನಿರೀಕ್ಷೆಯಿದೆ.

ಫುಟ್‌ಬಾಲ್: ಆಟವೇ ಕಾಲ್ಚೆಂಡು!



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಅಂಗಳದಾಚೆಗಿನ ಎಂಥ ಪ್ರತಿಕೂಲ ಸನ್ನಿವೇಶವನ್ನೂ ನಿಭಾಯಿಸುವ ಸಾಮರ್ಥ್ಯ ಭಾರತೀಯ ಕ್ರಿಕೆಟ್‌ಗಿದೆ. ಫುಟ್‌ಬಾಲ್ ಕಥೆ ಬೇರೆಯದೇ. ಭಾರತದ ಫುಟ್‌ಬಾಲ್ ಕ್ಷೇತ್ರ, ಆಟಗಾರರ ಕಾಲುಗಳಿಗೆ ಕಸುವು ತುಂಬುವ ಪೋಷಕರ ನಿರೀಕ್ಷೆಯಲ್ಲಿದೆ.

ಆರು ತಿಂಗಳ ಹಿಂದೆ, ಆನ್‌ಲೈನ್ ಗೇಮಿಂಗ್ ಮತ್ತು ಜೂಜಾಟಗಳ ಪ್ರಚಾರಕ್ಕೆ ನ್ಯಾಯಾಲಯ ತಡೆ ನೀಡಿತು. ಅದರಿಂದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಗೇಮಿಂಗ್ ಕಂಪನಿಯೊಂದರ ಜೊತೆ ಮಾಡಿಕೊಂಡಿದ್ದ ಪ್ರಾಯೋಜಕತ್ವಕ್ಕೆ ಸಂಬಂಧಿಸಿದ ಒಪ್ಪಂದದಿಂದ ಹೊರಬರಬೇಕಾಯಿತು. ಆದರೆ, ಒಪ್ಪಂದ ರದ್ದಾದುದರಿಂದ ಬಿಸಿಸಿಐಗೆ ನಷ್ಟವಾಗಲಿಲ್ಲ. ಬದಲಿಗೆ, ಅಪೋಲೊ ಟೈರ್ಸ್ ಜೊತೆಗಿನ ಹೊಸ ಒಪ್ಪಂದದಿಂದ ಹೆಚ್ಚಿನ ಲಾಭವೇ ಆಯಿತು.

ಕ್ರಿಕೆಟ್ ಕ್ಷೇತ್ರವು ಪ್ರತಿ ಹಂತದಲ್ಲಿಯೂ ಜನಬಲ, ಧನಬಲ ಮತ್ತು ಅಧಿಕಾರಬಲವನ್ನು ಬೆಳೆಸಿಕೊಂಡಿರುವುದೇ ಇದಕ್ಕೆ ಕಾರಣ. ಕೇಂದ್ರ ಸರ್ಕಾರದ ಕ್ರೀಡಾನೀತಿಗಳನ್ನು ತಳ್ಳಿಹಾಕುವ ಧಾರ್ಷ್ಟ್ಯವೂ ಬಿಸಿಸಿಐಗೆ ಇದೆ. ಇಂತಹ ಸನ್ನಿವೇಶವನ್ನು ದೇಶದ ಬೇರೆ ಕ್ರೀಡೆಗಳಲ್ಲಿ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಇದಕ್ಕೆ ಜ್ವಲಂತ ನಿದರ್ಶನದಂತಿದೆ, ಫುಟ್‌ಬಾಲ್ ಕ್ರೀಡೆಯ 'ಇಂಡಿಯನ್ ಸೂಪರ್ ಲೀಗ್' (ಐಎಸ್‌ಎಲ್) ಟೂರ್ನಿಯ ವಿವಾದ.

ಬೈಚುಂಗ್ ಭುಟಿಯಾ, ಸುನಿಲ್ ಚೆಟ್ರಿ, ಗುರುಪ್ರೀತ್ ಸಿಂಗ್ ಸಂಧು, ಸಂದೇಶ್ ಜಿಂಗಾನ ಮತ್ತು ವಿನೀತ್ ಅವರಂತಹ ಬೆರಳೆಣಿಕೆಯಷ್ಟು ತಾರಾ ವರ್ಚಸ್ಸಿನ ಆಟಗಾರರಿಂದಾಗಿ ಕಳೆದ ಎರಡು ದಶಕಗಳಲ್ಲಿ ಭಾರತದಲ್ಲಿ ಒಂದಿಷ್ಟು ಪ್ರಗತಿ ಕಂಡಿದ್ದ ಫುಟ್‌ಬಾಲ್ ಈಗ ವಿವಾದದಿಂದಾಗಿ ಗಾಳಿ ತೆಗೆದ ಚೆಂಡಿನಂತೆ ಮುದುಡಿದೆ!

ಐಎಸ್‌ಎಲ್ ನಡೆಸುತ್ತಿದ್ದ ಎಫ್‌ಎಸ್‌ಡಿಎಲ್ (ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್) ಮತ್ತು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ನಡುವಣ 15 ವರ್ಷಗಳ 'ಮಾಸ್ಟರ್ ರೈಟ್ಸ್ ಅಗ್ರಿಮೆಂಟ್' ಅವಧಿ ಕಳೆದ ಜುಲೈನಲ್ಲಿ ಮುಗಿಯಿತು. ಹೊಸ ಆರ್ಥಿಕ ಪಾಲುದಾರರು ಮತ್ತು ಪ್ರಾಯೋಜಕರು ಸಿಗದ ಕಾರಣ ಪ್ರಸಕ್ತ ಋತುವಿನ ಟೂರ್ನಿಯನ್ನು ನಡೆಸುವುದಿಲ್ಲವೆಂದು ಎಐಎಫ್‌ಎಫ್ ಹೇಳಿತು. ಇದರ ಪರಿಣಾಮಗಳು ತೀವ್ರವಾಗಿದ್ದವು. ಬೆಂಗಳೂರು ಎಫ್‌ಸಿ, ಚೆನ್ನೈಯಿನ್ ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ಸೇರಿದಂತೆ ಎಲ್ಲ 14 ಕ್ಲಬ್‌ಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯವುಂಟಾಯಿತು. ಕಳೆದ ಒಂದೂವರೆ ದಶಕದಿಂದ ಕ್ಲಬ್‌ಗಳು ಮೂಲಸೌಕರ್ಯ ಅಭಿವೃದ್ಧಿ, ಪ್ರತಿಭಾಶೋಧ ಹಾಗೂ ಯುವ ಆಟಗಾರರ ಪೋಷಣೆಗಾಗಿ ಮಾಡಿದ ಹೂಡಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದಾಗಿ ಹನ್ನೊಂದು ಕ್ಲಬ್‌ಗಳು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರಿಗೆ ಪತ್ರ ಬರೆದವು.

ಇನ್ನೊಂದೆಡೆ ಆಟಗಾರರು, ತರಬೇತುದಾರರು, ವಿಶ್ಲೇಷಕರು, ವೈದ್ಯಕೀಯ ಸಿಬ್ಬಂದಿ, ಮೈದಾನ ಸಿಬ್ಬಂದಿ, ಆಡಳಿತಾಧಿಕಾರಿಗಳು ಸೇರಿದಂತೆ ಸುಮಾರು ಎರಡು ಸಾವಿರ ಜನರ ಜೀವನೋಪಾಯಕ್ಕೂ ಕುತ್ತು ಬಂದಿತ್ತು. ಫ್ರಾಂಚೈಸಿಗಳ ಒಪ್ಪಂದಗಳು ಸ್ಥಗಿತಗೊಂಡಿವೆ. ವಿಶ್ವ ಆಟಗಾರರ ಒಕ್ಕೂಟವು (ಫಿಫ್‌ಪ್ರೊ) ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿತು. 'ಹಕ್ಕುಗಳ ಉಲ್ಲಂಘನೆ' ಎಂದು ಹೇಳಿದೆ. ಅಲ್ಲದೇ ವಿಶ್ವ ಫುಟ್‌ಬಾಲ್ ಫೆಡರೇಷನ್ (ಫಿಫಾ) ಮತ್ತು ಏಷ್ಯಾ ಫುಟ್‌ಬಾಲ್ ಕಾನ್ಫೆಡರೇಷನ್‌ಗೂ (ಎಎಫ್‌ಸಿ) ವರದಿ ಸಲ್ಲಿಸಿದೆ.

ದೇಶವನ್ನು ಪ್ರತಿನಿಧಿಸುವ ಫುಟ್‌ಬಾಲ್ ಆಟಗಾರರು ಸರ್ಕಾರ ಮತ್ತು ಫೆಡರೇಷನ್ ಮುಂದೆ 'ನಮಗೆ ಆಡಲು ಅವಕಾಶ ಕೊಡಿ. ಫುಟ್‌ಬಾಲ್ ಉಳಿಸಿಕೊಡಿ' ಎಂದು ಗೋಗರೆಯುವ ಸ್ಥಿತಿಯನ್ನು ಈ ಪ್ರಕರಣ ಸೃಷ್ಟಿಸಿದೆ. ಬಿಕ್ಕಟ್ಟನ್ನು ಬಗೆಹರಿಸಲು ಫಿಫಾ (ಜಾಗತಿಕ ಫುಟ್‌ಬಾಲ್ ಫೆಡರೇಷನ್) ಮಧ್ಯಸ್ಥಿಕೆ ವಹಿಸಬೇಕು ಎಂದು ಸುನಿಲ್ ಚೆಟ್ರಿ, ಗುರುಪ್ರೀತ್ ಸಿಂಗ್ ಸಂಧು, ಸಂದೇಶ್ ಜಿಂಗಾನ್, ಲಾಲಿಯನ್ ಝುವಾಲಾ ಚಾಂಗ್ಟೆ ಅವರೆಲ್ಲರೂ ಸೇರಿ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿದೆ. 'ಇಲ್ಲಿ ಫುಟ್‌ಬಾಲ್ ಆಡಳಿತ ಮತ್ತು ಸರ್ಕಾರಕ್ಕೆ ಈ ಬಿಕ್ಕಟ್ಟು ಪರಿಹರಿಸಲು ಸಾಧ್ಯವಾಗುತ್ತಿಲ್ಲ' ಎಂದೂ ಅವರು ಹೇಳಿದ್ದಾರೆ.

'ಭಾರತದ ಫುಟ್‌ಬಾಲ್ ದಯನೀಯ ಸ್ಥಿತಿ ತಲಪಿದೆ. ಇದು ನಾಚಿಕೆಗೇಡು' ಎಂದು ಬಾಲಿವುಡ್ ತಾರೆ, ಐಎಸ್‌ಎಲ್‌ನಲ್ಲಿ ನಾರ್ತ್ ಈಸ್ಟ್ ತಂಡದ ಸಹಮಾಲೀಕರೂ ಆಗಿರುವ ಜಾನ್ ಅಬ್ರಹಾಂ ಕಿಡಿಕಾರಿದ್ದಾರೆ. ಇಷ್ಟೆಲ್ಲ ಪ್ರಹಸನದ ನಂತರ ಟೂರ್ನಿ ನಡೆಸಲು ಈಗ ಹಸಿರು ನಿಶಾನೆ ದೊರೆತಿದೆ.

ದಿಗ್ಗಜ ಆಟಗಾರರು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವಿರೋಧದ ಕಾವು ಏರುತ್ತಿದ್ದಂತೆಯೇ ಕೇಂದ್ರ ಕ್ರೀಡಾ ಸಚಿವಾಲಯವು ವಿವಾದಕ್ಕೆ ಅಲ್ಪವಿರಾಮ ನೀಡುವ ಹೆಜ್ಜೆ ಇಟ್ಟಿದೆ. ಫೆಬ್ರುವರಿ 14ರಿಂದ ಐಎಸ್‌ಎಲ್ ಆರಂಭಿಸಲು ಮುಂದಾಗಿದೆ. ಇದೇ ಸಂದರ್ಭದಲ್ಲಿ ಐಲೀಗ್ ಕೂಡ ಆರಂಭವಾಗಲಿದೆ. ಇಷ್ಟಾದರೂ ಆರ್ಥಿಕ ಪಾಲುದಾರರು ಈ ಟೂರ್ನಿಯಲ್ಲಿ ಹೂಡಿಕೆ ಮಾಡಲು ಮುಂದೆ ಬಂದಿಲ್ಲ. ಸರ್ಕಾರವೇ ಹಣ ನೀಡಬೇಕಾದ ಪರಿಸ್ಥಿತಿ ಬಂದೊದಗಿದೆ. ಈ ಪ್ರಕರಣವು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮತ್ತು ಕ್ರೀಡಾ ಸಚಿವಾಲಯಗಳ ಅಸಮರ್ಪಕ ಕಾರ್ಯವೈಖರಿಯನ್ನು ಬಹಿರಂಗಗೊಳಿಸಿದೆ.

ಟೂರ್ನಿ ನಡೆಸುವುದಾಗಿ ಸರ್ಕಾರ ಹೇಳಿದ್ದರೂ, ಫುಟ್‌ಬಾಲ್ ಕ್ರೀಡೆಗಂಟಿದ ಸಮಸ್ಯೆಗಳ ನಿವಾರಣೆಗೆ ಇಷ್ಟು ಸಾಕಾಗದು. ಅಧಿಕೃತ ಪ್ರಸಾರ ಸಂಸ್ಥೆಗಳು ವೇಳಾಪಟ್ಟಿ ನಿರ್ವಹಣೆಯ ಗೊಂದಲದಲ್ಲಿವೆ. ಅದರಲ್ಲೂ ಈ ವರ್ಷ ಪ್ರಮುಖ ಕ್ರೀಡಾಕೂಟಗಳು (ಟಿ20 ಕ್ರಿಕೆಟ್ ವಿಶ್ವಕಪ್, ಫಿಫಾ ವಿಶ್ವಕಪ್, ಏಷ್ಯನ್ ಗೇಮ್ಸ್, ಐಪಿಎಲ್) ನಡೆಯಲಿವೆ. ಆದ್ದರಿಂದ ಟಿ.ವಿ. ಪ್ರಸಾರದ ವೇಳಾಪಟ್ಟಿಯು ದಟ್ಟಣೆಯಿಂದ ಕೂಡಿದೆ. ಈ ಸಂದರ್ಭದಲ್ಲಿ ಐಎಸ್‌ಎಲ್ ವೀಕ್ಷಕರ ಸಂಖ್ಯೆ ಕುಸಿದರೆ ನಷ್ಟವನ್ನು ಭರಿಸಲು ಫ್ರಾಂಚೈಸಿಗಳು ಸಿದ್ಧವಾಗಿಲ್ಲ.

ಇದೆಲ್ಲದರ ನಡುವೆಯೇ ಅರ್ಜೆಂಟೀನಾದ ಫುಟ್‌ಬಾಲ್ ದಂತಕಥೆ ಲಯೊನೆಲ್ ಮೆಸ್ಸಿ ಭಾರತ ಪ್ರವಾಸವನ್ನು ಮುಗಿಸಿ ಹೋಗಿದ್ದಾರೆ. ಇಲ್ಲಿಯ ಜನರ ಪ್ರೀತಿ, ಉತ್ಸಾಹಗಳನ್ನು ಕಂಡು ಪುಳಕಿತರಾದ ಅವರು, 'ಭಾರತದಲ್ಲಿ ಫುಟ್‌ಬಾಲ್‌ಗೆ ಉಜ್ವಲ ಭವಿಷ್ಯ ಇದೆ' ಎಂದು ಹೇಳಿದ್ದಾರೆ.

ಮೆಸ್ಸಿ ಪ್ರವಾಸಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಲಾಗಿದೆ. ಭಾರತದ ಫುಟ್‌ಬಾಲ್ ರಂಗವನ್ನು ಉಳಿಸಿ, ಬೆಳೆಸಲು ಹೂಡಿಕೆ ಮಾಡುವವರು ಯಾರೂ ಇಲ್ಲ ಎಂದು ಆಟಗಾರ ಸಂದೇಶ್ ಜಿಂಗಾನ್ ಬೇಸರ ವ್ಯಕ್ತಪಡಿಸಿದ್ದಾರೆ. ಅವರ ಮಾತುಗಳನ್ನು ತಳ್ಳಿ ಹಾಕುವಂತಿಲ್ಲ. ಐಎಸ್‌ಎಲ್ ಆಯೋಜನೆಯ ಬಿಡ್‌ಗಾಗಿ ಟೆಂಡರ್ ಕರೆದಾಗ ಎಐಎಫ್‌ಎಫ್‌ಗೆ ಸಿಕ್ಕ ನೀರಸ ಸ್ಪಂದನವೇ ಇದಕ್ಕೆ ಉದಾಹರಣೆ.

ಸದ್ಯದ ಪರಿಸ್ಥಿತಿಯಲ್ಲಿ ಐಎಸ್‌ಎಲ್ ಮಾತ್ರವಲ್ಲ, ಭಾರತದ ಫುಟ್‌ಬಾಲ್ ಕ್ರೀಡಾರಂಗಕ್ಕೆ ಪೂರ್ಣ-ಪ್ರಮಾಣದ ಸುಧಾರಣೆಯ ಅಗತ್ಯವಿದೆ. ಫಿಫಾ ರ‍್ಯಾಂಕಿಂಗ್‌ನಲ್ಲಿ 142ನೇ ಸ್ಥಾನಕ್ಕೆ ಕುಸಿದಿರುವ ತಂಡವನ್ನು ಮೇಲಕ್ಕೆತ್ತುವುದು ಸುಲಭದ ಮಾತಲ್ಲ. ವಿಶ್ವದಲ್ಲಿ ಅತ್ಯಧಿಕ ಗೋಲುಗಳಿಸಿದವರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಸುನಿಲ್ ಚೆಟ್ರಿ ಕೂಡ ಈಗ ನಿವೃತ್ತರಾಗಿದ್ದಾರೆ. ಹೊಸ ಪ್ರತಿಭೆಗಳನ್ನು ಸಿದ್ಧಗೊಳಿಸುವ ವ್ಯವಸ್ಥೆಯು ವೃತ್ತಿಪರವಾಗಿಲ್ಲ. ಆ ಕಾರ್ಯವು ಐಎಸ್‌ಎಲ್‌ನಲ್ಲಿ ನಡೆಯುತ್ತಿತ್ತು. ಫ್ರಾಂಚೈಸಿಗಳು ನಡೆಸುವ ತರಬೇತಿ ಶಿಬಿರಗಳು, ಪ್ರತಿಭಾನ್ವೇಷಣೆಗಳಿಂದಾಗಿ ಭಾರತದ ಎಲ್ಲ ರಾಜ್ಯಗಳ ಗ್ರಾಮಾಂತರ ಪ್ರದೇಶಗಳ ಆಟಗಾರರು ಹೊರಹೊಮ್ಮಿದ್ದಾರೆ. ಬೆಂಗಳೂರು, ಮುಂಬೈ, ಕೋಲ್ಕತ್ತ, ಗೋವಾ, ಕೊಚ್ಚಿಯಂತಹ ನಗರಗಳಲ್ಲಿ ವಿದೇಶಗಳ ಕೆಲವು ಕ್ಲಬ್‌ಗಳು ತಮ್ಮ ಶಾಖೆ ಆರಂಭಿಸಲೂ ಫ್ರಾಂಚೈಸಿ ಲೀಗ್ ಕಾರಣವಾಗಿತ್ತು. ಎಐಎಫ್‌ಎಫ್‌ನಲ್ಲಿ ಮಾಜಿ ಅಂತರರಾಷ್ಟ್ರೀಯ ಆಟಗಾರ ಚೌಬೆಯವರೇ ಅಧ್ಯಕ್ಷರಾಗಿ ಬಂದರೂ ಸಮಸ್ಯೆಗಳಿಗೆ ಇನ್ನೂ ಮುಕ್ತಿ ಸಿಗುವಂತೆ ಕಾಣುತ್ತಿಲ್ಲ.

ಮೊದಲಿನಿಂದಲೂ ಇರುವ ದೇಶಿ ಟೂರ್ನಿಗಳು ಮತ್ತು ಐಎಸ್‌ಎಲ್ ಒಂದಕ್ಕೊಂದು ಪೂರಕವಾಗಿ ಬೆಳೆಯಬೇಕು. ಬಹುತೇಕ ಎಲ್ಲ ರಾಜ್ಯಗಳ ತಂಡಗಳೂ ಭಾಗವಹಿಸುವ ಸಂತೋಷ್ ಟ್ರೋಫಿ ಟೂರ್ನಿಯ ವೈಭವ ಮರಳಬೇಕು. ಗಾಯಾಳುಗಳ ನಿರ್ವಹಣೆಗೆ 'ಬಿಸಿಸಿಐ ಶ್ರೇಷ್ಠತಾ ಕೇಂದ್ರ'ದ ಮಾದರಿ ಫುಟ್‌ಬಾಲ್‌ಗೂ ಅಪೇಕ್ಷಣೀಯ. ಆಧುನಿಕ ಕಾಲಕ್ಕೆ ತಕ್ಕ ತರಬೇತಿ ವ್ಯವಸ್ಥೆಗಳು ಅಭಿವೃದ್ಧಿಯಾಗಬೇಕು. ಜಗತ್ತಿನ ಭೂಪಟದಲ್ಲಿರುವ ಪುಟ್ಟಪುಟ್ಟ ರಾಷ್ಟ್ರಗಳು ಫುಟ್‌ಬಾಲ್‌ನಲ್ಲಿ ಮುಂಚೂಣಿಯಲ್ಲಿವೆ. ಭಾರತಕ್ಕೆ ಮಾತ್ರ ಇನ್ನೂ ಫಿಫಾ ವಿಶ್ವಕಪ್ ಹಾಗೂ ಒಲಿಂಪಿಕ್ಸ್ ಭಾಗವಹಿಸುವಿಕೆ ಇನ್ನೂ ಬಹುದೂರದಲ್ಲಿದೆ.

ರಾಜ್ಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿರುವ ಮೂಲಸೌಲಭ್ಯವನ್ನು ಅಭಿವೃದ್ಧಿಪಡಿಸುವತ್ತ ಚಿತ್ತ ಹರಿಸುವ ಅನಿವಾರ್ಯತೆ ಇದೆ. ಕರ್ನಾಟಕದ ಉದಾಹರಣೆಯನ್ನೇ ತೆಗೆದುಕೊಳ್ಳಿ. ಪ್ರತಿದಿನವೂ ಒಂದಿಲ್ಲೊಂದು ಫುಟ್‌ಬಾಲ್ ಟೂರ್ನಿ ನಡೆಯುವ ನಗರ ಇದು. ಒಲಿಂಪಿಯನ್ ಆಟಗಾರರನ್ನು ದೇಶಕ್ಕೆ ಕೊಟ್ಟ ಹೆಗ್ಗಳಿಕೆಯೂ ಇದಕ್ಕಿದೆ. ಎಂಟು ವರ್ಷಗಳ ಹಿಂದೆ 17 ವರ್ಷದೊಳಗಿನವರ ಫಿಫಾ ವಿಶ್ವಕಪ್ ಪಂದ್ಯಗಳನ್ನು ಆಯೋಜಿಸುವ ಅವಕಾಶವೂ ಸಿಕ್ಕಿತ್ತು. ಆದರೆ, ಕಾಲಮಿತಿಯೊಳಗೆ ಇಲ್ಲಿ ಫುಟ್‌ಬಾಲ್ ಕ್ರೀಡಾಂಗಣವನ್ನು ಸಿದ್ಧಗೊಳಿಸದ ಕಾರಣಕ್ಕೆ ಪಂದ್ಯಗಳನ್ನು ಸ್ಥಳಾಂತರಿಸಲಾಗಿತ್ತು. ಹೋದ ವರ್ಷ ಕಂಠೀರವ ಕ್ರೀಡಾಂಗಣದಲ್ಲಿ ವ್ಯವಸ್ಥೆಗಳು ಸರಿಯಿಲ್ಲ ಎಂಬ ಕಾರಣಕ್ಕೆ ಎಎಫ್‌ಸಿ ಕ್ವಾಲಿಫೈಯರ್ ಪಂದ್ಯಗಳನ್ನು ಸ್ಥಳಾಂತರಿಸಲಾಗಿತ್ತು. ಬೆಂಗಳೂರಿನಲ್ಲಿ ಫುಟ್‌ಬಾಲ್ ಕ್ರೀಡೆಗಾಗಿಯೇ ಪ್ರತ್ಯೇಕ ಕ್ರೀಡಾಂಗಣ ಇದ್ದರೂ ಅಂತರರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿಪಡಿಸಲು ಸಾಧ್ಯವಾಗಿಲ್ಲ. ಪ್ರತಿಯೊಂದು ಊರಿನಲ್ಲಿಯೂ ಫುಟ್‌ಬಾಲ್ ಆಡುವವರು ಇದ್ದಾರೆ. ಆದರೆ, ಆಟಗಾರರ ಕಾಲುಗಳಿಗೆ ಶಕ್ತಿ ತುಂಬುವ ಪೋಷಕರ ಕೊರತೆ ಇದೆ. ಇದಲ್ಲದೇ ಹಲವು ಅಡೆತಡೆಗಳನ್ನು ನಿವಾರಿಸುವ ಸವಾಲು ಎಐಎಫ್‌ಎಫ್ ಮುಂದಿದೆ. ಭಾರತವು 2036ರಲ್ಲಿ ಒಲಿಂಪಿಕ್ ಕೂಟದ ಆತಿಥ್ಯದ ಕನಸು ಕಾಣುತ್ತಿದೆ. ಕನಿಷ್ಠ 'ಆತಿಥೇಯ ಕೋಟಾ'ದಲ್ಲಿ ಆಡುವಂತಹ ತಂಡ ಬೆಳೆಸುವ ವ್ಯವಸ್ಥೆ ಆಗಬೇಕಲ್ಲವೇ?



ವಾಚಕರ ವಾಣಿ

ಋತುಚಕ್ರ ರಜೆ ನೀಡಿಕೆಯಲ್ಲಿ ತಾರತಮ್ಯ

ಮಹಿಳಾ ನೌಕರರ ಮನೋಸ್ಥೈರ್ಯ ಹೆಚ್ಚಿಸಲು 18ರಿಂದ 52 ವರ್ಷದವರೆಗಿನ ಮಹಿಳೆಯರಿಗೆ ಪ್ರತಿ ತಿಂಗಳು ಒಂದು ದಿನದ ಋತುಚಕ್ರ ರಜೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದೆ. ಕಾಯಂ, ಗುತ್ತಿಗೆ, ಹೊರಗುತ್ತಿಗೆ ನೌಕರರಿಗೆ ವೇತನಸಹಿತ ರಜೆಯ ಸೌಲಭ್ಯ ನೀಡುವಂತೆ ಸೂಚಿಸಿದೆ. ಆದರೆ, ಕೆಲವು ಸರ್ಕಾರಿ ಕಚೇರಿಗಳಲ್ಲಿ ಋತುಚಕ್ರ ರಜೆ ಸೌಲಭ್ಯವನ್ನು ಕಾಯಂ ಸಿಬ್ಬಂದಿಗಷ್ಟೇ ಸೀಮಿತಗೊಳಿಸಿ ಆದೇಶ ಹೊರಡಿಸಲಾಗಿದೆ. ಈ ಕುರಿತು ರಾಜ್ಯ ಮುಖ್ಯ ಕಾರ್ಯದರ್ಶಿ ಅವರು ಪರಿಶೀಲನೆ ನಡೆಸಬೇಕಿದೆ. ಸರ್ಕಾರದ ಸೂಚನೆಯನ್ನು ತಿರುಚಿ ಆದೇಶ ಹೊರಡಿಸಿರುವವರ ಮೇಲೆ ಕ್ರಮಕೈಗೊಳ್ಳಬೇಕು. ಎಲ್ಲಾ ಮಹಿಳೆಯರಿಗೆ ರಜೆ ಸೌಲಭ್ಯ ಲಭಿಸಿದರಷ್ಟೇ ಸರ್ಕಾರದ ಆಶಯ ಸಾಫಲ್ಯ ಕಾಣಲು ಸಾಧ್ಯ.

ಪ್ರಭು ವಂದಾಲಿ, ರಾಯಚೂರು

ವದಂತಿ ಸಾಕು, ಸತ್ಯಶೋಧನೆ ಬೇಕು

ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಆಕ್ಷೇಪಾರ್ಹ ವಿಡಿಯೊ ವೈರಲ್ ಆಗಿರುವುದು ಮತ್ತು ಅದರ ಬೆನ್ನಲ್ಲೇ ಸರ್ಕಾರ ಅವರನ್ನು ಅಮಾನತುಗೊಳಿಸಿರುವುದು ಆಡಳಿತ ವ್ಯವಸ್ಥೆಯಲ್ಲಿ ದೊಡ್ಡ ಸಂಚಲನ ಸೃಷ್ಟಿಸಿದೆ. ಈ ಘಟನೆಯು ಬರೀ ಒಬ್ಬ ವ್ಯಕ್ತಿಯ ನಡವಳಿಕೆಯ ಪ್ರಶ್ನೆಯಲ್ಲ; ಬದಲಿಗೆ ವ್ಯವಸ್ಥೆಯ ಘನತೆ ಮತ್ತು ಸಾರ್ವಜನಿಕ ನಂಬಿಕೆಗೆ ಸಂಬಂಧಿಸಿದ ಗಂಭೀರ ವಿಷಯವಾಗಿದೆ. ಯಾವುದೇ ಪೂರ್ವಗ್ರಹಪೀಡಿತ ನಿರ್ಧಾರಕ್ಕೆ ಬರುವ ಮೊದಲು ಈ ಪ್ರಕರಣದ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗುವುದು ಎಷ್ಟು ಮುಖ್ಯವೋ, ಅಧಿಕಾರಿ ನಿರಪರಾಧಿಯಾಗಿದ್ದರೆ ಅವರ ಗೌರವ ಮರುಸ್ಥಾಪನೆ ಆಗುವುದೂ ಅಷ್ಟೇ ಮುಖ್ಯ. ಈ ಪ್ರಕರಣವು ಸಾರ್ವಜನಿಕ ಸೇವೆಯಲ್ಲಿ ಇರುವವರಿಗೆ 'ನೈತಿಕತೆ' ಎಷ್ಟು ಮುಖ್ಯ ಎಂಬುದಕ್ಕೆ ದೊಡ್ಡ ಎಚ್ಚರಿಕೆಯಾಗಿದೆ. ತಂತ್ರಜ್ಞಾನ ಮತ್ತು ಅಧಿಕಾರ ಎರಡೂ ಕತ್ತಿಯ ಮೇಲಿನ ನಡಿಗೆಯಂತಾಗಿರುವ ಈ ಕಾಲದಲ್ಲಿ, ಸತ್ಯದ ಶೋಧನೆಯೇ ಈ ವಿವಾದಕ್ಕೆ ಇರುವ ಏಕೈಕ ಪರಿಹಾರ.

ಭೂಮಿಕಾ ವಿ., ಕೋಲಾರ

ನಾಯಿ ಕಾಟ: ಸಹಾನುಭೂತಿ ಮದ್ದಲ್ಲ

'ಅಲೋಕ ಮತ್ತು ಬೀದಿನಾಯಿಗಳು' ಲೇಖನದಲ್ಲಿ (ಲೇ: ಜ್ಯೋತಿ, ಪ್ರ.ವಾ., ಜ. 19) ಬೀದಿನಾಯಿಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಲಾಗಿದೆ. ಅವು ವಿನಾಕಾರಣ ಆಕ್ರಮಣ ಮಾಡುವುದಿಲ್ಲ ಎನ್ನುವ ಅಧ್ಯಯನ ವರದಿಯು ಒಪ್ಪುವಂತಹದ್ದೇ. ಆದರೆ, ವಠಾರಗಳಲ್ಲಿ, ಕಾಲೊನಿಗಳಲ್ಲಿ ವಾಸಿಸುವ ಜನರು ನಿತ್ಯ ಹೊಟ್ಟೆ ತುಂಬಾ ಊಟ ಹಾಕಿದ ಬೀದಿನಾಯಿಗಳಿಂದಲೂ ತೊಂದರೆಗೆ ಸಿಲುಕಿದ ನಿದರ್ಶನಗಳಿವೆ. ರಾತ್ರಿವೇಳೆ ಬೀದಿನಾಯಿಗಳ ಉಪಟಳದಿಂದ ದ್ವಿಚಕ್ರ ವಾಹನ ಸವಾರರು ಅನುಭವಿಸುವ ತೊಂದರೆಗೆ ಪರಿಹಾರ ಎಂಬುದಿಲ್ಲ. ನಿರ್ಭೀತಿಯಿಂದ ವಾಯುವಿಹಾರ ಮಾಡಲು ಹಿರಿಯ ನಾಗರಿಕರು ಭಯಪಡುವಂತಾಗಿದೆ. ಬೀದಿನಾಯಿಗಳ ಉಪಟಳದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಪರಿಹಾರ ಹುಡುಕುವುದು ಸರ್ಕಾರದ ಜವಾಬ್ದಾರಿ.

ಶಿವರಾಮು ಮಿಡಿಗೇಶಿ, ಬೆಂಗಳೂರು

ಹಂಪಿ ಪಾರಂಪರಿಕ ಸೊಬಗಿಗೆ ಮಸುಕು

ಇತ್ತೀಚೆಗೆ ಹಂಪಿಗೆ ಭೇಟಿ ನೀಡಿದ್ದೆ. ಆದರೆ, 15 ವರ್ಷಗಳ (ಯುನೆಸ್ಕೊಗೆ ಸೇರ್ಪಡೆ ಆಗುವ ಮೊದಲು) ಹಿಂದೆ ಇದ್ದಂತಹ ಹಂಪಿ ನನಗೆ ಕಾಣಿಸಲಿಲ್ಲ. ಅದು ಯುನೆಸ್ಕೊ ವಿಶ್ವ ಪರಂಪರೆ ಪಟ್ಟಿಗೆ ಸೇರ್ಪಡೆಗೊಂಡಿದ್ದು ನಾಡಿನ ಹೆಮ್ಮೆ. ಆದರೆ, ಇತ್ತೀಚಿನ ದಿನಗಳಲ್ಲಿ ಅಲ್ಲಿನ ಸೌಂದರ್ಯ ಮತ್ತು ಸುತ್ತಮುತ್ತಲಿನ ಪರಿಸರ ತೀವ್ರವಾಗಿ ಹದಗೆಡುತ್ತಿದೆ. ಕೆಲವು ಪ್ರದೇಶದಲ್ಲಿ ಕಾನೂನುಬಾಹಿರ ಚಟುವಟಿಕೆಗಳು ಎಲ್ಲೆ ಮೀರಿವೆ. ಹಂಪಿ ಉತ್ಸವಕ್ಕೆ ಕೆಲವೇ ದಿನಗಳಿವೆ. ಅಧಿಕಾರಿಗಳು ಎಚ್ಚೆತ್ತುಕೊಂಡು ಅಲ್ಲಿನ ಪರಿಸರ ಮತ್ತು ಸ್ಮಾರಕಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಉತ್ಸವಕ್ಕೆ ಬರುವ ಜನರಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಬೇಕು. ಅಕ್ರಮ ಚಟುವಟಿಕೆಗಳಿಗೆ ಲಗಾಮು ಹಾಕಬೇಕು.

ಎಂ. ಜನಾರ್ದನ್, ಬಳ್ಳಾರಿ

ಹಳ್ಳಿಗರಿಗೆ ಉನ್ನತ ಶಿಕ್ಷಣದ ಅರಿವು ಬೇಕು

ಗ್ರಾಮೀಣರಲ್ಲಿ ಇಂದಿಗೂ ಉನ್ನತಶಿಕ್ಷಣದ ಬಗ್ಗೆ ಅರಿವಿಲ್ಲ. ಪದವಿಪೂರ್ವ ಶಿಕ್ಷಣ ಮುಗಿಸಿದ ತಕ್ಷಣವೇ ಆರ್ಥಿಕ ಕಾರಣಗಳಿಂದ ಸಾವಿರಾರು ವಿದ್ಯಾರ್ಥಿಗಳು ಪದವಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ರಾಜ್ಯದ ನೂರಾರು ಹಳ್ಳಿಗಳಲ್ಲಿ ಯುವಕ, ಯುವತಿಯರು ಪ್ರೌಢಶಿಕ್ಷಣ ಅಥವಾ ಪಿಯು ಶಿಕ್ಷಣ ಮುಗಿದ ನಂತರ ಹೊಲ–ಗದ್ದೆ ಹಾಗೂ ಗಾರೆ ಕೆಲಸದಂಥ ಸಣ್ಣಪುಟ್ಟ ದುಡಿಮೆಯನ್ನು ಬದುಕಿಗೆ ಆಶ್ರಯಿಸಿಕೊಳ್ಳುತ್ತಿದ್ದಾರೆ. ಸರ್ಕಾರದಿಂದ ಕೊಡಮಾಡುವ ಉಚಿತ ಪ್ರವೇಶಾತಿ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ, ವಿದ್ಯಾರ್ಥಿವೇತನದ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ಹಳ್ಳಿಗಳಲ್ಲಿ ಅರಿವು ಮೂಡಿಸಬೇಕಿದೆ. ಇದರಿಂದ ಉನ್ನತಶಿಕ್ಷಣ ಪಡೆಯುವವರಲ್ಲಿ ಗ್ರಾಮೀಣರ ಸರಾಸರಿ ಪ್ರಮಾಣ ಹೆಚ್ಚಾಗಲು ಸಹಕಾರಿಯಾಗಲಿದೆ.

ಪ್ರಸನ್ನ ಶಿವಾಜಿ ನಾಯಕ, ಜಮಖಂಡಿ

ಮಾದರಿ ಹೋರಾಟ ಮರೆತಿರುವ ನೌಕರರು

ವಾರದಲ್ಲಿ ಐದು ದಿನ ಕೆಲಸ ನಿಗದಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬ್ಯಾಂಕ್ ನೌಕರರು ಜ. 27ರಂದು ದೇಶದಾದ್ಯಂತ ಮುಷ್ಕರಕ್ಕೆ ಸಜ್ಜಾಗಿದ್ದಾರೆ. ನ್ಯಾಯಯುತ ಬೇಡಿಕೆಗಾಗಿ ಅವರು ಕೈಗೊಂಡಿರುವ ನಿರ್ಧಾರ ಸರಿ. ಆದರೆ, ಮುಷ್ಕರದಿಂದಾಗಿ ಬ್ಯಾಂಕಿಂಗ್ ಸೇವೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರಿಗೆ ತೊಂದರೆಯಾಗಲಿದೆ. ಇದನ್ನು ತಪ್ಪಿಸಲು ಒಂದು ಭಾನುವಾರ ತೋಳಿಗೆ ಕಪ್ಪುಪಟ್ಟಿ ಧರಿಸಿ ಕೆಲಸ ಮಾಡಬಹುದಿತ್ತು. ಇಂತಹ ಹೋರಾಟ ಇತರರಿಗೂ ಮಾದರಿಯಾಗುತ್ತಿತ್ತು.

ಕೆ.ಎಸ್. ಸೋಮೇಶ್ವರ, ಬೆಂಗಳೂರು

ಚುರುಮುರಿ



ಮದುವೆ ಮಸೂದೆ

• ಮಣ್ಣೆ ರಾಜು

ಗೋಪಾಲಿ, ವೈಶಾಲಿ ಮನೆಗೆ ಬಂದು, 'ಮಗಳ ಮದುವೆ ಸೆಟ್ಟಾಯ್ತು' ಎಂದು ಕಾರ್ಡ್ ಕೊಟ್ಟರು.

'ಇಷ್ಟು ಬೇಗ ಗಂಡು ಹುಡುಕಿಬಿಟ್ರಾ?' ಶಂಕ್ರಿ ಕಾರ್ಡ್ ಈಸ್ಕೊಂಡ.

'ಮಗಳೇ ಹುಡುಕಿಕೊಂಡಳು. ನಾವು ಕಲ್ಯಾಣಮಂಟಪ ಹುಡುಕಿ, ಮದ್ವೆಗೆ ದುಡ್ಡು ವ್ಯವಸ್ಥೆ ಮಾಡಿಕೊಂಡೆವು' ವೈಶಾಲಿ ಹೇಳಿದಳು.

'ಹೊಸ ಸಂಬಂಧವಾ?' ಸುಮಿ ಕಾಫಿ ತಂದುಕೊಟ್ಟಳು.

'ಯಾವ ಸಂಬಂಧವೂ ಇಲ್ಲ, ಹುಡುಗನ ಜಾತಿ-ಕುಲವೂ ಗೊತ್ತಿಲ್ಲ. ಆ ಕುಲ, ಈ ಕುಲ ಡ್ರಾಕುಲ ಅಂತ ಹುಡುಗನ ಬಗ್ಗೆ ಕೇಳಕೂಡದು ಎಂದು ಮಗಳು ಕಂಡೀಷನ್ ಹಾಕಿಬಿಟ್ಟಿದ್ದಾಳೆ!'

'ಹುಡುಗ-ಹುಡುಗಿಯ ಜಾತಿ, ಜಾತಕ, ವರಸೆ, ಸಾಲಾವಳಿ ನೋಡದೆ ನೀವು ಒಪ್ಪಿಬಿಟ್ರಾ?'

'ಮದುವೆ ಮಸೂದೆ ಪ್ರಭಾವ ಕಣ್ರೀ... ಮರ್ಯಾದೆಗೇಡು ಹತ್ಯೆಯ ಪ್ರಯತ್ನ ಮಾಡಿದರೆ ಜೈಲು ಸೇರಬೇಕಾಗುತ್ತದೆ ಎಂದು ಮಗಳು ನಮ್ಮನ್ನು ಹೆದರಿಸಿದ್ದಾಳೆ!'

'ಮದುವೆ ಮಸೂದೆ ಪ್ರಕಾರ ಮಕ್ಕಳು ಸಂಗಾತಿ ಆಯ್ಕೆ ಮಾಡಿಕೊಂಡು ಆಗುವ ಮದುವೆ ವಿರೋಧಿಸುವುದು ಕಾನೂನುಬಾಹಿರ' ಅಂದ ಶಂಕ್ರಿ.

'ಇನ್ಮೇಲೆ ಮಕ್ಕಳನ್ನು ಕುಲತಿಲಕ, ವಂಶೋದ್ಧಾರಕ ಅಂತೆಲ್ಲಾ ಹೇಳುವಂತಿಲ್ಲ' ಗೋಪಾಲಿ ನಿಟ್ಟುಸಿರುಬಿಟ್ಟ.

'ಮದುವೆಯಲ್ಲಿ ಶಾಸ್ತ್ರ ಮತ್ತು ಸಂಪ್ರದಾಯ ಆಚರಣೆಗಿಂಥ ಮದುವೆ ಮಸೂದೆ ನಿಯಮಗಳ ಪಾಲನೆ ಮುಖ್ಯವಾಗುತ್ತದೆ'.

'ಜೀವನಪರ್ಯಂತ ಜೊತೆಯಲ್ಲಿ ಬಾಳಬೇಕಾದ ಬಾಳಸಂಗಾತಿ ಆಯ್ಕೆ ಮಾಡಿಕೊಳ್ಳುವ ಜೀವನಾನುಭವ ಆ ವಯಸ್ಸಿನ ಮಕ್ಕಳಿಗೆ ಇರೋದಿಲ್ಲ, ನಿಮ್ಮ ಮಗಳ ಸಂಗಾತಿ ಆಯ್ಕೆ ಯೋಗ್ಯವೆ ಎಂದು ಪರಿಶೀಲಿಸಿ'.

'ಹೌದು. ಹೆಣ್ಣುಮಕ್ಕಳು ಸೀರೆ ಆಯ್ಕೆಯಲ್ಲಿ ತೋರಿಸುವ ಜಾಣತನವನ್ನು ಗಂಡನ ಆಯ್ಕೆಯಲ್ಲಿ ತೋರಿಸದೆ ಯಾಮಾರಿಬಿಡ್ತಾರೆ!'

'ಹೌದು ಕಣ್ರೀ, ಸೀರೆಯ ಸೆರಗು, ಕಲರ್, ಡಿಸೈನ್ ಬಾರ್ಡರ್, ಬೆಲೆ ನೋಡಿ ಯೋಗ್ಯವಾದುದನ್ನು ಆರಿಸುವ ನಾನು ಗುಣಮಟ್ಟದ ಗಂಡನನ್ನು ಆಯ್ಕೆ ಮಾಡುವಲ್ಲಿ ಯಾಮಾರಿಬಿಟ್ಟೆ ಕಣ್ರೀ!' ಎನ್ನುತ್ತಾ ಸುಮಿ ವೈಶಾಲಿಗೆ ಕುಂಕುಮ ಕೊಟ್ಟಳು.

ಸಂಗತ

'ಸಾಹೇಬ ಸಂಸ್ಕೃತಿ'ಗೆ ಬೇಕು ಸೂಕ್ತ ಚಿಕಿತ್ಸೆ


ಅಧಿಕಾರ ಸ್ಥಾನಗಳಲ್ಲಿರುವ ರಾಜಕಾರಣಿಗಳ ದರ್ಪದ ಅಭಿವ್ಯಕ್ತಿ 'ಸಾಹೇಬ ಸಂಸ್ಕೃತಿ'. ಇದರ ಅತಿ ಶಿಷ್ಟಾಚಾರದ ನಿಯಮಗಳಿಗೆ 'ಸಮಾಜವಾದಿ' ಸ್ಪರ್ಶದ ಅಗತ್ಯವಿದೆ.

• ಚಂದ್ರಕಾಂತ ವಡ್ಡು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುತ್ತೂರು ಜಾತ್ರೆಯ ಕಾರ್ಯಕ್ರಮದಿಂದ ಹಿಂದಿರುಗುವಾಗ ಉಂಟಾದ ಸಂಚಾರ ದಟ್ಟಣೆಯ ನಿಯಂತ್ರಣದಲ್ಲಿ ನಿರತರಾಗಿದ್ದ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡೆ ಅವರ ಅನುಚಿತ ವರ್ತನೆ ವ್ಯಾಪಕ ಟೀಕೆಗೆ ಗುರಿಯಾಗಿದೆ. ಉನ್ನತ ಹುದ್ದೆಯಲ್ಲಿರುವ ಐಪಿಎಸ್ ದರ್ಜೆಯ ಈ ಅಧಿಕಾರಿ ಸಾಮಾನ್ಯ ಬೈಕ್ ಸವಾರನಿಗೆ ಆವೇಶದಿಂದ ಬೂಟುಕಾಲು ಮೇಲೆತ್ತಿ ಒದೆಯಲು ಮುಂದಾಗುವ ವಿಡಿಯೊ ತುಣುಕು ವೈರಲ್ ಆಗಿದೆ. ಈ ದೃಶ್ಯವು ಕೇವಲ ಒಬ್ಬ ಅಧಿಕಾರಿಯ ಸಾಂದರ್ಭಿಕ ಲೋಪವನ್ನಷ್ಟೇ ಸಂಕೇತಿಸದೆ, ಒಟ್ಟಾರೆ ಪೊಲೀಸ್ ಇಲಾಖೆಯ ಮಾನಸಿಕತೆಯನ್ನು ಪ್ರತಿಬಿಂಬಿಸುತ್ತದೆ ಎಂಬುದನ್ನು ವಿಶೇಷವಾಗಿ ಗಮನಿಸಬೇಕಿದೆ.

ಪೊಲೀಸರ ಈ ರೀತಿಯ ನಡವಳಿಕೆಗಳನ್ನು ಟೀಕೆಗೆ, ದೂಷಣೆಗೆ, ಸಾಮಾಜಿಕ ಮಾಧ್ಯಮ ವಿಚಾರಣೆಗೆ ಒಳಪಡಿಸಿದರಷ್ಟೇ ಸಾಲದು; ಅವರ ವರ್ತನೆಯನ್ನು ಹಲವು ವಸ್ತುನಿಷ್ಠ ಆಯಾಮಗಳಲ್ಲಿ ವಿಮರ್ಶಿಸುವ ಅಗತ್ಯವಿದೆ.

ಇತ್ತೀಚೆಗೆ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಪೊಲೀಸ್ ಇಲಾಖೆಯ ವೈಫಲ್ಯವನ್ನು ನೇರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ರಾಜ್ಯದಲ್ಲಿನ ಮಾದಕವಸ್ತು ತಯಾರಿಕೆ ಘಟಕಗಳ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ಮಾಡಬೇಕಾಗಿ ಬಂದ ಪ್ರಸಂಗ ಹಾಗೂ 88 ಪ್ರಕರಣಗಳಲ್ಲಿ ಪೊಲೀಸರೇ ಅಪರಾಧ ಕೃತ್ಯದಲ್ಲಿ ಭಾಗಿಯಾಗಿರುವ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿರುವ ಮುಖ್ಯಮಂತ್ರಿ ಅತೀವ ಬೇಸರ ಹೊರಹಾಕಿದ್ದಾರೆ. ಅವರ ಅಸಮಾಧಾನವು ವೃತ್ತಿಪರತೆಯ ಕೊರತೆಯಿಂದ ನರಳುತ್ತಿರುವ ಪೊಲೀಸ್ ಇಲಾಖೆ ಕುರಿತ ಅಧಿಕೃತ ಪ್ರಕಟಣೆ ಎಂದು ಭಾವಿಸಬಹುದು.



ವರ್ಗಶ್ರೇಣಿಗೆ ಅನುಗುಣವಾಗಿ ಹೇರಲಾಗುವ 'ಮೇಲಿನವರ' ಒತ್ತಡಗಳು ಎಲ್ಲಾ ಹಂತಗಳ ಪೊಲೀಸರನ್ನು ಹೈರಾಣಾಗಿಸಿರುವುದು ರಹಸ್ಯ ಸಂಗತಿಯೇನಲ್ಲ. ಇಲಾಖೆಯ ಕೆಳಗಿನವರು ಎದುರಿಸುತ್ತಿರುವ ಸಂಕಷ್ಟಗಳು ಒಂದು ಬಗೆಯವಾದರೆ, ಎತ್ತರದವರ ಪೀಕಲಾಟ ಮತ್ತೊಂದು ರೀತಿಯದು. ಇದಕ್ಕೆ ಪೂರಕ ನಿದರ್ಶನಗಳಿಗೆ ಕೊರತೆಯಿಲ್ಲ.

ಕಳೆದ ಏಪ್ರಿಲ್ ತಿಂಗಳು ಬೆಳಗಾವಿಯ ಸಮಾರಂಭ-ವೊಂದರಲ್ಲಿ, 'ಹೇ ಪೊಲೀಸ್ ಬಾರಯ್ಯ ಇಲ್ಲಿ, ಯಾವನು ಅವನು ಎಸ್‌ಪಿ. ಏನು ಮಾಡ್ತಾ ಇದ್ದೀರಾ ಇಲ್ಲಿ?' ಎಂದು ಗದರಿದ ಸಿದ್ದರಾಮಯ್ಯ, ಎ.ಎಸ್‌.ಪಿ. ನಾರಾಯಣ ಭರಮನಿ ಅವರ ಮೇಲೆ ಕೈ ಎತ್ತಲು ಮುಂದಾಗಿದ್ದರು. ಚಿನ್ನಸ್ವಾಮಿ ಸ್ಟೇಡಿಯಂ ಹೊರಭಾಗದಲ್ಲಿ ನಡೆದ ಕಾಲ್ತುಳಿತ ಘಟನೆಯಲ್ಲಿ ರಾಜಕಾರಣಿಗಳ ರಕ್ಷಣೆಗಾಗಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಬಿ. ದಯಾನಂದ ಅವರನ್ನೊಳಗೊಂಡಂತೆ ಹಲವು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿತ್ತು. ಬಳ್ಳಾರಿಯಲ್ಲಿ ನಡೆದ ಹಿಂಸಾಚಾರ ಘಟನೆ ಸಂಬಂಧ ಅಧಿಕಾರ ವಹಿಸಿಕೊಂಡ ದಿನವೇ ಐಪಿಎಸ್ ಅಧಿಕಾರಿ ಪವನ್ ನಜ್ಜೂರ್ ಸಸ್ಪೆಂಡ್ ಆಗಿದ್ದು ಇನ್ನೂ ಹಸಿರಾಗಿದೆ.

ನಗರಗಳಲ್ಲಿ, ಹೆದ್ದಾರಿಗಳಲ್ಲಿ ವಿವಿಐಪಿ ಸಂಚಾರ ಸಂಸ್ಕೃತಿ ಸೃಷ್ಟಿಸುತ್ತಿರುವ ಅವಾಂತರಗಳು ಒಂದೆರಡಲ್ಲ. ಮುಖ್ಯವಾಗಿ ರಾಜ್ಯಪಾಲರು, ಮುಖ್ಯಮಂತ್ರಿ ಹಾಗೂ ಗೃಹಸಚಿವರ ಸಂಚಾರವೆಂದರೆ, ಅದನ್ನು ನಿರ್ವಹಿಸುವ ಪೊಲೀಸರು ಮತ್ತು ಅನುಭವಿಸುವ ಸಾರ್ವಜನಿಕರಿಗೆ ಸಮಾನ ಶಿಕ್ಷೆ. ಇತ್ತೀಚೆಗೆ ಗೃಹ ಸಚಿವ ಜಿ. ಪರಮೇಶ್ವರ ಅವರ ಸಂಚಾರದ ವೇಳೆ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರ ಬಿಡುಬೀಸಾದ ವರ್ತನೆ ಬಹುಚರ್ಚಿತವಾಗಿದೆ. ಅಧಿಕಾರಿಗಳ ಇಂಥ ವರ್ತನೆಗಳಿಗೆ ಮಡುಗಟ್ಟಿರುವ ಹತಾಶೆ, ಅತಂತ್ರ ಸ್ಥಿತಿ ಮತ್ತು ಆತಂಕ ಕಾರಣವಾಗಿರಲಾರದು ಎಂದು ಭಾವಿಸಲು ಸಾಧ್ಯವಿಲ್ಲ. ಈ ಎಲ್ಲಾ ಬಿಡಿ ಪ್ರಕರಣಗಳ ಹಿನ್ನೆಲೆಯಲ್ಲಿ ಇಡೀ ಆಡಳಿತ ವ್ಯವಸ್ಥೆ ಅಳವಡಿಸಿಕೊಂಡಿರುವ 'ಸಾಹೇಬ ಸಂಸ್ಕೃತಿ' ಕೆಲಸ ಮಾಡುತ್ತಿದೆ.

ರಾಜಶಾಹಿ ಮತ್ತು ವಸಾಹತುಶಾಹಿ ಪ್ರಭುತ್ವಗಳ ಕುರುಹು ಎನ್ನಿಸಿಕೊಳ್ಳುವ 'ಸಾಹೇಬ ಸಂಸ್ಕೃತಿ'ಯು ಪ್ರಜೆಗಳ ಪ್ರಭುತ್ವದಲ್ಲಿಯೂ ವಿವಿಧ ರೂಪಗಳಲ್ಲಿ ಅಸ್ತಿತ್ವ ಉಳಿಸಿಕೊಂಡಿದೆ. ಗಣ್ಯವ್ಯಕ್ತಿ ಸಂಚಾರ ಸಂದರ್ಭದಲ್ಲಿ ಅಳವಡಿಸಿಕೊಂಡಿರುವ ಶಿಷ್ಟಾಚಾರ ಹೆಸರಿನ ಅಸಾಂವಿಧಾನಿಕ ನಡೆಯಲ್ಲಿ ಇಂಥ ಸಂಸ್ಕೃತಿಯನ್ನು ಢಾಳಾಗಿ ಕಾಣಬಹುದು. ಗಣ್ಯವ್ಯಕ್ತಿಗಳ ಶಿಷ್ಟಾಚಾರ ಪಾಲನೆಯಲ್ಲಿ ಮೂಲತಃ ಎರಡು ಅಂಶಗಳು ಅಡಗಿರುತ್ತವೆ: ಒಂದು, ಗಣ್ಯರ ಸುರಕ್ಷತೆ. ಇನ್ನೊಂದು, ಸ್ಥಾನಗೌರವ. ಚಾಲ್ತಿಯಲ್ಲಿರುವ ಶಿಷ್ಟಾಚಾರಗಳು ಇವೆರಡೇ ಉದ್ದೇಶಗಳ ಪರಿಪಾಲನೆಗೆ ಸೀಮಿತವಾಗಿಲ್ಲ.

ಬಹುಪಾಲು ರಾಜಕಾರಣಿಗಳು ಆಡಳಿತ ನಡೆಸುವುದಕ್ಕಿಂತ ದರ್ಬಾರು ಮಾಡುವುದಕ್ಕಾಗಿಯೇ ಅಧಿಕಾರಕ್ಕೆ ಬರುತ್ತಾರೆ. ರಾಜಕಾರಣ ಸೇವೆ ಎನ್ನುವುದನ್ನು ಮರೆತಿರುವ ಅವರ ಪಾಲಿಗೆ ಶಿಷ್ಟಾಚಾರಗಳು ಸಹ ದರ್ಪ–ದೌಲತ್ತು ತೋರ್ಪಡಿಕೆಯ ಅವಕಾಶಗಳು. ಹಾಗಾಗಿ, ಗಣ್ಯವ್ಯಕ್ತಿಗಳ ಶಿಷ್ಟಾಚಾರ ನಿಯಮಗಳ ಪ್ರಾಥಮಿಕ ಉದ್ದೇಶವಾದ ಭದ್ರತೆ ಮತ್ತು ಸ್ಥಾನಗೌರವಗಳ ಆಮೂಲಾಗ್ರ ಪುನರ್ ವ್ಯಾಖ್ಯಾನ ಆಗಬೇಕಿದೆ. ಗಣ್ಯರ ಭದ್ರತೆಯ ಜೊತೆಗೆ ನಾಗರಿಕರ ಮುಕ್ತ ಸಂಚಾರ ಮತ್ತು ಸಮಾನತೆಯ ಸಂವಿಧಾನದತ್ತ ಹಕ್ಕಿನ ರಕ್ಷಣೆಯೂ ಆಗಬೇಕು.

ಅತಿ ಶಿಷ್ಟಾಚಾರ ನಿಯಮಗಳಿಗೆ ತಿದ್ದುಪಡಿ ಮಾಡಿ ಕನಿಷ್ಠ ಒಂದು ಮಿತಿಗಾದರೂ ಒಳಪಡಿಸುವ ಅಗತ್ಯವಿದೆ. ಈ ಕುರಿತು ಮುಖ್ಯಮಂತ್ರಿ ಹುದ್ದೆಯಲ್ಲಿರುವ 'ಸಮಾಜವಾದಿ ಸಾಹೇಬ'ರೇ ಒಂದು ದೃಢ ನಿರ್ಧಾರ ತೆಗೆದುಕೊಂಡರೆ ಮಾತ್ರ ಇದು ಸಾಧ್ಯ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದ ಪ್ರಜಾಪ್ರಭುತ್ವದ ಸ್ಥಿರತೆಗೆ ಕಾರಣಗಳು

• ಕೆ.ಎನ್. ಹರಿಕುಮಾರ್



ಆರಂಭದಲ್ಲಿ, ಅಂದರೆ ಸ್ವಾತಂತ್ರ್ಯ ಬಂದ ಮೊದಲಿನ ವರ್ಷಗಳಲ್ಲಿ ರಾಷ್ಟ್ರೀಯತೆಯ ಯೋಜನೆಯ ಜೊತೆಗೆ ನ್ಯಾಯಾಂಗವು ಸಂಪೂರ್ಣವಾಗಿ ಇರಲಿಲ್ಲ. ಸರಣಿ ತೀರ್ಪುಗಳ ಮೂಲಕ ಭೂ ಸುಧಾರಣೆಗೆ ಸಂಬಂಧಿಸಿದ ಪ್ರಮುಖ ಕಾಯ್ದೆಯೊಂದನ್ನು ರದ್ದುಪಡಿಸಿ ನ್ಯಾಯಾಂಗವು ಸಾಮಾಜಿಕ ನ್ಯಾಯ ಕಾರ್ಯಸೂಚಿಗೆ ಸಂಬಂಧಿಸಿ ತನ್ನನ್ನು ವಿರುದ್ಧ ಭಾಗದಲ್ಲಿ ಸ್ಥಾಪಿಸಿಕೊಂಡಿತ್ತು; ಇದರಿಂದಾಗಿ ಈ ವಿಚಾರವನ್ನು ನ್ಯಾಯಾಂಗದ ಪರಾಮರ್ಶೆಯಿಂದ ಹೊರಗೆ ಇರಿಸಲು ಸಂವಿಧಾನಕ್ಕೆ ಸರ್ಕಾರವು ತಿದ್ದುಪಡಿ ತರಬೇಕಾಯಿತು. ಆದರೆ, ನಂತರದ ಹಂತದಲ್ಲಿ ಸಂವಿಧಾನದ ಮೂಲ ಸ್ವರೂಪವನ್ನು ಬದಲಾಯಿಸಲು ಅವಕಾಶ ಇಲ್ಲ ಎಂದು ತೀರ್ಪು ನೀಡುವ ಮೂಲಕ ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಸಂವಿಧಾನ ರಕ್ಷಕನಾಗಿ ತನ್ನ ಪಾತ್ರವನ್ನು ನ್ಯಾಯಾಂಗವು ದೃಢಪಡಿಸಿಕೊಂಡಿತು. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಶರಣಾದರೂ ಬಳಿಕ ಸಾಮಾಜಿಕ ಹೋರಾಟಗಾರ ಪಾತ್ರವನ್ನು ವಹಿಸಿಕೊಂಡಿತು. ಸಾರ್ವಜನಿಕ ಹಿತಾಸಕ್ತಿಯ (ಪಿಐಎಲ್) ಹಲವಾರು ಪ್ರಕರಣಗಳನ್ನು ವಿಚಾರಣೆಗೆ ಎತ್ತಿಕೊಳ್ಳುವ ಮೂಲಕ ಸಾಮಾನ್ಯ ಮನುಷ್ಯ, ನಾಗರಿಕ ಹಕ್ಕುಗಳು ಮತ್ತು ಸ್ವಾತಂತ್ರ್ಯ, ಒಟ್ಟಾರೆಯಾಗಿ ಆಡಳಿತ ಮತ್ತು ಸಂವಿಧಾನದ ಕೊನೆಯ ರಕ್ಷಕನಾಗಿ ತನ್ನನ್ನು ರೂಪಿಸಿಕೊಂಡಿತು. ಕೆಲವೊಂದು ಬಾರಿ ಸ್ವಯಂಪ್ರೇರಿತವಾಗಿ ಸಾರ್ವಜನಿಕ ವಿಚಾರಗಳಲ್ಲಿಯೂ ಮಧ್ಯಪ್ರವೇಶಿಸಿತು. ಇದು ಸಾರ್ವಜನಿಕರಲ್ಲಿ ನ್ಯಾಯಾಂಗದ ವಿಶ್ವಾಸಾರ್ಹತೆ ಮತ್ತು ಗೌರವವನ್ನು ಹೆಚ್ಚಿಸಿತು. ಭ್ರಷ್ಟ ಮತ್ತು ಅಪರಾಧ ಹಿನ್ನೆಲೆಯ ರಾಜಕಾರಣಿಗಳು ತನ್ನ ಆಡಳಿತದ ಕರ್ತವ್ಯಗಳಲ್ಲಿ ಹೆಚ್ಚು ಹೆಚ್ಚು ವಿಫಲವಾದಂತೆಲ್ಲ ಅವರ ವಿಶ್ವಾಸಾರ್ಹತೆ ಮತ್ತು ನ್ಯಾಯಸಮ್ಮತತೆ ಸಾರ್ವಜನಿಕರಲ್ಲಿ ಕುಸಿಯಿತು; ನಿಸ್ಸಹಾಯಕ ಸಾಮಾನ್ಯ ಮನುಷ್ಯನ ರಕ್ಷಣೆಗೆ ನ್ಯಾಯಾಲಯವು ಹೆಚ್ಚು ಹೆಚ್ಚು ಧಾವಿಸಿದಂತೆಲ್ಲ ಅದರ ಪ್ರತಿಷ್ಠೆ ಮತ್ತು ಅಧಿಕಾರ ದೊಡ್ಡ ಮಟ್ಟದಲ್ಲಿ ಹೆಚ್ಚಳವಾಯಿತು. ಯಾವುದೋ ಕಾರಣಕ್ಕಾಗಿ ರಾಜಕಾರಣಿಗಳಿಂದ ಕೆಲಸ ಮಾಡಿಸಿಕೊಳ್ಳುವುದು ಅಸಾಧ್ಯವಾದಾಗಲೆಲ್ಲ ಈ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ನ್ಯಾಯಾಲಯಗಳು ಸಿದ್ಧವಾಗಿದ್ದವು. ಸಾಮಾಜಿಕ ಕಾರ್ಯಕರ್ತರಿಗೆ ಸಮಸ್ಯೆ ಅಥವಾ ಬಿಕ್ಕಟ್ಟು ಎದುರಾದಾಗಲೆಲ್ಲ, ಸ್ವತಂತ್ರ, ನಿಷ್ಪಕ್ಷಪಾತಿ ಮತ್ತು ನ್ಯಾಯಯುತ ಎಂದು ಬಿಂಬಿತವಾಗಿದ್ದ ನ್ಯಾಯಾಲಯಕ್ಕೆ ಅವರು ಮನವಿ ಸಲ್ಲಿಸತೊಡಗಿದರು.

ಕಾಲಕ್ರಮೇಣ, ಆಡಳಿತದಲ್ಲಿ ರಾಜಕಾರಣಿಗಳ ವೈಫಲ್ಯವು ಎದ್ದು ಕಾಣತೊಡಗಿದ ಬಳಿಕ ದಿನನಿತ್ಯದ ಆಡಳಿತದಲ್ಲಿಯೂ ನ್ಯಾಯಾಂಗವು ನೇರ ಪಾತ್ರ ವಹಿಸಲು ಆರಂಭಿಸಿತು. ಶಾಸಕಾಂಗಗಳು ಅಂಗೀಕರಿಸಿದ ಕಾನೂನುಗಳ ಅಧ್ಯಾದೇಶ, ಕಾನೂನಿನ ಪೂರ್ವನಿದರ್ಶನ, ಸಾಂವಿಧಾನಿಕ ಅವಕಾಶಗಳು ಅಥವಾ ನೀತಿ ನಿರೂಪಣೆಯ ವಿಚಾರಗಳು ಹಾಗೂ ಆಡಳಿತಾತ್ಮಕ ಅನುಷ್ಠಾನ ದಿಂದ ದೂರ ಇರುವುದೆಲ್ಲ ಮೀರಿ ಹೋಯಿತು; ಸ್ವರೂಪ ಮತ್ತು ಪ್ರಕ್ರಿಯೆಗಳನ್ನು ಮಾತ್ರ ಪಾಲಿಸಲಾರಂಭಿಸಿತು. ಪೌರರು ಮತ್ತು ಪರಿಣತರ ಪರ ವಕೀಲರ ವಾದವನ್ನು ಆಲಿಸಿದ ಬಳಿಕ, ಸಾರ್ವಜನಿಕ ನೀತಿ ಮತ್ತು ಆಡಳಿತಾತ್ಮಕ ವಿಚಾರಗಳಲ್ಲಿ ಸಾಧ್ಯವಾದಷ್ಟು ವಿಶಾಲವಾಗಿ ಆಡಳಿತಾತ್ಮಕ ನಿರ್ದೇಶನಗಳು ಮತ್ತು ತೀರ್ಮಾನಗಳನ್ನು ಕೊಡಲಾರಂಭಿಸಿತು. ತಾನು ಅಗತ್ಯ ಎಂದು ಭಾವಿಸಿದ ವಿಚಾರ ಗಳಲ್ಲಿ ನಿರ್ದಿಷ್ಟ ಶಾಸನಗಳನ್ನು ರೂಪಿಸುವಂತೆ ಸರ್ಕಾರಗಳು ಮತ್ತು ಶಾಸಕಾಂಗಗಳಿಗೆ ನಿರ್ದೇಶನ ನೀಡಿತು. ಪ್ರಣಾಳಿಕೆಗಳಲ್ಲಿ ಏನನ್ನು ಸೇರಿಸಬೇಕು ಎಂಬುದರ ಕುರಿತು ಕೂಡ ರಾಜಕೀಯ ಪಕ್ಷಗಳ ಮೇಲೆ ನಿರ್ಬಂಧಗಳನ್ನು ಹೇರುವ ಪ್ರಯತ್ನವನ್ನೂ ಮಾಡಿತು. ಉದಾಹರಣೆಗೆ 'ಉಚಿತ ಕೊಡುಗೆ' ಕುರಿತ ವಿಚಾರಣೆ. ಹೊಸ ಹಕ್ಕುಗಳು ಮತ್ತು ಅಧಿಕಾರಗಳನ್ನು ಸೇರಿಸಿಕೊಳ್ಳುವುದಕ್ಕಾಗಿ ಸಂವಿಧಾನದ ವ್ಯಾಖ್ಯಾನವನ್ನು ವಿಸ್ತರಿಸಿಕೊಂಡಿತು. ಅದರ ತೀರ್ಪುಗಳು ಬಹುತೇಕ ಪರಮಾಧಿಕಾರಯುಕ್ತವಾಗಿದ್ದವು. ಹೆಚ್ಚುತ್ತಲೇ ಇದ್ದ ತನ್ನ ಗೌರವ ಮತ್ತು ನ್ಯಾಯಾಂಗ ನಿಂದನೆಯ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವನ್ನು ಬಳಸಿಕೊಂಡು ಅದು ಗುಡುಗಿತು, ಬೆದರಿಸಿತು, ಲೇವಡಿ ಮಾಡಿತು ಮತ್ತು ತನ್ನ ಆದೇಶಗಳನ್ನು ಜಾರಿಗೊಳಿಸಿತು. ಇಂದಿಗೂ ಎಲ್ಲ ವಿಚಾರಗಳಲ್ಲಿ ಅಲ್ಲದಿದ್ದರೂ ಒಂದಷ್ಟು ವಿಚಾರಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ಬಿಜೆಪಿ–ಎನ್‌ಡಿಎ ಸರ್ಕಾರಗಳ ಮೇಲೆ ಪ್ರಭಾವ ಬೀರಿ ನಿಯಂತ್ರಣ ಹೇರಿತು. ಕೆಲವೊಮ್ಮೆ ಮುಸ್ಲಿಮರಿಗೆ ಸೇರಿದ ಕಟ್ಟಡಗಳನ್ನು ಕೆಡುವುವಂತಹ ದಂಡನಾತ್ಮಕ ಕ್ರಮಗಳಿಗೆ ಸಂಬಂಧಿಸಿ ಸರ್ಕಾರಗಳು ನ್ಯಾಯಾಲಯದ ನಿರ್ದೇಶನಗಳನ್ನು ನಿರ್ಲಕ್ಷಿಸಿದ್ದೂ ಇದೆ.

ಕರ್ತವ್ಯದಲ್ಲಿದ್ದಾಗ ವಹಿಸಿದ ಪಾತ್ರದ ಜೊತೆಗೆ, ನಿವೃತ್ತರಾದ ಅಧಿಕಾರಿಗಳು ಮತ್ತು ನ್ಯಾಯಮೂರ್ತಿಗಳನ್ನು ಸಾಂವಿಧಾನಿಕ, ನೀತಿ ನಿರೂಪಣೆ, ನಿಯಂತ್ರಣ ಸಂಸ್ಥೆಗಳು–ಚುನಾವಣಾ ಆಯೋಗ, ನೀತಿ ಆಯೋಗ, ರಿಸರ್ವ್ ಬ್ಯಾಂಕ್, ರಾಷ್ಟ್ರೀಯ ಭದ್ರತೆಯ ಹುದ್ದೆಗಳು ಮತ್ತು ಸಮಿತಿಗಳು, ಆರ್‌ಟಿಐ, ಸಿಎಜಿ, ವಿಚಾರಣಾ ಆಯೋಗ, ಹಿರಿಯ ಉನ್ನತ ರಾಜತಾಂತ್ರಿಕ ಹುದ್ದೆಗಳು ಇತ್ಯಾದಿ–ಪ್ರಮುಖ ಹುದ್ದೆಗಳಿಗೆ ನೇಮಕ ಮಾಡಲಾಗಿದೆ. ಇದರೊಂದಿಗೆ, ಅಧಿಕಾರಶಾಹಿ–ನ್ಯಾಯಾಂಗದ ಜೋಡಿಯು ಆಡಳಿತ ವ್ಯವಸ್ಥೆಯ ಎಲ್ಲ ನಿಯಂತ್ರಣ ಸ್ಥಾನಗಳಲ್ಲಿ ವಿರಾಜಮಾನವಾಗಿದೆ. ಅವರು ರಾಷ್ಟ್ರೀಯವಾದಿ ಕಾರ್ಯಸೂಚಿ ಮತ್ತು ಸಿದ್ಧಾಂತದ ರಕ್ಷಕರು ಮತ್ತು ಅನುಷ್ಠಾನಕರಾಗಿ, ಅಟಾಟರ್ಕ್ ನಂತರದ ಟರ್ಕಿಯಲ್ಲಿ ತೀರಾ ಇತ್ತೀಚಿನವರೆಗೆ ಸೇನೆ ವಹಿಸಿದ ಪಾತ್ರದ ರೀತಿಯ ಪಾತ್ರವನ್ನು ಈ ಸ್ಥಾನದಲ್ಲಿ ಅವರು ವಹಿಸಿದ್ದಾರೆ.

ಈ ಏರ್ಪಾಡಿಗೆ ಅದರದ್ದೇ ಆದ ಸಕಾರಾತ್ಮಕ ಮತ್ತು ನಕಾರಾತ್ಮಕ ಭಾಗಗಳಿವೆ. ಅತ್ಯಂತ ಮುಖ್ಯವಾಗಿ, ಸಾಮಾನ್ಯ ಜನರಿಗೆ ಇದು ಬಹುಪಾಲು ಬೇರೆಲ್ಲವೂ ವಿಫಲವಾದಾಗ ಸ್ವಲ್ಪವಾದರೂ ಉತ್ತಮ ಆಡಳಿತವನ್ನು ಕೊಟ್ಟಿದೆ. ಸಕಾರಾತ್ಮಕ ಭಾಗದಲ್ಲಿ ನಿಯಮ ಆಧಾರಿತ ಆಡಳಿತದೆಡೆಗಿನ ನಡಿಗೆಯನ್ನು ಇದು ಪ್ರತಿನಿಧಿಸುತ್ತದೆ ಎಂದು ಹೇಳಬಹುದು; ಶ್ರೇಷ್ಠ ಸಮಾಜಶಾಸ್ತ್ರಜ್ಞರಲ್ಲಿ ಒಬ್ಬರಾದ ಮ್ಯಾಕ್ಸ್ ವೆಬರ್ ಹೇಳಿದ ತಾರ್ಕಿಕ–ನ್ಯಾಯಿಕ ಪ್ರಾಧಿಕಾರ ಇದು. ವಿಶಾಲ ಅರ್ಥದಲ್ಲಿ ಅಧಿಕಾರಶಾಹಿಯು ಇದನ್ನು ನಿರ್ವಹಿಸಿಕೊಂಡು ಬಂದಿದೆ. ವೆಬರ್ ದೃಷ್ಟಿಯಲ್ಲಿ ಇದು, ಆಡಳಿತದ ಅತ್ಯಂತ ದಕ್ಷ ಮತ್ತು ಅತ್ಯುನ್ನತ ಮಾದರಿಯಾಗಿದೆ. ನಕಾರಾತ್ಮಕ ಭಾಗದಲ್ಲಿ, ಅಮೆರಿಕದಲ್ಲಿ ಕೆಲವರು ಹೇಳಿದಂತೆ, 'ಡೀಪ್ ಸ್ಟೇಟ್' (ಅಧಿಕಾರಿಗಳು ಅಥವಾ ಸೇನೆಯ ಒಂದು ಗುಂಪಿನ ಪ್ರಭಾವದಲ್ಲಿ ನಡೆಯುವ ಆಡಳಿತ) ಆಗಿ ಪರಿವರ್ತನೆ ಆಗಬಹುದು. ಅಂದರೆ, ಅದು ಚುನಾಯಿತರಲ್ಲದ ನ್ಯಾಯಮೂರ್ತಿಗಳು, ಅಧಿಕಾರಿಗಳು ಮತ್ತು ಇತರರು ಮುಚ್ಚಿದ ಕೊಠಡಿಗಳಲ್ಲಿ, ಪಾರದರ್ಶಕವಲ್ಲದ ಪ್ರಕ್ರಿಯೆಗಳಲ್ಲಿ ನಿರ್ಧಾರ ಕೈಗೊಳ್ಳುವಿಕೆಯಾಗಿದೆ. ಇದು ಸಾರ್ವಜನಿಕ ಪರಾಮರ್ಶೆ ಮತ್ತು ಹೊಣೆಗಾರಿಕೆಯಿಂದ ಮುಕ್ತವಾಗಿದೆ ಹಾಗೂ ತಮ್ಮನ್ನು ತಾವು ಆಳಿಕೊಳ್ಳುವುದು ಸೇರಿ ಪೌರರ ಹಕ್ಕುಗಳನ್ನು ಕಿತ್ತುಕೊಳ್ಳುವುದಾಗಿದೆ.

ಅಧಿಕಾರಶಾಹಿ–ನ್ಯಾಯಾಂಗದ ಆಳ್ವಿಕೆಯ ಎಲ್ಲ ಅನುಕೂಲಗಳ ಜೊತೆಗೆ, ವಿಶೇಷವಾಗಿ ಭಾರತದ ಸಂದರ್ಭದಲ್ಲಿ ಹಲವು ಅನನುಕೂಲಗಳೂ ಇವೆ. ಪೌರರು ರಾಜಕೀಯ ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಸಕ್ರಿಯ ಭಾಗೀದಾರರು ಎಂಬ ಭರವಸೆಯನ್ನು ಪ್ರಜಾಪ್ರಭುತ್ವವು ಕೊಡುತ್ತದೆ; ಆದರೆ ಈ ವ್ಯವಸ್ಥೆಯು ಪೌರರು ಮತ್ತು ನಾಗರಿಕ ಸಮಾಜವನ್ನು ಕೇವಲ ದೂರುದಾರರನ್ನಾಗಿ ಮಾತ್ರ ನೋಡುವಂತೆ ಮಾಡುತ್ತದೆ. ನ್ಯಾಯಾಲಯದ ಸಂರಚನೆಯನ್ನು ಗಮನಿಸಿದರೆ, ಅದರ ವಿರುದ್ಧ ವ್ಯಕ್ತಿಗಳು ಮತ್ತು ಸಂಘಟನೆಗಳು ಸಾರ್ವಜನಿಕವಾಗಿ ಏನನ್ನಾದರೂ ಹೇಳುವುದು ಮತ್ತು ನೀತಿಯ ವಿಚಾರದಲ್ಲಿ ಅವರ ನಿರ್ಧಾರಗಳನ್ನು ಬದಲಾಯಿಸುವುದು ಬಹುತೇಕ ಅಸಾಧ್ಯವಾಗಿದೆ. ಇತ್ತೀಚಿನ ವರ್ಷಗಳಲ್ಲಿ ನಿಜವಾಗಿಯೂ ಸಾರ್ವಜನಿಕರು ಪ್ರತಿಭಟಿಸಬಹುದಾದ ಭೌತಿಕ ಅವಕಾಶಗಳನ್ನು ನ್ಯಾಯಾಲಯಗಳು ಸೀಮಿತಗೊಳಿಸಿವೆ ಮತ್ತು ಯಾವುದರ ವಿರುದ್ಧ ಪ್ರತಿಭಟಿಸುವಂತಿಲ್ಲ ಮತ್ತು ಯಾವ ವಿಚಾರಗಳಲ್ಲಿ ಪ್ರತಿಭಟಿಸಬೇಕು ಎಂಬುದನ್ನೂ ಹೇಳುತ್ತಿವೆ. ಇದಲ್ಲದೆ, ನ್ಯಾಯಾಲಯದ ಆಳ್ವಿಕೆ ಎನ್ನುವುದು ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವಿನ ವ್ಯತ್ಯಾಸವನ್ನು ಅಳಿಸಿಹಾಕುತ್ತದೆ; ನ್ಯಾಯಾಲಯದ ಆದೇಶಗಳ ಮೇಲಿನ ಮೇಲ್ಮನವಿಯನ್ನು ಮತ್ತೆ ನ್ಯಾಯಾಲಯಕ್ಕೇ ಸಲ್ಲಿಸಬೇಕಾಗುತ್ತದೆ! ಇದು ಬಹಳ ದೂರದ ಮಾತು ಅನಿಸಬಹುದು; ಆದರೆ, ಆಡಳಿತಶಾಹಿ–ನ್ಯಾಯಾಂಗದ ಆಳ್ವಿಕೆಯು ಬಹಳ ಸುಲಭವಾಗಿ ನಾಗರಿಕ ನಿರಂಕುಶಾಧಿಪತ್ಯವಾಗಿ ಬದಲಾಗಬಹುದು ಎಂಬುದನ್ನು ನಿರ್ಲಕ್ಷ್ಯ ಮಾಡುವಂತಿಲ್ಲ. ಅಂದರೆ, ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಇದು ಇನ್ನೊಂದು ವೇಷದಲ್ಲಿರುವ ತುರ್ತು ಪರಿಸ್ಥಿತಿಗೆ ದಾರಿ ಮಾಡಿಕೊಡಬಹುದು. ಇದಕ್ಕೆ ಸಂಬಂಧಿಸಿದ ಇನ್ನೊಂದು ಅಪಾಯವೂ ಇದೆ; ನಿರ್ದಿಷ್ಟ ಸನ್ನಿವೇಶಗಳಲ್ಲಿ ತನ್ನ ನಿರಂಕುಶಾಧಿಕಾರವನ್ನು ಹೇರುವುದಕ್ಕೆ ಆಡಳಿತಾರೂಢ ಪಕ್ಷವು ಆಡಳಿತಶಾಹಿ ಮತ್ತು ನ್ಯಾಯಾಂಗವನ್ನು ಬಳಸಿಕೊಳ್ಳಬಹುದು. ಅದಲ್ಲದೆ, ತಮ್ಮ ಹಿನ್ನೆಲೆ, ತರಬೇತಿ, ನೆಲಗಟ್ಟು ಮತ್ತು ಸಾಂಸ್ಥಿಕ ಮತ್ತು ಸಾಮಾಜಿಕ ಸ್ಥಾನಗಳಿಂದಾಗಿ ಅಧಿಕಾರಿಗಳು ಮತ್ತು ನ್ಯಾಯಮೂರ್ತಿಗಳು ತಮ್ಮ ಆಡಳಿತಕ್ಕೆ ಜನರ ಸಹಮತ ಕ್ರೋಡೀಕರಿಸಲು ಸೂಕ್ತವಾದವರಲ್ಲ. ಹಾಗಾಗಿ, ಈ ಆಡಳಿತದ ನ್ಯಾಯಸಮ್ಮತತೆಯ ಮೇಲೆ ಇದು ಪ್ರತಿಕೂಲ ಪರಿಣಾಮ ಬೀರಬಹುದು.

> ರಾಜಕೀಯ ಆಡಳಿತದಲ್ಲಿ ಅಧಿಕಾರಶಾಹಿಗೆ ಇರುವ ಸುದೀರ್ಘ ಅನುಭವ, ಸಾರ್ವಜನಿಕ ವ್ಯವಹಾರಗಳಲ್ಲಿ ಇರುವ ಜ್ಞಾನ ಮತ್ತು ಪರಿಣತಿ, ಮುರಿಯದಂತೆ ಬಾಗಿಸುವ ಚಾತುರ್ಯವು ದೇಶೀ ಮತ್ತು ಅಂತರರಾಷ್ಟ್ರೀಯ ನೀತಿಗಳಲ್ಲಿ ನಿರಂತರತೆ, ಸ್ಥಿರತೆ ಹಾಗೂ ರಾಷ್ಟ್ರದ ಕಾರ್ಯಸೂಚಿಯನ್ನು ರೂಪಿಸಿ ಅನುಷ್ಠಾನಗೊಳಿಸಲು ನೆರವಾಗುತ್ತವೆ. ಆಡಳಿತದಲ್ಲಿ ರಾಜಕಾರಣಿಗಳ ವೈಫಲ್ಯ ಕೂಡ ಅಧಿಕಾರಶಾಹಿಗೆ ವ್ಯಾಪಕ ಮತ್ತು ವಿಸ್ತೃತವಾದ ಅಧಿಕಾರಗಳನ್ನು ಕೊಟ್ಟಿದೆ



ಭಾಗ 3

ಅಧಿಕಾರಶಾಹಿ ಮತ್ತು ನ್ಯಾಯಾಂಗದ ಸ್ವರೂಪದಲ್ಲಿ ನಿರ್ದಿಷ್ಟ ಸಿದ್ಧಾಂತ ಅಥವಾ ಕಾರ್ಯಸೂಚಿಯತ್ತ ಸಾಗುವ ಅಂತರ್ಗತ ಅಂಶವೇನೂ ಇಲ್ಲ ಎಂಬುದು ಟ್ರಂಪ್ ಸರ್ಕಾರದ ಎರಡನೇ ಅವಧಿಯ ಕಳೆದ ವರ್ಷದಲ್ಲಿ ಅವರ ಪಾತ್ರವನ್ನು ನೋಡಿದಾಗ ನಮಗೆ ಸ್ಪಷ್ಟವಾಗುತ್ತದೆ. ಅಮೆರಿಕದ ಅಧಿಕಾರಶಾಹಿ ವಿಶೇಷವಾಗಿ ಮೇಲುಗಡೆ ಇರುವವರು ರಾಜಕೀಯ ಬದಲಾವಣೆಗಳು ಮತ್ತು ಪಕ್ಷಪಾತಿ ಪರಿಗಣನೆಗಳಿಗೆ ಸದಾ ಒಳಗಾದವರು. ಭಾರತವು ಬಹುಶಃ ಬ್ರಿಟಿಷ್ ಸಾಮ್ರಾಜ್ಯಶಾಹಿ ಸರ್ಕಾರದಿಂದ ಪಡೆದುಕೊಂಡಂತಹ ಬಲವಾದ ಮತ್ತು ಏಕೀಕೃತ ವೃಂದ ವ್ಯವಸ್ಥೆ ಅಮೆರಿಕದಲ್ಲಿ ಇಲ್ಲ. ಹಾಗಿದ್ದರೂ ಟ್ರಂಪ್ ಅವರನ್ನು ನಿಯಂತ್ರಿಸುವಂತಹ ಪ್ರಬಲ ಸ್ವತಂತ್ರ ಸುಪ್ರೀಂ ಕೋರ್ಟ್ ಹೋರಾಟಗಾರನ ಪಾತ್ರವನ್ನು ವಹಿಸಬಹುದು ಎಂಬ ಭರವಸೆ ಕನಿಷ್ಠ ಪಕ್ಷ ಉದಾರವಾದಿಗಳಲ್ಲಾದರೂ ಇದೆ. ನಿರಂಕುಶ, ಸರ್ವಾಧಿಕಾರಿ ಆಳ್ವಿಕೆಯ ವಿರುದ್ಧ ಉದಾರವಾದಿ ಸಾಂವಿಧಾನಿಕ ಪ್ರಜಾಪ್ರಭುತ್ವವನ್ನು ರಕ್ಷಿಸುವ ಕೋಟೆಯಂತೆ ನ್ಯಾಯಾಂಗವು ಇದೆ ಎಂಬುದನ್ನು ನಂಬುವುದಕ್ಕೆ ಕಾರಣಗಳಿಲ್ಲ ಎಂಬುದನ್ನು ಕಳೆದ ಒಂದು ವರ್ಷದ ಬೆಳವಣಿಗೆಗಳು ತೋರಿಸಿಕೊಟ್ಟಿವೆ. ಭಾರತದ ವಿಚಾರದಲ್ಲಿಯೂ ಇತ್ತೀಚಿನ ದಶಕಗಳಲ್ಲಿ ಈ ವಿಚಾರ ಇದೇ ರೀತಿಯಲ್ಲಿ ಇದೆ. ಟ್ರಂಪ್ ಅವರ ಸ್ವೇಚ್ಛೆ, ನಿರಂಕುಶ, ಕಾನೂನುಬಾಹಿರ, ಭ್ರಷ್ಟ, ಸ್ವಲಾಭ, ದ್ವೇಷಪೂರಿತ, ಯುದ್ಧೋನ್ಮತ್ತತೆ, ಹಂತಕ (ಅಂತರರಾಷ್ಟ್ರೀಯ ಜಲಪ್ರದೇಶದಲ್ಲಿ ಹತ್ಯೆ), ಬಿಳಿಯ, ಕ್ರೈಸ್ತ ಜನಾಂಗೀಯವಾದಿ/ರಾಷ್ಟ್ರೀಯವಾದಿ, ಸ್ಪಷ್ಟವಾಗಿ ಸಾಮ್ರಾಜ್ಯಶಾಹಿ ಮತ್ತು ಸಂಪನ್ಮೂಲ ಕಬಳಿಕೆಯ ಅಸಾಂವಿಧಾನಿಕ ನಡೆಗಳಿಗೆ ಸುಪ್ರೀಂ ಕೋರ್ಟ್ ಪೂರಕವಾಗಿಯೇ ವರ್ತಿಸಿದೆ. ಟ್ರಂಪ್ ಸರ್ಕಾರದ ನಡೆಗಳು ತುರ್ತು ಸನ್ನಿವೇಶಗಳ ಅನಿವಾರ್ಯಗಳಾಗಿದ್ದವೇ ಎಂಬುದನ್ನು ಪರಿಶೀಲನೆಗೂ ಒಳಪಡಿಸದೆ ಯಾವುದೇ ಕಾರಣವನ್ನೂ ನೀಡದೆ ಸಾಮಾನ್ಯವಾಗಿ ಗುಪ್ತ, ತುರ್ತು ಆದೇಶಗಳ ಮೂಲಕ ಕೆಳ ನ್ಯಾಯಾಲಯಗಳ ನಿಯಂತ್ರಣ ಆದೇಶಗಳಿಗೆ ಬಹುಪಾಲು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಭಾವಿ ನಿರಂಕುಶಾಧಿಕಾರಿಗಳ ಸ್ವೇಚ್ಛೆಯ, ಕಾನೂನುಬಾಹಿರ ಮತ್ತು ಅಸಾಂವಿಧಾನಿಕ ನಡೆಗಳ ವಿರುದ್ಧದ ರಕ್ಷಾ ಕವಚವು ದುರ್ಬಲವಾಗಿದೆ ಎಂಬ ಅಮೆರಿಕದ ಕೆಲವು ವಿಶ್ಲೇಷಕರ ವಾದವನ್ನು ಇದು ಸಮರ್ಥಿಸುವಂತಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಭಾರತದ ಅಧಿಕಾರಶಾಹಿ–ನ್ಯಾಯಾಂಗದ ಜೋಡಿಯ ರಾಷ್ಟ್ರೀಯವಾದಿ ಸಿದ್ಧಾಂತ ಮತ್ತು ಕಾರ್ಯಸೂಚಿಯ ನಿರ್ಧಾರಗಳು, ನಡೆಗಳು ಸ್ಪಷ್ಟವಾಗಿ ಭಿನ್ನವಾಗಿ ಕಾಣಿಸುತ್ತವೆ.

ಟ್ರಂಪ್ ಅವರ ತೀವ್ರವಾದಿ, ಸರ್ವವ್ಯಾಪಿ ವಿಧ್ವಂಸಕತೆ ಅಥವಾ ಎರ್ಡೋಗನ್ ಅವರ ಸ್ವಲ್ಪ ಮೆದು ಇಸ್ಲಾಂ ನಿರಂಕುಶವಾದಕ್ಕೆ ಹೋಲಿಸಿದರೆ, ಮೋದಿ ಅವರು ನಿಶ್ಚಿತವಾಗಿಯೂ ಮಂದಗಾಮಿ, ನಿರಂತರತೆ ಮತ್ತು ಸ್ಥಿರತೆಯನ್ನು ಸಂರಕ್ಷಿಸುವವರಾಗಿ ಕಾಣಿಸುತ್ತಾರೆ. ಮೋದಿ ಅವರು ತಮ್ಮ ಅಸಾಧಾರಣ ವಾಕ್ಚತುತ್ವ ಮತ್ತು ಪ್ರದರ್ಶನ ಕಲೆಗಳು ಹಾಗೂ ಗಾಢ ರಾಜಕೀಯ ಸೂಕ್ಷ್ಮತೆ, ಮತ್ತು ಬಿಜೆಪಿ–ಆರ್‌ಎಸ್‌ಎಸ್‌ನ ಸಂಘಟನಾತ್ಮಕ ಮತ್ತು ಪರಂಪರೆಯ ಬಲವನ್ನು ಬಳಸಿಕೊಂಡು ವ್ಯವಸ್ಥೆಯ ಒಳಗೇ ಇದ್ದುಕೊಂಡು ಬಿಜೆಪಿ–ಆರ್‌ಎಸ್‌ಎಸ್‌ನ ಜನಪ್ರಿಯತೆ ಮತ್ತು ಪ್ರಭಾವವನ್ನು ವಿಶಾಲವಾಗಿ ವಿಸ್ತರಿಸಿದ್ದಾರೆ; ಬಿಜೆಪಿ–ಆರ್‌ಎಸ್‌ಎಸ್‌ನ ಮೂಲಭೂತ ಸ್ವರೂಪ ಮತ್ತು ಅಂತಿಮ ಕಾರ್ಯಸೂಚಿಯ ಕುರಿತು ಪೂರ್ಣ ಅರಿವು ಇಲ್ಲದವರು ಮತ್ತು/ಅಥವಾ ಅದನ್ನು ಒಪ್ಪದವರನ್ನೂ ಈ ವಿಸ್ತರಣೆಯು ಒಳಗೊಂಡಿದೆ. ಮಹಾತ್ಮ ಗಾಂಧಿಯ ಹತ್ಯೆಗೆ ಜನರ ಪ್ರತಿಕ್ರಿಯೆಯು ಆರ್‌ಎಸ್‌ಎಸ್ ಅನ್ನು ಹೊರಗಿಟ್ಟಿತ್ತು; ಮೋದಿ ಅವರು ಈಗ ಆರ್‌ಎಸ್‌ಎಸ್ ಅನ್ನು ಭಾರತದ ಆಡಳಿತ ವ್ಯವಸ್ಥೆ ಮತ್ತು ಸಮಾಜದ ಮುಖ್ಯವಾಹಿನಿಗೆ ತಂದಿದ್ದಾರೆ. ಈ ಪ್ರಕ್ರಿಯೆಯು ದಶಕಗಳ ಹಿಂದೆಯೇ ಅಂದರೆ 1970ರ ದಶಕದಲ್ಲಿ ಜೆಪಿ ಚಳವಳಿಯಲ್ಲಿಯೇ ಆರಂಭವಾಗಿ, ತುರ್ತುಪರಿಸ್ಥಿತಿ ಮತ್ತು ಜನತಾ ಸರ್ಕಾರದ ಅವಧಿಯಲ್ಲಿ ಮತ್ತಷ್ಟು ಮುಂದಕ್ಕೆ ಹೋಯಿತು. ಸಂಘಟನೆಯ ಹಿರಿಯ ವ್ಯಕ್ತಿಗಳನ್ನು ಅಧಿಕಾರ ಮತ್ತು ಪ್ರಭಾವದ ಅತ್ಯುನ್ನತ ಮಟ್ಟದಿಂದ ಕೆಳಗಿನವರೆಗೆ ಸೇರಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಒಟ್ಟಿನಲ್ಲಿ, ಭಾರತದ ಸಮಾಜದಲ್ಲಿ ಬಿಜೆಪಿ–ಆರ್‌ಎಸ್‌ಎಸ್‌ನ ನ್ಯಾಯಸಮ್ಮತತೆ ಬಹುವಾಗಿ ಹೆಚ್ಚಳಗೊಂಡಿದೆ. ಸಂಘ ಪರಿವಾರದ ಹಿಂದುತ್ವವಾದಿ ಕಾರ್ಯಸೂಚಿಯ ಕೆಲವು ತೀವ್ರವಾದಿ ಕಾರ್ಯಸೂಚಿಗಳನ್ನು ಜಾರಿಗೊಳಿಸುವ ಪ್ರಯತ್ನದಲ್ಲಿ ಅವರು ಸಾಂವಿಧಾನಿಕ ಸಂಸ್ಥೆಗಳು, ಸಾರ್ವಜನಿಕ ಅಭಿಪ್ರಾಯ ಮತ್ತು ವಿರೋಧ ಪಕ್ಷಗಳು ತಮ್ಮ ಮುಂದೆ ಇರಿಸಿರುವ ತೊಡಕುಗಳ ವಿರುದ್ಧ ಹೋರಾಡುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರು ಮತ್ತು ಅವರು ಸ್ಥಾಪಿಸಿದ ಸಂಸ್ಥೆಗಳಿಗೆ ಹೋಲಿಸಿದರೆ ಬಿಜೆಪಿ–ಆರ್‌ಎಸ್‌ಎಸ್‌ಗೆ ಈಗಲೂ ಜನಸಮ್ಮತಿಯ ಕೊರತೆ ಇದೆ ಎಂಬುದನ್ನು ಗುರುತಿಸಿರುವ ಮೋದಿ ಅವರು ರಾಷ್ಟ್ರೀಯ ಲಾಂಛನಗಳು, ಪ್ರಜಾಸತ್ತಾತ್ಮಕ ನಿಯಮಗಳು ಮತ್ತು ಸಂಸ್ಥೆಗಳಿಗೆ ಹೆಚ್ಚಿನ ಗೌರವ ಕೊಡುತ್ತಿದ್ದಾರೆ ಎಂದು ವಾದಿಸಬಹುದು. ಹಿಂದುತ್ವವಾದಿ ಕಾರ್ಯಸೂಚಿಯನ್ನು ತಾವು ಬಯಸಿದಷ್ಟು ಶಕ್ತಿಯುತವಾಗಿ ಮುಂದಕ್ಕೆ ಒಯ್ಯುತ್ತಿಲ್ಲ ಮತ್ತು ರಾಷ್ಟ್ರೀಯವಾದಿ ಪ್ರಜಾಸತ್ತಾತ್ಮಕ, ಜಾತ್ಯತೀತ ಸಿದ್ಧಾಂತಕ್ಕೆ ಸವಾಲು ಒಡ್ಡುತ್ತಿಲ್ಲ ಎಂಬುದೇ ಇದನ್ನು ವಿವರಿಸುತ್ತದೆ. ಒಳಗಿನಿಂದಲೇ ಬದಲಾವಣೆ ತರಬಹುದಾದ ತಮ್ಮ ಕಾರ್ಯಸೂಚಿ ಮತ್ತು ಕಾರ್ಯತಂತ್ರವು ವಿಮುಖವಾಗಬಹುದು ಅಥವಾ ಹಳಿ ತಪ್ಪಬಹುದು ಎಂಬ ಕಾರಣಕ್ಕೆ ತಮ್ಮ ಪಕ್ಷದವರು ವಿವಾದಾತ್ಮಕವಾದ ವಿಚಾರಗಳನ್ನು ಎತ್ತುವುದನ್ನು ಅವರು ವೈಯಕ್ತಿಕವಾಗಿ ತಡೆಯುತ್ತಿದ್ದಾರೆ ಮತ್ತು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದಾರೆ. ಮೋದಿ ಅವರು ರಾಷ್ಟ್ರೀಯವಾದಿ ಸಹಮತವನ್ನು ಮೀರಿ ಹೋಗಲು ಪ್ರಯತ್ನಿಸಿದಾಗ ವಿರೋಧ ಪಕ್ಷಗಳು, ರೈತರು, ಸಮಾಜ, ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರು ಮತ್ತು ಸಾರ್ವಜನಿಕರಿಂದ ಪ್ರತಿರೋಧ ವ್ಯಕ್ತವಾಗಿದೆ. ಅಧಿಕಾರಶಾಹಿ–ನ್ಯಾಯಾಂಗದ ಜೋಡಿಯ ದೃಷ್ಟಿಯಿಂದ ನೋಡಿದರೆ, ತಮ್ಮ ಕಾರ್ಯಸೂಚಿ ಮತ್ತು ನಡೆಗಳಿಗೆ ಸಾಮೂಹಿಕ ಬೆಂಬಲ ಗಳಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ ಮತ್ತು ಅದಕ್ಕೆ ಪ್ರತಿಫಲವಾಗಿ ತಮ್ಮ ಹಿಂದುತ್ವ ಕಾರ್ಯಸೂಚಿಯ ಉತ್ತೇಜನಕ್ಕೆ ಸ್ವಲ್ಪ ಮಟ್ಟಿನ ಮೌನ ಸಮ್ಮತಿಯನ್ನು ಗಳಿಸಿಕೊಂಡಿದ್ದಾರೆ. ನೀತಿಯ ವಿಚಾರವನ್ನು ಸ್ಥೂಲವಾಗಿ ನೋಡಿದಾಗ, ತಮ್ಮ ಮತ್ತು ಬಿಜೆಪಿ–ಆರ್‌ಎಸ್‌ಎಸ್‌ಗೆ ಸಾಮೂಹಿಕವಾಗಿ ಪ್ರಬಲ ಬೆಂಬಲ ನೀಡುತ್ತಿರುವ ನಗರವಾಸಿಗಳು ಮತ್ತು ಹಿಂದೂ ಬಹುಸಂಖ್ಯಾತರಿಗಿಂತ ನಗರ ಮತ್ತು ಗ್ರಾಮೀಣ ಪ್ರದೇಶದ ಮೇಲ್ವರ್ಗ ಮತ್ತು ಜಾತಿಗಳ ಹಿತಾಸಕ್ತಿಯ ಪರವಾಗಿ ವಾಲಿಕೊಂಡಿದ್ದಾರೆ; ಇತರ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ/ಪಂಗಡಗಳು, ನಗರ ಮತ್ತು ಗ್ರಾಮೀಣ ಪ್ರದೇಶದ ಬಡ ಕಾರ್ಮಿಕರು, ಗ್ರಾಮೀಣ ವಲಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಂದ ದೂರವೇ ಇದ್ದಾರೆ.

ಈವರೆಗೆ ಎಲ್ಲವೂ ಸರಿಯಾಗಿಯೇ ಇದೆ. ಭಾರತದ ಪ್ರಜಾಪ್ರಭುತ್ವದ ಶಕ್ತಿಗಳು ಅದರ ಗಂಭೀರ ದೌರ್ಬಲ್ಯಗಳನ್ನು ಮೆಟ್ಟಿ ನಿಲ್ಲುತ್ತವೆ. ಅಮೆರಿಕದಂತೆ ಅಲ್ಲದೆ, ಭಾರತದ ಸಾಂವಿಧಾನಿಕ ಪ್ರಜಾಪ್ರಭುತ್ವದ ರಕ್ಷಾಕವಚಗಳು ವಿಧ್ವಂಸಕಾರಿ ಶಕ್ತಿಗಳನ್ನು ಮಿತಿಯೊಳಗೆ ಇರಿಸಿವೆ ಮತ್ತು ಸ್ವಲ್ಪ ಮಟ್ಟಿಗೆ ಅವುಗಳನ್ನು ಮುಖ್ಯವಾಹಿನಿಗೆ ಒಳಪಡಿಸಿವೆ. ಸ್ವಾತಂತ್ರ್ಯೋತ್ತರದ ಬಹುಪಾಲು ಅವಧಿಯು ಇದಕ್ಕೆ ಸಾಮಾಜಿಕ ಸಹಮತವನ್ನು ವ್ಯಕ್ತಪಡಿಸಿದೆ; ಇದರಲ್ಲಿ ತೀವ್ರವಾದ ಬಿರುಕು ಅಥವಾ ಪಲ್ಲಟಗಳು ಉಂಟಾಗಿಲ್ಲ. ಇದಕ್ಕೆ ಪರಂಪರೆ ಅಷ್ಟೇ ಕಾರಣವಲ್ಲ; ಸಾಮಾಜಿಕ ನ್ಯಾಯವನ್ನು ಒಳಗೊಂಡ ಆರ್ಥಿಕ ಪ್ರಗತಿ, ಭೂಸುಧಾರಣೆ, ಒಬಿಸಿ ಮತ್ತು ಪರಿಶಿಷ್ಟ ಜಾತಿ/ಪಂಗಡಗಳಿಗೆ ಮೀಸಲಾತಿ, ಶಿಕ್ಷಣದ ಮೂಲಕ ಸಶಕ್ತೀಕರಣ, ಸ್ವತಂತ್ರ ವಿದೇಶಾಂಗ ಮತ್ತು ರಕ್ಷಣಾ ನೀತಿ, ಎಲ್ಲ ಪೌರರನ್ನೂ ಒಳಗೊಳ್ಳುವ ಸಾಂವಿಧಾನಿಕ ಪ್ರಜಾಪ್ರಭುತ್ವ, ಸ್ವತಂತ್ರ ನ್ಯಾಯಾಂಗ ಮತ್ತು ಪ್ರಬಲವಾದ ನಾಗರಿಕ ಸೇವೆ, ಜನ ಕಲ್ಯಾಣ ವ್ಯವಸ್ಥೆಯನ್ನು ಒಳಗೊಂಡ ರಾಷ್ಟ್ರೀಯ ಕಾರ್ಯಸೂಚಿಯ ಅನುಷ್ಠಾನವೂ ಇದಕ್ಕೆ ಕಾರಣವಾಗಿದೆ.

'ಹೊಸ ಸಂವಿಧಾನವೊಂದನ್ನು (ಹಿಂದೂ ರಾಷ್ಟ್ರ) ಅಳವಡಿಸಿಕೊಳ್ಳುವುದು ಕ್ರಾಂತಿಯಾಗದಿದ್ದರೆ ಸಾಧ್ಯವಿಲ್ಲ' ಎಂದು ಬಿಜೆಪಿಯ ಹಿರಿಯ ಮುಖಂಡ ಸುಬ್ರಹ್ಮಣ್ಯನ್ ಸ್ವಾಮಿ ಅವರು ಹೇಳಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. (ಫ್ರಂಟ್‌ಲೈನ್ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಅವರ ಹೇಳಿಕೆಗಳನ್ನು ಒಳಗೊಂಡ 'ಹಿಂದುತ್ವ ಮೈಂಡ್ ಗೇಮ್ಸ್' ಪೂರ್ಣಿಮಾ ಎಸ್. ಅವರ ಲೇಖನವನ್ನು ಗಮನಿಸಬಹುದು 2017ರ ಜುಲೈ 5 https://frontline.thehindu.com/cover-story/hindutva-mind-games/article9748344.ece) ಇಂತಹುದೊಂದು ಸಂವಿಧಾನವು ಭಾರತ ದೇಶ ಎಂಬ ಚಿಂತನೆಯನ್ನೇ ಮೂಲಭೂತವಾಗಿ ಮತ್ತು ಕ್ರಾಂತಿಕಾರಕವಾಗಿ ಬದಲಾಯಿಸುತ್ತದೆ. ಆದರೆ, ರಾಜಾರಾಮ್ ಮೋಹನ ರಾಯ್ ಅವರಿಂದ ರವೀಂದ್ರನಾಥ ಟ್ಯಾಗೋರ್, ಮಹಾತ್ಮ ಗಾಂಧಿ ಮತ್ತು ಜವಾಹರಲಾಲ್ ನೆಹರೂ ವರೆಗಿನವರು ಅಭಿವೃದ್ಧಿಪಡಿಸಿದ ಈ ಭಾರತ ದೇಶ ಎಂಬ ಚಿಂತನೆಯು ಭಾರತದ ಸಾಂವಿಧಾನಿಕ ಪ್ರಜಾಪ್ರಭುತ್ವದ ಮೇಲೆ ಅವಲಂಬಿತವಾಗಿದೆ. ಸಾಮಾಜಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಬಲ್ಲ ಕ್ರಾಂತಿಗಿಂತ ಕಡಿಮೆಯಾದ ಯಾವುದರಿಂದಲೂ ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಹಾಗಾಗಿಯೇ, ಬಿಜೆಪಿಗೆ ಸಂಸತ್ತು ಮತ್ತು ಹಲವು ರಾಜ್ಯಗಳಲ್ಲಿ ಇರುವ ಬಹುಮತವು ಭಾರತವನ್ನು ಹಿಂದೂ ರಾಷ್ಟ್ರವಾಗಿ ಪರಿವರ್ತಿಸಲು ಸಾಕಾಗುವುದಿಲ್ಲ. ಸ್ವಾಮಿ ಅವರು ಉಪಸಂಹಾರದಲ್ಲಿ ಹೇಳುವ 'ಆ ವಿಚಾರವನ್ನು ಈಗ ಕೈಬಿಡಲಾಗಿದೆ' ಎಂಬ ಮಾತಿನಲ್ಲಿ ಸರಿಯಾದ ಸಮಯ ಬಂದಾಗ ಅದನ್ನು ಮತ್ತೆ ತರಲಾಗುವುದು ಎಂಬ ಧ್ವನಿಯೂ ಇದೆ.

ಸಂಸತ್ತಿಗೆ ನಡೆದ ಸತತ ಮೂರು ಚುನಾವಣೆಗಳು ಹಾಗೂ ಹಲವು ರಾಜ್ಯಗಳಲ್ಲಿ ಸಿಕ್ಕ ಗೆಲುವಿನ ಬಳಿಕವೂ ಮೋದಿ ಮತ್ತು ಬಿಜೆಪಿ–ಆರ್‌ಎಸ್‌ಎಸ್ ತಮ್ಮ ಅಂತಿಮ ಗುರಿಯೆಡೆಗೆ ಸಾಧಿಸಿದ ಯಶಸ್ಸು ಬಹಳ ಸೀಮಿತ ಎಂಬುದು ಭರವಸೆಗೆ ಕಾರಣ ಕೊಡುತ್ತದೆ. ಅಧಿಕಾರಕ್ಕೆ ಏರಿ ಅಲ್ಲಿ ದೀರ್ಘ ಕಾಲದಿಂದ ಇರುವ ನೂರು ವರ್ಷ ಹಳೆಯದಾದ ಸಂಘಟನೆ, ಮತ್ತೆ ಮತ್ತೆ ಚುನಾವಣೆ ಗೆಲ್ಲಬಲ್ಲ ಸಾಮರ್ಥ್ಯ ಇರುವ ಜನನಾಯಕ, ವ್ಯಾಪಕವಾಗಿರುವ ಕಾರ್ಯಕರ್ತ ಪಡೆ ಮತ್ತು ಸಾಮೂಹಿಕ ಬೆಂಬಲ, ಹಿಂದೂ ಸಮಾಜದ ಮೂಲೆ ಮೂಲೆಗೂ ವ್ಯಾಪಿಸಿರುವ ಗ್ರಹಿಕೆಯನ್ನು ಸುಮ್ಮನೆ ತಳ್ಳಿ ಹಾಕುವುದು ಮೂರ್ಖತನವಾಗಬಹುದು.

ನಮ್ಮ ಸಾಂವಿಧಾನಿಕ ಪ್ರಜಾಪ್ರಭುತ್ವವನ್ನು ರಕ್ಷಿಸಿ ವಿಸ್ತರಿಸಲು ಬಯಸುವವರ ಮುಂದೆ ಇರುವುದು ಪರಂಪರೆಯನ್ನು ಕಾಯ್ದುಕೊಳ್ಳುವ ಹೊಣೆಗಾರಿಕೆಯಷ್ಟೇ ಅಲ್ಲ; ಪ್ರಜಾಪ್ರಭುತ್ವವನ್ನು ಗಾಢಗೊಳಿಸಿ ಅದು ಕೆಲವು ಉನ್ನತರಿಗಷ್ಟೇ ಅಲ್ಲ, ಎಲ್ಲ ಪೌರರಿಗಾಗಿಯೂ ಕೆಲಸ ಮಾಡುತ್ತದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಸ್ಥಿರ ಪ್ರಜಾಪ್ರಭುತ್ವವನ್ನು ಖಾತರಿಪಡಿಸಿದ ಪರಂಪರೆಯನ್ನು ಬಲಪಡಿಸುವುದಕ್ಕೆ ಮಾತ್ರ ಗಮನ ಕೇಂದ್ರೀಕರಿಸಿದರೆ ಸಾಕಾಗುವುದಿಲ್ಲ; ದೌರ್ಬಲ್ಯಗಳನ್ನೂ ಪರಿಹರಿಸಿಕೊಳ್ಳಬೇಕಿದೆ. ಬಹಳ ಮುಖ್ಯವಾಗಿ, ನಿರ್ಧಾರಗಳು ಮತ್ತು ಕಾನೂನುಗಳಲ್ಲಿ ಸಕ್ರಿಯವಾಗಿ ಮತ್ತು ಸ್ವಾಯತ್ತವಾಗಿ ಪಾಲ್ಗೊಳ್ಳಲು ಸಾಧ್ಯವಾಗುವಂತೆ ಪೌರರ ಪಾತ್ರವು ವಿಸ್ತರಣೆಗೊಳ್ಳಬೇಕು. ಆದರೆ ಅದಕ್ಕಾಗಿ ರಾಜಕಾರಣವನ್ನು ರಾಜಕಾರಣಿಗಳಿಂದ ಮೊದಲು ಹಿಂದಕ್ಕೆ ಪಡೆಯಬೇಕು. ಆದರೆ ಅದು ಬಹುದೊಡ್ಡ ಕೆಲಸ.

(ಮುಗಿಯಿತು)

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಂಕ್ರಾಂತಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಬಾಲಕನೊಬ್ಬ ಗಾಳಿಪಟ ಹಾರಿಸುತ್ತಿರುವಾಗ ಗಾಳಿಯ ವೇಗಕ್ಕೆ ಬಾಲಕನೂ ಗಾಳಿಪಟ ದಾರದೊಂದಿಗೆ ಮೇಲಕ್ಕೆ ಹಾರುವ ವಿಡಿಯೊ ತುಣುಕೊಂದನ್ನು ಆಯೆಷಾ ಖಾನ್ ಎಂಬ 'ಎಕ್ಸ್' ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ. ಅದನ್ನು ಹಲವರು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ನಿಜವಲ್ಲ.




ವಿಡಿಯೊದ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಪರಿಶೀಲನೆ ನಡೆಸಿದಾಗ 'shawnnarranhanft' ಎಂಬ ಇನ್‌ಸ್ಟಾಗ್ರಾಂ ಖಾತೆಯಲ್ಲಿ 2025ರ ಡಿಸೆಂಬರ್ 30ರಂದು ಪೋಸ್ಟ್ ಮಾಡಲಾದ ವಿಡಿಯೊ ಸಿಕ್ಕಿತು. ಈ ವಿಡಿಯೊವು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹಂಚುತ್ತಿರುವ ವಿಡಿಯೊವನ್ನೇ ಹೋಲುತ್ತಿತ್ತು. ಹಾಗಾಗಿ, ಅದು ಸಂಕ್ರಾಂತಿ ಹಬ್ಬದ ಸಮಯದ ವಿಡಿಯೊ ಅಲ್ಲ. ಈ ವಿಡಿಯೊವನ್ನು ಎಐ ತಂತ್ರಜ್ಞಾನದಲ್ಲಿ ಸೃಷ್ಟಿಸಲಾಗಿದೆ ಎಂಬುದನ್ನು ಆ ಪೋಸ್ಟ್‌ನಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಅದೇ ಖಾತೆಯಲ್ಲಿದ್ದ ಇತರ ಪೋಸ್ಟ್‌ಗಳನ್ನು ಪರಿಶೀಲನೆ ಒಳಪಡಿಸಿದಾಗ ಆ ಖಾತೆಯಲ್ಲಿ ಇಂತಹ ಎಐ ಆಧಾರಿತ ವಿಡಿಯೊಗಳನ್ನು ಪೋಸ್ಟ್ ಮಾಡಿದ್ದುದು ಕಂಡು ಬಂತು. ಮುಂದುವರಿದು, ವಿಡಿಯೊ ತುಣುಕನ್ನು ಎಐ ಪತ್ತೆ ಟೂಲ್ ಆದ ಹೈವ್ ಮಾಡರೇಷನ್ ಬಳಸಿಕೊಂಡು ಪರಿಶೀಲನೆಗೆ ಒಳಪಡಿಸಿದಾಗಲೂ ಅದು ಎಐ ಸೃಷ್ಟಿ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6291

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಶ್ರಯದಾತನನ್ನು ಹೊಗಳಿ ಕಾವ್ಯ ರಚಿಸುವವನು (5)
4.ಕುಡಿಯುವ ದ್ರವ (3)
5.ಅವಸರವನ್ನು ಹೀಗೆ ಹೇಳಿ (3)
6.ಕರುವಿನ ಬೆನ್ನೆಲುಬು (3)
8.ಸಂತ ನೀಡಿರುವ ಆನಂದ (3)
10.ಮೊಟ್ಟೆಯಿಂದ ಹುಟ್ಟಿದುದು (3)
11.ಕುಣಿಯುತ ಹಾಕಿರುವ ಸರಗಂಟು (3)
15.ನೂರು ಸಾವಿರದಿಂದ ಆಗಿರುವ ಶುಭ ಚಿಹ್ನೆ (3)
16.ಆಯಾಳಿಗೆ ಆಗಿರುವ ಸುಸ್ತು (3)
17.ಉತ್ತರದವರ ಸೊಳ್ಳೆಪರದೆ (5)

ಮೇಲಿಂದ ಕೆಳಕ್ಕೆ
1.ನಿರೀಶ್ವರವಾದಿ ಇಲ್ಲಿದ್ದಾನೆ (3)
2.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು ಉಲ್ಟಾ ಆಗಿದೆ (5)
3.ವಿಧಿಯನ್ನು ಬರೆಯುವಾತ (3)
4.ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
7.ನೂರಕ್ಕೆ ಇಷ್ಟು ಎಂಬ ದರ (3)
9.ತಾರುಣ್ಯವನ್ನು ಹೊಂದಿದವಳು (3)
10.ಉತ್ತರ ಕ್ರಿಯೆಯನ್ನು ಹೀಗೂ ಹೇಳುತ್ತಾರೆ (5)
12.ಕೆಲವರು ಮಾಡುವ ಕಾರ್ಯ (3)
13.ಪ್ರಾಯಕ್ಕೆ ಬರುತ್ತಿರುವ ಎಮ್ಮೆ ಇಲ್ಲಿ ತಿರುಗಿದೆಯಲ್ಲಾ? (3)
14.ಅವನಿರುವ ಭೂಮಿ (3)



6290ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಾಯಮಾನ 3.ಅಭ್ಯಂಜನ
5.ಕನ್ನಡ 6.ದ್ರವ
8.ವಿದ್ರೋಹ 10.ವಸಂತ
11.ಹಲುಬೆ 12.ರಮಿಸು
15.ರಸ 17.ಪರೋಕ್ಷ
18.ಅವಭೃಥ 19.ರಸಹೀನ

ಮೇಲಿಂದ ಕೆಳಕ್ಕೆ:
1.ಜಾಲಂಧ್ರ 2.ನಕಲು
3.ಅಡವಿ 7.ವರ್ಣಸಂಕರ
9.ಹಲಾಲುಕೋರ 13.ಸುಪಥ
14.ಅಕ್ಷರ 16.ಸದನ

ಸುಡೊಕು 6675

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		7		8			2	
								8
6		5		9		4		
	2		6				3	5
5		3	2		1	8		9
	1				9		4	2
	6			2				
		8	9					7
	5			3	4		9	

6674 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ನಮ್ಮೊಳಗೇ ಇರುವ ಶಾಂತಿ



ಪ್ರಾಂತ್ಯದುದ್ದಕ್ಕೂ ದೊರೆ ಡಂಗುರ ಸಾರಿದನು. ಅದು ಅತ್ಯುತ್ತಮ ಚಿತ್ರಕಾರರಿಗೆ ನೀಡಲಾದ ಆಹ್ವಾನವಾಗಿತ್ತು. ಅದೊಂದು ಚಿತ್ರಕಲಾ ಸ್ಪರ್ಧೆಯ ಕರೆ. ಶಾಂತಿಯನ್ನು ಬಿಂಬಿಸುವ ಚಿತ್ರಗಳನ್ನು ಕಲಾವಿದರು ರಚಿಸಬೇಕಾಗಿತ್ತು. ಅದು ಶಾಂತಿಯ ಸ್ವರೂಪವನ್ನು ಗಟ್ಟಿಯಾಗಿ ಹಿಡಿದು ಕೊಡಬಲ್ಲ ಚಿತ್ರವಾಗಿರಬೇಕು. ಪ್ರಾಂತ್ಯದ ಒಳ ಹೊರಗೆ ಎಲ್ಲ ದಿಕ್ಕಿನಿಂದಲೂ ಕಲಾವಿದರು ತಮ್ಮ ತಮ್ಮ ಚಿತ್ರಗಳನ್ನು ಹೊತ್ತು ತಂದು ಆವರಣದಲ್ಲಿ ಪ್ರದರ್ಶನಕ್ಕೆ ಇಟ್ಟರು. ದೊರೆ ಮತ್ತವನ ತೀರ್ಪುಗಾರರ ತಂಡ ಒಮ್ಮೆ ಎಲ್ಲವನ್ನೂ ನೋಡಿ ಹೊರಟರು. ಅತ್ಯದ್ಭುತವಾದ ಚಿತ್ರಗಳಿದ್ದವು. ನೀರವ ನೀಲ ಆಕಾಶ, ಒಂಟಿ ಪರ್ವತ, ತಪಸ್ಸಿಗೆ ಕೂತ ಋಷಿ, ಗೋಡೆಗೆ ಒರಗಿ ಕೂತ ಹೆಣ್ಣು, ತಾಯಿಯ ಎದೆಹಾಲನ್ನು ಸವಿಯುತ್ತ ಮಲಗಿದ್ದ ಮಗು, ದಡವ ತಲುಪಿ ನಿಂತ ಮೌನ ನಾವೆ… ಹೀಗೆ ಒಂದಕ್ಕಿಂತ ಒಂದು ಅಪ್ರತಿಮ ಚಿತ್ರಗಳು ಅಲ್ಲಿ ಮೇಳೈಸಿದ್ದವು. ನೋಡುಗರೆಲ್ಲ 'ಇದಕ್ಕೇ ಬಹುಮಾನ ಇದಕ್ಕೇ ಪುರಸ್ಕಾರ' ಎಂದೆಲ್ಲ ಮಾತನಾಡುತ್ತ ಹೊರಟರು. ಬಹುಮಾನದ ಬಗ್ಗೆ ಎಲ್ಲರಲ್ಲೂ ಕುತೂಹಲ. ಮರುದಿನ ಪುರಸ್ಕಾರಕ್ಕೆ ಆಯ್ಕೆಯಾದ ಚಿತ್ರ ಎಲ್ಲರನ್ನೂ ಕಕ್ಕಾಬಿಕ್ಕಿಯಾಗಿಸಿತು. ಯಾರೂ ನಿರೀಕ್ಷೆ ಮಾಡದ ಒಂದು ಚಿತ್ರಕ್ಕೆ ದೊರೆ ಬಹುಮಾನ ಘೋಷಿಸಿದ್ದ. ಬೇಕಾಬಿಟ್ಟಿ ಚಿತ್ರ, ಅನರ್ಹ ಚಿತ್ರ, ಒಬ್ಬ ಹುಚ್ಚ ಕಲಾವಿದ ಹೀಗೇ ಎಸೆದು ಹೋದ ಚಿತ್ರ ಎಂದೆಲ್ಲ ಜನ ಗೊಣಗುಟ್ಟದರೆ ಅನೇಕ ನಿರೀಕ್ಷಿತ ಅದ್ಭುತ ಕಲಾವಿದರು ದೊರೆಯ ಈ ತೀರ್ಪಿನಿಂದ ಗಾಸಿಗೊಂಡರು. ಏನೂ ಮಾತನಾಡದೆ ಹೊರಟರು. ಅತ್ಯಮೋಘ ಎಂದು ನಂಬಲಾಗಿದ್ದ ಅನೇಕ ಚಿತ್ರಗಳು ನೆಲ ಕಚ್ಚಿದ್ದವು.

ದಟ್ಟವಾದ ಕಾರ್ಮೋಡ, ಬೆಚ್ಚಿ ಬೀಳಿಸುವ ಮಿಂಚು ಸಿಡಿಲು ಗುಡುಗು, ನದಿಯೊಂದರ ಹುಚ್ಚು ಹರಿವು, ಕಿರುಚುವ ಬೆಟ್ಟದ ಮರಗಳು ಅಲ್ಲೇ ಒಂದು ಮರದಲ್ಲಿ ಹಕ್ಕಿಯೊಂದು ಗೂಡಿನಲ್ಲಿ ಕೂತಿತ್ತು. ಒಡಲನ್ನು ಹರವಿ ರೆಕ್ಕೆಗಳನ್ನು ಮುಚ್ಚಿ ಅವುಗಳಿಗೆ ಕಾವು ಕೊಡುತ್ತ ಮೌನವಾಗಿ ಕೂತಿತ್ತು. ಒಂದೇ ಚೌಕಟ್ಟಿನೊಳಗೆ ಕಲಾವಿದ ಇವೆಲ್ಲವನ್ನೂ ತಂದಿದ್ದರೂ ಮರಿಗಳಿಗೆ ಕಾವು ಕೊಡುತ್ತ ಕೂತ ಹಕ್ಕಿಯನ್ನು ಭಿನ್ನವಾಗಿ ಬಿಂಬಿಸಿದ್ದ. ಅದಕ್ಕೆ ಪುರಸ್ಕಾರ ದಕ್ಕಿತ್ತು. ತನ್ನ ಸುತ್ತಣ ಅಷ್ಟೆಲ್ಲಾ ಭಯಭೀತ ಘಟನೆಗಳು ಕುಣಿಯುತ್ತಿದ್ದರೂ ಆ ಹಕ್ಕಿ ಬೆದರದೆ ತನ್ನ ಗೂಡಲ್ಲಿ ಕೂತಿತ್ತು. ಹೊರಗಿನ ಯಾವುದೇ ತಲ್ಲಣಗಳು ಅದರ ಶಾಂತಿಯನ್ನು ನೆಮ್ಮದಿಯ ದಾರಿಯನ್ನು ಕಂಗೆಡಿಸಿರಲಿಲ್ಲ. ಇದೇ ತಾನೇ ಶಾಂತಿಯ ಅನನ್ಯ ಅಸ್ತಿತ್ವ. ಅದು ಹೊರಗೆ ಇಲ್ಲ ಒಳಗೆ ಇದೆ. ವೃಥಾ ಹುಡುಕಿಕೊಂಡು ಹೋಗುತ್ತೇವೆ. ದಣಿಯುತ್ತೇವೆ. ಸಂತೆಯ ಮಧ್ಯೆಯೂ ಸಂತ ತಪಸ್ಸನ್ನು ಕೈಗೊಳ್ಳಬಲ್ಲ.

ಆಂತರಿಕ ಶಾಂತಿ ಅಂತೀವಲ್ಲ ಅದರ ಇರುವಿಕೆ ನಾವೇ ಕಂಡುಕೊಳ್ಳಬೇಕೆಂಬ ಸತ್ಯವನ್ನು ಈ ಕಲಾವಿದ ಹಕ್ಕಿಯ ಮೂಲಕ ಗಹನವಾಗಿ ನಿರೂಪಿಸಿದ್ದ. ಕಾಣುವ ಕಣ್ಣು ಬೇಕು, ಅನುಭವಿಸುವ ಹೃದಯ ಇರಬೇಕು. 'ಅಲ್ಲಿ ರಣ ದುಂಧುಬಿ, ಇಲ್ಲೊಂದು ವೀಣೆ, ಆ ಮಹಾಕಾವ್ಯ ಈ ಭಾವಗೀತೆ' ಎಂದು ಹಾಡಿದ ಕೆ.ಎಸ್.ನ. ಅವರಾಗಲಿ, ಎಲ್ಲಿದೆ ನಂದನ ಎಲ್ಲಿದೆ ಬಂಧನ ಎಲ್ಲ ಇದೆ ಈ ನಮ್ಮೊಳಗೆ' ಎಂದು ಹಾಡಿದ ಜಿ.ಎಸ್.ಎಸ್. ಅವರಾಗಲಿ ಇಂತಹ ಒಳಗನ್ನೇ ಹೇಳಿರುವುದು. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

21 ಜನವರಿ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ತೃತೀಯ ಗಂ. 26-48 ನಕ್ಷತ್ರ: ಧನಿಷ್ಠ ಗಂ. 13-58 ಯೋಗ: ವ್ಯತೀಪಾತ ಗಂ. 18-59 ಕರಣ: ತೈತಿಲ ಗಂ. 14-48 ಮಕರ ಮಾಸದ 07 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 -01-30 , ಸೂರ್ಯೋದಯ : 07-01 ಸೂರ್ಯಾಸ್ತ : 06-22, ಮುಸ್ಲಿಂ ದಿನಾಂಕ : 1 ಶಬನ್,ಅದೃಷ್ಟ ಸಂಖ್ಯೆ : 1, 6

ಮೇಷ: ಬುದ್ಧಿವಂತ, ತಿಳಿವಳಿಕೆ ಹೊಂದಿದವರಾಗಿದ್ದರೂ ಗ್ರಹಚಾರದ ಫಲವಾಗಿ ಮನೋಬಲದಿಂದ ಕಾರ್ಯ ಸಾಧಿಸುವಲ್ಲಿ ವಿಫಲರಾಗುವಿರಿ. ಗೃಹದಲ್ಲಿ ಶುಭ, ಮಂಗಳಕಾರ್ಯ ಚಟುವಟಿಕೆಗಳು ತೋರಿ ಬರಲಿವೆ.

ವೃಷಭ: ಆತಂಕ ತುಂಬಿದ ಕೆಲಸಕಾರ್ಯದಲ್ಲಿರುವವರ ಮನೆಯಲ್ಲಿ ನೆಮ್ಮದಿ ತುಂಬುವುದು. ಕಲಾ ಸೇವೆಯನ್ನು ಗುರುತಿಸಿ ಪ್ರಶಂಸೆ ಹಾಗೂ ಸನ್ಮಾನ ದೊರೆಯಲಿದೆ. ಸ್ವತಃ ಆರೈಕೆ ಮಾಡಿಕೊಳ್ಳುವುದು ಉತ್ತಮ.

ಮಿಥುನ: ವಿದ್ಯಾರ್ಜನೆಗೆಂದು ಪರ ಊರಿಗೆ ಹೋದ ನೀವು ಹಾದಿ ತಪ್ಪಿದ್ದು ಹೆತ್ತವರಿಗೆ ಸಂಕಟವನ್ನು ಉಂಟು ಮಾಡುವುದು. ಮನೆಯಲ್ಲಿ ಸಂಘರ್ಷದ ವಾತಾವರಣ ಸೃಷ್ಟಿಯಾಗಬಹುದು. ಶೀತ ಬಾಧೆಯು ನಿಮ್ಮನ್ನು ಕಾಡಬಹುದು.

ಕರ್ಕಾಟಕ: ನಿದ್ದೆಯ ಅಭಾವದಿಂದ ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆ ಇದೆ. ತಂದೆಯ ಮನಸ್ಸಿಗೆ ನೋವಾಗುವ ಸಂಗತಿ ನಡೆಯಲಿದೆ. ಗಣೇಶನ ಪೂಜೆಯಿಂದ ದಿನವನ್ನು ಪ್ರಾರಂಭಿಸಿ.

ಸಿಂಹ: ಸಾಧಿಸಲೇಬೇಕೆಂಬ ಛಲವಿರುವ ನಿಮಗೆ ಕಾರ್ಯಗಳೆಲ್ಲವೂ ಸಿದ್ಧಿಸಲಿವೆ. ವ್ಯಾಪಾರದಲ್ಲಿ ಅತೀವ ಆಸಕ್ತಿ ಮೂಡುತ್ತದೆ. ಅಧಿಕ ಲಾಭಾಂಶ ಹೊಂದುವಿರಿ. ಎಲ್ಲರ ಒಪ್ಪಿಗೆಯಂತೆ ವಿವಾಹ ನಡೆಸಿರಿ.

ಕನ್ಯಾ: ಮುಖ್ಯ ವ್ಯಕ್ತಿ ನೀಡಿದ ಉಡುಗೊರೆಯೊಂದನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ಭಾಷಾ ಅಧ್ಯಾಪಕರಿಗೆ ಉದ್ಯೋಗದಲ್ಲಿ ಅಸ್ಥಿರತೆ ಉಂಟಾಗುವುದು. ದೈನಂದಿನ ಕೆಲಸ ಕಾರ್ಯಗಳಲ್ಲಿ ಬದಲಾವಣೆ ಇರುವುದಿಲ್ಲ.

ತುಲಾ: ಜೀವನದಲ್ಲಿ ನಡೆದ ಕೆಲವು ಘಟನೆಗಳಿಂದ ಜೀವನಶೈಲಿಯೇ ಬದಲಾಗುತ್ತದೆ. ಮಕ್ಕಳು ಕೇಳುವ ಪ್ರಶ್ನೆಗಳಿಗೆ ನಿರುತ್ತರರಾಗುತ್ತೀರಿ. ತಾಳ್ಮೆಯ ಪರೀಕ್ಷೆ ಆಗಬಹುದು.

ವೃಶ್ಚಿಕ: ದೇವತಾ ಕಾರ್ಯದ ಹೆಸರಿನಲ್ಲಿ ಕಠಿಣ ವ್ರತ ಆಚರಣೆಯನ್ನು ಮಾಡುವಲ್ಲಿ ಆರೋಗ್ಯವನ್ನು ಕಡೆಗಾಣಿಸಬೇಡಿ. ಮನೆಯಲ್ಲಿ ಅಣ್ಣ-ತಮ್ಮಂದಿರ ಆಂತರಿಕ ವ್ಯವಹಾರಗಳು ಒಂದು ಹಂತ ತಲುಪುತ್ತವೆ.


ಧನು: ಕೌಶಲವನ್ನು ತೋರಲು ಹೆಚ್ಚಿನ ಅವಕಾಶಗಳು ಎದುರಾಗಲಿವೆ. ಯಾವುದೋ ಮೂಲದಿಂದ ಬಂದ ಹಣ ದೇವ ಕಾರ್ಯಗಳಿಗೆ ಉಪಯೋಗಿಸಿ. ಸಂಘ ಸಂಸ್ಥೆಗಳ ಪದಾಧಿಕಾರ ದೊರಕುವುದು.

ಮಕರ: ಕುಟುಂಬದವರ ಮಾತುಗಳಿಗೆ ಬೆಲೆ ಕೊಡುವುದು ಮತ್ತು ಎಲ್ಲರಲ್ಲೂ ಸಹನೆಯಿಂದ ವರ್ತಿಸುವುದನ್ನು ರೂಢಿಸಿಕೊಳ್ಳಿ. ಸಹೋದರರ ಬಗ್ಗೆ ನಿಮ್ಮಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನಮಾಡಿ.

ಕುಂಭ: ಸಹೋದ್ಯೋಗಿಗಳ ಸಹಕಾರದಿಂದ ಕೆಲಸ ಕಾರ್ಯಗಳಲ್ಲಿ ಜಯ ದೊರೆತು ಮನಸ್ಸು ಉಲ್ಲಾಸದಿಂದ ಇರುವುದು. ಬಂಧುಗಳು ಸಂಬಂಧ ಕೋರಿ ಬರಲಿದ್ದಾರೆ. ಲಕ್ಷ್ಮಿ ಸಹಿತ ನಾರಾಯಣನನ್ನು ಆರಾಧಿಸುವುದು ಶುಭ ತರುತ್ತದೆ.

ಮೀನ: ಕೇವಲ ನಿಮ್ಮ ಬಗ್ಗೆ ಯೋಚಿಸುವುದನ್ನು ಬಿಟ್ಟು ಇತರ ಕುರಿತು ಕಾಳಜಿ ವಹಿಸುವುದನ್ನು ಅಭ್ಯಾಸ ಮಾಡಿಕೊಳ್ಳುವಿರಿ. ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,585
ಇಂದಿನ ಅಂತ್ಯ: 25,232
ದಿನದ ಗರಿಷ್ಠ: 25,171
353

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹550; 12 ಕ್ಕೆ ₹75
ಮೈಸೂರು: 100 ಕ್ಕೆ ₹550

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹187.50
ಆರ್‌ಎಸ್‌ಎಸ್-5 ₹182.50
ಗುಡ್ ಲಾಟ್ ₹170.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಪ್ರ.ಕಿ) ₹385-760
ದ್ವಿತಳಿ (ಪ್ರ.ಕಿ) ₹289-902

ಮುದ್ದೆಮನೆ ಕಾಫಿ
ಎಪಿ ₹26250
ಎಸಿ ₹14420
ಆರ್‌ಪಿ ₹17200
ಆರ್‌ಸಿ ₹10260

ಎಫ್‌ಟಿಎ ಹೊಸ್ತಿಲಲ್ಲಿ ಭಾರತ–ಯುರೋಪ್

ಎಲ್ಲ ಒಪ್ಪಂದಗಳ ತಾಯಿ ಎಂದು ಬಣ್ಣಿಸಿದ ಉರ್ಸುಲಾ ಫಾಂಡರ್ ಲೇಯನ್

ನವದೆಹಲಿ (ಪಿಟಿಐ): ಭಾರತ ಮತ್ತು ಐರೋಪ್ಯ ಒಕ್ಕೂಟವು 'ಐತಿಹಾಸಿಕ ವ್ಯಾಪಾರ ಒಪ್ಪಂದ'ದ ಹೊಸ್ತಿಲಲ್ಲಿ ನಿಂತಿವೆ ಎಂದು ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ಮಂಗಳವಾರ ಹೇಳಿದ್ದಾರೆ.


ಉರ್ಸುಲಾ ಫಾಂಡರ್ ಲೇಯನ್

ಈ ಒಪ್ಪಂದವು ಜಾಗತಿಕ ಒಟ್ಟು ಆಂತರಿಕ ಉತ್ಪಾದನೆಯಲ್ಲಿ (ಜಿಡಿಪಿ) ಸರಿಸುಮಾರು ಶೇಕಡ 25ರಷ್ಟು ಪಾಲು ಹೊಂದಿದ, ಇನ್ನೂರು ಕೋಟಿ ಜನರು ಇರುವ ಮಾರುಕಟ್ಟೆಯನ್ನು ಸೃಷ್ಟಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಐರೋಪ್ಯ ಮಂಡಳಿಯ ಅಧ್ಯಕ್ಷ ಆಂಟೊನಿಯೊ ಕೋಸ್ಟಾ ಮತ್ತು ಫಾಂಡರ್ ಲೇಯನ್ ಅವರು ಜನವರಿ 25ರಿಂದ 27ರವರೆಗೆ ಭಾರತಕ್ಕೆ ಭೇಟಿ ನೀಡಲಿದ್ದಾರೆ. ಅವರು ಗಣರಾಜ್ಯೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗಿಯಾಗಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಜನವರಿ 27ರಂದು ನಡೆಯಲಿರುವ ಭಾರತ-ಐರೋಪ್ಯ ಒಕ್ಕೂಟ ಶೃಂಗದ ಸಂದರ್ಭದಲ್ಲಿ, ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಗಳು ಪೂರ್ಣಗೊಂಡಿರುವುದನ್ನು ಎರಡೂ ಕಡೆಯ ಪ್ರಮುಖರು ಘೋಷಿಸುವ ನಿರೀಕ್ಷೆ ಇದೆ.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಫಾಂಡರ್ ಲೇಯನ್ ಅವರು, 'ಇಂದು ಬೆಳವಣಿಗೆ ಕಾಣುತ್ತಿರುವ ಕೇಂದ್ರಗಳ ಜೊತೆ ಹಾಗೂ ಈ ಶತಮಾನದ ಆರ್ಥಿಕ ಶಕ್ತಿಕೇಂದ್ರಗಳ ಜೊತೆ ವ್ಯಾಪಾರ ವಹಿವಾಟು ನಡೆಸಲು ಯುರೋಪ್ ಬಯಸುತ್ತದೆ' ಎಂದು ಹೇಳಿದ್ದಾರೆ.

'ನಾನು ಭಾರತಕ್ಕೆ ತೆರಳಲಿದ್ದೇನೆ. ಅಲ್ಲಿ ಮಾಡಲು ಕೆಲಸಗಳು ಇನ್ನೂ ಇವೆ. ಆದರೆ ನಾವು ಐತಿಹಾಸಿಕ ವ್ಯಾಪಾರ ಒಪ್ಪಂದವೊಂದರ ಹೊಸ್ತಿಲಿನಲ್ಲಿ ನಿಂತಿದ್ದೇವೆ. ಇದನ್ನು ಕೆಲವರು ಎಲ್ಲ ಒಪ್ಪಂದಗಳ ತಾಯಿ ಎಂದು ಕರೆಯುತ್ತಿದ್ದಾರೆ...' ಎಂದು ಅವರು ಹೇಳಿದ್ದಾರೆ.

ಐರೋಪ್ಯ ಒಕ್ಕೂಟವು ಭಾರತದ ಪಾಲಿನ ಅತಿದೊಡ್ಡ ವ್ಯಾಪಾರ ಪಾಲುದಾರ. ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಸರಕುಗಳ ದ್ವಿಪಕ್ಷೀಯ ವ್ಯಾಪಾರದ ಮೊತ್ತವು 2023–24ರಲ್ಲಿ 135 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟು (ಸರಿ ಸುಮಾರು ₹12.28 ಲಕ್ಷ ಕೋಟಿ) ಆಗಿದೆ. ಮುಕ್ತ ವ್ಯಾಪಾರ ಒಪ್ಪಂದವು ವ್ಯಾಪಾರ ಸಂಬಂಧವನ್ನು ಗಣನೀಯವಾಗಿ ಗಟ್ಟಿಗೊಳಿಸುವ ನಿರೀಕ್ಷೆ ಇದೆ.

ರಕ್ಷಣಾ ಒಪ್ಪಂದದ ಚೌಕಟ್ಟು ಅನಾವರಣ?

ಮುಕ್ತ ವ್ಯಾಪಾರ ಒಪ್ಪಂದಕ್ಕೆ ಅಂತಿಮ ರೂಪ ನೀಡುವುದಷ್ಟೇ ಅಲ್ಲದೆ, ಭಾರತ ಮತ್ತು ಐರೋಪ್ಯ ಒಕ್ಕೂಟವು ರಕ್ಷಣಾ ಒಪ್ಪಂದಕ್ಕೆ ಸಂಬಂಧಿಸಿದ ಚೌಕಟ್ಟೊಂದನ್ನು ಅನಾವರಣಗೊಳಿಸುವ ನಿರೀಕ್ಷೆ ಇದೆ. ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರಕ್ಕೆ ಸಂಬಂಧಿಸಿದಂತೆ ಅಮೆರಿಕ ತೆಗೆದುಕೊಳ್ಳುತ್ತಿರುವ ತೀರ್ಮಾನಗಳ ಸುತ್ತ ಕಳವಳಗಳು ಮೂಡಿರುವ ಸಂದರ್ಭದಲ್ಲಿ ಈ ಒಪ್ಪಂದವು ಅಂತಿಮಗೊಳ್ಳುತ್ತಿದೆ.

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆಯು 2007ರಲ್ಲಿ ಆರಂಭವಾಯಿತು. ಅದು 2013ರಲ್ಲಿ ನಿಂತಿತ್ತು. ನಂತರ 2022ರ ಜೂನ್‌ನಲ್ಲಿ ಅದನ್ನು ಮತ್ತೆ ಆರಂಭಿಸಲಾಯಿತು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಂಜನ್ ನಾಯಕ್, ವೈಟ್‌ಫೀಲ್ಡ್, ಬೆಂಗಳೂರು

• **ಪ್ರಶ್ನೆ:** ನಾನು ಕಳೆದ ಕೆಲವು ವರ್ಷಗಳಿಂದ ಷೇರುಗಳಲ್ಲಿ ಸಣ್ಣ ಪ್ರಮಾಣದ ವ್ಯವಹಾರ ಮಾಡುತ್ತಿದ್ದೇನೆ. ಕಳೆದ ಕೆಲವು ವರ್ಷಗಳಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಷೇರು ವಹಿವಾಟಿನಿಂದ ಉತ್ತಮ ಆದಾಯ ಗಳಿಸಿದ್ದೇನೆ. ಪ್ರಸ್ತುತ ನಾನು ಈ ಅನುಭವದಿಂದ ಫ್ಯೂಚರ್ಸ್ ಮತ್ತು ಆಪ್ಷನ್ಸ್‌ನಲ್ಲಿ (ಎಫ್ ಆ್ಯಂಡ್ ಒ) ವ್ಯವಹರಿಸಬೇಕೆಂದು ಉದ್ದೇಶಿಸಿದ್ದೇನೆ. ಮಾರುಕಟ್ಟೆ ಸಮಯದಲ್ಲಿ ನನಗೆ ಹೂಡಿಕೆ ವಹಿವಾಟು ಮಾಡಲು ಆಗುತ್ತದೆ. ಕಳೆದ ವರ್ಷ ನಾನು ಷೇರು ವ್ಯವಹಾರದಿಂದ ಒಟ್ಟಾರೆ ₹2 ಲಕ್ಷ ನಿವ್ವಳ ಲಾಭ ಗಳಿಸಿದ್ದೇನೆ. ಇದಕ್ಕೆ ತೆರಿಗೆಯನ್ನೂ ಪಾವತಿಸಿದ್ದೇನೆ. ಈ ಹಿನ್ನೆಲೆಯಲ್ಲಿ, ಫ್ಯೂಚರ್ಸ್ ಮತ್ತು ಆಪ್ಷನ್ ವ್ಯವಹಾರವನ್ನು ಆರಂಭಿಸಲು ನಾನು ಯಾವ ವಿಷಯಗಳನ್ನು ಅನುಸರಿಸಬೇಕು ಎಂಬ ಮಾಹಿತಿ ನೀಡಿ. ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಯಾವ ರೀತಿಯ ತಯಾರಿ ಅಗತ್ಯ ಎಂಬುದನ್ನು ತಿಳಿಸಿ.

ಉತ್ತರ: ಷೇರು ಮಾರುಕಟ್ಟೆಯಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ವಹಿವಾಟಿನಿಂದ ನೀವು ಲಾಭ ಮಾಡಿರುವುದು ಉತ್ತಮ ವಿಚಾರ. ಇದರಲ್ಲಿನ ಯಶಸ್ಸು ಒಂದಷ್ಟು ಮಟ್ಟಿಗೆ ನಿಮಗೆ ನೆರವಾಗಲಿದೆ. ಆದರೆ ಫ್ಯೂಚರ್ಸ್ ಮತ್ತು ಆಪ್ಷನ್ ಮಾರುಕಟ್ಟೆ ಸರಳ ಷೇರು ವಹಿವಾಟಿಗಿಂತ ಭಿನ್ನ. ನಿತ್ಯದ ಮಾರುಕಟ್ಟೆ ದಿಕ್ಕನ್ನು ನಿಖರವಾಗಿ ಅರ್ಥಮಾಡಿಕೊಳ್ಳುವಲ್ಲಿ ಹೆಚ್ಚಿನ ಮಾರುಕಟ್ಟೆ ಅಧ್ಯಯನ, ಶಿಸ್ತು ಮತ್ತು ಅನುಭವವನ್ನು ಬಯಸುತ್ತದೆ. ಪ್ರತಿ ದಿನ ಮಾರುಕಟ್ಟೆ ಯಾವ ದಿಕ್ಕಿನಲ್ಲಿ ಚಲಿಸಬಹುದು ಎಂಬುದನ್ನು ಅಂದಾಜಿಸಲು ಕೇವಲ ಚಾರ್ಟ್‌ಗಳನ್ನೇ ಅವಲಂಬಿಸುವುದಕ್ಕಿಂತ, ಕಂಪನಿಗಳ ಸುದ್ದಿ, ಉದ್ಯಮದ ಸ್ಥಿತಿ, ಆರ್ಥಿಕ ಸೂಚ್ಯಂಕಗಳು, ಬಡ್ಡಿ ದರ ನೀತಿಗಳು ಹಾಗೂ ಜಾಗತಿಕ ಮಟ್ಟದಲ್ಲಿನ ರಾಜಕೀಯ ಬೆಳವಣಿಗೆಗಳನ್ನು ಒಟ್ಟಾಗಿ ವಿಶ್ಲೇಷಿಸುವ ದೃಷ್ಟಿಕೋನ ಅಗತ್ಯ. ಯಾವ ಸುದ್ದಿ ಯಾವ ಕಂಪನಿಗೆ ಅಥವಾ ಮಾರುಕಟ್ಟೆ ಸೂಚ್ಯಂಕಕ್ಕೆ ಹೇಗೆ ಪರಿಣಾಮ ಬೀರುತ್ತದೆ ಮತ್ತು ಮಾರುಕಟ್ಟೆ ಯಾವಾಗ ಹೇಗೆ ಚಲಿಸುತ್ತದೆ ಎನ್ನುವ ಮೂಲಭೂತ ಅಂಶಗಳನ್ನು ನಾವು ಫ್ಯೂಚರ್ಸ್ ಮತ್ತು ಆಪ್ಷನ್ ಮಾರುಕಟ್ಟೆ ವ್ಯವಹಾರಕ್ಕಿಳಿಯುವ ಮುನ್ನ ಅರ್ಥೈಸಿಕೊಳ್ಳಬೇಕು. ಉದಾಹರಣೆಗೆ, ಕಚ್ಚಾ ತೈಲ ಬೆಲೆ, ಆರ್ಥಿಕ ನೀತಿಗಳು, ಬ್ಯಾಂಕ್ ಬಡ್ಡಿದರ ನಿರ್ಣಯ, ಜಾಗತಿಕ ಸಂಘರ್ಷ ಇತ್ಯಾದಿಗಳು ದೇಶಿ ಸೂಚ್ಯಂಕ ಹಾಗೂ ಸಂಬಂಧಿತ ಕಂಪನಿಗಳ ಷೇರು ಮೌಲ್ಯದ ಮೇಲೆ ತಕ್ಷಣ ಪರಿಣಾಮ ಬೀರುತ್ತವೆ. ಇದರಿಂದ ಆಪ್ಷನ್ ಬೆಲೆಗಳಲ್ಲಿ ಅನಿರೀಕ್ಷಿತ ಏರಿಳಿತ ಕಾಣಬಹುದು.

ಈ ಮಾಹಿತಿಯಲ್ಲದೆ, ಆಪ್ಷನ್ ವ್ಯವಹಾರದಲ್ಲಿ ಅವುಗಳ ಬೆಲೆಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ತಿಳಿದುಕೊಳ್ಳುವುದು ಅತ್ಯಂತ ಮುಖ್ಯ. ಡೆಲ್ಟಾ, ಗಾಮಾ, ಥೀಟಾ, ವೇಗಾ ಹಾಗೂ ಇಂಪ್ಲೈಡ್ ವೊಲಟಾಲಿಟಿ ಇತ್ಯಾದಿ ಗುಣಾಂಕಗಳು ಮಾರುಕಟ್ಟೆ ಚಲನೆ, ಸಮಯ ಕ್ಷಯ ಮತ್ತು ಆಯಾ ಸೂಚ್ಯಂಕ ಷೇರುಗಳ ಮೌಲ್ಯದಲ್ಲಿ ಅಸ್ಥಿರತೆ ಉಂಟಾದ ಸಂದರ್ಭದಲ್ಲಿ ಆಪ್ಷನ್ ಬೆಲೆಯಲ್ಲಿ ಏನು ಬದಲಾವಣೆ ಆಗುತ್ತದೆ ಎಂಬುದನ್ನು ಸೂಚಿಸುತ್ತವೆ. ಗ್ರೀಕ್ಸ್‌ಗಳನ್ನು ಅರ್ಥೈಸದೆ ವ್ಯವಹಾರ ಮಾಡುವುದರಿಂದ, ಸರಿಯಾದ ಮಾರುಕಟ್ಟೆ ದಿಕ್ಕಿನ ಅಂದಾಜು ಇದ್ದರೂ ನಷ್ಟವಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ವಿಭಿನ್ನ ಮಾರುಕಟ್ಟೆ ಪರಿಸ್ಥಿತಿಗಳಲ್ಲಿ ಗ್ರೀಕ್ಸ್‌ಗಳ ಚಲನೆಯನ್ನು ಅಭ್ಯಾಸ ಮಾಡುವುದು ಅಗತ್ಯ.

ಕೇವಲ ಬಂಡವಾಳದ ದೃಷ್ಟಿಯಿಂದ ನೋಡಿದರೆ, ಆಪ್ಷನ್ ಖರೀದಿಯನ್ನು ಕಡಿಮೆ ಮೊತ್ತದಿಂದ ಆರಂಭಿಸಬಹುದಾದರೂ, ಗೆಲುವಿನ ಸಾಧ್ಯತೆ ಹೆಚ್ಚಿನ ಬಾರಿ ನಮ್ಮ ಊಹೆಗೆ ನಿಲುಕದ್ದು. ಆದರೆ, ಆಪ್ಷನ್ ಮಾರಾಟಕ್ಕೆ ಹೆಚ್ಚಿನ ಬಂಡವಾಳ ಅಗತ್ಯವಿದ್ದರೂ, ಸಮಯ ಕ್ಷಯವು ಮಾರಾಟಗಾರರ ಪರವಾಗಿ ಕೆಲಸ ಮಾಡುವುದರಿಂದ ಗೆಲುವಿನ ಸಾಧ್ಯತೆ ಹೆಚ್ಚಿರುತ್ತದೆ. ಇದಕ್ಕೆ ಕಟ್ಟುನಿಟ್ಟಾದ ಅಪಾಯ ನಿರ್ವಹಣೆ ಅಗತ್ಯ. ಪ್ರತಿ ವ್ಯವಹಾರದಲ್ಲೂ ನಷ್ಟದ ಮಿತಿ, ವ್ಯವಹರಿಸುವ ಲಾಟ್‌ಗಳ ನಿಯಂತ್ರಣ ಮತ್ತು ಅಸಾಧಾರಣ ಮಾರುಕಟ್ಟೆ ಏರಿಳಿತಗಳಿಗೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸಿದಾಗ ಮಾತ್ರ ಈ ವರ್ಗದಲ್ಲಿ ವ್ಯವಹರಿಸುವುದು ಮತ್ತು ದೀರ್ಘಾವಧಿಯಲ್ಲಿ ಯಶಸ್ಸನ್ನು ಸಾಧಿಸಲು ಸಾಧ್ಯವಾಗುತ್ತದೆ.

ರಾಜಲಕ್ಷ್ಮಿ, ಮೈಸೂರು

• **ಪ್ರಶ್ನೆ:** ನಾನು ಸರ್ಕಾರಿ ಕೆಲಸದಲ್ಲಿದ್ದೇನೆ. ನನಗೆ ಸುಮಾರು ₹50 ಸಾವಿರ ನಿವ್ವಳ ಆದಾಯ ಇದೆ. ಇದರಲ್ಲಿ ಬಹು ಆದಾಯ ಸ್ವಲ್ಪ ಸಿಗುತ್ತದೆ. ನನಗೆ ನಿವೃತ್ತಿಗೆ 25 ವರ್ಷ ಬಾಕಿ ಇದೆ. ಮಾಸಿಕ ಖರ್ಚು ಸುಮಾರು ₹20 ಸಾವಿರ. ಒಂದು ವೇಳೆ ನನ್ನ ಪಿಂಚಣಿ ಆದಾಯವನ್ನು ನಿವೃತ್ತಿಯ ಸಮಯಕ್ಕೆ ಬಳಸದೆ ಉಳಿತಾಯ ಮಾಡುವುದಾದರೆ ಹಾಗೂ ಪ್ರಸ್ತುತ ಇರುವ ಸಂಪಾದನೆಯಲ್ಲಿ ನಿವೃತ್ತಿಯ ನಂತರದ ವೆಚ್ಚ ಭರಿಸುವ ಉದ್ದೇಶದಿಂದ ಉಳಿತಾಯ ಮಾಡುವುದಾದರೆ, ಮುಂದೆ ನಿವೃತ್ತಿಯ ತನಕ ಮಾಸಿಕ ಕನಿಷ್ಠ ಎಷ್ಟು ಮೊತ್ತ ಹೂಡಿಕೆ ಮಾಡಬೇಕು?

ಉತ್ತರ: ತಿಂಗಳಿಗೆ ಸುಮಾರು ₹50 ಸಾವಿರ ನಿವ್ವಳ ಆದಾಯ ಹಾಗೂ ₹20 ಸಾವಿರ ಮಾಸಿಕ ವೆಚ್ಚ ಮತ್ತು ಇನ್ನೂ 25 ವರ್ಷ ಸೇವಾ ಅವಧಿ ನಿಮಗೆ ಇರುವುದನ್ನು ಗಮನಿಸಿದರೆ, ನಿವೃತ್ತಿಯ ನಂತರದ ವೆಚ್ಚಕ್ಕೆ ಇಂದಿನ ಆದಾಯದಿಂದಲೇ ವ್ಯವಸ್ಥಿತವಾಗಿ ನಿಧಿ ಒಗ್ಗೂಡಿಸಬಹುದು.

ಪ್ರಸ್ತುತ ₹20 ಸಾವಿರ ಮಾಸಿಕ ವೆಚ್ಚವು ವರ್ಷಕ್ಕೆ ₹2.4 ಲಕ್ಷವಾಗುತ್ತದೆ. ಮುಂದಿನ 25 ವರ್ಷಗಳಲ್ಲಿ ಹಣದುಬ್ಬರವನ್ನು ಸರಾಸರಿ ಶೇ 5ರಿಂದ ಶೇ 6 ಎಂದು ಲೆಕ್ಕ ಹಾಕಿದರೆ, ನಿವೃತ್ತಿಯ ವೇಳೆಗೆ ಇದೇ ವೆಚ್ಚವು ಮಾಸಿಕ ಸುಮಾರು ₹80 ಸಾವಿರದಿಂದ ₹1 ಲಕ್ಷ ಆಗುವ ಸಾಧ್ಯತೆ ಇದೆ. ನಿವೃತ್ತಿಯ ನಂತರ 25 ವರ್ಷ ಇದೇ ಜೀವನಮಟ್ಟವನ್ನು ಕಾಪಾಡಲು ಸುಮಾರು ₹1.6–₹2 ಕೋಟಿ ನಿಧಿ ಅಗತ್ಯವಾಗಬಹುದು.

ಈ ಗುರಿಗಾಗಿ, ದೀರ್ಘಾವಧಿಯಲ್ಲಿ ಸರಾಸರಿ ಶೇ 10ರಷ್ಟು ವಾರ್ಷಿಕ ಆದಾಯ ನೀಡುವ ಹೂಡಿಕೆಗಳನ್ನು ಪರಿಗಣಿಸಿದರೆ, ತಿಂಗಳಿಗೆ ಕನಿಷ್ಠ ₹9 ಸಾವಿರದಿಂದ ₹13 ಸಾವಿರ ಹೂಡಿಕೆ ಮಾಡುವುದು ಸಮಂಜಸ. ವೇತನ ಆದಾಯ ಹೆಚ್ಚಿದಂತೆ ಈ ಮೊತ್ತವನ್ನು ಇನ್ನಷ್ಟು ಹೆಚ್ಚಿಸಬಹುದು. ಹಣದುಬ್ಬರ ಹೆಚ್ಚುತ್ತಿರುವ ಸಂದರ್ಭದಲ್ಲಿ, ಈಕ್ವಿಟಿ ಆಧಾರಿತ ಹೂಡಿಕೆಗಳಿಗೆ (ಮ್ಯೂಚುವಲ್ ಫಂಡ್ ಎಸ್‌ಐಪಿ, ಎನ್‌ಪಿಎಸ್) ಹೆಚ್ಚಿನ ಒತ್ತು ನೀಡಿ, ನಿವೃತ್ತಿಗೆ ಸಮೀಪಿಸಿದಂತೆ ನಿಧಾನವಾಗಿ ಕಡಿಮೆ ಅಪಾಯದ ಹೂಡಿಕೆಗಳತ್ತ ಬದಲಾಯಿಸುವುದು ಸೂಕ್ತ. ಶಿಸ್ತಿನ ಹಾಗೂ ನಿರಂತರ ಹೂಡಿಕೆ ಎಲ್ಲರ ನಿವೃತ್ತಿ ಜೀವನಕ್ಕೆ ಭದ್ರತೆ ಒದಗಿಸುತ್ತದೆ.

❖

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಮುಂಬೈ ಧಾರಣೆ (ಶೇಂಗಾ)

20-01-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8000-8100
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಪಾಮ್ ವಾರದ ಡೆಲಿವರಿ	1288 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1510)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,46,700 (1,43,300)
ಬೆಳ್ಳಿ ಕೆ.ಜಿಗೆ	3,09,500 (2,93,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಕೋಕಾ–ಕೋಲಾ ಹೂಡಿಕೆ ಸೆಳೆಯಲು ಯತ್ನ'

ದಾವೋಸ್‌ನ ವಿಶ್ವ ಆರ್ಥಿಕ ಸಮಾವೇಶದಲ್ಲಿ ಕರ್ನಾಟಕದ ನಿಯೋಗ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಕಾ–ಕೋಲಾ ಕಂಪನಿಯು ಭಾರತದಲ್ಲಿ ಹೂಡಿಕೆ ಮಾಡಲಿರುವ ₹25,760 ಕೋಟಿಯಲ್ಲಿ ಹೆಚ್ಚಿನ ಮೊತ್ತವನ್ನು ಕರ್ನಾಟಕಕ್ಕೆ ತರಲು ಪ್ರಯತ್ನ ನಡೆಸಲಾಗಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಸಮಾವೇಶದಲ್ಲಿ ಅಧಿಕಾರಿಗಳ ನಿಯೋಗದ ಜತೆ ಅವರು ಪಾಲ್ಗೊಂಡಿದ್ದಾರೆ.

'ಈ ವೇಳೆ, ಕೋಕಾ–ಕೋಲಾ ಕಂಪನಿಯ ಜಾಗತಿಕ ನೀತಿ ಹಾಗೂ ಸುಸ್ಥಿರತೆಯ ಹಿರಿಯ ಉಪಾಧ್ಯಕ್ಷ ಮೈಕಲ್ ಗೋಲ್ಟ್ಜ್‌ಮನ್ ಅವರ ಜತೆ ಈ ಬಗ್ಗೆ ಚರ್ಚೆ ನಡೆಸಲಾಗಿದೆ. ಪಾನೀಯ ತಯಾರಿಕೆ ಮತ್ತು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ವಿಜಯಪುರ ಜಿಲ್ಲೆಯು ಸೂಕ್ತ ಸ್ಥಳವಾಗಿರುವುದನ್ನು ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ' ಎಂದು ಪಾಟೀಲ ಹೇಳಿದ್ದಾರೆ.

'ಮೆಂಜೀಸ್ ಏವಿಯೇಷನ್ನಿನ ಕಾರ್ಯನಿರ್ವಾಹಕ ಅಧ್ಯಕ್ಷ ಹ್ಯಾಸನ್ ಎಲ್. ಹೌರಿ, ಯುಪಿಎಲ್‌ನ ಅಧ್ಯಕ್ಷ ಜೈ ಶ್ರಾಫ್, ಎಬಿ ಇನ್‌ಬೆವ್‌ನ ಕಾರ್ಪೊರೇಟ್ ವ್ಯವಹಾರಗಳ ಅಧಿಕಾರಿ ಜಾನ್ ಬ್ಲಡ್, ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ನ್ಯಾಚುರಲ್ ಫೈಬರ್ ವೆಲ್ಡಿಂಗ್‌ನ ಸುಹಾಸ್ ಉಪ್ಪಲಪತಿ ಅವರ ಜೊತೆ ಫಲಪ್ರದ ಮಾತುಕತೆ ನಡೆಯಿತು' ಎಂದು ಅವರು ಹೇಳಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗ್ರೌಂಡ್ ಹ್ಯಾಂಡ್ಲಿಂಗ್ ಉದ್ದೇಶದ ಟೆಂಡರ್ ದೊರೆತರೆ ₹85 ಕೋಟಿ ಹೂಡಿಕೆ ಮಾಡಲಿರುವುದನ್ನು ಮೆಂಜೀಸ್ ಏವಿಯೇಷನ್, ರಾಜ್ಯದ ನಿಯೋಗದ ಗಮನಕ್ಕೆ ತಂದಿದೆ. ರಫ್ತು ಮಾರುಕಟ್ಟೆಗಳಿಗೆ ಪೂರಕವಾಗಿ, ಮೌಲ್ಯವರ್ಧಿತ ಮೆಕ್ಕೆಜೋಳ ಆಧಾರಿತ ಉತ್ಪನ್ನಗಳನ್ನು ತಯಾರಿಸಲು ಕೃಷಿ ಪರಿಹಾರ ಮತ್ತು ನೀರಾವರಿ ತಂತ್ರಜ್ಞಾನ ಕಂಪನಿಯಾದ ಯುಪಿಎಲ್ ಲಿಮಿಟೆಡ್ ಆಸಕ್ತಿ ವ್ಯಕ್ತಪಡಿಸಿದೆ ಎಂದು ಅವರು ವಿವರಿಸಿದ್ದಾರೆ.

ಫೋನ್‌ಪೇ ಐಪಿಒಗೆ ಸೆಬಿ ಒಪ್ಪಿಗೆ

ನವದೆಹಲಿ (ಪಿಟಿಐ): ಫೋನ್‌ಪೇ ಕಂಪನಿಯ ಐಪಿಒಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಒಪ್ಪಿಗೆ ನೀಡಿದೆ. ಕಂಪನಿಯು ಶೀಘ್ರದಲ್ಲಿ ಪರಿಷ್ಕೃತ ದಾಖಲೆಗಳನ್ನು (ಯುಡಿಆರ್‌ಎಚ್‌ಪಿ) ಸೆಬಿಗೆ ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ಈ ಐಪಿಒ ಮೂಲಕ ಹಾಲಿ ಷೇರುದಾರರು ತಮ್ಮ ಷೇರುಗಳನ್ನು ಮಾರಾಟ ಮಾಡಲಿದ್ದಾರೆ (ಆಫರ್ ಫಾರ್ ಸೇಲ್). ಕಂಪನಿಯು ಸಾರ್ವಜನಿಕರಿಗೆ ಷೇರು ಮಾರಾಟದ (ಐಪಿಒ) ಮೂಲಕ ಯಾವುದೇ ಹೆಚ್ಚುವರಿ ಪ್ರಾಥಮಿಕ ಬಂಡವಾಳ ಸಂಗ್ರಹಿಸುವುದಿಲ್ಲ ಎಂದು ತಿಳಿಸಿವೆ.

ಎನ್‌ಪಿಸಿಐ ಅಂಕಿ–ಅಂಶದ ಪ್ರಕಾರ ಒಟ್ಟು ಯುಪಿಐ ವಹಿವಾಟಿನಲ್ಲಿ ಫೋನ್‌ಪೇ ಪಾಲು ಶೇ 45ಕ್ಕಿಂತ ಹೆಚ್ಚಿದೆ. 2025ರ ಡಿಸೆಂಬರ್ ಅಂತ್ಯದ ವೇಳೆಗೆ 980 ಕೋಟಿ ವಹಿವಾಟುಗಳು ನಡೆದಿವೆ. 2024–25ರಲ್ಲಿ ಕಂಪನಿಯ ₹7,115 ಕೋಟಿ ವರಮಾನ ಹೊಂದಿತ್ತು. ಇದು 2023–24ರ ವರಮಾನಕ್ಕೆ ಹೋಲಿಸಿದರೆ ಶೇ 40ರಷ್ಟು ಹೆಚ್ಚು.

ಟಾಟಾ: ಹೊಸ ಟ್ರಕ್‌ಗಳ ಬಿಡುಗಡೆ

• ಆದಿತ್ಯ ಕೆ.ಎ.

ನವದೆಹಲಿ: ಟಾಟಾ ಮೋಟಾರ್ಸ್ ಕಂಪನಿಯು ವಿದ್ಯುತ್ ಚಾಲಿತ (ಇ.ವಿ) ಟ್ರಕ್‌ಗಳೂ ಸೇರಿದಂತೆ ಬೃಹತ್ ಪ್ರಮಾಣದಲ್ಲಿ ಸರಕು ಸಾಗಿಸುವ 17 ಹೊಸ ಮಾದರಿಯ ಟ್ರಕ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಇಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಗಿರೀಶ್ ವಾಘ್ ಹಾಗೂ ಬ್ಯುಸಿನೆಸ್ ವಿಭಾಗದ ಮುಖ್ಯಸ್ಥ ರಾಜೇಶ್ ಕೌಲ್ ಅವರು ಹೊಸ ಮಾದರಿ ಟ್ರಕ್‌ಗಳನ್ನು ಬಿಡುಗಡೆ ಮಾಡಿದರು.

ಚಾಲಕರ ಸುರಕ್ಷತೆ, ಮಾಲೀಕರಿಗೆ ಲಾಭ ಹಾಗೂ ದೇಶದ ಪ್ರಗತಿಯನ್ನು ಗಮನದಲ್ಲಿ ಇರಿಸಿಕೊಂಡು ಟ್ರಕ್ ಅಭಿವೃದ್ಧಿಪಡಿಸಲಾಗಿದೆ ಎಂದು ಗಿರೀಶ್ ವಾಘ್ ಹೇಳಿದರು.

'ಹೊಸ ಟ್ರಕ್‌ಗಳಲ್ಲಿ 23 ಸುರಕ್ಷತಾ ವೈಶಿಷ್ಟ್ಯಗಳನ್ನು ಅಳವಡಿಸಲಾಗಿದೆ. ಇಂಧನ ಕ್ಷಮತೆ, ಪರ್ಯಾಯ ಇಂಧನಗಳ ಬಳಕೆಯತ್ತ ಗಮನವಿರಿಸಿ, ಸುರಕ್ಷತೆಗೆ ಒತ್ತು ನೀಡಲಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಸರಕು ಸಾಗಿಸಲು ಅನುಕೂಲ ಆಗುವಂತೆ ಟ್ರಕ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇ.ವಿ ಮಾದರಿಯ ಟ್ರಕ್‌ಗಳ ಸರಕು ಸಾಗಣೆ ಸಾಮರ್ಥ್ಯವು 7 ಟನ್‌ನಿಂದ 55 ಟನ್ ವರಗೆ ಇದೆ' ಎಂದು ವಾಘ್ ಮಾಹಿತಿ ನೀಡಿದರು.

'ಚಾಲಕರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಕೃಷಿ ಉತ್ಪನ್ನಗಳು, ಇ-ಕಾಮರ್ಸ್, ಹಣ್ಣು–ತರಕಾರಿ ಸಾಗಣೆಗೆ ಈ ಟ್ರಕ್‌ಗಳನ್ನು ಬಳಸಿಕೊಳ್ಳಬಹುದು' ಎಂದು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಅನಿರುದ್ಧ ಕುಲಕರ್ಣಿ ವಿವರಿಸಿದರು.



ಟಾಟಾ ಮೋಟಾರ್ಸ್ ಕಂಪನಿಯು ಹೊಸ ಟ್ರಕ್‌ಗಳನ್ನು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಗಿರೀಶ್ ವಾಘ್, ಬ್ಯುಸಿನೆಸ್ ವಿಭಾಗದ ಮುಖ್ಯಸ್ಥ ರಾಜೇಶ್ ಕೌಲ್ ಹಾಗೂ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಅನಿರುದ್ಧ ಕುಲಕರ್ಣಿ ಅವರು ನವದೆಹಲಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು

ಟ್ರಕ್ ಮಾದರಿ: ಪ್ರೈಮಾ ಇ.ವಿ, ಅಲ್ಟ್ರಾ ಇ.ವಿ, ಸಿಗ್ನಾ, ಅಜುರಾ ಶ್ರೇಣಿಯ 17 ಟ್ರಕ್ ಮಾದರಿಗಳನ್ನು ಬಿಡುಗಡೆ ಮಾಡಲಾಯಿತು. 'ಇ.ವಿ ಮಾದರಿಯ ಟ್ರಕ್‌ಗಳ ದರವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು, ಒಮ್ಮೆ ಚಾರ್ಜ್ ಮಾಡಿದರೆ ಇ.ವಿ ಟ್ರಕ್ 350 ಕಿ.ಮೀ ಸಾಗುತ್ತದೆ' ಎಂದು ಕುಲಕರ್ಣಿ ಹೇಳಿದರು.

ವೈಶಿಷ್ಟ್ಯಗಳು: ಯುರೋಪಿನ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿ ಭಾರತದ ರಸ್ತೆಗಳಿಗೆ ಈ ಟ್ರಕ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ಹೊಚ್ಚಹೊಸ 'ಅಜುರಾ', ಅತ್ಯಾಧುನಿಕ 'ಟಾಟಾ ಟ್ರಕ್ಸ್.ಇವಿ' ಶ್ರೇಣಿ ಮತ್ತು ಈಗಾಗಲೇ ಜನಪ್ರಿಯವಾಗಿರುವ ಪ್ರೈಮಾ, ಸಿಗ್ನಾ ಹಾಗೂ ಅಲ್ಟ್ರಾ ವಾಹನಗಳ ಸುಧಾರಿತ ಆವೃತ್ತಿಗಳನ್ನು ಬಿಡುಗಡೆ ಮಾಡಲಾಗಿದೆ.

'ಅಜುರಾ' ಶ್ರೇಣಿಯ ಟ್ರಕ್, ಮಧ್ಯಮ ಮತ್ತು ಹಗುರವಾದ ವಾಣಿಜ್ಯ ವಾಹನ (ಐಎಲ್‌ಎಂಸಿವಿ) ವಿಭಾಗದಲ್ಲಿ ಅತ್ಯುತ್ತಮ ಕಾರ್ಯಕ್ಷಮತೆ, ಹೆಚ್ಚಿನ ಸೌಕರ್ಯ ಮತ್ತು ಹೆಚ್ಚಿನ ಅವಧಿಗೆ ಕೆಲಸ ಮಾಡುವ ಸಾಮರ್ಥ್ಯ ಹೊಂದಿದೆ. ಉತ್ಪಾದಕತೆ, ಸುರಕ್ಷತೆ ಮತ್ತು ಆರಾಮದಾಯಕ ಚಾಲನೆಗೆ ಅನುಕೂಲ ಆಗುವಂತೆ ಸಿದ್ಧಪಡಿಸಲಾಗಿದೆ ಎಂದು ಕಂಪನಿ ಹೇಳಿದೆ.

(ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ನವದೆಹಲಿಗೆ ತೆರಳಿದ್ದರು)

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1350 (1350)
ಸೂರ್ಯಕಾಂತಿ (ರಿಫೈನ್ಡ್)	₹1600 (1600)
ಪಾಮೋಲಿನ್	₹1290 (1290)

ಅಡಿಕೆ ಧಾರಣೆ

ಪುತ್ತೂರು		ಶಿವಮೊಗ್ಗ			
ಕೋಕ	23000-28000	ಬೆಟ್ಟೆ	54510-67199	ಕೆಂಪುಗೋಟು	27869-36300
ಹೊಸತು	26000-46000	ಗೊರಬಲು	19099-41699	ರಾಶಿ	46099-55309
ಹಳತು	41500-53500	ರಾಶಿ	42009-56700	ತಟ್ಟಿಬೆಟ್ಟೆ	37000-53099
ಸಾಗರ		ಸರಕು	57359-99800	**ಶಿರಸಿ**	
ಬಿಳಿಗೋಟು	36719-36719	**ಸಿದ್ದಾಪುರ**		ಬೆಟ್ಟೆ	35099-51509
ಚಾಲಿ	44330-44330	ಬಿಳಿಗೋಟು	27900-40209	ಬಿಳಿಗೋಟು	22199-41299
ಕೆಂಪುಗೋಟು	35699-39599	ಚಾಲಿ	43139-50099	ಚಾಲಿ	47126-51600
ರಾಶಿ	52889-55829	ಕೋಕ	21899-33909	ಕೆಂಪುಗೋಟು	24899-40114
ಸಿಪ್ಪೆಗೋಟು	23599-23599	ಹೊಸಚಾಲಿ	40609-48599	ರಾಶಿ	52019-58696

ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಗಳ ನಡುವೆ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ನಿಮಗೆ ಅನಿಸುತ್ತದೆಯೇ?

• ಹೌದು • ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ ಕುಸಿತ, ₹9 ಲಕ್ಷ ಕೋಟಿ ನಷ್ಟ



ಮುಂಬೈ (ಪಿಟಿಐ): ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳು ತೀವ್ರಗೊಂಡಿರುವುದು ಹಾಗೂ ಜಾಗತಿಕ ಷೇರುಪೇಟೆಗಳಲ್ಲಿನ ಮಂದಗತಿಯ ವಹಿವಾಟು ಮಂಗಳವಾರ ಭಾರತದ ಷೇರುಪೇಟೆಗಳ ಮೇಲೆ ಪರಿಣಾಮ ಬೀರಿದವು. ಇದರಿಂದಾಗಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,065 ಅಂಶ ಕುಸಿಯಿತು.

ಮಂಗಳವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹9.86 ಲಕ್ಷ ಕೋಟಿಯಷ್ಟು ಕರಗಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ದುರ್ಬಲವಾಗಿದ್ದುದು, ವಿದೇಶಿ ಹೂಡಿಕೆಯ ಹೊರಹರಿವು ಕೂಡ ಹೂಡಿಕೆದಾರರ ಉತ್ಸಾಹ ತಗ್ಗಿಸಿದವು ಎಂದು ವರ್ತಕರು ಹೇಳಿದ್ದಾರೆ. ರಾಷ್ಟ್ರೀಯ ಷೇರುಪೇಟೆಯ ನಿಫ್ಟಿ ಸೂಚ್ಯಂಕವು 353 ಅಂಶಗಳಷ್ಟು ಕುಸಿದಿದೆ. ದಕ್ಷಿಣ ಕೊರಿಯಾ, ಜಪಾನ್, ಶಾಂಘೈ, ಹಾಂಗ್‌ಕಾಂಗ್ ಷೇರುಪೇಟೆಗಳು ಕೂಡ ಇಳಿಕೆ ಆಗಿವೆ.

'ಅಮೆರಿಕದ ಆಡಳಿತ ವ್ಯವಸ್ಥೆಯು ಸುಂಕವನ್ನು ತನ್ನ ವಿದೇಶ ನೀತಿಯ ಅಸ್ತ್ರದಂತೆ ಬಳಕೆ ಮಾಡುತ್ತಿದೆ. ಇದು ಜಾಗತಿಕ ಮಾರುಕಟ್ಟೆಗಳಲ್ಲಿನ ಹೂಡಿಕೆದಾರರಲ್ಲಿ ಅಸಮಾಧಾನ ಮೂಡಿಸಿದೆ. ಇದರಿಂದಾಗಿ ಷೇರುಪೇಟೆಗಳಲ್ಲಿ ಅಸ್ಥಿರತೆ ಹೆಚ್ಚಾಗಿದೆ. ಇದೇ ಹೊತ್ತಿನಲ್ಲಿ, ಸುರಕ್ಷಿತ ಹೂಡಿಕೆಗಳಾದ ಬೆಳ್ಳಿ ಮತ್ತು ಚಿನ್ನದ ಬೆಲೆ ಹೆಚ್ಚಳವಾಗಿದೆ' ಎಂದು ಎನ್ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್. ಹೇಳಿದ್ದಾರೆ.

'ಜಾಗತಿಕ ಮಟ್ಟದಲ್ಲಿ ವ್ಯಾಪಾರ ಸಮರವು ತೀವ್ರಗೊಂಡಿರುವುದು ಹಾಗೂ ವಿದೇಶಿ ಹೂಡಿಕೆಯ ನಿರಂತರ ಹೊರಹರಿವು ಹೂಡಿಕೆದಾರರ ಮೇಲೆ ಕೆಟ್ಟ ಪರಿಣಾಮ ಬೀರಿವೆ. ಅಮೆರಿಕದ ಅಧ್ಯಕ್ಷರು ಯುರೋಪಿನ ಕೆಲವು ದೇಶಗಳ ಮೇಲೆ ಹೊಸದಾಗಿ ಸುಂಕ ವಿಧಿಸುವುದಾಗಿ ಹೇಳಿರುವುದು ಕಳವಳ ಮೂಡಿಸಿದೆ' ಎಂದು ಆಶಿಕಾ ಇಂಟರ್‌ನ್ಯಾಷನಲ್ ಈಕ್ವಿಟಿಸ್ ಹೇಳಿದೆ.

ಮೂಲಸೌಕರ್ಯ ವಲಯದ ಪ್ರಗತಿ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳ ಬೆಳವಣಿಗೆ ಡಿಸೆಂಬರ್ ತಿಂಗಳಿನಲ್ಲಿ ಶೇ 3.7ರಷ್ಟು ಆಗಿದೆ. ಇದು ನಾಲ್ಕು ತಿಂಗಳ ಗರಿಷ್ಠ ಮಟ್ಟದ ಏರಿಕೆಯಾಗಿದೆ.

ರಸಗೊಬ್ಬರ ಮತ್ತು ಸಿಮೆಂಟ್ ವಲಯದ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ. ಇದು ಬೆಳವಣಿಗೆ ಏರಿಕೆಗೆ ಕಾರಣ ಎಂದು ಸರ್ಕಾರದ ಅಂಕಿ–ಅಂಶಗಳು ಮಂಗಳವಾರ ತಿಳಿಸಿದೆ. ನವೆಂಬರ್‌ನಲ್ಲಿ ಬೆಳವಣಿಗೆ ಶೇ 2.1ರಷ್ಟಿತ್ತು.

2024ರ ಡಿಸೆಂಬರ್ ತಿಂಗಳಿನಲ್ಲಿ ಈ ವಲಯಗಳ ಬೆಳವಣಿಗೆ ಶೇ 5.1ರಷ್ಟಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಬೆಳವಣಿಗೆ ಇಳಿಕೆ ಆಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಈ ವಲಯಗಳ ಉತ್ಪಾದನೆಯು ಶೇ 2.6ರಷ್ಟಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ಶ್ರೀಮತಿ ವಿಜಯ
(ಶ್ರೀ ಪುಟ್ಟಸ್ವಾಮಿಯವರ ಧರ್ಮಪತ್ನಿ)
ನಿಧನ: 21 ಜನವರಿ 2025
ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಚ್ಚ ಹಸಿರಾಗಿ ಉಳಿದಿದೆ
ದುಃಖತಪ್ತ
ಮಕ್ಕಳು ಮತ್ತು ಕುಟುಂಬವರ್ಗದವರು

...ಸವಿನೆನಪು...

ಶ್ರೀ ಡಿ. ಕೃಷ್ಣಾರೆಡ್ಡಿ ಮತ್ತು ಶ್ರೀಮತಿ ಅಮರಾವತಮ್ಮ
ದೊಮ್ಮಲೂರು, ಬೆಂಗಳೂರು
ನಿಧನ: 21-1-1992 ನಿಧನ 12-7-2007
ನಿಮ್ಮ ಪ್ರೀತಿ, ಆದರ್ಶಗಳೇ ನಮ್ಮ ಜೀವನಕ್ಕೆ ದಾರಿದೀಪ, ನಿಮ್ಮಗಳ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ
ಕೆ. ಹೇಮಾರೆಡ್ಡಿ,
ಎಚ್. ಸುನಿಲ್‌ಕುಮಾರ್ ಮತ್ತು ದೀಕ್ಷಾ ಎಂ.,
ರಿಯಾ ಎಸ್. ರೆಡ್ಡಿ, ಮಾ॥ ದಕ್ಷ್.ಎಸ್.,
ಎಚ್.ಭರತ್ ಮತ್ತು ಕಾವ್ಯ,
ಎಚ್. ಶೋಭ ಮತ್ತು ಡಾ॥ ವಿ.ರಾಜೀವ್ ಎಂ.ಡಿ.,
ಆರ್. ಪ್ರಣವ್ ಸ್ವರೂಪ್, ಆರ್. ಹರಿತ್ರ ರೆಡ್ಡಿ
ಹಾಗೂ ಬಂಧು-ಮಿತ್ರರು

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ: ಟಯೋಟಾ, ಬ್ರಿಟಾನಿಯಾ, ಟಾಟಾಮೋಟಾರ್ಸ್, TVSಗಳಿಗೆ SSLC,PUC, Degree, Diploma, ITIನವರು 18,500/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571.

ಸೌಂದರ್ಯ-ಆರೋಗ್ಯ
Health Clinic
ಉಚಿತ ಚಿಕಿತ್ಸೆ, ಮಂಡಿ, ಬೆನ್ನು, ಭುಜದನೋವು, ಲಕ್ವ, ಕೀಲುನೋವು, ವೆರಿಕೋಸ್, ವೆಯಿನ್ಸ್, ಸಮಸ್ಯೆಗೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ, ಔಷಧಿ ಇಲ್ಲದೇ ವಿಶೇಷವಾದ ಹೈಡ್ರೋಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ಶೇಷಾದ್ರಿಪುರಂ ಬೆಂಗಳೂರು. 9739986737.

ಪ್ರವಾಸ
Travel
ಅಯೋಧ್ಯ, ಪ್ರಯಾಗ್‌ರಾಜ್ ಗಯಾ,ಕಾಶಿ 6 ದಿನಗಳು ಫೆಬ್ರವರಿ ಮಾರ್ಚ್ ಏಪ್ರಿಲ್‌ಗಳಲ್ಲಿ ವಿಜಯವಾಡ ಭದ್ರಾಚಲಂ ರಾಜಮಂಡ್ರಿ ಪಂಚರಾಮ, ಮಂದಿರಗಳು ಸಿಂಹಾಚಲಂ ವಿಶಾಖಪಟ್ಟಣಂ10 ದಿನಗಳು. ರಾಮೇಶ್ವರಂ ಕನ್ಯಾಕುಮಾರಿ ಮಧುರೈ,ತಂಜಾವೂರು ತಿರುವನಂತಪುರಂ ಗುರುವಾಯೂರು 7 ದಿನಗಳು. ಕೊಲ್ಕತ್ತಾ ಪುರಿ,ಭುವನೇಶ್ವರ್ ಶಕ್ತಿಪೀಠಗಳು 7 ದಿನಗಳು. ಶ್ರೀಶೈಲ,ಮಹಾನಂದಿ ಅಹೋಬಲಂ 5 ದಿನಗಳು. ಫೆಬ್ರವರಿ ಮಾರ್ಚ್ ನಲ್ಲಿ ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಬೆಂಗಳೂರು.18.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಡಿಜಿಪಿ ರಾವ್ ಅಮಾನತು

ಒಂದನೇ ಮುಖ ಪುಟದಿಂದ...

ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉನ್ನತಾಧಿಕಾರಿಗಳಿಗೆ ಸೂಚಿಸಿದ್ದರು.

'ಸರ್ಕಾರಿ ಅಧಿಕಾರಿಯಾದ ಡಿಜಿಪಿ ರಾಮಚಂದ್ರ ರಾವ್ ಅವರು ಯೋಗ್ಯವಲ್ಲದ ರೀತಿಯಲ್ಲಿ ಹಾಗೂ ಸರ್ಕಾರಕ್ಕೆ ಮುಜುಗರ ಉಂಟು ಮಾಡುವಂತೆ ವರ್ತಿಸಿದ್ದಾರೆ. ಈ ಸಂಬಂಧ ಮಾಧ್ಯಮಗಳಲ್ಲಿ ಪ್ರಸಾರವಾದ ವಿಡಿಯೊ, ವರದಿಗಳನ್ನು ಪರಿಶೀಲಿಸಿದಾಗ ಅವರ ನಡವಳಿಕೆಯಿಂದ ಅಖಿಲ ಭಾರತ ಸೇವಾ (ನಡತೆ) ನಿಯಮಗಳು-1968ರ ನಿಯಮ 3ರ ಉಲ್ಲಂಘನೆಯಾಗಿದೆ ಎಂದು ಮನವರಿಕೆಯಾಗಿದೆ. ಹಾಗಾಗಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಅವರ ವಿರುದ್ಧ ವಿಚಾರಣೆ ಬಾಕಿ ಇರಿಸಿ ಅಮಾನತು ಮಾಡಲಾಗಿದೆ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಈ ಮಧ್ಯೆ ರಾಮಚಂದ್ರ ರಾವ್, ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಸದಾಶಿವನಗರದ ಮನೆಯಲ್ಲಿ ಸೋಮವಾರ ಭೇಟಿಯಾಗಿ ಪ್ರಕರಣದ ಕುರಿತು ಸ್ಪಷ್ಟನೆ ಕೊಡಲು ಪ್ರಯತ್ನಿಸಿದ್ದರು. ಆದರೆ, ಪರಮೇಶ್ವರ ಅವರು ಭೇಟಿಯಾಗಿರಲಿಲ್ಲ.

ಅಮಾನತು ಆದೇಶ ಹೊರಬೀಳುತ್ತಿದ್ದಂತೆಯೇ ರಾಮಚಂದ್ರ ರಾವ್ ಅವರು ಅಜ್ಞಾತ ಸ್ಥಳಕ್ಕೆ ತೆರಳಿ, ಕಾನೂನು ಹೋರಾಟದ ಕುರಿತು ವಕೀಲರ ಜತೆ ಚರ್ಚಿಸಿದ್ದಾರೆ ಎಂದು ಗೊತ್ತಾಗಿದೆ.

ಎಲ್ಲಾ ಆಯಾಮದಿಂದ ತನಿಖೆ

ರಾಮಚಂದ್ರ ರಾವ್ ಅವರು ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎನ್ನಲಾದ ವಿಡಿಯೊಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ವಿಡಿಯೊ ಚಿತ್ರೀಕರಣ ಮಾಡಿದ್ದು ಯಾವಾಗ? ವಿಡಿಯೊದಲ್ಲಿರುವ ಮಹಿಳೆ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ.

ಬೆಳಗಾವಿ ವಲಯದ ಐಜಿಪಿಯಾಗಿ ರಾಮಚಂದ್ರ ರಾವ್ ಅವರನ್ನು ಎಂಟು ವರ್ಷಗಳ ಹಿಂದೆ ವರ್ಗಾವಣೆ ಮಾಡಲಾಗಿತ್ತು. ಆ ಸಂದರ್ಭದಲ್ಲಿನ ಘಟನೆಯ ವಿಡಿಯೊ ಈಗ ಬಹಿರಂಗವಾಗಿರಬಹುದು ಎಂಬ ಅನುಮಾನವಿದೆ.

'ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಿ ಮಾಡಿದ ವಿಡಿಯೊ ಅಥವಾ ಎಡಿಟ್ ಮಾಡಿರುವ ವಿಡಿಯೊ ಇದಾಗಿದೆ' ಎಂದು ರಾಮಚಂದ್ರ ರಾವ್ ಅವರು ಹೇಳಿಕೆ ನೀಡಿದ್ದಾರೆ. ಬೇರೆ ಬೇರೆ ಸಂದರ್ಭಗಳಲ್ಲಿ ತೆಗೆದ ಮೂರು ವಿಡಿಯೊಗಳನ್ನು ಒಟ್ಟಾಗಿ ಸೇರಿಸಿರುವ 47 ಸೆಕೆಂಡಿನ ವಿಡಿಯೊ ತುಣುಕು ಹರಿದಾಡುತ್ತಿದೆ. ಅಲ್ಲದೇ ಮಹಿಳೆ ಜತೆ ಸಲುಗೆಯಿಂದ ಮಾತನಾಡಿರುವ ಆಡಿಯೊ ಕ್ಲಿಪ್‌ಗಳು ಹರಿದಾಡುತ್ತಿವೆ. ಅವುಗಳ ನೈಜತೆ ಪರಿಶೀಲನೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿಶ್ವಸಂಸ್ಥೆ ನೆರವು ಕಚೇರಿ ನೆಲಸಮಗೊಳಿಸಿದ ಇಸ್ರೇಲ್

ಜೆರುಸಲೇಂ (ಎಪಿ): ಜೆರುಸಲೇಂನ ಪೂರ್ವ ಭಾಗದಲ್ಲಿರುವ 'ವಿಶ್ವ ಸಂಸ್ಥೆ ಪರಿಹಾರ ಮತ್ತು ಕಾರ್ಯ ಏಜೆನ್ಸಿ' (ಯುಎನ್‌ಆರ್‌ಡಬ್ಲ್ಯುಎ) ಕೇಂದ್ರ ಕಚೇರಿಯನ್ನು ಇಸ್ರೇಲ್ ಮಂಗಳವಾರ ನೆಲಸಮಗೊಳಿಸಿದೆ.

ಪ್ಯಾಲೆಸ್ಟೀನ್ ಪರ ಮಾನವೀಯ ನೆರವು ನೀಡುವುದನ್ನು ತಡೆಯುವ ಸಂಬಂಧ ತಾನು ರೂಪಿಸಿಕೊಂಡಿರುವ ಕಾನೂನಿನ ಅನ್ವಯ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಇಸ್ರೇಲ್ ಹೇಳಿದೆ. ಇದೊಂದು 'ಐತಿಹಾಸಿಕ ದಿನ' ಎಂದೂ ಅದು ಕರೆದುಕೊಂಡಿದೆ.

ಈ ಬಗ್ಗೆ ಯುಎನ್‌ಆರ್‌ಡಬ್ಲ್ಯುಎ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, 'ಇಸ್ರೇಲ್ ಸೇನೆಯು ನಮ್ಮ ಸಿಬ್ಬಂದಿಯಿಂದ ಕಂಪ್ಯೂಟರ್ ಸೇರಿದಂತೆ ಅವರ ಇತರೆ ಸಾಧನಗಳನ್ನು ಕಸಿದುಕೊಂಡಿದೆ. ಜೊತೆಗೆ, ಕಚೇರಿಯಿಂದ ಬಲವಂತವಾಗಿ ಸಿಬ್ಬಂದಿಯನ್ನು ಹೊರದಬ್ಬಲಾಗಿದೆ' ಎಂದು ಆರೋಪಿಸಿದೆ.

'ಯುಎನ್‌ಆರ್‌ಡಬ್ಲ್ಯುಎ ಸಂಸ್ಥೆಗೆ ಹಮಾಸ್‌ನೊಂದಿಗೆ ಸಂಪರ್ಕವಿದೆ' ಎನ್ನುವುದು ಇಸ್ರೇಲ್‌ನ ಎಂದಿನ ಆರೋಪ. ಆದರೆ, ಸಂಸ್ಥೆ ಇದನ್ನು ಅಲ್ಲಗಳೆಯುತ್ತಲೇ ಬಂದಿದೆ.

'ಗ್ರೀನ್‌ಲ್ಯಾಂಡ್ ಪಡೆದುಕೊಳ್ಳುತ್ತೇವೆ'

ಒಂದನೇ ಪುಟದಿಂದ...

'ಗ್ರೀನ್‌ಲ್ಯಾಂಡ್ ಕುರಿತು ಮುಂದೇನು ಮಾಡಬೇಕು ಎಂಬ ಮಾರ್ಗೋಪಾಯ ಹುಡುಕಲು ಬದ್ಧ' ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಕಳುಹಿಸಿರುವ ಸಂದೇಶವನ್ನೂ ಟ್ರಂಪ್ ಬಹಿರಂಗಪಡಿಸಿದ್ದಾರೆ. ನ್ಯಾಟೊದ ಅಧಿಕಾರಿಗಳು ಇದನ್ನು ಖಚಿತಪಡಿಸಿದ್ದಾರೆ.

ರುಟ್ಟೆ ಅವರೊಂದಿಗೆ ಮಾತುಕತೆ ನಡೆಸಿರುವ ಬಗ್ಗೆ ಹೇಳಿಕೆ ನೀಡಿದ ಟ್ರಂಪ್, 'ಅಮೆರಿಕ ಮತ್ತು ಇಡೀ ಜಗತ್ತಿನ ಭದ್ರತೆಗೆ ಗ್ರೀನ್‌ಲ್ಯಾಂಡ್ ಬಹಳ ಮುಖ್ಯವಾಗಿದೆ' ಎಂದಿದ್ದಾರೆ.

ಗ್ರೀನ್‌ಲ್ಯಾಂಡ್ ಪಡೆದುಕೊಳ್ಳುವ ತನ್ನ ದಾರಿಗೆ ಅಡ್ಡಗಾಲು ಹಾಕುವ ದೇಶಗಳ ಮೇಲೆಯೂ ಸುಂಕ ವಿಧಿಸುವುದಾಗಿ ಟ್ರಂಪ್ ಮಂಗಳವಾರ ಹೇಳಿದ್ದಾರೆ.

ಎರಡನೇ ಮಹಾಯುದ್ಧದ ಪಾಠ ಮರೆಯಬಾರದು: 'ಎರಡನೇ ಮಹಾಯುದ್ಧದಿಂದ ಕಲಿತ ಪಾಠವನ್ನು ಜಗತ್ತು ಮರೆಯಬಾರದು. ನಾವೆಲ್ಲರೂ ಸಹಕಾರದಿಂದ ಇರುವುದಕ್ಕೆ ಬದ್ಧರಾಗಿರಬೇಕು. ಇದಕ್ಕಾಗಿಯೇ ಗ್ರೀನ್‌ಲ್ಯಾಂಡ್‌ನಲ್ಲಿ ಸೇನಾ ಸಮರಾಭ್ಯಾಸ ನಡೆಸಲು ಸೇರಿಕೊಳ್ಳಲು ನಿರ್ಧರಿಸಿದ್ದೇವೆ. ಇದು ಯಾರನ್ನೋ ಬೆದರಿಸುವುದಕ್ಕಾಗಿ ಅಲ್ಲ. ಐರೋಪ್ಯ ಒಕ್ಕೂಟ ಒಂದು ದೇಶದ ಪರ ನಿಲ್ಲುವುದಕ್ಕೆ. ಸುಂಕಗಳನ್ನು ಹೇರುವುದು ಮತ್ತೊಂದು ದೇಶದ ಸಾರ್ವಭೌಮತ್ವದ ವಿರುದ್ಧವಾದುದು' ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಪ್ರತಿಕ್ರಿಯಿಸಿದ್ದಾರೆ.

ಬೆದರಿಕೆ ಒಡ್ಡಿದ ಒಕ್ಕೂಟ

ಒಂದನೇ ಪುಟದಿಂದ...

ಈ ಅಧಿಕಾರವನ್ನು ಒಕ್ಕೂಟ ಯಾರ ಮೇಲೂ ಇಲ್ಲಿಯವರೆಗೆ ಬಳಸಿಲ್ಲ. ಅಮೆರಿಕದ ಐಟಿ ಕಂಪನಿಗಳ ವ್ಯಾಪಾರ ತಡೆಯುವುದು, ತನ್ನ ದೇಶಗಳಲ್ಲಿ ಅಮೆರಿಕದ ಹೂಡಿಕೆ ನಿಯಂತ್ರಿಸುವುದು ಹಾಗೂ ಇತರೆ ಅಸ್ತ್ರಗಳನ್ನು ಪ್ರಯೋಗಿಸಲು ಯೋಚಿಸಲಾಗುತ್ತಿದೆ.

ಇದಕ್ಕೆ ದಾವೋಸ್‌ನಲ್ಲಿ ಪ್ರತಿಕ್ರಿಯಿಸಿರುವ ಅಮೆರಿಕ ಹಣಕಾಸು ಕಾರ್ಯದರ್ಶಿ ಸ್ಕಾಟ್ ಬೆಸೆಂಟ್, 'ನಾವು ಎತ್ತ ಸಾಗುತ್ತಿದ್ದೇವೆ? ಯಾಕೆ ಕೆಟ್ಟ ಯೋಚನೆಯನ್ನು ಮಾಡುತ್ತಿದ್ದೇವೆ? ನಿಧಾನಿಸಿ... ದೀರ್ಘವಾಗಿ ಉಸಿರು ತೆಗೆದುಕೊಳ್ಳಿ. ಎಲ್ಲರೂ ಸೇರಿ ಎಲ್ಲರಿಗೂ ಒಳ್ಳೆಯದಾಗುವಂತೆ ಏನಾದರೂ ಮಾಡೋಣ' ಎಂದಿದ್ದಾರೆ.




ಐರೋಪ್ಯ ಒಕ್ಕೂಟದ ಎಲ್ಲ ನಾಯಕರ ಜೊತೆ ಶ್ವೇತ ಭವನದಲ್ಲಿ ಟ್ರಂಪ್ ಅವರು ಸಭೆ ನಡೆಸುತ್ತಿರುವ ಎಐ ಚಿತ್ರ. ಜಗತ್ತಿನ ನಕ್ಷೆಯ ಚಿತ್ರದಲ್ಲಿ ಗ್ರೀನ್‌ಲ್ಯಾಂಡ್, ಕೆನಡಾ ಮತ್ತು ವೆನೆಜುವೆಲಾ ದೇಶಗಳಿಗೆ ಅಮೆರಿಕ ಧ್ವಜದ ಚಿತ್ರವನ್ನು ಹಾಕಲಾಗಿದೆ (ಎಡಚಿತ್ರ) ಟ್ರಂಪ್ ಅವರು ಅಮೆರಿಕ ಧ್ವಜವನ್ನು ಗ್ರೀನ್‌ಲ್ಯಾಂಡ್‌ನಲ್ಲಿ ಊರುತ್ತಿರುವ ಎಐ ಚಿತ್ರ. ಇವರ ಜೊತೆ, ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ಗೃಹ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಇದ್ದಾರೆ. 'ಗ್ರೀನ್‌ಲ್ಯಾಂಡ್, ಅಮೆರಿಕದ ಪ್ರಾಂತ್ಯ, 2026ರಲ್ಲಿ ಪಡೆದುಕೊಂಡದ್ದು' ಎಂದು ಬರೆಯಲಾಗಿದೆ

– ಟ್ರಂಪ್ ಅವರ ಪೋಸ್ಟ್‌ನಿಂದ ಪಡೆದುಕೊಂಡ ಚಿತ್ರಗಳು



ಚೌಕಿದಾರ್ ಟ್ರೇಲರ್ ಬಿಡುಗಡೆ

ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ, 'ರಥಾವರ' ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿರುವ 'ಚೌಕಿದಾರ್' ಚಿತ್ರ ಜ.30ರಂದು ತೆರೆಕಾಣುತ್ತಿದ್ದು, ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ.

ಒಬ್ಬನೇ ಮಗನನ್ನು ಮುದ್ದಾಗಿ ಬೆಳೆಸುವ, ತನಗೆ ಬಾಲ್ಯದಲ್ಲಿ ದೊರಕದ ಎಲ್ಲಾ ಸೌಲಭ್ಯಗಳನ್ನು ಮಗನಿಗೆ ನೀಡುವ ಅಪ್ಪನ ಕಥೆ ಇದಾಗಿದೆ. ಒಟ್ಟಾರೆ ಅಪ್ಪ ಮಗನ ಬಾಂಧವ್ಯದ ಕುರಿತ ಕಥೆಯನ್ನು ಟ್ರೇಲರ್ ಸಂಕ್ಷಿಪ್ತವಾಗಿ ಹೇಳಿದ್ದು, ಒಂದಿಷ್ಟು ಥ್ರಿಲ್ಲರ್ ಅಂಶಗಳನ್ನೂ ನಿರ್ದೇಶಕರು ಇದಕ್ಕೆ ಬೆರೆಸಿದ್ದಾರೆ. ಸಿನಿಮಾದಲ್ಲಿ ಸಾಯಿಕುಮಾರ್ ಹಾಗೂ ಪೃಥ್ವಿ ಅಂಬಾರ್ ತಂದೆ–ಮಗನಾಗಿ ಜೊತೆಯಾಗಿದ್ದಾರೆ. ಪೃಥ್ವಿ ಅಂಬಾರ್ ಹಾಗೂ ಧನ್ಯಾ ರಾಮ್‌ಕುಮಾರ್ ಜೋಡಿಯಾಗಿ ನಟಿಸಿರುವ ಈ ಸಿನಿಮಾ ಫ್ಯಾಮಿಲಿ ಡ್ರಾಮಾ ಜಾನರ್‌ನಲ್ಲಿದೆ.

ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಮಾತನಾಡಿ, 'ಚೌಕಿದಾರ್ ಅಂದರೆ ಸಂರಕ್ಷಿಸುವಾತ. ಈ ಶೀರ್ಷಿಕೆಗೂ ರಾಜಕೀಯಕ್ಕೂ ಸಂಬಂಧವಿಲ್ಲ. ಇದೊಂದು ಕೌಟುಂಬಿಕ ಚಿತ್ರ' ಎಂದರು.

ನಾಯಕ ಪೃಥ್ವಿ ಅಂಬಾರ್ ಮಾತನಾಡಿ, 'ಸಾಯಿಕುಮಾರ್ ಅವರು ಈ ಸಿನಿಮಾದ ನಿಜವಾದ ನಾಯಕ. ಈ ಸಿನಿಮಾ ಕೇವಲ ಮನರಂಜನೆಯಷ್ಟೇ ಆಗಿರದೆ ಒಂದಷ್ಟು ಆಲೋಚನೆಗಳನ್ನು ಜನರಲ್ಲಿ ಮೂಡಿಸುವ ಕೆಲಸ ಮಾಡಲಿದೆ' ಎಂದರು.

'ಚೈತ್ರದ ಪ್ರೇಮಾಂಜಲಿ' ಚಿತ್ರದ ನಾಯಕಿ ಶ್ವೇತಾ, ಸುಧಾರಾಣಿ ಪ್ರಮುಖ ಪಾತ್ರದಲ್ಲಿದ್ದಾರೆ. 'ಬಿಗ್‌ಬಾಸ್' ಖ್ಯಾತಿಯ ಗಿಲ್ಲಿ ನಟ, ಧರ್ಮ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ವಿ.ಎಸ್. ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಕಲ್ಲಹಳ್ಳಿ ಚಂದ್ರಶೇಖರ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.



ಗೋಪಿಕಾ, ಹೇಮಂತ್, ಅಯಾನ

ರಕ್ತದಲ್ಲೇ ಬರೆಯುವ ಕಥೆ 'ಆಲ್ಫಾ'

'ಗೀತಾ', 'ಗುರುದೇವ ಹೊಯ್ಸಳ' ಚಿತ್ರಗಳನ್ನು ನಿರ್ದೇಶಿಸಿರುವ ವಿಜಯ್ ನಿರ್ದೇಶನದ ಹೊಸ ಸಿನಿಮಾ 'ಆಲ್ಫಾ' ಫೆ.20ರಂದು ಬಿಡುಗಡೆಯಾಗುತ್ತಿದ್ದು, ಚಿತ್ರದ ಶೀರ್ಷಿಕೆ ಗೀತೆ ಇತ್ತೀಚೆಗೆ ರಿಲೀಸ್ ಆಗಿದೆ.

'ಮೆನ್ ಲವ್ ವೆಂಜೆಂನ್ಸ್' ಎಂಬ ಅಡಿಬರಹವಿರುವ ಈ ಸಿನಿಮಾವನ್ನು ಎಲ್.ಎ.ಪ್ರೊಡಕ್ಷನ್ಸ್‌ನಡಿ ಆನಂದ್ ಕುಮಾರ್ ನಿರ್ಮಿಸಿದ್ದು, ನಾಯಕನಾಗಿ ಹೇಮಂತ್ ಕುಮಾರ್ ನಟಿಸಿದ್ದಾರೆ. ಇವರಿಗೆ ಅಯಾನಾ ಹಾಗೂ ಗೋಪಿಕಾ ಸುರೇಶ್ ಜೋಡಿಯಾಗಿದ್ದಾರೆ. ಟೈಟಲ್ ಟ್ರ್ಯಾಕ್‌ಗೆ ಅನೂಪ್ ಸೀಳಿನ್ ಸಂಗೀತ ಸಂಯೋಜಿಸಿದ್ದು, ನಾಗಾರ್ಜುನ ಶರ್ಮ ಸಾಹಿತ್ಯವಿದೆ. ವ್ಯಾಸರಾಜ ಸೋಸಲೆ ಹಾಡಿರುವ ಶೀರ್ಷಿಕೆ ಗೀತೆಯು ಲಹರಿ ಮ್ಯೂಸಿಕ್ ಮೂಲಕ ಬಿಡುಗಡೆಯಾಗಿದೆ. ನಾಯಕನ ಪಾತ್ರದ ಗುಣಲಕ್ಷಣಗಳನ್ನು ಹಾಡಿನ ಮೂಲಕ ವಿವರಿಸಿದ್ದಾರೆ ನಿರ್ದೇಶಕರು. ರಕ್ತದಲ್ಲೇ ಬರೆಯುವ ಕಥೆ ಇದಾಗಿದೆ ಎಂದು 'ಆಲ್ಫಾ'ದ ಕಥಾಹಂದರದ ಸಣ್ಣ ಸುಳಿವನ್ನೂ ನೀಡಲಾಗಿದೆ.

'ನಾನು ಯಾವುದೇ ಸಿನಿಮಾ ಹಿನ್ನೆಲೆ ಇಲ್ಲದೇ ಚಿತ್ರರಂಗಕ್ಕೆ ಬಂದವನು. ಆದರೆ ನಟನಾಗಬೇಕು ಎಂಬ ಕನಸು ಮೊದಲಿನಿಂದಲೇ ಇತ್ತು. ನಾಯಕನಾಗಲು ಬೇಕಾದ ಎಲ್ಲಾ ತರಬೇತಿ ಪಡೆದು ಇಲ್ಲಿಗೆ ಬಂದಿದ್ದೇನೆ. ನನ್ನ ಚೊಚ್ಚಲ ಸಿನಿಮಾಗೆ ಪ್ರೇಕ್ಷಕರ ಪ್ರೋತ್ಸಾಹ ಬೇಕಾಗಿದೆ' ಎಂದರು ಹೇಮಂತ್ ಕುಮಾರ್.

ಸಿನಿಮಾದಲ್ಲಿ 'ಬಿಗ್‌ಬಾಸ್' ಖ್ಯಾತಿಯ ಕಾರ್ತಿಕ್ ಮಹೇಶ್ ಖಳನಾಯಕನಾಗಿ ನಟಿಸಿದ್ದು, ಹಿಂದೆಂದೂ ಕಾಣಿಸಿಕೊಳ್ಳದ ಭಿನ್ನವಾದ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ ಎಂದಿದೆ ಚಿತ್ರತಂಡ.



'ಜೆಸಿ' ಫೆ.6ಕ್ಕೆ ತೆರೆಗೆ

ನಟ ಡಾಲಿ ಧನಂಜಯ ಅವರ 'ಡಾಲಿ ಪಿಕ್ಚರ್ಸ್' ನಿರ್ಮಾಣದ 'ಜೆಸಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚೇತನ್ ಜೈರಾಮ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರ ಫೆ.6ರಂದು ತೆರೆಗೆ ಬರಲಿದೆ.

'ಮ್ಯಾಡಿಯ ಮ್ಯಾಡ್‌ನೆಸ್ ಜೊತೆಗೆ ಜೈಲಿನ ಡಾರ್ಕ್‌ನೆಸ್ ಪಯಣ' ಎಂದು ಚಿತ್ರದ ಕುರಿತು ಡಾಲಿ ಧನಂಜಯ ಹೇಳಿದ್ದಾರೆ. ಯಾವುದೋ ಕಾರಣಕ್ಕೆ ಜೈಲು ಸೇರುವ ಅಮಾಯಕ ಕೈದಿಯೊಬ್ಬನಿಗೆ ಉಳಿದ ಕೈದಿಗಳು ನೀಡುವ ಹಿಂಸೆ, ಜೈಲಿನೊಳಗೆ ನಡೆಯುವ ರಾಜಕೀಯ, ಜೈಲಿನಿಂದ ಹೊರಬಂದ ನಂತರ ಆತನ ಬದುಕು ಚಿತ್ರದ ಒಟ್ಟಾರೆ ಕಥೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಸೂರ್ಯ ಪ್ರಖ್ಯಾತ್‌ಗೆ ಜೋಡಿಯಾಗಿ ಭಾವನ ರೆಡ್ಡಿ ನಟಿಸಿದ್ದಾರೆ. 'ಜೆಸಿ' ಎಂದರೆ ಜುಡಿಷಿಯಲ್ ಕಸ್ಟಡಿ. ಜೈಲಿಂದ ಹೊರಗೆ ಬಂದಿರುವ ಯುವಕನ ಕಥೆ ಈ ಸಿನಿಮಾದಲ್ಲಿ ಇರಲಿದೆ ಎಂದಿದೆ ಚಿತ್ರತಂಡ. ಮಾಸ್ತಿ ಸಂಭಾಷಣೆ ಚಿತ್ರಕ್ಕಿದೆ. ಆ್ಯಕ್ಷನ್, ಮಾಸ್ ಚಿತ್ರಕ್ಕೆ ಕಾರ್ತಿಕ್ ಛಾಯಾಚಿತ್ರಗ್ರಹಣ, ರೋಹಿತ್ ಸೋವರ್ ಸಂಗೀತ ನಿರ್ದೇಶನವಿದೆ.



ದೀಕ್ಷಿತ್ ಶೆಟ್ಟಿ

ಪ್ರೈಮ್‌ನಲ್ಲಿ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ'

ದೀಕ್ಷಿತ್ ಶೆಟ್ಟಿ ಮತ್ತು ಬೃಂದಾ ಆಚಾರ್ಯ ಜೋಡಿಯಾಗಿ ನಟಿಸಿರುವ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಚಿತ್ರ ಈಗ ಅಮೆಜಾನ್ ಪ್ರೈಮ್‌ನಲ್ಲಿ ಲಭ್ಯವಿದೆ. 'ಚಾರ್ಲಿ' ಸೇರಿದಂತೆ ಕನ್ನಡದ ಪ್ರಮುಖ ಚಿತ್ರಗಳಿಗೆ ವಿಎಫ್‌ಎಕ್ಸ್ ಮಾಡಿರುವ ಅಭಿಷೇಕ್ ಎಂ. ಚೊಚ್ಚಲ ನಿರ್ದೇಶನದ ಚಿತ್ರವಿದು. ಎಚ್.ಕೆ ಪ್ರಕಾಶ್ ಬಂಡವಾಳ ಹೂಡಿದ್ದಾರೆ.

'ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೂ ಚಿತ್ರಮಂದಿರಗಳಲ್ಲಿ ನೋಡಲು ಪ್ರೇಕ್ಷಕರು ಹೆಚ್ಚು ಒಲವು ತೋರಲಿಲ್ಲ. ಈಗ ಪ್ರೈಮ್‌ನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಸಿನಿಮಾ ಟ್ರೆಂಡಿಂಗ್‌ನಲ್ಲಿದೆ' ಎಂದಿದೆ ಚಿತ್ರತಂಡ.

ಅಪ್ರಬುದ್ಧ, ಹುಡುಗುಬುದ್ಧಿಯ ಯುವಕರ ತಂಡವೊಂದು ಬ್ಯಾಂಕ್ ದರೋಡೆ ಮಾಡುವ ಕಥೆಯನ್ನು ಚಿತ್ರ ಹೊಂದಿದೆ. ಜ್ಯೂಡಾ ಸ್ಯಾಂಡಿ ಸಂಗೀತ, ಅಭಿಷೇಕ್ ಜಿ ಕಾಸರಗೋಡು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಅಚ್ಯುತ್‌ಕುಮಾರ್, ಸಾಧು ಕೋಕಿಲ, ಅಶ್ವಿನ್ ರಾವ್ ಪಲ್ಲಕ್ಕಿ ಮೊದಲಾದವರು ಚಿತ್ರದಲ್ಲಿದ್ದಾರೆ.

ನಿತಿನ್ ಜೀ, ನೀವೇ ನನ್ನ ಬಾಸ್: ಮೋದಿ

ಬಿಜೆಪಿ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬೀನ್ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): 'ಈಗ ನಿತಿನ್ ನಬೀನ್ ಅವರು ನಮ್ಮೆಲ್ಲರಿಗೂ ಅಧ್ಯಕ್ಷರಾಗಿದ್ದಾರೆ. ಪಕ್ಷದ ಕಾರ್ಯಕರ್ತನಾಗಿ ನಾನು ಕೂಡ ನಿರ್ವಹಿಸಿದ ಕೆಲಸದ ಮಾಹಿತಿಗಳನ್ನು ಅವರಿಗೆ ನೀಡಬೇಕು. ನಾನು ಇದನ್ನು ಈಗಾಗಲೇ ನೀಡಿದ್ದೇನೆ. ಈಗ ಅವರು ನನ್ನ 'ರಿಪೋರ್ಟ್ ಕಾರ್ಡ್' ಬರೆಯುತ್ತಾರೆ. ಪಕ್ಷದ ವಿಚಾರಗಳಲ್ಲಿ ನಿತಿನ್ ಅವರೇ, ನೀವೇ ನನ್ನ ಬಾಸ್' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬೀನ್ ಅವರು ಅವಿರೋಧವಾಗಿ ಆಯ್ಕೆಯಾದ ಬಗ್ಗೆ ಇಲ್ಲಿನ ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಮಂಗಳವಾರ ಘೋಷಣೆ ಮಾಡಲಾಯಿತು. ಈ ವೇಳೆ ಪ್ರಧಾನಿ ಮೋದಿ ಅವರು ಮಾತನಾಡಿದರು. ತಮ್ಮ 40 ನಿಮಿಷಗಳ ಭಾಷಣದುದ್ದಕ್ಕೂ ನಿತಿನ್ ಅವರನ್ನು 'ಮಾನ್ಯರೇ' ಎಂದೇ ಪ್ರಧಾನಿ ಮೋದಿ ಸಂಬೋಧಿಸಿದರು.

'ನಿತಿನ್ ಅವರು ಈಗ ನಮ್ಮೆಲ್ಲರಿಗೂ ಅಧ್ಯಕ್ಷರು. ಅವರ ಜವಾಬ್ದಾರಿಗಳು ಪಕ್ಷವನ್ನು ನಿರ್ವಹಿಸುವುದು ಮಾತ್ರವಲ್ಲ, ಎನ್‌ಡಿಎ ಮೈತ್ರಿಕೂಟದ ನಮ್ಮೆಲ್ಲಾ ಮಿತ್ರ ಪಕ್ಷಗಳನ್ನೂ ನಿಭಾಯಿಸಬೇಕು, ಸಹಕಾರ ಮುಂದುವರಿಯುವಂತೆ ನೋಡಿಕೊಳ್ಳಬೇಕು' ಎಂದರು.

'ನಿತಿನ್ ಅವರು ನವಯುಗದವರು.

> ಬಿಜೆಪಿಯಲ್ಲಿ ಅಧ್ಯಕ್ಷರು ಬದಲಾಗುತ್ತಾರೆ. ಆದರೆ, ಪಕ್ಷದ ಸಿದ್ಧಾಂತ ಬದಲಾಗುವುದಿಲ್ಲ. ನಾಯಕತ್ವ ಬದಲಾಗುತ್ತದೆ. ಆದರೆ, ಪಕ್ಷದ ದಿಕ್ಕು ಬದಲಾಗುವುದಿಲ್ಲ
> **ನರೇಂದ್ರ ಮೋದಿ,** ಪ್ರಧಾನಿ

ಅವರಲ್ಲಿ ಯೌವ್ವನದ ಹುರುಪೂ ಇದೆ ಮತ್ತು ಸಂಘಟನೆಯ ಕುರಿತು ವಿಶಾಲ ಅನುಭವವೂ ಇದೆ. ಇದು ಪಕ್ಷಕ್ಕೆ ಸಹಕಾರಿಯಾಗಲಿದೆ. ಅವರ ಪ್ರತೀ ಮಾತೂ ನಮಗೆ ಹೊಸ ದಿಕ್ಕು ತೋರಿಸಲಿದೆ. ಅವರ ಮಾರ್ಗದರ್ಶನವು ನಮ್ಮ ಭವಿಷ್ಯವನ್ನು ರೂಪಿಸುವ ಬೆಲೆ ಕಟ್ಟಲಾಗದ ಆಸ್ತಿಯಾಗಲಿದೆ' ಎಂದರು.

1984ರಲ್ಲಿ ಶೇ 50ರಷ್ಟು ಮತಗಳನ್ನು ಪಡೆದು, ಕಾಂಗ್ರೆಸ್ 400 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಆದರೆ, ಈಗ 100 ಸ್ಥಾನಗಳನ್ನು ದಾಟಲೂ ಅದು ಹೆಣಗಾಡುತ್ತಿದೆ. ಇಂಥ ದುಃಸ್ಥಿತಿಗೆ ತಲುಪಲು ಕಾರಣವಾದ ಆ ಪಕ್ಷದ ಅವಗುಣಗಳನ್ನು ಗುರುತಿಸಿ, ಆ ಪಕ್ಷ ಮಾಡಿದ ತಪ್ಪುಗಳಿಂದ ಪಾಠ ಕಲಿಯಿರಿ. ಆಮೇಲೆ, ನೀವು ಅದೇ ತಪ್ಪುಗಳನ್ನು ಮಾಡಬೇಡಿ' ಎಂದು ಪ್ರಧಾನಿ ಮೋದಿ ಅವರು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.



ನಿತಿನ್ ನಬೀನ್ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಮಂಗಳವಾರ ಅಧಿಕಾರ ವಹಿಸಿಕೊಂಡರು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ (ಎಡದಿಂದ) ಕೇಂದ್ರ ಸಚಿವರಾದ ಜೆ.ಪಿ. ನಡ್ಡಾ, ರಾಜನಾಥ ಸಿಂಗ್, ಅಮಿತ್ ಶಾ ಮತ್ತು ಪ್ರಧಾನಿ ನರೇಂದ್ರ ಮೋದಿ ಇದ್ದರು –ಪಿಟಿಐ ಚಿತ್ರ

ಜ್ಞಾನೇಶ್ ರಾಜೀನಾಮೆ ನೀಡಲು ಬಯಸಿದ್ದಾರೆ: 'ಕೈ' ವ್ಯಂಗ್ಯ

'ಚುನಾವಣೆ ಯಾವಾಗ ನಡೆಯಿತು? ಇದನ್ನು ಚುನಾವಣೆ ಎಂದು ಯಾಕೆ ಕರೆಯುತ್ತೀರಿ? ಅಧ್ಯಕ್ಷರು ಯಾರು ಎಂದು ಮೊದಲು ಘೋಷಿಸುತ್ತೀರಿ. ಆಮೇಲೆ, ಚುನಾವಣೆ ನಡೆಯಲಿದೆ ಎನ್ನುತ್ತೀರಿ. ಆಮೇಲೆ ಚುನಾವಣೆಯೇ ನಡೆಯುವುದಿಲ್ಲ' ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಮಾಧ್ಯಮಗೋಷ್ಠಿಯಲ್ಲಿ ಲೇವಡಿ ಮಾಡಿದರು.

'ಜ್ಞಾನೇಶ್ ಕುಮಾರ್ (ಚುನಾವಣಾ ಆಯೋಗದ ಮುಖ್ಯಸ್ಥ) ಅವರು ತಮ್ಮ ಪ್ರತಿಭಟನೆ ದಾಖಲಿಸಿ ರಾಜೀನಾಮೆ ನೀಡಲು ಬಯಸುತ್ತಿದ್ದಾರೆ. ಯಾಕೆಂದರೆ, ಅವರಿಗೆ ಇಲ್ಲಿ ಏನೂ ಕೆಲಸವೇ ಇಲ್ಲ. ಚುನಾವಣೆಯನ್ನು ಪ್ರಭಾವಿಸಲೂ ಅವರಿಗೆ ಸಾಧ್ಯವಿಲ್ಲ. ಯಾವುದೇ ಅಕ್ರಮ ಎಸಗಲೂ ಸಾಧ್ಯವಿಲ್ಲ' ಎಂದು ವ್ಯಂಗ್ಯವಾಡಿದರು.

'ಅವರು (ಬಿಜೆಪಿ ನಾಯಕರು) ತಮ್ಮಲ್ಲಿಯೇ ಆಟವಾಡುತ್ತಿದ್ದಾರೆ. ಕೆಲವೊಮ್ಮೆ ಮೋಹನ್ ಭಾಗವತ್ ಯಾರದ್ದೋ ಬಾಸ್ ಆಗುತ್ತಾರೆ. ಕೆಲವೊಮ್ಮೆ ಮೋದಿ ಅವರು ಯಾರದ್ದೋ ಬಾಸ್ ಆಗುತ್ತಾರೆ. ಸಾಧುಗಳ ಕಣ್ಣೀರಿನ ಬಗ್ಗೆ ಗಮನವಿಲ್ಲ; ಬಾಸ್–ಬಾಸ್ ಆಟ ಆಡುತ್ತಿದ್ದಾರೆ' ಎಂದರು.

ಉತ್ತರ ಪ್ರದೇಶದ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಲು ಬಂದಿದ್ದ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಅವರನ್ನು ತಡೆದ ಘಟನೆಯನ್ನು ಪ್ರಸ್ತಾಪಿಸಿ ಅವರು ಈ ಹೇಳಿಕೆ ನೀಡಿದರು.

ನಿತಿನ್ ಹೇಳಿದ್ದು...

- ತಮಿಳುನಾಡು, ಪಶ್ಚಿಮ ಬಂಗಾಳ, ಅಸ್ಸಾಂ, ಕೇರಳ ಮತ್ತು ಪುದುಚೇರಿಗಳಲ್ಲಿ ಜನಸಂಖ್ಯೆಯ ಸ್ವರೂಪದಲ್ಲಾಗಿರುವ ಬದಲಾವಣೆಗಳಿಂದ ಯಾವ ಪರಿಣಾಮ ಉಂಟಾಗಿದೆ ಎಂದು ನಾವು ನೋಡುತ್ತಿದ್ದೇವೆ. ಇದು ನಮ್ಮೆದುರಿಗೆ ಇರುವ ಬಹುದೊಡ್ಡ ಸವಾಲು. ತಮ್ಮ ಹೋರಾಟ ಮತ್ತು ಕಠಿಣ ಪರಿಶ್ರಮದ ಮೂಲಕ ತಮ್ಮೆಲ್ಲಾ ಶಕ್ತಿಯನ್ನು ಮೀರಿ ಪಕ್ಷದ ಕಾರ್ಯಕರ್ತರು ಈ ಐದು ರಾಜ್ಯಗಳಲ್ಲಿ ಶಕ್ತಿಯುತ ನಾಯಕತ್ವವನ್ನು ಒದಗಿಸುತ್ತಾರೆ ಎಂಬ ನಂಬಿಕೆ ನನಗಿದೆ
- ನಮ್ಮ ಸಂಪ್ರದಾಯಕ್ಕೆ ಅಡ್ಡಿಪಡಿಸುವ, ರಾಮ ಸೇತು ಇರುವುದನ್ನು ನಿರಾಕರಿಸುವ ಮತ್ತು ಕಾರ್ತಿಕ ದೀಪ ಉರಿಸುವುದನ್ನು ವಿರೋಧಿಸುವ ಶಕ್ತಿಗಳನ್ನು ಸೋಲಿಸುವ ಅಗತ್ಯವಿದೆ. ಇಂಥ ಶಕ್ತಿಗಳು ಭಾರತೀಯ ರಾಜಕಾರಣದಲ್ಲಿ ಅಸ್ತಿತ್ವದಲ್ಲಿಯೇ ಇಲ್ಲದಂತೆ ಮಾಡಲು ನಾವು ಯತ್ನಿಸಬೇಕು



ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಪರಿಶೀಲನೆ ಹಿನ್ನೆಲೆಯಲ್ಲಿ ಬಳ್ಳಾರಿ ನಗರದ ಬೆಂಗಳೂರು ರಸ್ತೆಯಲ್ಲಿರುವ ರೊದ್ದಂ ಜುವೆಲರ್ಸ್ ಎದುರು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು

ಚಿನ್ನ ನಾಪತ್ತೆ: 3 ರಾಜ್ಯಗಳಲ್ಲಿ ಇ.ಡಿ ದಾಳಿ

ಕೊಚ್ಚಿ/ನವದೆಹಲಿ (ಪಿಟಿಐ): ಶಬರಿ ಮಲೆ ದೇಗುಲದ ಚಿನ್ನ ನಾಪತ್ತೆ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಕೇರಳ, ಕರ್ನಾಟಕ, ತಮಿಳುನಾಡಿನ 21 ಸ್ಥಳಗಳಲ್ಲಿ ಮಂಗಳವಾರ ದಾಳಿ ನಡೆಸಿದ್ದಾರೆ.

ಬೆಂಗಳೂರಿನಲ್ಲಿ ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಪೋಟಿ ಅವರ ನಿವಾಸ, ಕೇರಳದ ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಮಾಜಿ ಅಧ್ಯಕ್ಷ ಎ. ಪದ್ಮಕುಮಾರ್ ಅವರ ನಿವಾಸ ಮತ್ತು ಕೆಲ ಆಭರಣ ಮಳಿಗೆಗಳ ಮೇಲೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದರು.

ಕೇರಳ ಪೊಲೀಸರು ದಾಖಲಿಸಿರುವ ಹಲವಾರು ಎಫ್‌ಐಆರ್‌ಗಳನ್ನು ಪರಿಗಣಿಸಿ ಜನವರಿ 9ರಂದು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಪ್ರಕರಣ ದಾಖಲಿಸಿಕೊಂಡಿದ್ದರು.

ರಾಜಕೀಯವಾಗಿ ಮಹತ್ವ ಪಡೆದಿರುವ ಈ ಪ್ರಕರಣವನ್ನು ಕೇರಳ ಹೈಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುತ್ತಿದೆ.

ಈ ತನಿಖೆಯು ಅಧಿಕಾರಿಗಳ ದುಷ್ಕೃತ್ಯ, ಆಡಳಿತಾತ್ಮಕ ಲೋಪಗಳು, ಅಯ್ಯಪ್ಪ ದೇಗುಲದ ದ್ವಾರಪಾಲಕ ಮೂರ್ತಿಗಳ ಚಿನ್ನ ಲೇಪಿತ ತಾಮ್ರದ ಕವಚಗಳು ಮತ್ತು ಶ್ರೀಕೋವಿಲ್ ಬಾಗಿಲಿನ ಚೌಕಟ್ಟುಗಳಿಂದ ಚಿನ್ನ ಕಳವು ಮಾಡಲು ನಡೆಸಿರುವ ಕ್ರಿಮಿನಲ್ ಪಿತೂರಿ ಸೇರಿದಂತೆ ಹಲವಾರು ಅಕ್ರಮಗಳಿಗೆ ಸಂಬಂಧಿಸಿದೆ.

'2019 ಮತ್ತು 2025ರ ನಡುವೆ ಅಧಿಕೃತ ದಾಖಲೆಗಳಲ್ಲಿ ದ್ವಾರಪಾಲಕ ಮೂರ್ತಿಗಳ ಚಿನ್ನ ಲೇಪಿತ ತಾಮ್ರದ ಕವಚಗಳನ್ನು ಉದ್ದೇಶಪೂರ್ವಕವಾಗಿ ತಾಮ್ರದ ತಟ್ಟೆಗಳು ಎಂದು ತಪ್ಪಾಗಿ ನಮೂದಿಸಲಾಗಿದೆ. ದೇವಾಲಯದ ಆವರಣದಿಂದ ಇವುಗಳನ್ನು ಕಾನೂನುಬಾಹಿರವಾಗಿ ತೆಗೆದಿರುವುದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ' ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

'ಚೆನ್ನೈ ಮತ್ತು ಕರ್ನಾಟಕದಲ್ಲಿ ರಾಸಾಯನಿಕ ಪ್ರಕ್ರಿಯೆಗಳ ಮೂಲಕ ಚಿನ್ನವನ್ನು ಹೊರತೆಗೆಯಲಾಗಿದೆ. ಅಕ್ರಮ ಹಣವನ್ನು ಪತ್ತೆ ಹಚ್ಚುವುದು, ಅಪರಾಧಕ್ಕೆ ಸಂಬಂಧಿಸಿದ ದಾಖಲೆಗಳು ಮತ್ತು ಡಿಜಿಟಲ್ ಸಾಕ್ಷ್ಯಗಳನ್ನು ವಶಪಡಿಸಿಕೊಳ್ಳುವುದು ಈ ಶೋಧಗಳ ಉದ್ದೇಶವಾಗಿದೆ' ಎಂದು ಹೇಳಿದ್ದಾರೆ.

ರೊದ್ದಂ ಜ್ಯುವೆಲರ್ಸ್ ಮೇಲೆ ಇ.ಡಿ ದಾಳಿ

ಬಳ್ಳಾರಿ: ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನದ ಚಿನ್ನದ ಕಳವು ಪ್ರಕರಣದಲ್ಲಿನ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ನಗರದ ರೊದ್ದಂ ಜ್ಯುವೆಲರ್ಸ್ ಮಳಿಗೆ ಮತ್ತು ಅದರ ಮಾಲೀಕ ರೊದ್ದಂ ಗೋವರ್ಧನ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸಿದರು.

ಭದ್ರತೆಗೆ ಸಿಆರ್‌ಪಿಎಫ್ ಸಿಬ್ಬಂದಿ ನಿಯೋಜಿಸಲಾಗಿತ್ತು. ಕೋಟೆ ಪ್ರದೇಶದ ನಿವಾಸದಲ್ಲಿ ಗೋವರ್ಧನ ಕುಟುಂಬ ಸದಸ್ಯರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಗೊತ್ತಾಗಿದೆ.

ಚಿನ್ನ ಕಳ್ಳತನ ಪ್ರಕರಣದಲ್ಲಿ ಕೇರಳದ ವಿಶೇಷ ತನಿಖಾ ತಂಡ (ಎಸ್‌ಐಟಿ) 2025ರ ಡಿಸೆಂಬರ್ 19ರಂದು ಗೋವರ್ಧನ ಅವರನ್ನು ಬಂಧಿಸಿತ್ತು. ಅ.25ರಿಂದಲೂ ಹಲವು ಬಾರಿ ಎಸ್‌ಐಟಿ ಅಧಿಕಾರಿಗಳು ಬಳ್ಳಾರಿಯಲ್ಲಿ ಪರಿಶೀಲನೆ ನಡೆಸಿದ್ದಾರೆ. ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಅವರೊಂದಿಗೆ ನಂಟು ಹೊಂದಿರುವ ಆರೋಪ ರೊದ್ದಂ ಗೋವರ್ಧನ ಅವರ ಮೇಲಿದೆ.

ಗೋವರ್ಧನ ಅವರು 2019ರಲ್ಲಿ ಕೇರಳದ ಅಯ್ಯಪ್ಪಸ್ವಾಮಿ ದೇಗುಲಕ್ಕೆ ಚಿನ್ನದ ಬಾಗಿಲು ಮಾಡಿಸಿಕೊಟ್ಟಿದ್ದರು. ಬಾಗಿಲು ಪಕ್ಕದ ಕಂಬಗಳನ್ನೂ ಅವರೇ ಮಾಡಿಸಿದ್ದರು ಎನ್ನಲಾಗಿದೆ.

'ಸಾಫ್ಟ್‌ವೇರ್ ಮೂಲಕ ಸಮಗ್ರ ಅಕ್ರಮ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಯು(ಎಸ್‌ಐಆರ್) ಸಾಫ್ಟ್‌ವೇರ್ ಮೂಲಕ ನಡೆಯುವ ಸಮಗ್ರ ಅಕ್ರಮವಾಗಿ ಬದಲಾಗಿದೆ ಎಂದು ತೃಣಮೂಲ ಕಾಂಗ್ರೆಸ್(ಟಿಎಂಸಿ) ಮಂಗಳವಾರ ಟೀಕಿಸಿದೆ.

ಪಾರದರ್ಶಕವಾಗಿ ಮತ್ತು ಗೊಂದಲ ರಹಿತವಾಗಿ ಎಸ್‌ಐಆರ್ ನಡೆಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದ ಬೆನ್ನಲ್ಲೇ, ಚುನಾವಣಾ ಆಯೋಗದ ವಿರುದ್ಧ ಟಿಎಂಸಿ ವಾಗ್ದಾಳಿ ನಡೆಸಿದೆ. ಅಭಿಷೇಕ್ ಬ್ಯಾನರ್ಜಿ ನೇತೃತ್ವದ ಟಿಎಂಸಿ ನಿಯೋಗವು ಚುನಾವಣಾ ಆಯೋಗದೊಂದಿಗೆ ಡಿಸೆಂಬರ್ 31ರಂದು ನಡೆಸಿದ ಸಭೆಯ ನಡಾವಳಿಯನ್ನು ಬಿಡುಗಡೆಗೊಳಿಸುವಂತೆ ಆಗ್ರಹಿಸಿದೆ.

'ಚುನಾವಣಾ ಆಯೋಗ ಎನ್ನುವುದು ದೇಶದ ಅತ್ಯುನ್ನತ ಸಂಸ್ಥೆ. ಇದು ಹಲವು ದಶಕಗಳಿಂದ ಪ್ರಜಾಪ್ರಭುತ್ವದ ಅಸ್ತಿತ್ವವನ್ನು ಗಟ್ಟಿಗೊಳಿಸಿದೆ. ಆದರೆ ಈಗ ಏನಾಗಿದೆ, ಇಂಥ ಸಂಸ್ಥೆ ನಾಶವಾಗುತ್ತಿದೆ. ಅದರ ಪಾರದರ್ಶಕತೆಯನ್ನು ಬಯಸುತ್ತಿದ್ದೇವೆ. ಮಾನವೀಯ, ಪಾರದರ್ಶಕ ಮತ್ತು ಯೋಜನಾಬದ್ಧ ಎಸ್‌ಐಆರ್ ಜೊತೆಗೆ ನಾವಿದ್ದೇವೆ' ಎಂದು ಟಿಎಂಸಿ ಸಂಸದ ಡೆರೆಕ್ ಒಬ್ರಿಯಾನ್ ಎಂದು ಹೇಳಿದ್ದಾರೆ.

'ಮುಖ್ಯ ಚುನಾವಣಾ ಆಯುಕ್ತರಿಗೆ ನಿರ್ದಿಷ್ಟ ಜವಾಬ್ದಾರಿಯಿದೆ. ಅದರ ಬದಲು ಅವರು ಮರದಂಡನೆ ವಿಧಿಸುವವರು ಮತ್ತು ಗಲ್ಲಿಗೇರಿಸುವವರು ಆಗಬಾರದು. ಚುನಾವಣಾ ಪ್ರಕ್ರಿಯೆಯನ್ನು ಸಾಮಾನ್ಯ ಜನರಿಗೆ ಹೊರೆಯಾಗುವಂತೆ ಯಾಕೆ ನಡೆಸಲಾಗುತ್ತಿದೆ' ಎಂದು ಪ್ರಶ್ನಿಸಿದ್ದಾರೆ.

'ಪೋಷಕರ ಹೆಸರು, ಮತದಾರರರು ಮತ್ತು ಅವರ ಪೋಷಕರ ವಯಸ್ಸಿನಲ್ಲಿನ ವ್ಯತ್ಯಾಸಗಳನ್ನು ಉಲ್ಲೇಖಿಸಿ, 1.25 ಕೋಟಿ ಜನರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ. ಎಸ್‌ಐಆರ್‌ಗೆ ಯಾಕೆ ಸಾಫ್ಟ್‌ವೇರ್ ಬಳಸಲಾಗುತ್ತಿದೆ? ಅದನ್ನು ಯಾಕೆ ನಿಯಮಿತವಾಗಿ ಪರಿಷ್ಕರಿಸಲಾಗುತ್ತಿದೆ' ಎಂದು ಪ್ರಶ್ನಿಸಿದರು.

'ಆಯೋಗ ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕೇ ಹೊರತು ರಾಜಕೀಯ ಪಕ್ಷದ ಪರವಾಗಿ ಅಲ್ಲ. ಮತಕಳವು ಮಾಡುವುದು ಅದರ ಕರ್ತವ್ಯವಲ್ಲ' ಎಂದು ಟಿಎಂಸಿ ಸಂಸದೆ ಸಾಗರಿಕಾ ಘೋಷ್ ಹೇಳಿದರು.



ಎಸ್‌ಐಆರ್ ಅನ್ನು ವಿರೋಧಿಸಿ ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾಧಿಕಾರಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು – ಪಿಟಿಐ ಚಿತ್ರ

ಪ.ಬಂಗಾಳದ ವಿವಿಧೆಡೆ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ವೇಳೆ ಜನರ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ ಎಂದು ಆರೋಪಿಸಿ ಪಶ್ಚಿಮ ಬಂಗಾಳದ ವಿವಿಧ ಜಿಲ್ಲೆಗಳಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ರಸ್ತೆಗಳನ್ನು ತಡೆದು, ಟೈಯರ್‌ಗಳನ್ನು ಸುಟ್ಟು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ಎಸ್‌ಐಆರ್ ಭಾಗವಾಗಿ ವಿಚಾರಣೆಗೆ ಹಾಜರಾಗುವಂತೆ ಹಲವು ಮುಸ್ಲಿಂ ಸಮುದಾಯದವರಿಗೆ ಸೂಚಿಸಲಾಗಿದೆ. ಇದರಿಂದ ವಯೋವೃದ್ಧರು ಮತ್ತು ಅನಾರೋಗ್ಯ ಪೀಡಿತರಿಗೆ ತೊಂದರೆ ಉಂಟಾಗುತ್ತಿದೆ' ಎಂದು ಪ್ರತಿಭಟನಕಾರರು ದೂರಿದರು.

ಬೋಡೊ– ಆದಿವಾಸಿಗಳ ನಡುವೆ ಘರ್ಷಣೆ: ವ್ಯಕ್ತಿ ಸಾವು

ಕೊಕ್ರಾಝಾರ್/ಗುವಾಹಟಿ (ಪಿಟಿಐ): ಅಸ್ಸಾಂನ ಕೊಕ್ರಾಝಾರ್‌ನಲ್ಲಿ ಬೋಡೊ ಮತ್ತು ಆದಿವಾಸಿಗಳ ನಡುವೆ ಸೋಮವಾರ ರಾತ್ರಿ ನಡೆದ ಘರ್ಷಣೆಯಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಕೊಕ್ರಾಝಾರ್ ಜಿಲ್ಲೆಯ ಕರಿಗಾಂವ್ ಹೊರಠಾಣೆ ವ್ಯಾಪ್ತಿಯ ಮಾನ್ಸಿಂಗ್ ರಸ್ತೆಯಲ್ಲಿ ಮೂವರು ಬೋಡೊಗಳನ್ನು ಕರೆದೊಯ್ಯುತ್ತಿದ್ದ ವಾಹನವು ಇಬ್ಬರು ಆದಿವಾಸಿ ವ್ಯಕ್ತಿಗಳಿಗೆ ಡಿಕ್ಕಿ ಹೊಡೆದಿದೆ. ಇದರಿಂದ ಕೆರಳಿದ ಆದಿವಾಸಿಗಳು ಮೂವರು ಬೋಡೊಗಳನ್ನು ಥಳಿಸಿ, ವಾಹನಕ್ಕೆ ಬೆಂಕಿ ಹಚ್ಚಿದ್ದಾರೆ. ಘಟನೆಯಲ್ಲಿ ವ್ಯಕ್ತಿಯೊಬ್ಬರು ಅಸುನೀಗಿದ್ದಾರೆ.

ಮಂಗಳವಾರ ಬೋಡೊ ಮತ್ತು ಆದಿವಾಸಿ ಸಮುದಾಯದವರು ಕರಿಗಾಂವ್ ಹೊರಠಾಣೆ ಪಕ್ಕದಲ್ಲಿರುವ ರಾಷ್ಟ್ರೀಯ ಹೆದ್ದಾರಿ ನಡೆ ನಡೆಸಿ ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವು ಮನೆಗಳಿಗೆ ಹಾಗೂ ಸರ್ಕಾರಿ ಕಚೇರಿಗೆ ಬೆಂಕಿ ಹಚ್ಚಿದ್ದಾರೆ. ಕರಿಗಾಂವ್ ಠಾಣೆ ಮೇಲೂ ದಾಳಿ ಮಾಡಿದ್ದಾರೆ. ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಶೆಲ್ ಸಿಡಿಸಿದರು. ಘಟನೆಯಲ್ಲಿ ಕೆಲ ಪೊಲೀಸರು ಸೇರಿದಂತೆ ಹಲವರು ಗಾಯಗೊಂಡಿದ್ದಾರೆ ಎಂದು ಗೃಹ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸ್ಥಳದಲ್ಲಿ ಕ್ಷಿಪ್ರ ಕಾರ್ಯಪಡೆಯನ್ನು ನಿಯೋಜಿಸಲಾಗಿದೆ. ಸೇನೆ ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆ. ಕೊಕ್ರಾಝಾರ್ ಹಾಗೂ ಚಿರಾಂಗ್ ಜಿಲ್ಲೆಯಲ್ಲಿ ಇಂಟರ್ನೆಟ್ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ' ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಮೇನಕಾ ಗಾಂಧಿಗೆ ಸುಪ್ರೀಂ ಕೋರ್ಟ್ ತರಾಟೆ



ಮೇನಕಾ ಗಾಂಧಿ

ನವದೆಹಲಿ (ಪಿಟಿಐ): ಬೀದಿ ನಾಯಿ ಹಾವಳಿ ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಲಯದ ಆದೇಶವನ್ನು ಟೀಕಿಸುವ ಮೂಲಕ ಕೇಂದ್ರದ ಮಾಜಿ ಸಚಿವೆ ಮೇನಕಾ ಗಾಂಧಿ ಅವರು ನ್ಯಾಯಾಂಗ ನಿಂದನೆ ಮಾಡಿದ್ದಾರೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅವರನ್ನು ತರಾಟೆಗೆ ತೆಗೆದುಕೊಂಡಿತು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ.ಅಂಜಾರಿಯಾ ಅವರಿದ್ದ ನ್ಯಾಯಪೀಠವು, 'ಮೇನಕಾ ಗಾಂಧಿ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸದೆ ಕ್ಷಮಿಸುತ್ತೇವೆ. ಇದು ನ್ಯಾಯಾಲಯದ ಔದಾರ್ಯ' ಎಂದು ಹೇಳಿತು.

'ಮೇನಕಾ ಅವರು ಯೋಚಿಸದೆಯೇ ಪ್ರತಿಯೊಬ್ಬರ ವಿರುದ್ಧ ಎಲ್ಲಾ ರೀತಿಯ ಹೇಳಿಕೆ ನೀಡುತ್ತಾರೆ. ನಿಮ್ಮ ಕಕ್ಷಿದಾರರು ಯಾವ ರೀತಿಯ ಹೇಳಿಕೆ ನೀಡಿದ್ದಾರೆ ಎಂದು ಗೊತ್ತೇ? ಅವರ ಪಾಡ್‌ಕಾಸ್ಟ್ ಕೇಳಿದ್ದೀರಾ? ಅವರ ನಡವಳಿಕೆ, ಹಾವ–ಭಾವವನ್ನು ಗಮನಿಸಿದ್ದೀರಾ' ಎಂದು ಮೇನಕಾ ಗಾಂಧಿ ಅವರ ಪರ ವಕೀಲ ರಾಜು ರಾಮಚಂದ್ರನ್ ಅವರನ್ನು ನ್ಯಾಯಪೀಠ ಪ್ರಶ್ನಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ರಾಮಚಂದ್ರನ್ ಅವರು, 'ಮೇನಕಾ ಗಾಂಧಿ ಅವರು ನ್ಯಾಯಾಂಗವನ್ನು ನಿಂದಿಸಿಲ್ಲ. ರಾಜಕಾರಣಿಗಳು ವಿವಿಧ ರೀತಿಯ ಹೇಳಿಕೆಗಳನ್ನು ನೀಡುತ್ತಾರೆ' ಎಂದು ವಾದಿಸಿದರು.

'ನಿಮ್ಮ ಕಕ್ಷಿದಾರರು ಮಾಜಿ ಸಚಿವರು, ಪ್ರಾಣಿಗಳ ಹಕ್ಕುಗಳ ಹೋರಾಟಗಾರ್ತಿ ಹಾಗೂ ದೀರ್ಘಕಾಲದಿಂದ ಸಂಸದೆ. ಹೀಗಿದ್ದರೂ ಬಜೆಟ್ ಅನುದಾನ ಮೀಸಲಿನ ಬಗ್ಗೆ ಅವರು ಏಕೆ ಮೌನವಾಗಿದ್ದಾರೆ? ಇಂಥ ಸಮಸ್ಯೆಗಳ ಪರಿಹಾರಕ್ಕೆ ಅವರ ಕೊಡುಗೆ ಏನು' ಎಂದು ನ್ಯಾಯಮೂರ್ತಿ ಮೆಹ್ತಾ ಅವರು ಪ್ರಶ್ನಿಸಿದರು.

'ಇಂಥ ಪ್ರಶ್ನೆಗಳಿಗೆ ನಾನು ಮೌಖಿಕವಾಗಿ ಉತ್ತರ ನೀಡಲು ಸಾಧ್ಯವಾಗುವುದಿಲ್ಲ' ಎಂದು ರಾಮಚಂದ್ರನ್ ಪ್ರತಿಕ್ರಿಯಿಸಿದರು.

ಬೀದಿ ನಾಯಿ ಹಾವಳಿ ಕುರಿತ ಸುಪ್ರೀಂ ಕೋರ್ಟ್ ಆದೇಶವು ಪಕ್ಷಪಾತಿಯಾಗಿದೆ ಎಂದು ಮೇನಕಾ ಗಾಂಧಿ ಅವರು ಟೀಕಿಸಿದ್ದರು ಮತ್ತು ಅವುಗಳ ಬಗ್ಗೆ ಸಹಾನುಭೂತಿ ತೋರಿಸುವಂತೆ ಮನವಿ ಮಾಡಿದ್ದರು.

ಗುಜರಾತ್‌ನ ಬುಡಕಟ್ಟು ಪ್ರದೇಶದಲ್ಲಿ ಪ್ರಧಾನಿ ಕಾರ್ಯಕ್ರಮಕ್ಕೆ ₹50 ಕೋಟಿ ವೆಚ್ಚ

'ಸಮೋಸಗಳಿಗೆ ₹2 ಕೋಟಿ ಖರ್ಚು'

ಪ್ರಜಾವಾಣಿ ವಾರ್ತೆ

ಅಹಮದಾಬಾದ್: 'ಗುಜರಾತ್‌ನ ಬುಡಕಟ್ಟು ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮಕ್ಕೆ ₹50 ಕೋಟಿ ವೆಚ್ಚ ಮಾಡಿದ್ದು, ಈ ಪೈಕಿ ₹2 ಕೋಟಿಯನ್ನು ಸಮೋಸಗಳಿಗೆ ಖರ್ಚು ಮಾಡಲಾಗಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರು ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.


ದೇದಿಯಾಪಾಡ ಕ್ಷೇತ್ರದ ಎಎಪಿ ಶಾಸಕ ಚೈತರ್ ವಾಸವ ಅವರು ಆರ್‌ಟಿಐ ಅಡಿ ಪಡೆದ ಮಾಹಿತಿಯನ್ನು ಉಲ್ಲೇಖಿಸಿ ಕೇಜ್ರಿವಾಲ್ ಈ ಆರೋಪ ಮಾಡಿದ್ದಾರೆ.

ಮುಖ್ಯಾಂಶಗಳು

- ಆರ್‌ಟಿಐ ಅಡಿ ಮಾಹಿತಿ ಪಡೆದ ಎಎಪಿ ಶಾಸಕ ಚೈತರ್ ವಾಸವ
- ಬುಡಕಟ್ಟು ನಿಧಿಯ ಹಣ ಸಮೋಸಗಳಿಗೆ ಬಳಕೆ: ಆರೋಪ
- ಈ ಹಣದಲ್ಲಿ ಆಸ್ಪತ್ರೆ, ಶಾಲೆ ನಿರ್ಮಿಸಲು ಸಾಧ್ಯವಿತ್ತು: ಕೇಜ್ರಿವಾಲ್

ಮೂರು ದಿನಗಳ ಗುಜರಾತ್ ಭೇಟಿಯ ಕೊನೆಯ ದಿನ ವಡೋದರದಲ್ಲಿ ಆಯೋಜಿಸಿದ್ದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ನವೆಂಬರ್ 15ರಂದು ಬಿರ್ಸಾ ಮುಂಡಾ ಅವರ 150ನೇ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ 'ಬುಡಕಟ್ಟು ಗೌರವ ದಿವಸ' ಕಾರ್ಯಕ್ರಮಕ್ಕಾಗಿ ನರ್ಮದಾ ಜಿಲ್ಲಾಡಳಿತವು ಸುಮಾರು ₹50 ಕೋಟಿ ಖರ್ಚು ಮಾಡಿದೆ. ಈ ಪೈಕಿ ಪೆಂಡಾಲ್‌ಗಳಿಗೆ ₹5 ಕೋಟಿ, ಬಸ್ ವ್ಯವಸ್ಥೆಗೆ ₹7 ಕೋಟಿ, ಸಮೋಸಗಳಿಗೆ ₹2 ಕೋಟಿ ಖರ್ಚು ಮಾಡಲಾಗಿದೆ. ಬುಡಕಟ್ಟು ನಿಧಿಯಿಂದ ಪಡೆದ ₹2 ಕೋಟಿ ಮೊತ್ತದ ಸಮೋಸಗಳನ್ನು ಯಾರು ತಿಂದರು' ಎಂದು ಪ್ರಶ್ನಿಸಿದ್ದಾರೆ.

'ಮೋದಿ ಅವರು ಸಮೋಸಗಳಿಗೆ ₹20 ಕೋಟಿ ಅಥವಾ ₹30 ಕೋಟಿ ಖರ್ಚು ಮಾಡಬಹುದಿತ್ತು. ಆದರೆ, ಕೇಂದ್ರ ಸರ್ಕಾರದ ಹಣವನ್ನು ಏಕೆ ಖರ್ಚು ಮಾಡಲಿಲ್ಲ? ₹2 ಕೋಟಿ ಮೊತ್ತದಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ಅನೇಕ ಆಸ್ಪತ್ರೆಗಳು ಮತ್ತು ಶಾಲೆಗಳನ್ನು ನಿರ್ಮಿಸಬಹುದಿತ್ತು' ಎಂದು ಹೇಳಿದ್ದಾರೆ.



ಅರವಿಂದ್ ಕೇಜ್ರಿವಾಲ್

'ಪ್ರತಿ ವರ್ಷ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದ್ದರೂ ಬುಡಕಟ್ಟು ಪ್ರದೇಶಗಳು ಏಕೆ ಹಿಂದುಳಿದಿವೆ? ನಾವು ಹಣವನ್ನು ಪ್ರಾಮಾಣಿಕವಾಗಿ ಖರ್ಚು ಮಾಡಿದರೆ ಸುಸಜ್ಜಿತ ಆಸ್ಪತ್ರೆಗಳು ಹಾಗೂ ಶಾಲೆಗಳನ್ನು ನಿರ್ಮಿಸಬಹುದು. ಉಚಿತ ವಿದ್ಯುತ್, ರಸ್ತೆ ಸೌಕರ್ಯ ಒದಗಿಸಬಹುದು' ಎಂದು ಕೇಜ್ರಿವಾಲ್ ತಿಳಿಸಿದ್ದಾರೆ.

ಬ್ಯಾಡ್ಮಿಂಟನ್ ಅಂಕಣದ ಥಳಗಾತಿ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಪದಕ ವಿಜೇತ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಅವರು ಸ್ಪರ್ಧಾತ್ಮಕ ಆಟಕ್ಕೆ ನಿವೃತ್ತಿ ಘೋಷಿಸಿದ್ದಾರೆ. ಮೊಣಕಾಲು ನೋವಿನಿಂದ ಬಳಲುತ್ತಿರುವ ಅವರು, ಕಳೆದ ಎರಡು ವರ್ಷಗಳಿಂದ ಬ್ಯಾಡ್ಮಿಂಟನ್ ಅಂಕಣದಿಂದ ದೂರ ಉಳಿದಿದ್ದರು.

35 ವರ್ಷ ವಯಸ್ಸಿನ ಸೈನಾ 2023ರ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕೊನೆಯ ಬಾರಿ ಆಡಿದ್ದರು.

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಚಾರಿತ್ರಿಕ ಕಂಚಿನ ಪದಕ ಗೆದ್ದಿದ್ದರು. ವೃತ್ತಿಜೀವನದಲ್ಲಿ ಹೈದರಾಬಾದಿನ ಆಟಗಾರ್ತಿ ಒಟ್ಟು 24 ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಮುತ್ತಿಕ್ಕಿದ್ದಾರೆ.

‘ಎರಡು ವರ್ಷಗಳ ಹಿಂದೆಯೇ ನಾನು ಬ್ಯಾಡ್ಮಿಂಟನ್ ಆಡುವುದನ್ನು ನಿಲ್ಲಿಸಿದ್ದೆ. ದೇಹವು ಆಟಕ್ಕೆ ಸ್ಪಂದಿಸುತ್ತಿರಲಿಲ್ಲ. ಸ್ವ ಇಚ್ಛೆಯಿಂದ ಈ ಕ್ರೀಡೆಯನ್ನು ಆಟಲು ಆರಂಭಿಸಿದ್ದೆ. ಈಗ ಸ್ವ ಇಚ್ಛೆಯಿಂದಲೇ ಬ್ಯಾಡ್ಮಿಂಟನ್ ಅಂಕಣದಿಂದ ಹಿಂದೆ ಸರಿದಿದ್ದೇನೆ. ಅದನ್ನು ಅಧಿಕೃತವಾಗಿ ಹೇಳುವ ಅವಶ್ಯಕತೆ ಇಲ್ಲ’ ಎಂದು ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿ ಸೈನಾ ಪಾಡ್‌ಕಾಸ್ಟ್‌ನಲ್ಲಿ ತಿಳಿಸಿದ್ದಾರೆ.

‘ಇನ್ನು ಮುಂದೆ ಆಡಲು ಸಾಧ್ಯವಿಲ್ಲ ಎಂಬುದನ್ನು ನಾನು ಅರಿತುಕೊಂಡಿದ್ದೇನೆ. ಏಕೆಂದರೆ, ನನ್ನ ಮೊಣಕಾಲುಗಳು ಮೊದಲಿನಂತೆ ಆಟಕ್ಕೆ ಸ್ಪಂದಿಸುತ್ತಿಲ್ಲ’ ಎಂದು ಹೇಳಿದರು.

‘ಬ್ಯಾಡ್ಮಿಂಟನ್‌ನಲ್ಲಿ ಯಶಸ್ಸು ಗಳಿಸಬೇಕಾದರೆ ದಿನಕ್ಕೆ 8 ರಿಂದ 9 ಗಂಟೆಗಳ ಕಾಲ ಅಭ್ಯಾಸ ನಡೆಸಬೇಕು. ಆದರೆ, ನನ್ನ ಮೊಣಕಾಲು ಒಂದು ಅಥವಾ ಎರಡು ಗಂಟೆಗಳಲ್ಲಿ ಬಲ ಕಳೆದುಕೊಳ್ಳುತ್ತಿದೆ. ಮಾತ್ರವಲ್ಲ, ಅದು ಊದಿಕೊಳ್ಳುತ್ತಿದೆ. ಹಾಗಾಗಿ, ನಿವೃತ್ತಿಯನ್ನು ಇನ್ನಷ್ಟು ಕಾಲ ಮುಂದೂಡಲು ಸಾಧ್ಯವಿಲ್ಲ’ ಎಂದು ಅಭಿಪ್ರಾಯಪಟ್ಟರು.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಸೈನಾ ಮೊಣಕಾಲಿನ ಗಾಯಕ್ಕೆ ಒಳಗಾಗಿದ್ದರು. ಇದು ಅವರ ವೃತ್ತಿಜೀವನದ ಮೇಲೆ ಭಾರೀ ಪರಿಣಾಮ ಬೀರಿತು. ಗಾಯದಿಂದ ಚೇತರಿಸಿಕೊಂಡು 2017ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಮತ್ತು 2018ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದಿದ್ದರು. ಆದರೆ, ಪದೇ ಪದೇ ಕಾಡುತ್ತಿದ್ದ ಮೊಣಕಾಲು ನೋವು ಅವರ ವೃತ್ತಿಜೀವನದ ಏಳಿಗೆಗೆ ಅಡ್ಡಿಯಾಯಿತು.

2018ರಲ್ಲಿ ಸೈನಾ ಅವರು ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಪರುಪಳ್ಳಿ ಕಶ್ಯಪ್ ಅವರನ್ನು ವಿವಾಹವಾಗಿದ್ದಾರೆ. ಕಳೆದ ಜುಲೈನಲ್ಲಿ ಈ ದಂಪತಿ ಪರಸ್ಪರ ಬೇರ್ಪಡುವ ನಿರ್ಧಾರ ಪ್ರಕಟಿಸಿದ್ದರು. ಆದರೆ, ಎರಡು ವಾರಗಳ ಬಳಿಕ ‘ಮತ್ತೆ ಒಂದಾಗುತ್ತಿದ್ದೇವೆ’ ಎಂದು ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದರು.

2020ರ ಜನವರಿಯಲ್ಲಿ ಸೈನಾ ಅವರು ಭಾರತೀಯ ಜನತಾ ಪಕ್ಷ ಸೇರ್ಪಡೆಗೊಂಡಿದ್ದಾರೆ.



ಸೈನಾ ನೆಹ್ವಾಲ್ ಸಾಧನೆಯ ಹಾದಿ

ಜನ್ಮ ದಿನಾಂಕ: 17 ಮಾರ್ಚ್ 1990

ಊರು: ಹಿಸಾರ್, ಹರಿಯಾಣ

ತಂದೆ: ಹರವೀರ್ ಸಿಂಗ್ ನೆಹ್ವಾಲ್, ತಾಯಿ: ಉಷಾರಾಣಿ

ಪತಿ: ಪರುಪಳ್ಳಿ ಕಶ್ಯಪ್ (ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ)

ಗೆದ್ದ ಪ್ರಶಸ್ತಿಗಳು

- 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ
- 2015ರ ಜಕಾರ್ತ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ
- 2017ರ ಗ್ಲ್ಯಾಸ್ಗೊ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು
- 2024 ಮತ್ತು 2016ರ ಉಬರ್ ಕಪ್ ಟೂರ್ನಿಯಲ್ಲಿ ಕಂಚು
- ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ 3 ಚಿನ್ನ, 2 ಬೆಳ್ಳಿ ಮತ್ತು 1 ಕಂಚು
- 2014, 2018ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕಗಳು
- ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಕಂಚಿನ ಪದಕ
- ಬಿಡಬ್ಲ್ಯುಎಫ್ ವಿಶ್ವ ಟೂರ್‌ನಲ್ಲಿ 1 ಪ್ರಶಸ್ತಿ, ಮೂರು ರನ್ನರ್ ಅಪ್
- ಬಿಡಬ್ಲ್ಯುಎಫ್ ಸೂಪರ್ ಸೀರಿಸ್‌ನಲ್ಲಿ 10 ಕಿರೀಟ, ಐದು ರನ್ನರ್ ಅಪ್
- ಬಿಡಬ್ಲ್ಯುಎಫ್ ಗ್ರ್ಯಾನ್‌ಪ್ರಿನಲ್ಲಿ 10 ಪ್ರಶಸ್ತಿ, ಒಂದು ರನ್ನರ್ ಅಪ್

ಕೇಂದ್ರ ಸರ್ಕಾರದ ಗೌರವಗಳು

- 2009ರಲ್ಲಿ ಅರ್ಜುನ ಪ್ರಶಸ್ತಿ
- 2010ರಲ್ಲಿ ಮೇಜರ್ ಧ್ಯಾನ್ ಚಂದ್ ಪ್ರಶಸ್ತಿ
- 2010ರಲ್ಲಿ ಪದ್ಮಶ್ರೀ ಗೌರವ
- 2016ರಲ್ಲಿ ಪದ್ಮಭೂಷಣ ಗೌರವ

ಡ್ರಾ ಪಂದ್ಯದಲ್ಲಿ ಅರ್ಜುನ್–ಗುಕೇಶ್

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಅಗ್ರ ಶ್ರೇಯಾಂಕದ ಅರ್ಜುನ್ ಇರಿಗೇಶಿ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಸ್ವದೇಶದ ಡಿ.ಗುಕೇಶ್ ಅವರ ರಕ್ಷಣೆಯ ವ್ಯೂಹ ಭೇದಿಸಲು ಸಾಕಷ್ಟು ಶ್ರಮ ಹಾಕಿದರೂ ಸಾಧ್ಯವಾಗದೇ 34 ನಡೆಗಳ ನಂತರ ‘ಡ್ರಾ’ಕ್ಕೆ ಒಪ್ಪಿಕೊಂಡರು.

ಡಿ.ಗುಕೇಶ್

14 ಆಟಗಾರರು ಭಾಗವಹಿಸುತ್ತಿರುವ ಈ ಟೂರ್ನಿಯಲ್ಲಿ ಇನ್ನೂ ಹತ್ತು ಸುತ್ತುಗಳು ಬಾಕಿವುಳಿದಿವೆ.

ಸೋಮವಾರ ನಡೆದ ಈ ಪಂದ್ಯಕ್ಕೆ ವಿಶ್ವ ಚಾಂಪಿಯನ್ ಗುಕೇಶ್ (1.5 ಅಂಕ) ಸಾಕಷ್ಟು ಸಜ್ಜಾಗಿ ಬಂದಂತೆ ಕಾಣಿಸಿತು. ಅವರು ಬಿಳಿ ಕಾಯಿಗಳಲ್ಲಿ ಆಡಿದ ಇರಿಗೇಶಿ (2 ಅಂಕ) ಅವರ ದಾಳಿಯನ್ನು ಸಮರ್ಥವಾಗಿ ಎದುರಿಸಿದರು. ಎದುರಾಳಿ ಪಡೆ, ತಮ್ಮ ‘ಕಿಂಗ್’ ಸಮೀಪ ತಲುಪದಂತೆ ನೋಡಿಕೊಂಡರು.

ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದಿರುವ ಜರ್ಮನಿಯ ಮಥಾಯಸ್ ಬ್ಲೂಬಮ್ (2) ಅವರು ಸ್ವದೇಶದ ವಿನ್ಸೆಂಟ್ ಕೀಮರ್ (1) ಅವರನ್ನು 33 ನಡೆಗಳಲ್ಲಿ ಸೋಲಿಸಿದರು.

ಮೊದಲೆರಡು ಪಂದ್ಯಗಳನ್ನು ಸೋತಿದ್ದ ಆರ್.ಪ್ರಜ್ಞಾನಂದ (0.5) ಅವರು ಉತ್ತಮವಾಗಿ ಆಡಿದರೂ, ಝೆಕ್ ರಿಪಬ್ಲಿಕ್‌ನ ಥಾಯ್ ದೈ ವಾನ್ ನೂಯೆನ್ (1.5) ಅವರ ಜೊತೆ 75 ನಡೆಗಳ ನಂತರ ಡ್ರಾಕ್ಕೆ ಸಹಿ ಮಾಡಬೇಕಾಯಿತು.

ಕಣದಲ್ಲಿರುವ ಭಾರತದ ನಾಲ್ಕನೇ ಆಟಗಾರ ಅರವಿಂದ ಚಿದಂಬರಮ್ (1.5) ಅವರು ಅಬ್ದುಸತ್ತಾರೋವ್ (2) ಜೊತೆ ಡ್ರಾ ಮಾಡಿಕೊಂಡರು.

ಡಚ್ ಗ್ರ್ಯಾಂಡ್‌ಮಾಸ್ಟರ್ ಜೋರ್ಡನ್ ವಾನ್ ಫೋರಿಸ್ಟ್ (2) ಅವರು ಸ್ವದೇಶದ ಅನಿಶ್ ಗಿರಿ (0.5) ಅವರನ್ನು ಮಣಿಸಿದರು. ನೀಮನ್ (2) ಇನ್ನೊಂದು ಪಂದ್ಯದಲ್ಲಿ ಯಾಗಿಝ್ ಕಾನ್ ಎರ್ಡೋಗ್ಮಸ್ (1.5) ಜೊತೆ, ವಿಶ್ವಕಪ್ ಚಾಂಪಿಯನ್, ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ (1.5), ಸ್ಲೊವೇನಿಯಾದ ವ್ಲಾದಿಮಿರ್ ಫೆಡೋಸೀವ್ (1.5) ಜೊತೆ ಡ್ರಾ ಮಾಡಿಕೊಂಡರು.

ಶ್ರೀ ಚರಣಿಗೆ 3 ವಿಕೆಟ್ • ಮುಂಬೈಗೆ ಹ್ಯಾಟ್ರಿಕ್ ಸೋಲು

ಜೆಮಿಮಾ ಅರ್ಧಶತಕ; ಡೆಲ್ಲಿ ತಂಡಕ್ಕೆ ಜಯ

ದೆಹಲಿ (ಪಿಟಿಐ): ನಾಯಕಿ ಜೆಮಿಮಾ ರಾಡ್ರಿಗಸ್ ಅವರ ಅಜೇಯ ಅರ್ಧಶತಕದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಮುಂಬೈ ತಂಡವನ್ನು ಸುಲಭವಾಗಿ ಮಣಿಸಿತು. ಟೂರ್ನಿಯಲ್ಲಿ ಡೆಲ್ಲಿ ತಂಡಕ್ಕೆ ಇದು ಐದು ಪಂದ್ಯಗಳಲ್ಲಿ ಎರಡನೇ ಗೆಲುವು.

ಮಂಗಳವಾರ ಕೊತಂಬಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ನಥಾಲಿಯಾ ಶಿವರ್ ಬ್ರಂಟ್ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಜತೆಯಾಟದ ಬಲದಿಂದ ಮುಂಬೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 154 ರನ್ ಗಳಿಸಿತು. ಸ್ಪರ್ಧಾತ್ಮಕ ಮೊತ್ತ ಬೆನ್ನಟ್ಟಿದ ದೆಹಲಿ ತಂಡಕ್ಕೆ ಲಿಜೆಲ್ ಲೀ (46; 28ಎ) ಹಾಗೂ ಶಫಾಲಿ ವರ್ಮಾ (29; 24ಎ) ಮೊದಲ ವಿಕೆಟ್‌ಗೆ 63 ರನ್ ಸೇರಿಸಿದರು.

ಮಹಿಳಾ ಪ್ರೀಮಿಯರ್ ಲೀಗ್

ಈ ಭದ್ರ ಬುನಾದಿಯ ಮೇಲೆ ಜೆಮಿಮಾ (ಔಟಾಗದೇ 51; 37ಎ, 4x5, 6x1) ಸಮಯೋಚಿತ ಬ್ಯಾಟಿಂಗ್‌ನೊಂದಿಗೆ ಗೆಲುವಿನ ಸೌಧ ಕಟ್ಟಿದರು. ಡೆಲ್ಲಿ ತಂಡವು 19 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಸುಲಭವಾಗಿ ಗುರಿ ತಲುಪಿತು. ಹರ್ಮನ್ ಬಳಗವು ಟೂರ್ನಿಯಲ್ಲಿ ಹ್ಯಾಟ್ರಿಕ್ ಸೋಲು ಅನುಭವಿಸಬೇಕಾಯಿತು.

ಇದಕ್ಕೆ ಮೊದಲು, ಎಡಗೈ ಸ್ಪಿನ್ನರ್ ಶ್ರೀಚರಣಿ (33ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ಎದುರು ರನ್ ಗಳಿಸಲು ಪರದಾಡಿದ ಮುಂಬೈ ತಂಡಕ್ಕೆ ಬ್ರಂಟ್ ಹಾಗೂ ಹರ್ಮನ್ ಆಸರೆಯಾದರು. ಈ ಜೋಡಿ ಮೂರನೇ ವಿಕೆಟ್ ಜೊತೆಯಾಟದಲ್ಲಿ 78 ರನ್ ಸೇರಿಸಿತು. ಅದರಿಂದಾಗಿ ಮುಂಬೈ ಗೌರವಯುತ ಮೊತ್ತ ಗಳಿಸಿತು. ದಕ್ಷಿಣ ಆಫ್ರಿಕಾದ ವೇಗಿ ಮರೈಝಾನ್ ಕಾಪ್ ಅವರು 4 ಓವರ್‌ಗಳಲ್ಲಿ ಕೇವಲ 8 ರನ್ ನೀಡಿ ಒಂದು ವಿಕೆಟ್ ಪಡೆದರು.



ಜೆಮಿಮಾ ರಾಡ್ರಿಗಸ್ ‘ಎಕ್ಸ್’ ಚಿತ್ರ

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 5ಕ್ಕೆ154 (ನಾಟ್ ಶಿವರ್ ಬ್ರಂಟ್ ಔಟಾಗದೇ 65, ಹರ್ಮನ್‌ಪ್ರೀತ್ ಕೌರ್ 41, ನಿಕೊಲಾ ಕ್ಯಾರಿ 12, ಶ್ರೀಚರಣಿ 33ಕ್ಕೆ3). ಡೆಲ್ಲಿ ಕ್ಯಾಪಿಟಲ್ಸ್: 19 ಓವರ್‌ಗಳಲ್ಲಿ 3 ವಿಕೆಟ್‌ಗೆ 155 (ಜೆಮಿಮಾ ರಾಡ್ರಿಗಸ್ ಔಟಾಗದೇ 51, ಲಿಜೆಲ್ ಲೀ 46, ಶಫಾಲಿ ವರ್ಮಾ 29; ವೈಷ್ಣವಿ ಶರ್ಮಾ 20ಕ್ಕೆ1).
ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ 7 ವಿಕೆಟ್ ಜಯ.
ಪಂದ್ಯದ ಆಟಗಾರ್ತಿ: ಜೆಮಿಮಾ ರಾಡ್ರಿಗಸ್.

ಐಪಿಎಲ್: ಜೆಮಿನಿ ಎಐ ಜೊತೆ ಒಪ್ಪಂದ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು, 2026ರ ಐಪಿಎಲ್‌ಗೆ ಪೂರ್ವಭಾವಿಯಾಗಿ ಗೂಗಲ್‌ನ ಕೃತಕ ಬುದ್ಧಿಮತ್ತೆ ಕಂಪನಿಯಾದ ಜೆಮಿನಿ ಜೊತೆ ₹270 ಕೋಟಿ ಮೊತ್ತದ ಪ್ರಾಯೋಜಕತ್ವಕ್ಕೆ ಒಪ್ಪಂದ ಮಾಡಿಕೊಂಡಿದೆ.

‘ಈ ಒಪ್ಪಂದ ಮೂವರು ವರ್ಷಗಳ ಅವಧಿಯದ್ದಾಗಿದ್ದು, ಐಪಿಎಲ್‌ನ ಜಾಗತಿಕ ವರ್ಚಸ್ಸನ್ನು ಪುನಃ ಜಾಹೀರುಪಡಿಸಿದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.

ಜೆಮಿನಿ ಪ್ರತಿಸ್ಪರ್ಧಿಯಾಗಿರುವ ಚಾಟ್‌ಜಿಪಿಟಿ, ಹಾಲಿ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ಪ್ರಾಯೋಜಕರಲ್ಲಿ ಒಂದಾಗಿದೆ. 2025ರ ನವೆಂಬರ್‌ನಲ್ಲಿ ಈ ಒಪ್ಪಂದ ನಡೆದಿತ್ತು.

ಗೇಮಿಂಗ್ ಕಂಪನಿಯಾದ ‘ಡ್ರೀಮ್ 11’ ಅನ್ನು ಕೇಂದ್ರ ಸರ್ಕಾರ 2025ರಲ್ಲಿ ನಿಷೇಧಿಸಿದ ಬಳಿಕ ಬಿಸಿಸಿಐ, ಅಪೋಲೊ ಟೈರ್ಸ್ ಜೊತೆ ₹579 ಕೋಟಿ ಮೊತ್ತಕ್ಕೆ ಪ್ರಧಾನ ಪ್ರಾಯೋಜಕತ್ವದ ಒಪ್ಪಂದ ಮಾಡಿಕೊಂಡಿತ್ತು.

ವಿಶ್ವದ ಅತಿ ದೊಡ್ಡ ಟಿ20 ಲೀಗ್ ಆಗಿರುವ ಐಪಿಎಲ್‌ಗೆ ಟಾಟಾ ಸಮೂಹವು ಪ್ರಧಾನ ಪ್ರಾಯೋಜಕತ್ವ ಹೊಂದಿದೆ. ಜೆಮಿನಿ ಈಗ ಐಪಿಎಲ್‌ನ ಪ್ರಾಯೋಜಕರಲ್ಲಿ ಒಬ್ಬರಾಗಿರುವುದು ಭಾರತೀಯ ಕ್ರಿಕೆಟ್‌ನಲ್ಲಿ ಎಐ ಕಂಪನಿಗಳು ತೋರುತ್ತಿರುವ ಆಸಕ್ತಿಯನ್ನು ಬಿಂಬಿಸಿದೆ.

ಲಯಕ್ಕೆ ಮರಳುವ ಒತ್ತಡದಲ್ಲಿ ಸೂರ್ಯ

ಟಿ20 ಸರಣಿ: ಭಾರತ–ನ್ಯೂಜಿಲೆಂಡ್ ಮೊದಲ ಪಂದ್ಯ ಇಂದು • ಅಭಿಷೇಕ್ ಮೇಲೆ ಕಣ್ಣು

ನಾಗ್ಪುರ (ಪಿಟಿಐ): ನಾಯಕ ಸೂರ್ಯಕುಮಾರ್ ಯಾದವ್ ಅವರೀಗ ಒತ್ತಡದಲ್ಲಿದ್ದಾರೆ. ಏಕೆಂದರೆ; ನ್ಯೂಜಿಲೆಂಡ್ ಎದುರು ಬುಧವಾರ ಆರಂಭವಾಗಲಿರುವ ಟಿ20 ಕ್ರಿಕೆಟ್ ಸರಣಿಯಲ್ಲಿ ಅವರಿಗೆ ಎರಡು ಪ್ರಮುಖ ಸವಾಲುಗಳಿವೆ.

ಬಲಾಬಲ	
ಒಟ್ಟು ಪಂದ್ಯ	25
ಭಾರತ ಜಯ	14
ನ್ಯೂಜಿಲೆಂಡ್ ಗೆಲುವು	10
ಟೈ	1

ಈಚೆಗೆ ಏಕದಿನ ಸರಣಿಯಲ್ಲಿ ಸೋತಿರುವ ಭಾರತ ತಂಡವನ್ನು ಟಿ20 ಮಾದರಿಯಲ್ಲಿ ಗೆಲುವಿನತ್ತ ಮುನ್ನಡೆಸಬೇಕಿದೆ. ಅಲ್ಲದೇ ತಮ್ಮ ಬ್ಯಾಟಿಂಗ್ ಲಯವನ್ನು ಕೂಡ ಕಂಡುಕೊಳ್ಳಬೇಕಿದೆ. 2024ರಲ್ಲಿ ಸೂರ್ಯ ಅವರು ತಂಡದ ನಾಯಕತ್ವ ವಹಿಸಿಕೊಂಡಿದ್ದರು. ಅಲ್ಲಿಂದ ಇಲ್ಲಿಯವರೆಗೆ ತಂಡವು ಆಡಿರುವ 25 ಪಂದ್ಯಗಳಲ್ಲಿ 18ರಲ್ಲಿ ಜಯಿಸಿದೆ. ಅಭಿಷೇಕ್ ಶರ್ಮಾ ಅವರ ಸ್ಫೋಟಕ ಶೈಲಿಯ ಬ್ಯಾಟಿಂಗ್ ಮತ್ತು ವರುಣ ಚಕ್ರವರ್ತಿಯವರ ಸ್ಪಿನ್ ಮೋಡಿಯು ಈ ಗೆಲುವುಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಸುಳ್ಳಲ್ಲ.

ಐದು ಪಂದ್ಯಗಳ ಸರಣಿಯ ಮೊದಲ ಹಣಾಹಣಿಯು ವಿದರ್ಭ ಕ್ರಿಕೆಟ್ ಸಂಸ್ಥೆ (ವಿಸಿಎ) ಕ್ರೀಡಾಂಗಣದಲ್ಲಿ ನಡೆಯಲಿದೆ. ಇಲ್ಲಿಯೂ ತಮ್ಮ ಗೆಲುವಿನ ಓಟ ಮುಂದುವರಿಸುವತ್ತ ಸೂರ್ಯ ಬಳಗವು ಚಿತ್ತ ನೆಟ್ಟಿದೆ. ಮುಂಬರುವ ಟಿ20 ವಿಶ್ವಕಪ್ ಟೂರ್ನಿಗೆ ಪೂರ್ವಾಭ್ಯಾಸಕ್ಕೆ ಪ್ರಸಕ್ತ ಸರಣಿಯು ವೇದಿಕೆಯಾಗಿದೆ. ಆದ್ದರಿಂದ ಈ ಸರಣಿಯ ಜಯವು ಆತಿಥೇಯ ತಂಡದ ಆತ್ಮವಿಶ್ವಾಸವನ್ನು ಹೆಚ್ಚಿಸಲಿದೆ.

ಸೂರ್ಯ ಅವರಿಗೂ ಲಯಕ್ಕೆ ಮರಳಲು ಉತ್ತಮ ಅವಕಾಶ ಇದಾಗಿದೆ. ಏಕೆಂದರೆ 2025ರಲ್ಲಿ ಸೂರ್ಯಕುಮಾರ್ ಅವರಿಗೆ ಹೆಚ್ಚು ರನ್ ಗಳಿಸಲು ಸಾಧ್ಯವಾಗಲಿಲ್ಲ. 19 ಪಂದ್ಯಗಳಿಂದ ಅವರು ಗಳಿಸಿರುವುದು ಕೇವಲ 218 ರನ್ ಮಾತ್ರ. 123ರ ಸ್ಟ್ರೈಕ್ ರೇಟ್‌ನಲ್ಲಿ ಅವರು ಈ ರನ್‌ಗಳನ್ನು ಪೇರಿಸಿದ್ದಾರೆ. ಸೂರ್ಯ ಅವರು ತಿಲಕ್ ವರ್ಮಾ ಅವರಿಗೆ ಮೂರನೇ ಕ್ರಮಾಂಕ ಬಿಟ್ಟುಕೊಟ್ಟು ತಾವು ನಾಲ್ಕನೇ ಸ್ಥಾನದಲ್ಲಿ ಬ್ಯಾಟಿಂಗ್ ಮಾಡಿದ್ದರು. ಹೊಟ್ಟೆಯ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ತಿಲಕ್ ವರ್ಮಾ ವಿಶ್ರಾಂತಿಯಲ್ಲಿದ್ದು ಈ ಸರಣಿಯಲ್ಲಿ ಆಡುತ್ತಿಲ್ಲ.

ಈ ಸರಣಿಯಲ್ಲಿ ಇಶಾನ್ ಕಿಶನ್ ಅವರು ಮೂರನೇ ಕ್ರಮಾಂಕದಲ್ಲಿ ಆಡುವರು. ನಾಲ್ಕನೇ ಕ್ರಮಾಂಕದಲ್ಲಿ ತಾವು ಮುಂದುವರಿಯುವುದಾಗಿ ಸೂರ್ಯ ಅವರೇ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಖಚಿತಪಡಿಸಿದ್ದಾರೆ.

ಅಭಿಷೇಕ್ ಅವರೊಂದಿಗೆ ಸಂಜು ಸ್ಯಾಮ್ಸನ್ ಅವರು ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಹಾರ್ದಿಕ್ ಪಾಂಡ್ಯ ಮರಳಿರುವುದರಿಂದ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಮತ್ತು ಮಧ್ಯಮವೇಗದ ಬೌಲಿಂಗ್ ವಿಭಾಗದ ಶಕ್ತಿ ಹೆಚ್ಚಿದೆ. ಜಸ್‌ಪ್ರೀತ್ ಬೂಮ್ರಾ ಕೂಡ ಮರಳಿದ್ದಾರೆ. ಅರ್ಷದೀಪ್ ಸಿಂಗ್ ಮತ್ತು ಹರ್ಷಿತ್ ರಾಣಾ ಕೂಡ ತಂಡದಲ್ಲಿದ್ದಾರೆ.

ನ್ಯೂಜಿಲೆಂಡ್ ತಂಡವು ಏಕದಿನ ಸರಣಿಯ ಗೆಲುವಿನಿಂದ ಅಪಾರ ಹುಮ್ಮಸ್ಸಿನಲ್ಲಿದೆ. 2024ರ ಟಿ20 ವಿಶ್ವಕಪ್ ಟೂರ್ನಿಯ ನಂತರದಲ್ಲಿ ಕಿವೀಸ್ ತಂಡವು ಆಡಿರುವ 21 ಪಂದ್ಯಗಳಲ್ಲಿ 13ರಲ್ಲಿ ಜಯಿಸಿದೆ. ನಾಯಕ ಮಿಚೆಲ್ ಸ್ಯಾಂಟನರ್, ಡೆವೊನ್ ಕಾನ್ವೆ, ಅಮೋಘ ಲಯದಲ್ಲಿರುವ ಡ್ಯಾರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್ ಮತ್ತು ವೇಗಿ ಜೇಕಬ್ ಡಫಿ ಅವರು ತಂಡದ ಶಕ್ತಿಯಾಗಿದ್ದಾರೆ.



ನಾಗ್ಪುರದ ವಿಸಿಎ ಕ್ರೀಡಾಂಗಣದಲ್ಲಿ ಮಂಗಳವಾರ ತಾಲೀಮು ನಡೆಸಿದ ಭಾರತ ತಂಡದ ರಿಂಕು ಸಿಂಗ್, ಸಂಜು ಸ್ಯಾಮ್ಸನ್, ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್ ಮತ್ತು ರವಿ ಬಿಷ್ಣೋಯಿ ಪಿಟಿಐ ಚಿತ್ರ



ನ್ಯೂಜಿಲೆಂಡ್ ತಂಡದ ನಾಯಕ ಮಿಚೆಲ್ ಸ್ಯಾಂಟನರ್

ತಂಡಗಳು

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಇಶಾನ್ ಕಿಶನ್, ಶ್ರೇಯಸ್ ಅಯ್ಯರ್, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ವರುಣ ಚಕ್ರವರ್ತಿ, ರಿಂಕು ಸಿಂಗ್, ಅರ್ಷದೀಪ್ ಸಿಂಗ್, ರವಿ ಬಿಷ್ಣೋಯಿ, ಹರ್ಷಿತ್ ರಾಣಾ.
ನ್ಯೂಜಿಲೆಂಡ್: ಮಿಚೆಲ್ ಸ್ಯಾಂಟನರ್ (ನಾಯಕ), ಡೆವೊನ್ ಕಾನ್ವೆ, ಬೆವೊನ್ ಜೇಕಬ್ಸ್, ಡ್ಯಾರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ಟಿಮ್ ರಾಬಿನ್ಸನ್, ಜಿಮ್ಮಿ ನಿಶಾಮ್, ಈಶ್ ಸೋಧಿ, ಜ್ಯಾಕ್ ಫೌಲ್ಕೆಸ್, ಮಾರ್ಕ್ ಚಾಪ್ಮನ್, ಮೈಕೆಲ್ ಬ್ರೇಸ್‌ವೆಲ್, ರಚಿನ್ ರವೀಂದ್ರ, ಕೈಲ್ ಜೆಮಿಸನ್, ಮ್ಯಾಟ್ ಹೆನ್ರಿ, ಜೇಕಬ್ ಡಫಿ, ಕ್ರಿಸ್ಟನ್ ಕ್ಲಾರ್ಕ್.
ಪಂದ್ಯ ಆರಂಭ: ರಾತ್ರಿ 7.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್ ಆ್ಯಪ್

ಕೇಂದ್ರ ಗುತ್ತಿಗೆ: ಎ ಪ್ಲಸ್ ಕೆಟಗರಿ ಕೈಬಿಡಲು ಬಿಸಿಸಿಐ ನಿರ್ಧಾರ

ನವದೆಹಲಿ (ಪಿಟಿಐ): ಆಟಗಾರರ ಕೇಂದ್ರೀಯ ಗುತ್ತಿಗೆ ವ್ಯವಸ್ಥೆಯಲ್ಲಿ ಎ ಪ್ಲಸ್ ಶ್ರೇಣಿಯನ್ನು (ಕೆಟಗರಿ) ತೆಗೆದುಹಾಕಿ ಸರಳೀಕೃತಗೊಳಿಸಲು ಬಿಸಿಸಿಐ ಮುಂದಾಗಿದೆ. 2018ರಲ್ಲಿ ಇದನ್ನು ಮೊದಲ ಬಾರಿ ಪರಿಚಯಿಸಲಾಗಿತ್ತು.

ಹಾಲಿ ಇರುವ ನಿಯಮಾವಳಿಯಲ್ಲಿ ಎ ಪ್ಲಸ್ ಶ್ರೇಣಿಯಡಿ ಬರುವ ಆಟಗಾರರು ವಾರ್ಷಿಕ ₹7 ಕೋಟಿ ಮೊತ್ತ ಪಡೆಯುತ್ತಾರೆ. ಎ ಶ್ರೇಣಿಯಲ್ಲಿರುವ ಆಟಗಾರರು ₹5 ಕೋಟಿ, ಬಿ ಶ್ರೇಣಿಯಲ್ಲಿರುವ ಆಟಗಾರರು ₹3 ಕೋಟಿ ಹಾಗೂ ಸಿ ಶ್ರೇಣಿಯಲ್ಲಿರುವ ಆಟಗಾರರು ₹1 ಕೋಟಿ ಪಡೆಯುತ್ತಾರೆ.

2025–26ನೇ ಸಾಲಿಗೆ ಕೇಂದ್ರೀಯ ಗುತ್ತಿಗೆಯಲ್ಲಿ ಉಳಿಸಿಕೊಳ್ಳುವ ಆಟಗಾರರ ಪಟ್ಟಿ ಇನ್ನೂ ಪ್ರಕಟವಾಗಿಲ್ಲ. ಆದರೆ ಮೂರು (ಎ, ಬಿ ಮತ್ತು ಸಿ) ಶ್ರೇಣಿಗಳು ಮಾತ್ರ ಇರಲಿವೆ.

ಈ ಹಿಂದಿನ ಎ ಪ್ಲಸ್ ಶ್ರೇಣಿಯಲ್ಲಿ ನಾಲ್ವರು ಆಟಗಾರರು (ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಜಸ್‌ಪ್ರೀತ್ ಬೂಮ್ರಾ ಮತ್ತು ರವೀಂದ್ರ ಜಡೇಜ) ಮಾತ್ರ ಸ್ಥಾನ ಪಡೆದಿದ್ದರು. ಇವರಲ್ಲಿ ಬೂಮ್ರಾ ಮಾತ್ರ ಮೂರೂ ಮಾದರಿಯಲ್ಲಿ ಆಡುತ್ತಿದ್ದಾರೆ. ಜಡೇಜ ಟೆಸ್ಟ್ ಮತ್ತು ಏಕದಿನ ಮಾದರಿಯಲ್ಲಿ ಉಳಿದುಕೊಂಡಿದ್ದಾರೆ. ರೋಹಿತ್ ಮತ್ತು ಕೊಹ್ಲಿ ಏಕದಿನ ಮಾದರಿಗೆ ಸೀಮಿತಗೊಂಡಿದ್ದಾರೆ.

ವೇತನ ಕಡಿತವಿಲ್ಲ

ಕೇಂದ್ರೀಯ ಗುತ್ತಿಗೆಯನ್ನು ಮುಂದಿನ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಸ್ಥಿರೀಕರಿಸಲಾಗುತ್ತದೆ. ಆದರೆ ಕಾರ್ಯಭಾರ ಒತ್ತಡದ ಭಾಗವಾಗಿ ಅಲ್ಲೊಂದು, ಇಲ್ಲೊಂದು ಸರಣಿ ಕಳೆದುಕೊಂಡಿರುವ ಬೂಮ್ರಾ ಅವರಂಥ ಆಟಗಾರರಿಗೆ ವೇತನ ಕಡಿತವಿರುವುದಿಲ್ಲ ಎಂದು ಮಂಡಳಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟೆಸ್ಟ್ ಮತ್ತು ಏಕದಿನ ಮಾದರಿಗೆ ತಂಡದ ನಾಯಕರಾಗಿರುವ ಶುಭಮನ್ ಗಿಲ್ ಅವರೂ ಎ ಶ್ರೇಣಿಗೆ ಬರಲಿದ್ದಾರೆ.

ಕೊಹ್ಲಿ ಮತ್ತು ರೋಹಿತ್ ಅವರನ್ನು ‘ಬಿ’ ಶ್ರೇಣಿಗೆ ಸೇರಿಸುವ ಸಾಧ್ಯತೆಯಿದೆ. ಬದಲಾಗುವ ಪರಿಸ್ಥಿತಿಯಲ್ಲಿ ಎ ಶ್ರೇಣಿಯ ಆಟಗಾರರು ₹7ಕೋಟಿ ಮೊತ್ತ ಪಡೆಯುವ ಸಾಧ್ಯತೆಯಿದೆ.

ಎರಡನೇ ಸುತ್ತಿಗೆ ಸಿನ್ನರ್, ಕೀಸ್

ಆಸ್ಟ್ರೇಲಿಯಾ ಓಪನ್ ಟೆನಿಸ್: ಶೆಲ್ಟನ್, ರಿಬಾಕಿನಾ ಮುನ್ನಡೆ

ಮೆಲ್ಬರ್ನ್ (ಎಎಫ್‌ಪಿ): ಇಟಲಿಯ ತಾರೆ ಯಾನಿಕ್ ಸಿನ್ನರ್ ಮತ್ತು ಅಮೆರಿಕದ ಆಟಗಾರ್ತಿ ಮ್ಯಾಡಿಸನ್ ಕೀಸ್ ಅವರು ಮಂಗಳವಾರ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಸುಲಭ ಗೆಲುವಿನೊಡನೆ ಪ್ರಶಸ್ತಿ ಉಳಿಸಿಕೊಳ್ಳುವ ಅಭಿಯಾನ ಆರಂಭಿಸಿದರು.

ಮೆಲ್ಬರ್ನ್ ಪಾರ್ಕ್‌ನಲ್ಲಿ ಹ್ಯಾಟ್ರಿಕ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಸಿನ್ನರ್ 6-2, 6-1ರಿಂದ ಮುನ್ನಡೆಯಲ್ಲಿದ್ದಾಗ ಎದುರಾಳಿ ಆಟಗಾರ, ಫ್ರಾನ್ಸ್‌ನ ಹ್ಯೂಗೊ ಗ್ಯಾಸ್ಟನ್ ಅವರು ಗಾಯಾಳಾಗಿ ಆಟದಿಂದ ಹಿಂದೆ ಸರಿದರು. ಎರಡನೇ ಶ್ರೇಯಾಂಕದ ಸಿನ್ನರ್ ಅವರು ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಆತಿಥೇಯ ದೇಶದ ಜೇಮ್ಸ್ ಡಕ್ವರ್ಥ್ ಅವರನ್ನು ಎದುರಿಸಲಿದ್ದಾರೆ.

2024ರಲ್ಲಿ ಮೊದಲ ಬಾರಿ ಚಾಂಪಿಯನ್ ಆಗಿದ್ದ ಸಿನ್ನರ್, ಕಳೆದ ವರ್ಷ ಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಮಣಿಸಿ ಪ್ರಶಸ್ತಿಯನ್ನು ಉಳಿಸಿಕೊಂಡಿದ್ದರು. ಅವರು ಈ ಬಾರಿಯೂ ಕಿರೀಟ ಗೆದ್ದರೆ ಓಪನ್ ಯುಗದಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗುವರು. ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಈ ಸಾಧನೆ ಮಾಡಿದ ಮೊದಲ ಆಟಗಾರ.

ಮ್ಯಾಡಿಸನ್ ಮುನ್ನಡೆ: ಮಹಿಳೆಯರ ಸಿಂಗಲ್ಸ್‌ನಲ್ಲಿ ಒಂಬತ್ತನೇ ಶ್ರೇಯಾಂಕದ ಕೀಸ್ ಮೊದಲ ಸುತ್ತಿನಲ್ಲಿ 7-6 (6), 6-1ರಿಂದ ಉಕ್ರೇನ್‌ನ ಒಲೆಕ್ಸಾಂಡ್ರಾ ಒಲಿನಿಕೋವಾ ಅವರನ್ನು ಮಣಿಸಿದರು. ಎರಡನೇ ಸುತ್ತಿನಲ್ಲಿ ಅವರಿಗೆ ಸ್ವದೇಶದ ಆಶ್ಲಿನ್ ಕ್ರೂಗರ್ ಎದುರಾಳಿಯಾಗಿದ್ದಾರೆ.

30 ವರ್ಷದ ಮ್ಯಾಡಿಸನ್ ಅವರಿಗೆ ಇದು 50ನೇ ಗ್ರ್ಯಾನ್‌ಸ್ಲಾಮ್ ಟೂರ್ನಿಯಾಗಿದೆ. ಕಳೆದ ವರ್ಷದ ಫೈನಲ್‌ನಲ್ಲಿ ಬೆಲರೂಸ್‌ನ ಅರಿನಾ ಸಬಲೆಂಕಾ ಅವರಿಗೆ ಆಘಾತ ನೀಡಿ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿದ್ದರು. ಅಮೆರಿಕದ ಆಟಗಾರ್ತಿ 0–4 ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿಕೊಂಡು ಟೈಬ್ರೇಕರ್‌ನಲ್ಲಿ ಮೊದಲ ಸೆಟ್ ಗೆದ್ದರು. ಎರಡನೇ ಸೆಟ್‌ನಲ್ಲಿ ಮ್ಯಾಡಿಸನ್ ಪಾರಮ್ಯ ಸಾಧಿಸಿದರು.



ಅಮೆರಿಕದ ಮ್ಯಾಡಿಸನ್ ಕೀಸ್ ಅವರ ಫೋರ್‌ಹ್ಯಾಂಡ್ ಹೊಡೆತ ಎಎಫ್‌ಪಿ ಚಿತ್ರ

ಪೂಣಚ್ಚ– ಇಸಾರೊ ಜೋಡಿ ನಿರ್ಗಮನ

ಮೆಲ್ಬರ್ನ್ (ಪಿಟಿಐ): ಭಾರತದ ನಿಕಿ ಪೂಣಚ್ಚ ಮತ್ತು ಅವರ ಥಾಯ್ಲೆಂಡ್‌ನ ಜೊತೆಗಾರ ಪ್ರುಚ್ಯ ಇಸಾರೊ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲಿ ಹೊರಬಿದ್ದರು. ಈ ಜೋಡಿ ತೀವ್ರ ಪೈಪೋಟಿಯ ಪಂದ್ಯದಲ್ಲಿ ಪೆಡ್ರೊ ಮಾರ್ಟಿನೆಝ್– ಜೇಮ್ ಮುನಾರ್ ಅವರೆದುರು ಮಂಗಳವಾರ ಸೋಲನುಭವಿಸಿತು.

ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದ ಭಾರತ– ಥಾಯ್ಲೆಂಡ್ ಆಟಗಾರರ ಜೋಡಿ 6–7 (3), 5–7 ರಲ್ಲಿ ಸೋಲನುಭವಿಸಿತು. ಪಂದ್ಯದಲ್ಲಿ ಉತ್ತಮ ಹೋರಾಟ ಕಂಡುಬಂತು.

ಪುರುಷರ ಸಿಂಗಲ್ಸ್‌ನಲ್ಲಿ ಎಂಟನೇ ಶ್ರೇಯಾಂಕದ ಬೆನ್ ಶೆಲ್ಟನ್, ಒಂಬತ್ತನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಪ್ರಯಾಸದ ಗೆಲುವಿನೊಡನೆ ಮುನ್ನಡೆದರು. ಅಮೆರಿಕದ ಶೆಲ್ಟನ್ 6-3, 7-6 (7/2), 7-6 (7/5)ರಿಂದ ಫ್ರಾನ್ಸ್‌ನ ಉಗೊ ಹಂಬರ್ಟ್ ವಿರುದ್ಧ; ಟೇಲರ್ 7-6 (7/5), 5-7, 6-1, 6-3ರಿಂದ ಫ್ರಾನ್ಸ್‌ನ ವ್ಯಾಲೆಂಟಿನ್ ರೋಯರ್ ವಿರುದ್ಧ ಗೆಲುವು ಸಾಧಿಸಿದರು.

ಭಾರತದ ಸಂಜಾತ, ಅಮೆರಿಕದ ನಿಶೇಶ್ ಬಸವರೆಡ್ಡಿ ಅವರು ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು. ಅವರು 4-6, 7-6 (9/7), 6-7 (3/7), 6-2, 6-3 ರಿಂದ ಆಸ್ಟ್ರೇಲಿಯಾದ ಕ್ರಿಸ್ಟೋಫರ್ ಒ‘ಕಾನೆಲ್ ಅವರನ್ನು ಮಣಿಸಿದರು.

ಫ್ರಾನ್ಸ್‌ನ ಅನುಭವಿ ಆಟಗಾರ ಗೇಲ್ ಮಾನ್ಫಿಲ್ಸ್ ಅವರು ಮೊದಲ ಸುತ್ತಿನಲ್ಲೇ ಹೊರಬಿದ್ದರು. ಆಸ್ಟ್ರೇಲಿಯಾದ ಡೇನ್ ಸ್ವೀನಿ 6-7 (3/7), 7-5, 6-4, 7-5ರಿಂದ ಮಾನ್ಫಿಲ್ಸ್ ಅವರನ್ನು ಮಣಿಸಿದರು. ಈ ಸೋಲಿನೊಂದಿಗೆ ಫ್ರಾನ್ಸ್ ಆಟಗಾರ ವೃತ್ತಿಪರ ಟೆನಿಸ್‌ಗೆ ವಿದಾಯ ಹೇಳಿದರು.

ಮಹಿಳೆಯರ ವಿಭಾಗದಲ್ಲಿ ಐದನೇ ಶ್ರೇಯಾಂಕದ ಎಲೆನಾ ರಿಬಾಕಿನಾ (ಕಜಾಕಸ್ತಾನ) 6-4, 6-3ರಿಂದ ಸ್ಲೊವೇನಿಯಾದ ಕಾಯಾ ಜುವಾನ್ ಎದುರು; 10ನೇ ಶ್ರೇಯಾಂಕದ ಬೆಲಿಂಡಾ ಬೆನ್ಸಿಕ್ (ಉಕ್ರೇನ್) 6-0, 7-5ರಿಂದ ಬ್ರಿಟನ್‌ನ ಕೇಟಿ ಬೌಲ್ಟರ್ ಎದುರು ಜಯ ಸಾಧಿಸಿದರು. 2019 ಮತ್ತು 2021ರ ಚಾಂಪಿಯನ್ ಜಪಾನ್‌ನ ನವೋಮಿ ಒಸಾಕಾ 6-3, 3-6, 6-4ರಿಂದ ಆಂಟೋನಿಯಾ ರುಜಿಕ್ (ಕ್ರೊವೇಷ್ಯಾ) ಅವರನ್ನು ಮಣಿಸಿದರು.

ರಾಜ್ಯ ಒಲಿಂಪಿಕ್ಸ್: ಶಾಹಿನ್, ಸಂದೀಪ್ ವೇಗದ ಓಟಗಾರರು

ಜಿಮ್ನಾಸ್ಟಿಕ್ಸ್: ರಿಯಾಗೆ ಐದು ಚಿನ್ನ

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರಿನ ರಿಯಾ ಬಾಫಣಾ ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ಒಲಿಂಪಿಕ್ ಕೂಟದ ನಡೆದ ರಿದಮಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ ಐದು ಚಿನ್ನದ ಪದಕ ಗೆದ್ದು ದಾಖಲೆ ಬರೆದರು. ಮಾನ್ಯಾ ಪಿ.ರೆಡ್ಡಿ ನಾಲ್ಕು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಮಂಗಳವಾರ ನಡೆದ ಮಹಿಳೆಯರ 10 ಸಾವಿರ ಮೀಟರ್ಸ್ ಓಟದಲ್ಲಿ ಹುಬ್ಬಳ್ಳಿಯ ಎಸ್.ಡಿ. ಶಾಹಿನ್ ವೇಗದ ಓಟಗಾರ್ತಿಯಾಗಿ ಹೊರಹೊಮ್ಮಿದರು. ಪುರುಷರ ವಿಭಾಗದಲ್ಲಿ ತುಮಕೂರಿನ ಟಿ.ಸಿ.ಸಂದೀಪ್, ಎಲ್.ರಘುವೀರ್, ಎಚ್.ಎ. ದರ್ಶನ್ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದರು.


ಜಿಮ್ನಾಸ್ಟಿಕ್ಸ್: ಬಾಲಕಿಯರ ಆಲ್‌ರೌಂಡ್ ವಿಭಾಗ ಮತ್ತು ಹೂಪ್/ಬಾಲ್/ಕ್ಲಬ್ಸ್/ರಿಬ್ಬನ್: ರಿಯಾ ಬಾಫಣಾ (ಬೆಂಗಳೂರು)–1, ಮಾನ್ಯಾ ಪಿ.ರೆಡ್ಡಿ (ಬೆಂಗಳೂರು)–2, ಅನು ಎ.ಮುತಂಗಿ (ಧಾರವಾಡ)–3

ಅಥ್ಲೆಟಿಕ್ಸ್: ಮಹಿಳೆಯರು: 10 ಸಾವಿರ ಮೀ ಓಟ: ಎಸ್.ಡಿ.ಶಾಹಿನ್ (ಹುಬ್ಬಳ್ಳಿ)–1, ಯುವರಾಣಿ (ರಾಯಚೂರು)–2, ಪ್ರವಲಿಕಾ (ಬೆಂಗಳೂರು ನಗರ)–3.

1,500 ಮೀ ಓಟ: ಎಚ್.ವಿ.ದೀಕ್ಷಾ (ಶಿವಮೊಗ್ಗ)–1, ಪ್ರಣತಿ (ಬೆಂಗಳೂರು ಗ್ರಾಮಾಂತರ)–2, ದೀಪಾ (ವಿಜಯಪುರ)–3. 400 ಮೀ: ಶ್ರಾವಣಿ ಬಾಟೆ (ದಕ್ಷಿಣ ಕನ್ನಡ)–1, ರೇಖಾ ಬಸಪ್ಪ ಪಿರೋಜಿ (ದಕ್ಷಿಣ ಕನ್ನಡ)–2, ಗೀತಾ ಬಿ.ಚೌಕಾಶಿ (ದಕ್ಷಿಣ ಕನ್ನಡ)–3. 100 ಹರ್ಡಲ್ಸ್: ಇಶಾ ಎಲಿಜಬೆತ್ ರಂಜಿತ್ (ಬೆಂಗಳೂರು ನಗರ)–1, ಅಪೂರ್ವಾ ಆನಂದ್ ನಾಯ್ಕ್ (ಬೆಳಗಾವಿ)–2, ಸಾಕ್ಷಿ ಕ್ರಿಸ್ಟಿನಾ ಕರ್ಕಡ (ದಕ್ಷಿಣ ಕನ್ನಡ)–3. ಟ್ರಿಪಲ್ ಜಂಪ್: ಯು.ನಿತ್ಯಾಶ್ರೀ (ಬೆಂಗಳೂರು ಗ್ರಾಮಾಂತರ)–1, ಸ್ಮಿತಾ ಕಾಕತ್ಕರ್ (ಬೆಳವಾವಿ)–2.

ಡಿಸ್ಕಸ್ ಥ್ರೋ: ಮಾಧುರ್ಯ (ಉಡುಪಿ)–1, ಬಿ.ಸುಷ್ಮಾ (ದಕ್ಷಿಣ ಕನ್ನಡ)–2, ಎಂ.ಬಿ.ಐಶ್ವರ್ಯಾ (ದಕ್ಷಿಣ ಕನ್ನಡ)–3. ಶಾಟ್‌ಪಟ್– ರೆಡ್ಡಿ ಸಂಜನಾ (ಬೆಂಗಳೂರು ನಗರ)–1, ಮಾಧುರ್ಯ (ಉಡುಪಿ)–2, ಆಕಾಂಕ್ಷಾ (ಉಡುಪಿ)–3. ಜಾವೆಲಿನ್ ಥ್ರೋ: ಕರಿಷ್ಮಾ ಎಸ್.ಸನಿಲ್ (ದಕ್ಷಿಣ ಕನ್ನಡ)–1, ನಂದಾ ಪರಶುರಾಮ್ ಜಂಗಲಿ (ಉಡುಪಿ)–2. 4X100 ಮೀ ರಿಲೆ– ಬೆಳಗಾವಿ–1. ದಕ್ಷಿಣ ಕನ್ನಡ–2, ಮೈಸೂರು ತಂಡ–3

110 ಮೀ ಹರ್ಡಲ್ಸ್: ರತನ್ ಗೌಡ ಪಾಟೀಲ (ಬೆಂಗಳೂರು ನಗರ)–1, ಲಬೈಕ್ ನಲಬಂದ (ಬೆಳಗಾವಿ)–2, ಸಂಜಯ್ ಈಶ್ವರ್ ಪಾಟೀಲ (ಬೆಳಗಾವಿ)–3. ಟ್ರಿಪಲ್ ಜಂಪ್– ಯಶಸ್ ಆರ್.ಗೌಡ (ಮಂಡ್ಯ)–1, ಜೆ.ಸಿ.ರಮೇಶ್ ನಾಯಕನ್ (ಮೈಸೂರು)–2, ಬಿ.ಆರ್.ಯಶಸ್ (ಬೆಂಗಳೂರು ನಗರ)–3



ಜಿಮ್ನಾಸ್ಟಿಕ್ಸ್ ಸ್ಪರ್ಧೆಯಲ್ಲಿ ಪ್ರದರ್ಶನ ನೀಡಿದ ರಿಯಾ ಬಾಫಣಾ


ದೇಹದಾರ್ಢ್ಯ ಸ್ಪರ್ಧೆ: ಮಂಜುನಾಥ ಪ್ರಥಮ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ದಾವಣಗೆರೆಯ ಮಂಜುನಾಥ್ ಅಯ್ಯರ್ ಅವರು 12ನೇ ಸತೀಶ ಶುಗರ್ಸ್ ಕ್ಲಾಸಿಕ್ ದೇಹದಾರ್ಢ್ಯ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಚಾಂಪಿಯನ್ ಆಫ್ ಚಾಂಪಿಯನ್ ಆಗಿ ₹2 ಲಕ್ಷ ನಗದು ಮತ್ತು ಟ್ರೋಫಿಯನ್ನು ಗೆದ್ದುಕೊಂಡರು.

ಮಹರ್ಷಿ ಶ್ರೀವಾಲ್ಮೀಕಿ ತಾಲ್ಲೂಕು ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಸ್ಪರ್ಧೆಯಲ್ಲಿ ಬೆಂಗಳೂರಿನ ಕುಮಾರ ಕೆ. ಅವರು ಮೊದಲನೇ ರನ್ನರ್ ಅಪ್ ಆಗಿ ₹1 ಲಕ್ಷ ನಗದು ಮತ್ತು ಟ್ರೋಫಿ ಪಡೆದರು.

ಉಡುಪಿಯ ಸ್ವರೂಪ ಬಂಗೇರಾ ಎರಡನೇ ರನ್ನರ್ ಅಪ್ ಆಗಿ ಟ್ರೋಫಿ ಹಾಗೂ ₹50 ಸಾವಿರ ನಗದು ಗೆದ್ದರು. ಬೆಸ್ಟ್ ಪೋಸರ್ ಆಗಿ ಆಯ್ಕೆಯಾದ ದಾವಣಗೆರೆಯ ವರುಣಕುಮಾರ್ ₹10 ಸಾವಿರ ನಗದು ಮತ್ತು ಟ್ರೋಫಿ ತಮ್ಮದಾಗಿಸಿಕೊಂಡರು.



ಟ್ರೋಫಿಯೊಂದಿಗೆ ದಾವಣಗೆರೆಯ ಮಂಜುನಾಥ್ ಅಯ್ಯರ್

ಭಾರತ ಮಹಿಳಾ ತಂಡದ ದಕ್ಷಿಣ ಆಫ್ರಿಕಾ ಪ್ರವಾಸ

ಜೋಹಾನೆಸ್‌ಬರ್ಗ್ (ಪಿಟಿಐ): ಭಾರತ ಮಹಿಳಾ ತಂಡದ ವಿರುದ್ಧ ಐದು ಪಂದ್ಯಗಳ ಟಿ20 ಸರಣಿಗೆ ಆತಿಥ್ಯ ವಹಿಸಿಕೊಳ್ಳುವುದಾಗಿ ಕ್ರಿಕೆಟ್ ದಕ್ಷಿಣ ಆಫ್ರಿಕಾ ಮಂಗಳವಾರ ಪ್ರಕಟಿಸಿದೆ.

ಏ.17 ಮತ್ತು 19ರಂದು ಮೊದಲ ಎರಡು ಪಂದ್ಯಗಳು ಡರ್ಬನ್‌ನಲ್ಲಿ ನಡೆಯಲಿವೆ. ಮೂರನೇ ಮತ್ತು ನಾಲ್ಕನೇ ಪಂದ್ಯಗಳು ಜೋಹಾನೆಸ್‌ಬರ್ಗ್‌ನ ವಾಂಡರರ್ಸ್ ಕ್ರೀಡಾಂಗಣದಲ್ಲಿ ಕ್ರಮವಾಗಿ 22 ಮತ್ತು 25ರಂದು ನಡೆಯಲಿವೆ. ಅಂತಿಮ ಪಂದ್ಯ ಬೆನೋನಿಯ ವಿಲ್ಲೋ ಮೂರ್ ಪಾರ್ಕ್‌ನಲ್ಲಿ ನಿಗದಿಯಾಗಿದೆ.

ಉದ್ಯೋಗ ವಾಣಿ

NABARD
ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್

‘ಬಿ’ ವೃಂದದಲ್ಲಿ ಡೆವಲಪ್‌ಮೆಂಟ್ ಅಸಿಸ್ಟಂಟ್ / ಡೆವಲಪ್‌ಮೆಂಟ್ ಅಸಿಸ್ಟಂಟ್ (ಹಿಂದಿ) ನೇರ ನೇಮಕಾತಿ–2026

ನಬಾರ್ಡ್, ಭಾರತದ ಒಂದು ಅಪೆಕ್ಸ್ ಸಂಸ್ಥೆಯಾಗಿದ್ದು, ಸಂಪೂರ್ಣ ಸರ್ಕಾರದ ಒಡೆತನದಲ್ಲಿದೆ ಮತ್ತು ಈ ಸಂಸ್ಥೆಯು ಇದೀಗ, ನಬಾರ್ಡ್‌ನಲ್ಲಿರುವ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅಗತ್ಯ ವಿದ್ಯಾರ್ಹತೆ ಹೊಂದಿರುವ ಭರತೀಯ ನಾಗರಿಕರಿಂದ ಕೇವಲ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಹುದ್ದೆ	ಖಾಲಿಹುದ್ದೆ	ಆನ್‌ಲೈನ್ ಅರ್ಜಿ ನೋಂದಣಿ
1.	ಡೆವಲಪ್‌ಮೆಂಟ್ ಅಸಿಸ್ಟಂಟ್ ‘ಬಿ’ ವೃಂದ	159	17.01.2026 ರಿಂದ 03.02.2026
2.	ಡೆವಲಪ್‌ಮೆಂಟ್ ಅಸಿಸ್ಟಂಟ್ (ಹಿಂದಿ) ‘ಬಿ’ ವೃಂದ	03	

ಖಾಲಿಹುದ್ದೆ, ಶೈಕ್ಷಣಿಕ ವಿದ್ಯಾರ್ಹತೆ, ಪ್ರಾಯ, ಅರ್ಜಿ ಶುಲ್ಕ, ಆಯ್ಕೆ ಪ್ರಕ್ರಿಯೆ ಇತ್ಯಾದಿ ವಿವರಗಳಿಗಾಗಿ, ದಯವಿಟ್ಟು ನಮ್ಮ https://www.nabard.org ವೆಬ್‌ಸೈಟ್‌ನಲ್ಲಿ 17ನೇ ಜನವರಿ 2026 ರಂದು ಪ್ರಕಟಿಸಲಾಗಿರುವ ವಿವರವಾದ ಜಾಹೀರಾತು ಪರಿಶೀಲಿಸಿರಿ.
ಸ್ಥಳ: ಮುಂಬೈ
ದಿನಾಂಕ: 15.01.2026
ಚೀಫ್ ಜನರಲ್ ಮ್ಯಾನೇಜರ್
ಎಚ್‌ಆರ್‌ಎಂಡಿ